ಭಾನುವಾರ, ಫೆಬ್ರುವರಿ 11, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 42 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ದೇಶ, ಭಾಷೆ, ಜಾತಿ, ಧರ್ಮ ಇತ್ಯಾದಿ ಸಂಕೋಲೆಗಳಿಂದ ಬಿಡುಗಡೆಗೊಂಡು ಅರಳಿದ ಪುಟ್ಟ ಪುಟ್ಟ ಪ್ರೇಮಕಥನಗಳು



ಪಂಜಾಬ್‌ನಲ್ಲಿ ಮೈತ್ರಿ ಇಲ್ಲ: ಕೇಜ್ರಿವಾಲ್ 7
17ನೇ ಲೋಕಸಭೆಯ ಅಧಿವೇಶನಕ್ಕೆ ತೆರೆ
ಮಂಗನ ಕಾಯಿಲೆಗೆ ಹೊಸ ಲಸಿಕೆ ಶೀಘ್ರ: ಗುಂಡೂರಾವ್ 6
ಕೊನೇ ದಿನದ ಕಲಾಪದಲ್ಲಿ 'ರಾಮಜಪ' 6

ಹರಿದ ಮ್ಯಾಟ್‌ಗಳಲ್ಲೇ ತಾಲೀಮು: ತುರ್ತಾಗಿ ಬೇಕಿದೆ ಕ್ರೀಡಾಭಿವೃದ್ಧಿಯ 'ಟ್ರ್ಯಾಕ್'

ನೆರವಿಗೆ ಕಾಯುತ್ತಿದೆ 'ಆಟ'

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಪಾಳು ಬಿದ್ದ ಕಟ್ಟಡದಂತೆ ಕಾಣುವ ದಾವಣಗೆರೆಯ ಕ್ರೀಡಾ ವಸತಿ ನಿಲಯದಲ್ಲಿ ಬೆಳಕಿನ ವ್ಯವಸ್ಥೆಯೇ ಇಲ್ಲ. ಬೆಳಗುವ ಒಂದೆರಡು ದೀಪಗಳ ಮಂದಬೆಳಕಿನಲ್ಲೇ ನಿತ್ಯ ಅಭ್ಯಾಸ. ಇರುವ ಏಕೈಕ ಫ್ಯಾನ್ ಹಲವು ತಿಂಗಳಿಂದ ತಿರುಗುತ್ತಿಲ್ಲ. ಹರಿದ ಮ್ಯಾಟ್‌ಗಳಲ್ಲೇ ತಾಲೀಮು ಪೈಲ್ವಾನರಿಗೆ ಅನಿವಾರ್ಯ.

ಯಾದಗಿರಿಯಲ್ಲಿ ನಿರ್ಮಿಸಲಾದ ಕ್ರೀಡಾ ಹಾಸ್ಟೆಲ್ ಇನ್ನೂ ಉದ್ಘಾಟನೆಯಾಗಿಲ್ಲ. ಅದಕ್ಕೆ ಜಿಲ್ಲಾ ಕ್ರೀಡಾಂಗಣದ ಈಜುಕೊಳದಲ್ಲೇ ಬಾಲಕರು ಸ್ನಾನ ಮಾಡುತ್ತಾರೆ. ಅಲ್ಲಿ ಬಟ್ಟೆಗಳನ್ನು ಇರಿಸಲು ರ್‍ಯಾಕ್ ವ್ಯವಸ್ಥೆ ಇಲ್ಲ. ಶುಚಿತ್ವದ ಕೊರತೆ ಇದೆ. ಜೊತೆಗೆ ಅಗತ್ಯ ಮೂಲಸೌಲಭ್ಯವೂ ಇಲ್ಲ.

ರಾಯಚೂರಿನಲ್ಲೂ ಹಳೆಯ ಕ್ರೀಡಾ ಹಾಸ್ಟೆಲ್ ಕಟ್ಟಡ ದುಃಸ್ಥಿತಿಯಲ್ಲಿದೆ. ಡಾರ್ಮಿಟರಿಯೇ ಮಕ್ಕಳಿಗೆ ಆಶ್ರಯವಾಗಿದೆ. ಅವರಿಗೆ ಮಲಗಲು ಮಂಚ, ಹೊದಿಕೆ 'ಉದ್ರಿ' (ಸಾಲದ) ರೂಪದಲ್ಲಿ ಕೊಟ್ಟವರು ಈಗ ₹2.50 ಲಕ್ಷ ಬಿಲ್‌ಗಾಗಿ ಅಧಿಕಾರಿಗಳ ಬೆನ್ನುಬಿದ್ದಿದ್ದಾರೆ. ಕಲಬುರಗಿಯ ಹಾಸ್ಟೆಲ್‌ನಲ್ಲಿ ಶೌಚಗೃಹಗಳ ಬಾಗಿಲು ಮುರಿದಿದೆ. ಸೋಲಾರ್ ಫಲಕ ಕೆಟ್ಟಿರುವ ಕಾರಣ ಹಾವೇರಿಯಲ್ಲಿ ಕ್ರೀಡಾಪಟುಗಳಿಗೆ ತಣ್ಣೀರು ಸ್ನಾನವೇ ಗತಿ.

–ಇವು ಕೆಲ ಉದಾಹರಣೆಗಳಷ್ಟೇ. ರಾಜ್ಯದ ಬಹುತೇಕ ಜಿಲ್ಲೆಗಳ ಕ್ರೀಡಾ ಶಾಲೆ ಮತ್ತು ಹಾಸ್ಟೆಲ್‌ಗಳಲ್ಲಿ ಇಂಥ ಹಲವು ಸಮಸ್ಯೆಗಳಿವೆ. ಕ್ರೀಡಾಪಟುಗಳಾಗಬೇಕೆಂಬ ಕನಸು ಕಟ್ಟಿಕೊಂಡ ಮಕ್ಕಳು ಇಲ್ಲಿ ಬಳಲುತ್ತಿದ್ದಾರೆ. ತರಬೇತುದಾರರ ಅಭಾವ, ಮೂಲ ಸೌಲಭ್ಯ ಕೊರತೆ ಸೇರಿ ಇತರೆ ಕಾರಣಗಳಿಂದ ಕ್ರೀಡಾಪಟುಗಳಿಗೆ ಸುಸಜ್ಜಿತ ತರಬೇತಿ ಎಂಬುದು ಮರೀಚಿಕೆಯಾಗಿದೆ. ಕನಿಷ್ಠ ಸೌಲಭ್ಯವೂ ಇಲ್ಲದೇ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಒಳ್ಳೆಯ ಸಾಧನೆ ನಿರೀಕ್ಷಿಸುವುದಾದರೂ ಹೇಗೆ?

ಬೀದರ್‌ನಲ್ಲಿ ಕ್ರೀಡಾ ಹಾಸ್ಟೆಲ್ ನಿರ್ಮಾಣಕ್ಕೆ ₹2.50 ಕೋಟಿ ಅನುದಾನ ಮಂಜೂರಾಗಿದೆ. ಆದರೆ, ಕಾಮಗಾರಿ ಆರಂಭವಾಗಿಲ್ಲ. ವಸತಿಯಿಲ್ಲದ ವಿದ್ಯಾರ್ಥಿಗಳು ಶಿಥಿಲ ಸ್ಥಿತಿಯಲ್ಲಿರುವ ಕ್ರೀಡಾ ಸಂಕೀರ್ಣದ ಬ್ಯಾಡ್ಮಿಂಟನ್ ಕೋರ್ಟ್‌ನಲ್ಲಿ ಮಲಗುತ್ತಿದ್ದರು. ಪ್ರಜಾವಾಣಿ ಪ್ರತಿನಿಧಿ ಸ್ಥಳಕ್ಕೆ ಭೇಟಿ ನೀಡಿದ ಮಾರನೇ ದಿನವೇ ವಿದ್ಯಾರ್ಥಿಗಳಿಗೆ ಬೇರೆ ಕಡೆ ತಾತ್ಕಾಲಿಕ ವ್ಯವಸ್ಥೆ ಮಾಡಲಾಯಿತು.

ಬಹುತೇಕ ಕಡೆ ಬಾಲಕರು ಮತ್ತು ಬಾಲಕಿಯರಿಗೆ ಒಂದೇ ಕಟ್ಟಡದಲ್ಲಿ ಹಾಸ್ಟೆಲ್ ಇದೆ. ಅದಕ್ಕೆ ಪಾಲಕರು ಹೆಣ್ಣುಮಕ್ಕಳನ್ನು ಹಾಸ್ಟೆಲ್‌ಗೆ ಸೇರಿಸಲು ಹಿಂಜರಿಯುತ್ತಾರೆ. ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಬೇಕು ಎಂಬ ಬೇಡಿಕೆಗೆ ಹಲವು ವರ್ಷಗಳಿಂದ ಸ್ಪಂದನೆ ಸಿಕ್ಕಿಲ್ಲ.

'ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಪದಕ ಗೆದ್ದು ತರಲು ನಾವು ಪಡುವ ಪಡಿಪಾಟಲು ಎಂಥದ್ದು ಎಂಬುದು ನಮಗೇ ಗೊತ್ತು. ಈ ಕತ್ತಲ ಕೋಣೆಯಲ್ಲಿ ಗಾಳಿ, ಬೆಳಕು ಇಲ್ಲ. ಆದರೆ, ತಾಲೀಮು ಇಲ್ಲೇ ಮಾಡಬೇಕು. ರೆಕ್ಕೆ ಮುರಿದ ಫ್ಯಾನ್ ಮತ್ತು ಕಿಟಕಿಯ ಒಡೆದ ಗಾಜುಗಳ ದುರಸ್ತಿ ಕಾಣದೇ ತಿಂಗಳುಗಳೇ ಕಳೆದಿವೆ. ಸೊಳ್ಳೆಗಳ ಕಾಟ ಹೇಳತೀರದು' ಎಂದು ದಾವಣಗೆರೆಯ ಆಂಜನೇಯ ಬಡಾವಣೆಯಲ್ಲಿನ ಕ್ರೀಡಾ ವ್ಯಾಯಾಮ ಶಾಲೆಯಲ್ಲಿ ಪೈಲ್ವಾನರು ನೋವಿನಿಂದ ಹೇಳುತ್ತಾರೆ.

ಬೀದರ್ ಕ್ರೀಡಾಪಟುಗಳ ಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. 'ಬೀದರ್‌ನ ನೆಹರೂ ಕ್ರೀಡಾಂಗಣದ ಕ್ರೀಡಾ ಸಂಕೀರ್ಣದ ತರಬೇತಿ ಶಾಲೆಯಲ್ಲಿ ಅವ್ಯವಸ್ಥೆ ತುಂಬಾ ಇದೆ. ಸ್ವಚ್ಛತೆ ಇಲ್ಲ. ಶೌಚಾಲಯ ನಿರ್ವಹಣೆ ಸರಿಯಿಲ್ಲ. ಕುಡಿಯುವ ನೀರಿಗೂ ನಾವು ಪರದಾಡಬೇಕು' ಎಂದು ಕ್ರೀಡಾಪಟುಗಳು ಸಂಕಷ್ಟ ತೋಡಿಕೊಳ್ಳುತ್ತಾರೆ.

ರಾಜ್ಯದಲ್ಲಿ ಎರಡು ಕ್ರೀಡಾಶಾಲೆಗಳು (ಬೆಂಗಳೂರಿನ ವಿದ್ಯಾನಗರ ಮತ್ತು ಕೊಡಗು ಜಿಲ್ಲೆಯ ಕೂಡಿಗೆ) ಮತ್ತು 32 ಜಿಲ್ಲಾ ಕ್ರೀಡಾ ನಿಲಯಗಳಿವೆ.

4ನೇ ಪುಟ ನೋಡಿ

ಕಲಬುರಗಿಯ ಚಂದ್ರಶೇಖರ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಹಾಕಿ ಅಂಗಣವಿಲ್ಲದೆ ಕಿತ್ತು ಹೋದ ಟರ್ಫ್‌ನಲ್ಲೇ ಅಭ್ಯಾಸದಲ್ಲಿ ತೊಡಗಿರುವ ಕ್ರೀಡಾಪಟುಗಳು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಪ್ರಮುಖ ಸಮಸ್ಯೆಗಳು

- ಕ್ರೀಡಾ ಹಾಸ್ಟೆಲ್‌ಗಳಲ್ಲಿ ನಿಗದಿಗಿಂತ ಹೆಚ್ಚು ಕ್ರೀಡಾಪಟುಗಳ ನೋಂದಣಿ
- ಕ್ರೀಡಾಂಗಣಗಳಲ್ಲಿ ಕ್ರೀಡಾಪಟುಗಳ ಅಭ್ಯಾಸ, ಅಲ್ಲಿಯೇ ಜನರ ವಾಯುವಿಹಾರ
- ಬಹುತೇಕ ಕಡೆ ಪೂರ್ಣವಾಗದ ಅಭಿವೃದ್ಧಿ ಕಾಮಗಾರಿ
- ಕ್ರೀಡಾಂಗಣಗಳು ಕ್ರೀಡಾ ತರಬೇತಿಗಿಂತ ರಾಷ್ಟ್ರೀಯ ದಿನಗಳ ಆಚರಣೆಗೆ ಬಳಕೆ
- ₹10 ಕೋಟಿ ಖರ್ಚಾದರೂ ಅಭಿವೃದ್ಧಿ ಕಾಣದ ಮಂಡ್ಯ ಜಿಲ್ಲಾ ಕ್ರೀಡಾಂಗಣ

ಒಳನೋಟ

ಚುನಾವಣೆಗೂ ಮುನ್ನ ಸಿಎಎ ಜಾರಿ

ಫಲಾನುಭವಿಗಳಿಗೆ ಪೌರತ್ವ ನೀಡುವ ಪ್ರಕ್ರಿಯೆ ಶೀಘ್ರ ಆರಂಭ: ಅಮಿತ್ ಶಾ

ನವದೆಹಲಿ (ಪಿಟಿಐ): ಲೋಕಸಭೆ ಚುನಾವಣೆಗೂ ಮುನ್ನವೇ ಪೌರತ್ವ ತಿದ್ದುಪಡಿ ಕಾಯ್ದೆಯನ್ನು (ಸಿಎಎ) ಜಾರಿಗೊಳಿಸಲಾಗುತ್ತಿದ್ದು, ಈ ಸಂಬಂಧ ಶೀಘ್ರ ಅಧಿಸೂಚನೆ ಹೊರಡಿಸಲಾಗುತ್ತದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರಕಟಿಸಿದರು.



'ಸಿಎಎ ಜಾರಿಗೆ ಅಗತ್ಯವಿರುವ ನಿಯಮಗಳನ್ನು ಲೋಕಸಭೆ ಚುನಾವಣೆಗೆ ಮುನ್ನವೇ ಹೊರಡಿಸಲಾಗುವುದು. ಫಲಾನುಭವಿಗಳಿಗೆ ಭಾರತದ ಪೌರತ್ವ ನೀಡುವ ಪ್ರಕ್ರಿಯೆ ಇನ್ನೇನು ಪ್ರಾರಂಭವಾಗಲಿದೆ. ಇದು ದೇಶದ ಕಾಯ್ದೆಯಾಗಿದ್ದು, ಇದರ ಜಾರಿಯ ವಿಷಯವಾಗಿ ಯಾರಿಗೂ ಗೊಂದಲ ಬೇಡ' ಎಂದು ಶನಿವಾರ ಇಲ್ಲಿ 'ಇ.ಟಿ ನೌ ಜಾಗತಿಕ ವ್ಯಾಪಾರ ಶೃಂಗ'ದಲ್ಲಿ ಹೇಳಿದರು.

ಪಾಕಿಸ್ತಾನ, ಅಫ್ಗಾನಿಸ್ತಾನ ಮತ್ತು ಬಾಂಗ್ಲಾದೇಶದಿಂದ 2014ರ ಡಿಸೆಂಬರ್ 31ಕ್ಕೂ ಮುನ್ನ ಭಾರತಕ್ಕೆ ಬಂದ ಹಿಂದೂ, ಸಿಖ್, ಜೈನ, ಬೌದ್ಧ, ಪಾರ್ಸಿ ಮತ್ತು ಕ್ರೈಸ್ತ ಧರ್ಮೀಯರಿಗೆ ಭಾರತದ ಪೌರತ್ವ ನೀಡುವ ಕಾಯ್ದೆ ಇದಾಗಿದೆ. ಈ ಕಾಯ್ದೆಯಿಂದ ಮುಸ್ಲಿಮರನ್ನು ಹೊರಗಿಡಲಾಗಿದೆ.

'ಸಿಎಎ ವಿಚಾರದಲ್ಲಿ ನಮ್ಮ ಮುಸ್ಲಿಂ ಸಹೋದರರನ್ನು ದಾರಿತಪ್ಪಿಸಲಾಗುತ್ತಿದೆ. ಪಾಕಿಸ್ತಾನ ಮತ್ತು ಬಾಂಗ್ಲಾದೇಶದಲ್ಲಿ ಕಿರುಕುಳ ಅನುಭವಿಸಿ ಭಾರತಕ್ಕೆ ಬಂದವರಿಗೆ ಪೌರತ್ವ ನೀಡುವುದಷ್ಟೇ ಈ ಕಾಯ್ದೆಯ ಉದ್ದೇಶ. ಆದ್ದರಿಂದ ಈ ಕಾಯ್ದೆಯನ್ನು ಯಾರೂ ವಿರೋಧಿಸಬಾರದು' ಎಂದು ಶಾ ಮನವಿ ಮಾಡಿದರು.

> **ಸಿಎಎ ಯಾರದ್ದೇ ಪೌರತ್ವ ಕಸಿದುಕೊಳ್ಳುವ ಕಾಯ್ದೆ ಅಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತೇನೆ. ಸಿಎಎ ವಿಚಾರದಲ್ಲಿ ನಮ್ಮ ಮುಸ್ಲಿಂ ಸಹೋದರರನ್ನು ಪ್ರಚೋದಿಸಲಾಗುತ್ತಿದೆ**
> **ಅಮಿತ್ ಶಾ,** ಗೃಹ ಸಚಿವ

ಸಿಎಎಗೆ 2019ರ ಡಿಸೆಂಬರ್‌ನಲ್ಲಿ ಲೋಕಸಭೆಯ ಅಂಗೀಕಾರ ಹಾಗೂ ರಾಷ್ಟ್ರಪತಿಯವರ ಅನುಮೋದನೆ ದೊರೆತಿತ್ತು. ಇದರ ಜಾರಿಗೆ ವಿರೋಧ ವ್ಯಕ್ತಪಡಿಸಿ ದೇಶದ ವಿವಿಧ ಭಾಗಗಳಲ್ಲಿ ಪ್ರತಿಭಟನೆಗಳು ನಡೆದಿದ್ದವು.

ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಬಗ್ಗೆ ಮಾತನಾಡಿದ ಶಾ, 'ಯುಸಿಸಿಯು ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಮತ್ತು ಇತರರು ಸಹಿ ಮಾಡಿದ ಸಾಂವಿಧಾನಿಕ ಕಾರ್ಯಸೂಚಿಯಾಗಿದೆ' ಎಂದು ಹೇಳಿದರು.

6 ನೇ ಪುಟ ನೋಡಿ

ಕ್ರಾಂತಿಕಾರಿ ಸುಧಾರಣೆ ಕಾಲ: ಮೋದಿ

ನವದೆಹಲಿ (ಪಿಟಿಐ): 'ಕಳೆದ ಐದು ವರ್ಷಗಳ ಅವಧಿಯು ನಿರಂತರ ಸುಧಾರಣೆ, ಸಾಧನೆ ಮತ್ತು ಪರಿವರ್ತನೆ ಮೂಲಕ ದೇಶವು ಮಹಾನ್ ಬದಲಾವಣೆಗಳನ್ನು ಕಂಡ ಕಾಲವಾಗಿತ್ತು' ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದರು.



ಬಜೆಟ್ ಅಧಿವೇಶನದ ಕೊನೆಯ ದಿನವಾದ ಶನಿವಾರ ಲೋಕಸಭೆಯಲ್ಲಿ ಮಾಡಿದ ಭಾಷಣದಲ್ಲಿ ಮೋದಿ ಅವರು, 'ಕಳೆದ ಐದು ವರ್ಷಗಳಲ್ಲಿ ಕ್ರಾಂತಿಕಾರಿ ಸುಧಾರಣೆಗಳನ್ನು ಮಾಡಲಾಗಿದೆ. ಇದರಲ್ಲಿ 21ನೇ ಶತಮಾನದ ಬಲಿಷ್ಠ ಭಾರತದ ಬುನಾದಿಯನ್ನು ಕಾಣಬಹುದಾಗಿದೆ' ಎಂದು ಹೆಮ್ಮೆಯಿಂದ ಹೇಳಿಕೊಂಡರು.

'ತಲೆಮಾರುಗಳಿಂದಲೂ ಜನರು ದೇಶಕ್ಕೆ ಏಕ ಸಂವಿಧಾನದ ಕನಸು ಕಂಡಿದ್ದರು. ಈ ಸದನವು 370ನೇ ವಿಧಿಯಡಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದುಗೊಳಿಸುವ ಮೂಲಕ ಅದನ್ನು ಸಾಕಾರಗೊಳಿಸಿದೆ. ಹಲವಾರು ಸವಾಲುಗಳನ್ನು ಎದುರಿಸಿ ದೇಶಕ್ಕೆ ಸರಿಯಾದ ದಿಕ್ಕು ನೀಡಲಾಗಿದೆ' ಎಂದು ಹೇಳಿದರು.

ಮಹಿಳಾ ಮೀಸಲಾತಿ ಮಸೂದೆಯ ಅಂಗೀಕಾರವಾಗಿದ್ದನ್ನು ಮತ್ತು ತ್ವರಿತ ತ್ರಿವಳಿ ತಲಾಖ್ ರದ್ದುಪಡಿಸಿದ್ದನ್ನು ಮೋದಿ ಶ್ಲಾಘಿಸಿದರು. ಹೊಸ ಸಂಸತ್ ಭವನ ಮತ್ತು ರಾಮಮಂದಿರ ನಿರ್ಮಾಣಗೊಂಡ ವಿಷಯಗಳನ್ನೂ ಪ್ರಸ್ತಾಪಿಸಿದರು. ಕೋವಿಡ್ ಕಾಲಘಟ್ಟದಲ್ಲಿ ಸಂಸತ್ ಸದಸ್ಯರು ತಮ್ಮ ಸಂಬಳದ ಶೇ 30ರಷ್ಟು ಮೊತ್ತವನ್ನು 'ತ್ಯಾಗ' ಮಾಡಿದ್ದನ್ನೂ ನೆನಪಿಸಿಕೊಂಡರು.

6 ನೇ ಪುಟ ನೋಡಿ

ಇಪಿಎಫ್ ಠೇವಣಿಗೆ ಶೇ 8.25 ಬಡ್ಡಿ

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) 2023-24ನೇ ಸಾಲಿಗೆ ನೌಕರರ ಭವಿಷ್ಯ ನಿಧಿ (ಇಪಿಎಫ್) ಠೇವಣಿಗಳಿಗೆ ಶೇ 8.25ರಷ್ಟು ಬಡ್ಡಿದರ ನಿಗದಿಪಡಿಸಿದೆ.

ಕಳೆದ ಮೂರು ವರ್ಷಗಳಲ್ಲಿ ನಿಗದಿ ಪಡಿಸಿರುವ ಗರಿಷ್ಠಮಟ್ಟದ ಬಡ್ಡಿದರ ಇದಾಗಿದೆ. 2021-22ನೇ ಸಾಲಿನಡಿ ಶೇ 8.10ರಷ್ಟು ಬಡ್ಡಿದರ ನಿಗದಿಪಡಿಸಿದ್ದ ಸಂಘಟನೆಯು, 2022-23ನೇ ಸಾಲಿಗೆ ಇದನ್ನು ಶೇ 8.15ಕ್ಕೆ ಹೆಚ್ಚಿಸಿತ್ತು.

ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವ ಭೂಪೇಂದರ್ ಯಾದವ್ ಅವರ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಟ್ರಸ್ಟಿಗಳ ಕೇಂದ್ರೀಯ ಮಂಡಳಿ (ಸಿಬಿಟಿ) ಸಭೆಯು ಈ ನಿರ್ಧಾರ ಕೈಗೊಂಡಿದೆ. ಸದ್ಯ ಇಪಿಎಫ್‌ಒದಲ್ಲಿ ಆರು ಕೋಟಿ ಚಂದಾದಾರರು ಇದ್ದಾರೆ.

ಮಂಡಳಿಯು ನಿಗದಿಪಡಿಸಿರುವ ಈ ಬಡ್ಡಿದರಕ್ಕೆ ಕೇಂದ್ರ ಹಣಕಾಸು ಸಚಿವಾಲಯವು ಅನುಮೋದನೆ ನೀಡಬೇಕಿದೆ. ಆ ಬಳಿಕ ಸರ್ಕಾರವು ಅಧಿಕೃತವಾಗಿ ಗೆಜೆಟ್‌ನಲ್ಲಿ ಪ್ರಕಟಿಸಿದ ನಂತರ ಇಪಿಎಫ್‌ಒ, ಚಂದಾದಾರರ ಖಾತೆಗಳಿಗೆ ಬಡ್ಡಿದರಕ್ಕೆ ಅನುಗುಣವಾಗಿ ಮೊತ್ತವನ್ನು ಪಾವತಿಸಲಿದೆ ಎಂದು ಕಾರ್ಮಿಕ ಸಚಿವಾಲಯ ತಿಳಿಸಿದೆ.

ಇನ್ನೊಂದು ಸುದ್ದಿ 8

ಹಣ ಪಾವತಿ ತಪ್ಪಿಸಿಕೊಳ್ಳಲು ಆಯೋಗ: ಹೈಕೋರ್ಟ್

ಬೆಂಗಳೂರು: 'ಗುತ್ತಿಗೆದಾರರಿಗೆ ಹಣ ಪಾವತಿ ಮಾಡುವುದರಿಂದ ಬಚಾವಾಗಲು ರಾಜ್ಯ ಸರ್ಕಾರ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ ದಾಸ್ ನೇತೃತ್ವದಲ್ಲಿ ಏಕವ್ಯಕ್ತಿ ಆಯೋಗ ರಚಿಸಿದೆ ಎಂಬ ಗುತ್ತಿಗೆದಾರರ ಪರ ಹಿರಿಯ ವಕೀಲರ ಆಪಾದನೆ ಮೇಲ್ನೋಟಕ್ಕೆ ಸರಿ ಇದ್ದಂತೆ ಕಾಣುತ್ತಿದೆ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ನ್ಯಾಯಮೂರ್ತಿ ನಾಗಮೋಹನ್ ದಾಸ್ ಏಕವ್ಯಕ್ತಿ ಆಯೋಗ ರಚನೆ ಪ್ರಶ್ನಿಸಿ ಮೆಸರ್ಸ್ ನಿಕ್ಷೇಪ ಇನ್ಫ್ರಾ ಪ್ರಾಜೆಕ್ಟ್ಸ್ ಪಾಲುದಾರ ಬಿ.ಎಸ್.ಧನಂಜಯ ಸೇರಿದಂತೆ ಒಟ್ಟು 44 ಗುತ್ತಿಗೆ ಕಂಪನಿಗಳು ಹಾಗೂ ಗುತ್ತಿಗೆದಾರರು ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಇಂಗಿತವನ್ನು ಹೊರಹಾಕಿದೆ.

> **ಗುತ್ತಿಗೆದಾರರಿಂದ ಶೇಕಡ 40ರಷ್ಟು ಕಮಿಷನ್ ವಸೂಲಿ ಮಾಡುತ್ತಿರುವುದರ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ತಕ್ಷಣವೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು**
> **ಆರ್.ಅಶೋಕ,** ವಿಧಾನಸಭೆ ವಿರೋಧ ಪಕ್ಷದ ನಾಯಕ

'ಹೈಕೋರ್ಟ್ ಆದೇಶ ಹೊರಡಿಸಿ 45 ದಿನಗಳಾದರೂ ಆಯೋಗಕ್ಕೆ ಸಂಬಂಧಿಸಿದವರು ಯಾಕೆ ಒಂದೇ ಒಂದು ಹಾಳೆಯ ದಾಖಲೆಯನ್ನೂ ಸಲ್ಲಿಸಿಲ್ಲ' ಎಂದು ಕಿಡಿಕಾರಿರುವ ನ್ಯಾಯಪೀಠ, 'ಇದಕ್ಕೆ ರಾಜ್ಯ ಸರ್ಕಾರ ಸೂಕ್ತ ಉತ್ತರ ನೀಡಬೇಕು. ಇಲ್ಲವಾದಲ್ಲಿ ಈ ನಿಟ್ಟಿನಲ್ಲಿ ಸೂಕ್ತ ಆದೇಶ ಹೊರಡಿಸಲಾಗುವುದು' ಎಂದು ಎಚ್ಚರಿಸಿದ್ದು, ವಿಚಾರಣೆಯನ್ನು ಇದೇ 12ಕ್ಕೆ ಮುಂದೂಡಿದೆ.

ಮಲ್ಲೇಶ್ವರಂ
ಸುದರ್ಶನ್ ಜುವೆಲ್ಲರ್ಸ್
916 BIS ಹಾಲ್ಮಾರ್ಕ್ ಜುವೆಲ್ಲರಿ
ಅತ್ಯಂತ ಕಡಿಮೆ
ಚಿನ್ನದ ದರ: ₹5690/gm
ಬೆಳ್ಳಿ ದರ: ₹71/gm
ವೆಸ್ಟೇಜ್ 3% ರಿಂದ ಪ್ರಾರಂಭ
ಬೆಳ್ಳಿ ಸಾಮಗ್ರಿಗಳ ಮೇಲೆ ಮೇಕಿಂಗ್ ಚಾರ್ಜಸ್ ಇಲ್ಲ
ನಿಯಮಗಳು ಮತ್ತು ಷರತ್ತುಗಳು ಅನ್ವಯ
Ph- 080-29909733/ 9513394070

ನಾರಾ ಭರತ್ ರೆಡ್ಡಿ ಮನೆ, ಕಚೇರಿ ಮೇಲೆ ಇ.ಡಿ ದಾಳಿ

ಬಳ್ಳಾರಿ: ಬಳ್ಳಾರಿ ನಗರ ಕಾಂಗ್ರೆಸ್ ಶಾಸಕ ನಾರಾ ಭರತ್ ರೆಡ್ಡಿ ಮತ್ತು ಅವರ ಸಂಬಂಧಿಕರ ಮನೆ ಮತ್ತು ಕಚೇರಿಗಳ ಮೇಲೆ ಶನಿವಾರ ಬೆಳಿಗ್ಗೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ದಾಳಿ ನಡೆಸಿದರು. 5

ಪಾಕಿಸ್ತಾನ: 'ಸಂಯುಕ್ತ ಸರ್ಕಾರ': ಸೇನೆ ಒಲವು 9
ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ: ಸಿ.ಎಂ 5

ಚಿನಕುರಳಿ

ಪ್ರಕಾಶ್ ಶೆಟ್ಟಿ



ADMISSIONS 2024, NOW OPEN

ENGINEERING
B.Tech (CSE, CSE-AI&ML, ECE, Mech, EEE, & BT)
M.Tech

COMMERCE
B.Com (Day/Evening) / B.Com (Hons.) with ACCA / B.Com (Hons.) with CMA

ARCHITECTURE
B.Arch

LAW
BBA, LLB (Hons.) / BA, LLB (Hons.)

PERFORMING ARTS
BA (Hons.)

PHARMACY
B.Pharm / M.Pharm / Pharm.D

DESIGN
Bachelor of Design

RESEARCH
Ph.D / M.Tech by Research

PSYCHOLOGY
B.Sc (Hons.) / M.Sc. Psychology

MANAGEMENT
MBA / BBA (Hons.) in Business Analytics / BBA - General / Sports Management / Hospitality & Event Management

COMPUTER APPLICATIONS
BCA / MCA

EXECUTIVE EDUCATION
Executive M.Tech in Cybersecurity

NURSING
B.Sc (Bachelor of Science)

ECONOMICS
B.Sc (Hons.)

ALLIED HEALTH SCIENCES
B.Sc (Hons) in Cardiac Care Technology, Anaesthesia & Operation Theatre Technology, Medical Radiology & Imaging Technology, Dialysis Therapy Technology, Emergency Medical Technology, Medical Laboratory Technology, Medical Science

PHYSIOTHERAPY
Bachelor of Physiotherapy (BPT)

PESSAT
All India Online Entrance Exam for Admission to PES University
REGISTER TODAY
www.pessat.com
5% of B.Tech seats reserved for students with JEE Main scores

PESU SCHOLARSHIPS
₹30+ Crore merit scholarships given till date
pes.edu/scholarships
FLEXIBLE CURRICULUM
B.Tech Major/Minor & M.Tech Switch Program
pes.edu/btech
RESEARCH DRIVEN LEARNING
pes.edu/research
INTERNATIONAL INTERNSHIPS
pes.edu/summer

#1 UNIVERSITY IN KARNATAKA
New Universities Under 5 Years, KSURF 2019

Some leading companies our students are placed at include: Adobe, Amazon, Apple, Netflix, Facebook, Google, Goldman Sachs, Mercedes Benz, Microsoft, Morgan Stanley...

PES UNIVERSITY
8010 297 297 admissions@pes.edu
100 Feet Ring Road, BSK III Stage
Bengaluru 560085

LIC
ಲೈಫ್ ಇನ್ಶೂರೆನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ
LIFE INSURANCE CORPORATION OF INDIA
ಪ್ರತಿ ಕ್ಷಣವೂ ನಿಮ್ಮೊಂದಿಗೆ
ಎಲ್‌ಐಸಿಯ ಜೀವನ್ ಧಾರಾ II
UIN: 512N364V01 Plan No. 872
ಬೇಗನೇ ನಿವೃತ್ತರಾಗಿ
ನಿಶ್ಚಿಂತೆಯಿಂದ ನಿವೃತ್ತರಾಗಿ

ನಿಮಗೆ ಮತ್ತು ನಿಮ್ಮ ಪ್ರೀತಿಪಾತ್ರರಿಗೆ ಜೀವಿತಾವಧಿಯ ಗ್ಯಾರಂಟಿ ಆದಾಯ ಪಡೆಯಿರಿ.
ನಿಮ್ಮ ಅಗತ್ಯಗಳಿಗೆ ಸರಿಹೊಂದುವ ಆಯ್ಕೆಗಳ ಶ್ರೇಣಿಯೊಂದಿಗೆ ಅನ್ಯುಟಿ ಯೋಜನೆ
• ಆರಂಭದಿಂದಲೂ ಖಾತರಿಯ ಅನ್ಯುಟಿ
• ಹೆಚ್ಚಿನ ವಯಸ್ಸಿನಲ್ಲಿ ಹೆಚ್ಚಿನ ಅನ್ಯುಟಿ ದರಗಳು
• ಡೆಫರ್ಮೆಂಟ್ ಅವಧಿಯಲ್ಲಿ ಲೈಫ್ ಕವರ್
• ರೆಗ್ಯೂಲರ್ ಮತ್ತು ಸಿಂಗಲ್ ಪ್ರೀಮಿಯಂ ಪಾವತಿಗೆ ಆಯ್ಕೆ
• ಅಸ್ತಿತ್ವದಲ್ಲಿರುವ ಎಲ್‌ಐಸಿ ಪಾಲಿಸಿದಾರರಿಗೆ ವರ್ಧಿತ ಅಂದರೆ ಹೆಚ್ಚಿನ ಪ್ರಯೋಜನಗಳು
ಪ್ಲಾನ್ ಆನ್‌ಲೈನ್‌ನಲ್ಲಿಯೂ ಲಭ್ಯವಿದೆ
ನಾನ್-ಲಿಂಕ್ಡ್, ನಾನ್-ಪಾರ್ಟಿಸಿಪೇಟಿಂಗ್, ವೈಯಕ್ತಿಕ, ಉಳಿತಾಯ, ಡೆಫರ್ಡ್ ಅನ್ಯುಟಿ ಪ್ಲಾನ್
LIC/R1/2023-24/19/KAN
ಡೌನ್‌ಲೋಡ್ ಮಾಡಿರಿ ಎಲ್‌ಐಸಿ ಮೊಬೈಲ್ ಆ್ಯಪ್ LIC digital
ಸಂದರ್ಶಿಸಿರಿ: licindia.in
ಕಾಲ್ ಸೆಂಟರ್ ಸರ್ವಿಸ್ (022) 6827 6827
ವಿವರಗಳಿಗಾಗಿ ನಿಮ್ಮ ಏಜಂಟರನ್ನು/ಸಮೀಪದ ಎಲ್‌ಐಸಿ ಶಾಖೆಯನ್ನು ಸಂಪರ್ಕಿಸಿರಿ ಅಥವಾ ನಿಮ್ಮ ನಗರದ ಹೆಸರನ್ನು 56767474ಗೆ SMS ಮಾಡಿ
ನಮ್ಮನ್ನು ಫಾಲೋ ಮಾಡಿರಿ: LIC India Forever | IRDAI Regn No.: 512
ನಮ್ಮ ವಾಟ್ಸಾಪ್ ನಂ. 8976862090 'Hi' ಹೇಳಿರಿ
ಕೃತ್ರಿಮ ಫೋನ್ ಕಾಲ್‌ಗಳ ಬಗ್ಗೆ ಮತ್ತು ನಕಲು/ಮೋಸದ ಆಫರ್‌ಗಳ ಬಗ್ಗೆ ಎಚ್ಚರಿಕೆ. ಐಆರ್‌ಡಿಎಐ ಇನ್ಶೂರೆನ್ಸ್ ಪಾಲಿಸಿಗಳ ಮಾರಾಟ, ಬೋನಸ್ ಘೋಷಣೆ ಅಥವಾ ಪ್ರೀಮಿಯಮ್‌ಗಳ ಹೂಡಿಕೆಗಳಂತ ಚಟುವಟಿಕೆಗಳಲ್ಲಿ ತೊಡಗಿರುವುದಿಲ್ಲ. ಇಂಥ ಫೋನ್ ಕಾಲ್‌ಗಳನ್ನು ಪಡೆಯುವ ಸಾರ್ವಜನಿಕರು ಪೋಲಿಸರಲ್ಲಿ ದೂರು ನೀಡಬೇಕಾಗಿ ವಿನಂತಿ. ಅಪಾಯ ಸಾಧ್ಯತೆಗಳು, ನಿಯಮ ಹಾಗೂ ಷರತ್ತುಗಳ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಮಾರಾಟ ಪೂರ್ತಿಗೊಳ್ಳುವ ಮೊದಲು ಸೇಲ್ಸ್ ಬ್ರೋಶರ್ ಎಚ್ಚರಿಕೆಯಿಂದ ಓದಿರಿ.

ಬೆಸ್ಕಾಂ ಸಿಬ್ಬಂದಿ ಕಾರ್ಯಾಚರಣೆ • ತೆರವು ಸ್ಥಳಗಳಲ್ಲೇ ಮತ್ತೆ ಅನಧಿಕೃತ ಕೇಬಲ್ ಗೋಚರ, ಕಠಿಣ ಕ್ರಮದ ಎಚ್ಚರಿಕೆ

59 ಸಾವಿರ ಸ್ಥಳಗಳಲ್ಲಿ ಕೇಬಲ್ ತೆರವು

• ಆದಿತ್ಯ ಕೆ.ಎ.

ಬೆಸ್ಕಾಂ ಸಿಬ್ಬಂದಿ ತೆರವು ಮಾಡಿರುವ ಕೇಬಲ್

ಬೆಂಗಳೂರು: ವಿದ್ಯುತ್ ಕಂಬಗಳನ್ನು ಬಳಸಿಕೊಂಡು ಎಳೆಯಲಾಗಿರುವ ಒಎಫ್‌ಸಿ ಕೇಬಲ್, ಡೇಟಾ ಕೇಬಲ್, ಟಿ.ವಿ., ಇಂಟರ್‌ನೆಟ್ ಕೇಬಲ್‌ಗಳ ವಿರುದ್ಧ ಬೆಸ್ಕಾಂ ಸಮರ ಸಾರಿದೆ. ಮೂರು ತಿಂಗಳಲ್ಲಿ 59 ಸಾವಿರ ಸ್ಥಳಗಳಲ್ಲಿ ಅನಧಿಕೃತ ಕೇಬಲ್ ತೆರವು ಮಾಡಿದೆ.

ಇನ್ನೂ 31 ಸಾವಿರ ಅಪಾಯಕಾರಿ ಸ್ಥಳಗಳನ್ನು ಬೆಸ್ಕಾಂ ಪತ್ತೆ ಹಚ್ಚಿದೆ. ಬೆಂಗಳೂರು ನಗರ ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ಈ ಕೇಬಲ್‌ಗಳ ಹಾವಳಿ ಜನರ ಜೀವಕ್ಕೆ ಕಂಟಕ ಪ್ರಾಯವಾಗುತ್ತಿದೆ.

ಕಳೆದ ಜುಲೈನಲ್ಲಿ ಬೆಂಗಳೂರಿನ ಎಸ್.ಜಿ.ಪಾಳ್ಯದಲ್ಲಿ ಕೇಬಲ್ ಕಾರಣಕ್ಕೆ ತುಂಡಾಗಿ ಬಿದ್ದಿದ್ದ ವಿದ್ಯುತ್ ಕಂಬದ ತಂತಿಗಳು ತಗುಲಿ ವಿದ್ಯಾರ್ಥಿನಿಯೊಬ್ಬರಿಗೆ ಗಂಭೀರ ಸ್ವರೂಪದ ಗಾಯವಾಗಿತ್ತು. ಸಂಜಯನಗರದಲ್ಲೂ ಕೇಬಲ್‌ನಿಂದ ಆಘಾತ ಸಂಭವಿಸಿತ್ತು. ಅದಾದ ಮೇಲೆ ಬೆಸ್ಕಾಂ ಕೇಬಲ್ ತೆರವು ಕಾರ್ಯಾಚರಣೆ ಆರಂಭಿಸಿತ್ತು.

ನವೆಂಬರ್‌ನಲ್ಲಿ ಕಾಡುಗೋಡಿ ಸಮೀಪದ ಹೋಪ್ ಫಾರ್ಮ್ ಜಂಕ್ಷನ್ ಬಳಿ ವಿದ್ಯುತ್ ತಂತಿಯನ್ನು ತುಳಿದು ತಾಯಿ ಹಾಗೂ ಮಗು ಮೃತಪಟ್ಟ ಪ್ರಕರಣ ನಡೆದ ಮೇಲೆ ಕೇಬಲ್ ತೆರವು ಕಾರ್ಯಾಚರಣೆಯನ್ನು ಬೆಸ್ಕಾಂ ಮತ್ತಷ್ಟು ಚುರುಕುಗೊಳಿಸಿತ್ತು.

ಪ್ರಜಾವಾಣಿ ವಿಶೇಷ

ಬೆಸ್ಕಾಂ ವ್ಯಾಪ್ತಿಯ ಜಿಲ್ಲೆಗಳಲ್ಲಿ ಬೆಂಗಳೂರು ವೃತ್ತದ ಉತ್ತರ, ದಕ್ಷಿಣ, ಪೂರ್ವ ಹಾಗೂ ಪಶ್ಚಿಮ ವಿಭಾಗದಲ್ಲೇ ಹೆಚ್ಚು ಅಪಾಯಕಾರಿ ಸ್ಥಳಗಳಿರುವುದು ಪತ್ತೆಯಾಗಿದೆ. ನಾಲ್ಕು ವಿಭಾಗದ ವೃತ್ತಗಳಲ್ಲಿ ಒಟ್ಟು 68 ಸಾವಿರ ಅಪಾಯಕಾರಿ ಸ್ಥಳಗಳಲ್ಲಿದ್ದು 52,871 ಕಡೆ ತೆರವುಗೊಳಿಸಲಾಗಿದೆ. 15,129 ಕಡೆ ಕೇಬಲ್‌ಗಳು ಜೋತು ಬಿದ್ದು ಅಪಾಯಕ್ಕೆ ಕಾರಣವಾಗುತ್ತಿವೆ.

ಮತ್ತೆ ಕೇಬಲ್ ಪ್ರತ್ಯಕ್ಷ: ಬೆಸ್ಕಾಂ ಸಿಬ್ಬಂದಿ ಹಗಲು ಹೊತ್ತಿನಲ್ಲಿ ಕೇಬಲ್‌ಗಳನ್ನು ಕತ್ತರಿಸಿ ವಶಕ್ಕೆ ಪಡೆದುಕೊಳ್ಳುತ್ತಿದ್ದಾರೆ. ಎರಡು ದಿನಗಳ ನಂತರ ಅದೇ ಸ್ಥಳಗಳಲ್ಲಿ ಕೇಬಲ್‌ಗಳು ಪ್ರತ್ಯಕ್ಷವಾಗುತ್ತಿವೆ. ಇದು ಕಾರ್ಯಾಚರಣೆಗೆ ಅಡ್ಡಿಯಾಗುತ್ತಿದೆ ಎಂದು ಸಿಬ್ಬಂದಿ ಹೇಳುತ್ತಾರೆ.

'ಕೇಬಲ್ ಅಳವಡಿಕೆಗೆ ವಿದ್ಯುತ್ ಕಂಬವನ್ನು ಬಳಸಲು ಅವಕಾಶ ಇರುವುದಿಲ್ಲ. ಆದರೆ, ವಿದ್ಯುತ್ ಕಂಬಗಳೇ ಕೇಬಲ್‌ಗಳಿಗೆ ಮಾರ್ಗವಾಗಿವೆ' ಎಂದು ಅಧಿಕಾರಿಗಳು ಹೇಳುತ್ತಾರೆ.

ತೆರವು ಸ್ಥಳಗಳಲ್ಲಿ ಮತ್ತೆ ಕೇಬಲ್ ಅಳವಡಿಸುತ್ತಿರುವ ಆಪರೇಟರ್‌ಗಳ ವಿರುದ್ಧ ಪ್ರಕರಣ ದಾಖಲಿಸಲಾಗುತ್ತಿದೆ

ಮಹಾಂತೇಶ್ ಬೀಳಗಿ,
ವ್ಯವಸ್ಥಾಪಕ ನಿರ್ದೇಶಕ, ಬೆಸ್ಕಾಂ

ವೃತ್ತ	ಅಪಾಯಕಾರಿ ಸ್ಥಳ ಗುರುತು	ತೆರವು	ಬಾಕಿ ಉಳಿದ ಸ್ಥಳಗಳು
ಬೆಂಗಳೂರು ಉತ್ತರ	13,555	7,868	5,687
ಪೂರ್ವ	11,413	7,190	4,223
ಪಶ್ಚಿಮ	18,639	16,587	2,052
ದಕ್ಷಿಣ	24,393	21,226	3,167
ಬೆಂಗಳೂರು ಗ್ರಾಮಾಂತರ	739	691	48
ರಾಮನಗರ	1,496	911	585
ಕೋಲಾರ	10,160	1,345	8,815
ತುಮಕೂರು	198	156	42
ದಾವಣಗೆರೆ	9,758	3,238	6,520
ಒಟ್ಟು	90,351	59,212	31,139

ಶಾಲಾ ಆವರಣದಲ್ಲೂ 'ಅಪಾಯ'

ರಸ್ತೆಬದಿಯಲ್ಲದೇ ಶಾಲೆ–ಕಾಲೇಜು ಆವರಣ ಹಾಗೂ ಕಾಂಪೌಂಡ್ ಬಳಿ ಹಾದು ಹೋಗಿರುವ ವಿದ್ಯುತ್ ಮಾರ್ಗಗಳಲ್ಲೂ ಅನಧಿಕೃತ ಕೇಬಲ್ ಅಳವಡಿಸಿರುವುದು ಆತಂಕಕ್ಕೆ ಕಾರಣವಾಗುತ್ತಿದೆ.

ಆವರಣದಲ್ಲಿ ಮಕ್ಕಳು ಆಟವಾಡುತ್ತಿರುತ್ತಾರೆ. ಅಲ್ಲಿಯೂ ಅಪಾಯದ ಸಾಧ್ಯತೆಯಿದೆ. ಸದ್ಯ ಅಂತಹ 12 ಕಡೆ ಕೇಬಲ್ ತೆರವು ಮಾಡಿದ್ದು, ಆಪರೇಟರ್‌ಗಳಿಗೆ ಎಚ್ಚರಿಕೆ ಕೊಡಲಾಗಿದೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಸುದ್ದಿ 2 ನಿಮಿಷ

'ಅಮೃತ ಕಾಲ'ವಲ್ಲ, 'ವಿನಾಶ ಕಾಲ'

ಬೆಂಗಳೂರು: 'ಹತ್ತು ವರ್ಷಗಳ ಬಿಜೆಪಿ ಆಡಳಿತವನ್ನು ನರೇಂದ್ರ ಮೋದಿ ಮತ್ತು ಬಿಜೆಪಿ ನಾಯಕರು 'ಅಮೃತ ಕಾಲ' ಎಂದು ಬಣ್ಣಿಸುತ್ತಿದ್ದಾರೆ. ವಾಸ್ತವದಲ್ಲಿ ಇದು ಭಾರತದ 'ವಿನಾಶ ಕಾಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ.

'ಬಿಜೆಪಿ ಅವಧಿಯಲ್ಲಿ ರೈತರು, ಕಾರ್ಮಿಕರು, ಮಹಿಳೆಯರು, ಯುವಜನರು, ಶೋಷಿತರು ಮತ್ತು ಜನಸಾಮಾನ್ಯರು ಎದುರಿಸುತ್ತಿರುವ ಕಷ್ಟ–ಕಾರ್ಪಣ್ಯಗಳು ಐದರಿಂದ ಹತ್ತು ಪಟ್ಟು ಹೆಚ್ಚಾಗಿದೆ' ಎಂದು ಅವರು ಪ್ರಕಟಣೆಯಲ್ಲಿ ದೂರಿದ್ದಾರೆ.

'ಹತ್ತು ವರ್ಷಗಳ ಹಿಂದೆ ಮತದಾರರಿಗೆ ನೀಡಿದ್ದ ಒಂದೇ ಒಂದು ಭರವಸೆಯನ್ನು ಮೋದಿ ಸರ್ಕಾರ ಪೂರ್ಣ ಪ್ರಮಾಣದಲ್ಲಿ ಈಡೇರಿಸಿಲ್ಲ. ರೈತರ ಆದಾಯದ ದುಪ್ಪಟ್ಟು, ಯುವಜನರಿಗೆ ವಾರ್ಷಿಕ 2 ಕೋಟಿ ಉದ್ಯೋಗ ಸೃಷ್ಟಿ , ಮಹಿಳೆಯರಿಗೆ ರಕ್ಷಣೆ, ಕಾರ್ಮಿಕರಿಗೆ ಉದ್ಯೋಗ ಭದ್ರತೆ, ಶೋಷಿತ ಸಮುದಾಯಗಳಿಗೆ ರಕ್ಷಣೆ, ಅಗ್ಗದ ದರದಲ್ಲಿ ಅಗತ್ಯವಸ್ತುಗಳ ಪೂರೈಕೆ ಮೊದಲಾದ ಬಣ್ಣಬಣ್ಣದ ಭರವಸೆಗಳನ್ನು ನೀಡಿದ್ದ ಅವರು, ಗೆದ್ದ ನಂತರ ಅವುಗಳನ್ನು ಮರೆತು ದೇವರು-ಧರ್ಮದ ಹೆಸರಿನ ಭಾವನಾತ್ಮಕ ರಾಜಕಾರಣ, ಉದ್ಯಮಿಗಳ ತುಷ್ಟೀಕರಣದಲ್ಲಿ ಮುಳುಗಿದ್ದಾರೆ' ಎಂದು ಕುಟುಕಿದ್ದಾರೆ.

'ಹತ್ತು ವರ್ಷಗಳ ನರೇಂದ್ರ ಮೋದಿಯವರ ಅನ್ಯಾಯ ಕಾಲದ ವಿವರಗಳನ್ನು ಅಂಕಿ–ಅಂಶಗಳ ಸಹಿತ ಕರ್ನಾಟಕದ ಜನತೆಯ ಮುಂದೆ ಇಡುತ್ತಿದ್ದೇನೆ. ದೇಶ ಇಂದು ಅಮೃತ ಕಾಲದಲ್ಲಿ ಇದೆಯೊ? ಅನ್ಯಾಯದ ಕಾಲದಲ್ಲಿ ಇದೆಯೊ? ಎಂದು ಜನರೇ ತೀರ್ಮಾನಿಸಲಿ' ಎಂದೂ ಹೇಳಿದ್ದಾರೆ.

13ರಿಂದ ಆಶಾ ಕಾರ್ಯಕರ್ತೆಯರ ಅಹೋರಾತ್ರಿ ಹೋರಾಟ

ಬೆಂಗಳೂರು: ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ತಿಂಗಳಿಗೆ ₹ 15 ಸಾವಿರ ಪ್ರೋತ್ಸಾಹಧನ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿರುವ ಆಶಾ ಕಾರ್ಯಕರ್ತೆಯರು, ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ನೇತೃತ್ವದಲ್ಲಿ ಇದೇ 13 ಮತ್ತು 14ಕ್ಕೆ ಸ್ವಾತಂತ್ರ್ಯ ಉದ್ಯಾನದಲ್ಲಿ 'ವಿಧಾನಸೌಧ ಚಲೋ' ಅಹೋರಾತ್ರಿ ಹೋರಾಟ ಹಮ್ಮಿಕೊಂಡಿದ್ದಾರೆ.

'ಪ್ರೋತ್ಸಾಹಧನಕ್ಕೆ ಸಂಬಂಧಿಸಿದಂತೆ ಆಶಾ ಕಾರ್ಯಕರ್ತೆಯರಿಗೆ ಆಗುತ್ತಿರುವ ವಂಚನೆ ತಡೆಯಲು ಆರ್.ಸಿ.ಎಚ್. ಪೋರ್ಟಲ್ ಅನ್ನು ವೇತನ ಪಾವತಿ ಪ್ರಕ್ರಿಯೆಯಿಂದ ಬೇರ್ಪಡಿಸಬೇಕು. ಮೊಬೈಲ್ ಬಳಕೆ ಬಾರದವರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು. ಮೊಬೈಲ್ ಬಳಸಿ ದತ್ತಾಂಶ ಸಂಗ್ರಹಿಸುವವರಿಗೆ ಪ್ರೋತ್ಸಾಹಧನ ಒದಗಿಸಬೇಕು. ಆರ್.ಸಿ.ಎಚ್. ಪೋರ್ಟಲ್‌ನಲ್ಲಿನ ವಿವಿಧ ಸಮಸ್ಯೆಗಳಿಂದಾಗಿ ಹಲವು ವರ್ಷಗಳಿಂದ ಬಾಕಿಯಿರುವ ಪ್ರೋತ್ಸಾಹಧನವನ್ನು ನೀಡಲು ಕೂಡಲೇ ಕ್ರಮಕೈಗೊಳ್ಳಬೇಕು' ಎಂದು ಸಂಘದ ರಾಜ್ಯಾಧ್ಯಕ್ಷ ಕೆ. ಸೋಮಶೇಖರ್ ಯಾದಗಿರಿ ಒತ್ತಾಯಿಸಿದ್ದಾರೆ.

ವಾಲಿಬಾಲ್ ತರಬೇತಿ, ಸಂವಾದ ಇಂದು

ಬೆಂಗಳೂರು: ಬೆಂಗಳೂರು ಟಾರ್ಪಿಡೋಸ್ ವಾಲಿಬಾಲ್ ತಂಡದಿಂದ ಆಸಕ್ತ ಕ್ರೀಡಾಪಟುಗಳಿಗೆ ಮುಕ್ತ ತರಬೇತಿ ಕಾರ್ಯಕ್ರಮ ಇದೇ 11ರಂದು ಬೆಳಿಗ್ಗೆ 9.30ರಿಂದ 11.30ರವರೆಗೆ ಪಡುಕೋಣೆ-ದ್ರಾವಿಡ್ ಸೆಂಟರ್ ಫಾರ್ ಸ್ಪೋರ್ಟ್ಸ್ ಎಕ್ಸಲೆನ್ಸ್ ಕೇಂದ್ರದಲ್ಲಿ ನಡೆಯಲಿದೆ.

ನಂತರ ತಂಡದ ಕ್ರೀಡಾಪಟುಗಳೊಂದಿಗೆ ಸಂವಾದ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಸಂ: ಜಿಕೌಕ/ಡೇನಲ್ಮ್/ಸಿಎಂಎಂ/4/2023-24 ದಿನಾಂಕ: 09-02-2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಜಿಲ್ಲಾ ಕೌಶಲ್ಯಾಭಿವೃದ್ಧಿ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಈ ಕಛೇರಿಗೆ ಡೇ–ನಲ್ಮ್ ಯೋಜನೆಯ ಅಡಿಯಲ್ಲಿ ಇಬ್ಬರು ಅಭಿಯಾನ ವ್ಯವಸ್ಥಾಪಕರ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ 11 ತಿಂಗಳ ಅವಧಿಗೆ ಪಡೆಯುವ ಸಂಬಂಧ ಆಸಕ್ತ ಮಾನವ ಸಂಪನ್ಮೂಲ ಹೊರಗುತ್ತಿಗೆ ಏಜೆನ್ಸಿಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಟೆಂಡರ್‌ದಾರರು **https://kppp.karnataka.gov.in** ವೆಬ್‌ಸೈಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ: **19-02-2024ರ ಸಂಜೆ 5.30 ರೊಳಗಾಗಿ** ಸಲ್ಲಿಸಲು ತಿಳಿಸಲಾಗಿದೆ. ಟೆಂಡರ್‌ನ ವೇಳಾಪಟ್ಟಿ ಹಾಗೂ ಹೆಚ್ಚಿನ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿದೆ. Tender Reference No: DSDEL/2023-24/SE0010 ಇಲ್ಲಿಂದ ಪಡೆಯಬಹುದಾಗಿದೆ.

ಸಹಿ/–
ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಾಸಾಪಸಂಇ/ವಾಪ್ರ/ಸ್ಯಾನ್/3528/2023-24

2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಕನಕಪುರ.
ಮಿಸ್ ನಂ. 5066/2020

ಅರ್ಜಿದಾರರು : ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ, ರಾಷ್ಟ್ರೀಯ ಹೆದ್ದಾರಿ–209 ಮಳವಳ್ಳಿ

ವಿರುದ್ಧ

ಪ್ರತಿ ಅರ್ಜಿದಾರರು : ಶ್ರೀಮತಿ. ಇಂದ್ರಮ್ಮ ಮತ್ತು ಇತರರು

ಪ್ರತಿವಾದಿ ಸಂಖ್ಯೆ. 1 ಶ್ರೀಮತಿ. ಇಂದ್ರಮ್ಮ, ಕೋಂ ಕೃಷ್ಣಪ್ಪ ವಯಸ್ಕರು ನಂ. 8, ಮಾರಪ್ಪ ಗಾರ್ಡನ್, ಇಜಿಪುರ ಮುಖ್ಯ ರಸ್ತೆ, ವಿವೇಕನಗರ ಅಂಚೆ, ಬೆಂಗಳೂರು–560047

ಪತ್ರಿಕಾ ಪ್ರಕಟಣೆ

ಅರ್ಜಿದಾರರು ಮಾನ್ಯ ಘನ ನ್ಯಾಯಾಲಯದಲ್ಲಿ ಸದರಿ ಪ್ರಕರಣವನ್ನು ಸಲ್ಲಿಸುವುದರ ಮೂಲಕ ಪ್ರತಿವಾದಿ ನಂ.1 ಇವರು ನಂ.8, ಮಾರಪ್ಪ ಗಾರ್ಡನ್, ಇಜಿಪುರ ಮುಖ್ಯ ರಸ್ತೆ ವಿವೇಕನಗರ ಅಂಚೆ, ಬೆಂಗಳೂರು–560047 ಗ್ರಾಮದ ಮೂಲ ನಿವಾಸಿಗಳಾಗಿದ್ದು, ಮೇಲ್ಕಂಡ ಪ್ರತಿವಾದಿ ನಂ. 1 ಆದ ನಿಮಗೆ ನ್ಯಾಯಾಲಯದ ಮೂಲಕ ಹಲವು ಬಾರಿ ನೋಟಿಸ್ ಹಾಗೂ ರಿಜಿಸ್ಟರ್ ಪೋಸ್ಟ್ (ಆರ್.ಪಿ.ಎ.ಡಿ) ಮೂಲಕ ನ್ಯಾಯಾಲಯಕ್ಕೆ ಹಾಜರಾಗಲು ಸೂಚಿಸಲಾಗಿತ್ತು. ಆದರೆ ತಾವುಗಳು ಘನ ನ್ಯಾಯಾಲಯದ ಮುಂದೆ ಹಾಜರಾಗಿರುವುದಿಲ್ಲ, ಆದುದರಿಂದ ತಮಗೆ ಈ ಮೂಲಕ ತಿಳಿಸುವುದೇನೆಂದರೆ ಸದರಿ ಪ್ರಕರಣವನ್ನು ದಿನಾಂಕ : **29-02-2024** ರಂದು ಗೊತ್ತುಪಡಿಸಿದ್ದು ಆ ದಿನದಂದು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಾದರೂ ತಕರಾರು ಇದ್ದಲ್ಲಿ ಯಾವುದೇ ಪಕ್ಷಗಾರರು ತಾವಾಗಲಿ ಅಥವಾ ಅವರ ಪರ ವಕೀಲರಾಗಲಿ ನ್ಯಾಯಾಲಯವು ನಿಗದಿಪಡಿಸಿರುವ ಆ ದಿನ ಬೆಳಗ್ಗೆ 11.00 ಘಂಟೆಗೆ ಹಾಜರಾಗಿ ತಮ್ಮ ಪರ ತಕರಾರು ಸಲ್ಲಿಸಬಹುದಾಗಿರುತ್ತದೆ. ಒಂದು ವೇಳೆ ಯಾರು ತಕರಾರು ಸಲ್ಲಿಸಿಲ್ಲದ ಪಕ್ಷದಲ್ಲಿ ನ್ಯಾಯಾಲಯವು ಯಾರದೂ ತಕರಾರು ಇಲ್ಲವೆಂದು ಆದೇಶ ಹೊರಡಿಸುತ್ತದೆ ಎಂದು ತಿಳಿಸುವುದಕ್ಕಾಗಿ ಈ ಪತ್ರಿಕಾ ಪ್ರಕಟಣೆ.

ದಾವಾ ಷೆಡ್ಯೂಲ್ :

ಸ್ವಾಧೀನವಾಗಿರುವ ದಾವಾ ಸ್ವತ್ತು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕನಕಪುರ ಗ್ರಾಮದ ಸರ್ವೆ ನಂ. 764/2, ಒಟ್ಟು ಪರಿಹಾರದ ಹಣ ಮೊತ್ತ ರೂ. 20,760=00 (ಇಪ್ಪತ್ತು ಸಾವಿರದ ಏಳುನೂರ ಅರವತ್ತು ಮಾತ್ರ).

ದಿನಾಂಕ : 30.01.2024 ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ,
ಕನಕಪುರ, ರಾಮನಗರ

ಸ್ಥಳ : ಕನಕಪುರ
ದಿನಾಂಕ : 30.01.2024

'ಪಠ್ಯವಾಗಿ ಸಂಚಾರ ನಿಯಮ ಜಾಗೃತಿ'

ಪೀಣ್ಯ ಕೈಗಾರಿಕೆಗಳ ಒಕ್ಕೂಟದಲ್ಲಿ 'ಸಂಚಾರ ಸಂಪರ್ಕ ದಿನ' ಆಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಚಾರ ನಿಯಮಗಳ ಜಾಗೃತಿಗೆ ಪಾಠವೊಂದನ್ನು ಸಿದ್ಧಪಡಿಸಿ, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಗೆ (ಡಿಎಸ್‌ಇಆರ್‌ಟಿ) ಸಲ್ಲಿಸಲಾಗಿದೆ. ಮುಂದಿನ ಶೈಕ್ಷಣಿಕ ವರ್ಷದಿಂದ 1 ರಿಂದ 10ನೇ ತರಗತಿ ಪಠ್ಯದಲ್ಲಿ ಸೇರಿಸುವುದಾಗಿ ಡಿಎಸ್‌ಇಆರ್‌ಟಿ ಹೇಳಿದೆ' ಎಂದು ಬೆಂಗಳೂರು ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್.ಅನುಚೇತ್ ತಿಳಿಸಿದರು.

ನಗರದ ಪೀಣ್ಯ ಕೈಗಾರಿಕೆಗಳ ಒಕ್ಕೂಟದ ಸಭಾಭವನದಲ್ಲಿ ಶನಿವಾರ ಆಯೋಜಿಸಿದ್ದ 'ಸಂಚಾರ ಸಂಪರ್ಕ ದಿನ' ಅಹವಾಲು ಸ್ವೀಕಾರ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ಸಂಚಾರ ನಿಯಮಗಳನ್ನು ಬಹುತೇಕರು ಪಾಲಿಸುತ್ತಿಲ್ಲ. ಇದರಿಂದಲೇ ರಸ್ತೆ ಅವಘಡಗಳು ಸಂಭವಿಸುತ್ತಿದೆ. ಈ ಕುರಿತ ಜಾಗೃತಿಗೆ ಏನು ಕ್ರಮ ಕೈಗೊಂಡಿದ್ದೀರಾ' ಎಂದು ಸಾರ್ವಜನಿಕರೊಬ್ಬರು ಪ್ರಶ್ನಿಸಿದರು.

ಕಾರ್ಯಕ್ರಮದಲ್ಲಿ ಎಂ.ಎನ್.ಅನುಚೇತ್ ಮಾತನಾಡಿದರು. ಪೀಣ್ಯ ಕೈಗಾರಿಕೆಗಳ ಒಕ್ಕೂಟದ ಅಧ್ಯಕ್ಷ ಎಚ್.ಎಂ. ಆರಿಫ್ ಹಾಗೂ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಇದ್ದರು

ಅದಕ್ಕೆ ಪ್ರತಿಕ್ರಿಯಿಸಿದ ಅನುಚೇತ್, 'ಜಾಗೃತಿಗೆ ಸಮಿತಿ ರಚಿಸಲಾಗಿದೆ. ವಾರದಲ್ಲಿ ಎರಡು ದಿನ ಶಾಲೆಗಳಲ್ಲಿ ವಿಶೇಷ ಪಾಠ ಮಾಡಲಾಗುತ್ತಿದೆ. ಸಂಚಾರ ಉದ್ಯಾನದಲ್ಲಿ ನಿತ್ಯ ತಲಾ 50 ಮಕ್ಕಳಿಗೆ ಪ್ರಾತ್ಯಕ್ಷಿಕೆ ಸಮೇತ ವಿವರಣೆ ನೀಡಲಾಗುತ್ತಿದೆ' ಎಂದರು.

'ಸಂಚಾರ ಜಾಗೃತಿ ನಿಯಮದ ಕುರಿತು ಶಾಲೆ ಪಠ್ಯದಲ್ಲಿ ಪಾಠ ಸೇರಿಸುವ ಕೆಲಸ ಆರಂಭಿಸಿದ್ದೇವೆ. ಮಕ್ಕಳಿಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಪಾಠ ಸಿದ್ಧಪಡಿಸಿ, ಡಿಎಸ್‌ಇಆರ್‌ಟಿಗೆ ಸಲ್ಲಿಸಲಾಗಿದೆ. ಅವರಿಂದ ಉತ್ತಮ ಸ್ಪಂದನೆ ಸಿಕ್ಕಿದ್ದು, ಮುಂದಿನ ವರ್ಷವೇ ಪಠ್ಯದಲ್ಲಿ ಪಾಠ ಸೇರ್ಪಡೆಯಾಗುವ ವಿಶ್ವಾಸವಿದೆ' ಎಂದು ಅನುಚೇತ್ ಹೇಳಿದರು.

ನಾನಾ ಸಮಸ್ಯೆ: 'ತುಮಕೂರು ರಸ್ತೆ, ಪೀಣ್ಯ ಕೈಗಾರಿಕೆ ಪ್ರದೇಶ, ಜಾಲಹಳ್ಳಿ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ನಿತ್ಯವೂ ದಟ್ಟಣೆ ಹೆಚ್ಚಿರುತ್ತದೆ. ಈ ಭಾಗದಲ್ಲಿ ಕರ್ತವ್ಯಕ್ಕೆ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಬೇಕು. ವ್ಹೀಲೆ ಮಾಡುವವರ ಸಂಖ್ಯೆಯೂ ಹೆಚ್ಚಾಗಿದ್ದು, ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಸಾರ್ವಜನಿಕರು ಆಗ್ರಹಿಸಿದರು.

'ಬಹುತೇಕ ರಸ್ತೆಗಳಲ್ಲಿ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ. ಕೆಲವೆಡೆ ಪಾದಚಾರಿ ಮಾರ್ಗಗಳಲ್ಲಿಯೇ ವಾಹನಗಳನ್ನು ನಿಲ್ಲಿಸಲಾಗುತ್ತಿದೆ. ಪಾದಚಾರಿಗಳು ಓಡಾಡಲು ಜಾಗವೇ ಇಲ್ಲದಂತಾಗಿದೆ' ಎಂದು ದೂರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್, 'ವ್ಹೀಲೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ. ಪಾದಚಾರಿ ಮಾರ್ಗದ ಒತ್ತುವರಿಯನ್ನು ಬಿಬಿಎಂಪಿ ಅಧಿಕಾರಿಗಳು ತೆರವು ಮಾಡುತ್ತಿದ್ದು, ಸಹಕಾರ ನೀಡಲಾಗುತ್ತಿದೆ' ಎಂದರು.

ಸುಧಾ, ಮಯೂರ ಓದಿರಿ

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಪಿ/ಸಿಎನ್/ಬಿಎನ್‌ಸಿ/102/2024
ದಿನಾಂಕ : 06-02-2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ರಾಜಾನುಕುಂಟೆ – ದೊಡ್ಡಬಳ್ಳಾಪುರ ನಿಲ್ದಾಣಗಳ ನಡುವೆ ಕಿ.ಮೀ. 33/600–700 ನಲ್ಲಿ ರೈಲು ಮೇಲ್ಸೇತುವೆ ಸಂ. 483ಬಿ ಯ ಆರ್‌ಸಿಸಿ ರಿಟೇನಿಂಗ್ ಗೋಡೆಯನ್ನು ನಿರ್ಮಾಣ ಮಾಡುವುದರಿಂದ ಆರ್‌ಇ ಅಪ್ರೋಚ್‌ಗಳ ಮರುನಿರ್ಮಾಣಕ್ಕಾಗಿ ಉಳಿದ ಕಾಮಗಾರಿ (ಟೆಂಡರ್ ಉಲ್ಲೇಖ ಸಂ. ಆರ್‌ಒಬಿ–483ಬಿ–ಬ್ಯಾಲೆನ್ಸ್)	ರೂ. 6,23,32,766/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 27-02-2024 ರಂದು 15:00 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು
ಬೆಂಗಳೂರು ದಂಡು

ಪಿಯುಬಿ/679/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023-24

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಎಸ್‌ಎನ್‌ಟಿ_ಆರ್‌ಡಿಡಬ್ಲ್ಯು–ಎಪಿಎಲ್_ಆರ್‌ಇಎಲ್_ಐಎಂಪಿ
ದಿನಾಂಕ : 06-02-2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆ – ಬೆಂಗಳೂರು ವಿಭಾಗ – ಬೆಂಗಳೂರು ವಿಭಾಗದ ಎಲ್‌ಸಿ ಗೇಟ್‌ಗಳಲ್ಲಿ ರೋಡ್ ವಾರ್ನಿಂಗ್ ಸಿಗ್ನಲ್, ಅಪ್ರೋಚ್ ಲಾಕಿಂಗ್ ಮತ್ತು ರಿಲೈಯಬಿಲಿಟಿ ಇಂಪ್ರೂವ್‌ಮೆಂಟ್ ಕಾಮಗಾರಿ	ರೂ. 1,40,51,701.82

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 29-02-2024 ರಂದು 15:00 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಇಂಜಿನಿಯರ್ / ಬೆಂಗಳೂರು

ಪಿಯುಬಿ/681/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023-24

South Western Railway - SWR | SWRRLY | SWRRLY

ಕಲಾಕ್ಷೇತ್ರ ನವೀಕರಣ ಕೈಬಿಡಲು ನಿರ್ಧಾರ

ಬೆಂಗಳೂರು: ರವೀಂದ್ರ ಕಲಾಕ್ಷೇತ್ರವನ್ನು ₹ 24 ಕೋಟಿ ವೆಚ್ಚದಲ್ಲಿ ನವೀಕರಿಸುವ ಪ್ರಸ್ತಾವಕ್ಕೆ ರಂಗಕರ್ಮಿಗಳು, ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರಿಂದ ವಿರೋಧ ವ್ಯಕ್ತವಾದ್ದರಿಂದ ಸದ್ಯ ಈ ಪ್ರಸ್ತಾವ ಕೈಬಿಡಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಿರ್ಧರಿಸಿದೆ.

ಈ ಬಗ್ಗೆ ರಂಗಕರ್ಮಿಗಳ ಜತೆಗೆ ಸಭೆ ನಡೆಸಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ರವೀಂದ್ರ ಕಲಾಕ್ಷೇತ್ರದ ನವೀಕರಣವನ್ನು ಕೈಬಿಟ್ಟು ಯಥಾಸ್ಥಿತಿ ಕಾಯ್ದುಕೊಳ್ಳಲಾಗುವುದು ಎಂದು ಭರವಸೆ ನೀಡಿದ್ದಾರೆ.

'ರವೀಂದ್ರ ಕಲಾಕ್ಷೇತ್ರಕ್ಕೆ ಆಧುನಿಕ ಸ್ಪರ್ಶ' ಎಂಬ ಶೀರ್ಷಿಕೆಯಡಿ 'ಪ್ರಜಾವಾಣಿ' ಜ.27ರಂದು ವಿಶೇಷ ವರದಿ ಪ್ರಕಟಿಸಿತ್ತು. ನವೀಕರಣ ಪ್ರಸ್ತಾಪಕ್ಕೆ ರಂಗಕರ್ಮಿಗಳ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿತ್ತು. ಸಾಮಾಜಿಕ ಜಾಲತಾಣಗಳಲ್ಲಿಯೂ ವಿರೋಧ ವ್ಯಕ್ತಪಡಿಸಿ, ಸಮಗ್ರ ನವೀಕರಣ ಅನಗತ್ಯವೆಂದು ಪ್ರತಿಪಾದಿಸಿದ್ದರು.

ಸಾಹಿತಿ ಕೆ.ಮರುಳಸಿದ್ದಪ್ಪ ಅವರು ಇದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೂ ತಂದಿದ್ದರು. ಹೀಗಾಗಿ, ಶಿವರಾಜ್ ತಂಗಡಗಿ ಅವರು ರಂಗಕರ್ಮಿಗಳ ಜತೆಗೆ ಸಭೆ ನಡೆಸಿ, ನವೀಕರಣದ ಬಗ್ಗೆ ಚರ್ಚೆ ನಡೆಸಿದ್ದಾರೆ.

'₹ 24 ಕೋಟಿ ವೆಚ್ಚದಲ್ಲಿ ಕಲಾಕ್ಷೇತ್ರದ ನವೀಕರಣ ಅಗತ್ಯವಿಲ್ಲ. ಕೇಂದ್ರೀಕೃತ ಹವಾ ನಿಯಂತ್ರಣ ವ್ಯವಸ್ಥೆ ಅನಿವಾರ್ಯವಲ್ಲ. ನವೀಕರಣ ಬಳಿಕ ಬಾಡಿಗೆ ಹೆಚ್ಚಿಸಲಾಗುತ್ತದೆ. ಅದನ್ನು ಭರಿಸಿ, ನಾಟಕ ಪ್ರದರ್ಶಿಸುವ ಶಕ್ತಿ ರಂಗಭೂಮಿಗಿಲ್ಲ. ಬದಲಾಗಿ, ಕೆಟ್ಟಿರುವ ಧ್ವನಿ–ಬೆಳಕಿನ ಪರಿಕರಗಳ ರಿಪೇರಿಗೆ ಕ್ರಮವಹಿಸಬೇಕು. ವೇದಿಕೆ ಮೇಲೆ ಹಾಕಲು ಆಲಂಕಾರಿಕ ಕುರ್ಚಿಗಳನ್ನು ನೀಡಬೇಕು. ವಾರ್ಷಿಕ ಶೇ 5ರಷ್ಟು ಬಾಡಿಗೆ ಹೆಚ್ಚಳ ಕೈಬಿಟ್ಟು, ಅಗತ್ಯ ಸಿಬ್ಬಂದಿ ನೇಮಿಸಬೇಕು' ಎಂದು ರಂಗಕರ್ಮಿಗಳು ತಿಳಿಸಿದರು.

ಮುಂಬೈ ರೇಸ್

ಸನ್ ಆಫ್ ಎ ಗನ್ ಗೆಲ್ಲುವ ನಿರೀಕ್ಷೆ

ಬೆಂಗಳೂರು ಟರ್ಫ್ ಕ್ಲಬ್ ಟ್ರೋಫಿ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸನ್ ಆಫ್ ಎ ಗನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಈಟನ್ ಸ್ಕ್ವೇರ್ 1, ಮಾರ್ಲ್‌ಬೊರೊ ಮ್ಯಾನ್ 2, ಲಿಯೋ ದಿ ಲಯನ್ 4
2ನೇ ರೇಸ್: ರೀಗಲ್ ಕಮಾಂಡ್ 1, ಓನ್ ವಾಯ್ಸ್ 2, ಸ್ಕರಮಾಂಗ 6
3ನೇ ರೇಸ್: ಸನ್ ಆಫ್ ಎ ಗನ್ 1, ಅಮೆಜೋನಿಯಾ 2
4ನೇ ರೇಸ್: ಟೈಪೋಲೊ 3, ಪಿಕಾಸೊ 2, ಬ್ರೇಕ್ ಪಾಯಿಂಟ್ 1
5ನೇ ರೇಸ್: ಬಿಗ್ ರೆಡ್ 1, ಅಲೆಕ್ಸಾಂಡ್ರಸ್ 8, ಮೆಟ್‌ಜಿಂಗರ್ 3
6ನೇ ರೇಸ್: ಪೋರ್ಟೋಫಿನೊ ಬೇ 2, ಕೊನಿಗ್ 3, ಗಾಡೆಸ್ ಆಫ್ ಡಾನ್ 5
7ನೇ ರೇಸ್: ಲಜಾರಸ್ 6, ಮಿಸ್ಟಿ 5, ನ್ಯೂ ಡೈಮನ್ಷನ್ 1

ಉತ್ತಮ ಬೆಟ್: ಲಜಾರಸ್

ಜಾಕ್‌ಪಾಟ್: **3,4,5,6,7** | ಟ್ರಿಬಲ್: **4,5,6**

ಜಾಥಾ ವೇಳೆ ದಾಂದಲೆ, ಇಬ್ಬರ ಬಂಧನ

ಬೀದರ್: ಭಾಲ್ಕಿ ತಾಲ್ಲೂಕಿನ ಮಳಚಾಪುರ ಗ್ರಾಮದಲ್ಲಿ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮದಲ್ಲಿ ದಾಂದಲೆ ಮಾಡಿ, ಕಲ್ಲು ತೂರಾಟ ನಡೆಸಿದ 11 ಜನರ ವಿರುದ್ಧ ಪ್ರಕರಣ ದಾಖಲಿಸಿ, ಇಬ್ಬರನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

'ಸಮಾಜ ಕಲ್ಯಾಣ ಇಲಾಖೆ ಶುಕ್ರವಾರ (ಫೆ.9) ಮಳಚಾಪುರ ಗ್ರಾಮದಲ್ಲಿ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಗ್ರಾಮದ ಕೆಲ ಕಿಡಿಗೇಡಿ ಯುವಕರು ಗುಂಪುಗೂಡಿ ಮೆರವಣಿಗೆ ಸಂದರ್ಭದಲ್ಲಿ ಗಲಾಟೆ ಮಾಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020

ಬೆಂಅಪ್ರಾ/ನಯೋಸ/CLU-220/2544/2023-24 ದಿನಾಂಕ: 09.02.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಸಿ.ಅಶ್ವಿನ್	ಆನೇಕಲ್	ಸರ್ಜಾಪುರ	ತಿಗಳ ಚೌಡದೇನಹಳ್ಳಿ	113/3	0–02.50	ವ್ಯವಸಾಯ	ವಸತಿ
2	ಡಿ.ವಿ.ಮುರಳಿ				113/4	0–02.50		
3	ಡಿ.ವಿ.ಸುರೇಶ್				114/5 ರ ಪೈಕಿ	1–35		
4	ಅರ್ಚನ.ಬಿ.ಎನ್ ರಾಜ್				114/6 ರ ಪೈಕಿ	0–05.25		

ಷರಾ:– ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ, ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ನಗರದಲ್ಲಿ ಇಂದು

ಆರ್ಗ್ಯಾನಿಕ್ ಸಂತೆ: ಜಾನಪದ ಗೀತೆ ಗಾಯನ: ಪವನಿ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ದಿ ಗ್ರೀನ್ ಪಾತ್, ಮಲ್ಲೇಶ್ವರ, ಬೆಳಿಗ್ಗೆ 8

'ಈಶ್ವರಮ್ಮ ಪುರಸ್ಕಾರ ಸಮಾರಂಭ–2024': ಅತಿಥಿಗಳು: ಗೀತಾ ಮೋಹನ್‌ರಾಮ್, ಶ್ರೀಲತಾ ವಿಜಯ ಕುಮಾರ್, ಪುರಸ್ಕಾರ ಪಡೆದವರು: ಹುಚ್ಚಮ್ಮ ಚೌದರಿ, ಡಾ. ರಾಧಮೂರ್ತಿ, ಅನಿತಾ ರೋಡ್ರಿಕ್ಸ್, ಸನ್ಮಾನ: ಆಶಾ ಸ್ವಾಮಿ, ಆಯೋಜನೆ: ಶ್ರೀಸತ್ಯ ಸಾಯಿ ಸೇವಾ ಸಂಘದ ಮಹಿಳಾ ವಿಭಾಗ, ಸ್ಥಳ: ಬೃಂದಾವನ ಆಶ್ರಮ, ವೈಟ್‌ಫೀಲ್ಡ್, ಬೆಳಿಗ್ಗೆ 9

ವಾರ್ಷಿಕ ಉನ್ನತ ಶಿಕ್ಷಣ ವಿದ್ಯಾರ್ಥಿವೇತನ ವಿತರಣಾ ಕಾರ್ಯಕ್ರಮ: ಅತಿಥಿಗಳು: ಜಿ. ಪರಮೇಶ್ವರ್, ರಾಮಲಿಂಗಾರೆಡ್ಡಿ, ತೇಜಸ್ವಿ ಸೂರ್ಯ, ಡಿ.ಎಸ್.ಅರುಣ್, ಆಯೋಜನೆ: ಕರ್ನಾಟಕ ಆರ್ಯ ವ್ಯಾಸ ಚಾರಿಟಬಲ್ ಟ್ರಸ್ಟ್, ಸ್ಥಳ: ಎನ್‌ಎಂಕೆಆರ್‌ವಿ ಕಾಲೇಜು ಮೈದಾನ, ಜಯನಗರ 3ನೇ ಬ್ಲಾಕ್, ಬೆಳಿಗ್ಗೆ 9.30

ವಾರ್ಷಿಕೋತ್ಸವ ಸಮಾರಂಭ: ಉದ್ಘಾಟನೆ: ಅಪ್ಪಗೆರೆ ತಿಮ್ಮರಾಜು, ಅತಿಥಿ: ಶ್ರೀಕೃಪಾ ಎಂ.ಎಸ್., ಆಯೋಜನೆ: ಭಾರತೀಯ ವಿದ್ಯಾಭವನ, ಬಿಬಿಎಂಪಿ ಪಬ್ಲಿಕ್ ಶಾಲೆ, ಸ್ಥಳ: ವಾಸವಿ ವಿದ್ಯಾನಿಕೇತನ ಶಾಲೆ ಸಭಾಂಗಣ, ವಿಶ್ವೇಶ್ವರಪುರ, ಬಸವನಗುಡಿ, ಬೆಳಿಗ್ಗೆ 10ರಿಂದ

ಸಂಗೀತ ಸಂಭ್ರಮ– 2024: ಆಯೋಜನೆ: ಸಾಯಿ ವಿಷ್ಣು ಮ್ಯೂಸಿಕ್ ಅಕಾಡೆಮಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10ರಿಂದ

ರಂಗಸ್ವಾಮಿ ಮೂಕನಹಳ್ಳಿ ಅವರ 'ಸಿರಿವಂತಿಕೆಗೆ ಸರಳ ಸೂತ್ರಗಳು', ನಾ. ಸೋಮೇಶ್ವರ ಅವರ 'ಏನನ್ನು ತಿನ್ನಬೇಕು? ಏನನ್ನು ತಿನ್ನಬಾರದು?', ಜಗದೀಶಶರ್ಮಾ ಸಂಪ ಅವರ 'ಮಹಾಭಾರತ ಅನ್ವೇಷಣೆ', ಸಂತೀಶ್ ವೆಂಕಟಸುಬ್ಬು ಅವರ 'ಸೈಬರ್ ಕ್ರೈಮ್' ಪುಸ್ತಕಗಳ ಬಿಡುಗಡೆ: ಲೇಖಕರೊಂದಿಗೆ ಸಂವಾದ: ಎನ್. ರವಿಶಂಕರ್, ನಿರೂಪಣೆ: ರಂಜನೀ ಕೀರ್ತಿ, ಆಯೋಜನೆ: ಸಾವಣ್ಣ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

ತಾಪ್ಸಿ ಪನ್ನು

ಪ್ಲಾಂಕಥಾನ್: ತಾಪ್ಸಿ ಪನ್ನು, ಆಯೋಜನೆ: ಬಜಾಜ್ ಅಲೈನ್ಸ್, ಸ್ಥಳ: ಕಂಠೀರವ ಕ್ರೀಡಾಂಗಣ, ಕಸ್ತೂರಬಾ ರಸ್ತೆ, ಬೆಳಿಗ್ಗೆ 7.30

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಚಂದನಾ ಅನಂತಕೃಷ್ಣ, ಅತಿಥಿಗಳು: ವಿಜಯ ರಾಘವೇಂದ್ರ, ಅನುರಾಧಾ, ಟಿ.ಎನ್. ಸೀತಾರಾಂ, ಆಯೋಜನೆ: ನರ್ತನ ಕೀರ್ತನ ಸೆಂಟರ್ ಫಾರ್ ಪರ್ಫಾಮಿಂಗ್ ಆರ್ಟ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5.30

ಚಂದನಾ ಅನಂತಕೃಷ್ಣ

'ಕಾಮ್ರೇಡ್ ಟಿ.ಎಸ್. ಅನಂತರಾಮ್' ಒಂದು ನೆನಪು: ಉದ್ಘಾಟನೆ: ಜಿ. ರಾಮಕೃಷ್ಣ, ಅಧ್ಯಕ್ಷತೆ: ಎಚ್.ಎನ್. ನಾಗಮೋಹನದಾಸ್, ಆಶಯ ನುಡಿ: ಹಂಚಾಟೆ ಸಂಜೀವ್ ಕುಮಾರ್, ಅತಿಥಿಗಳು: ಮೋಹನ್ ಕುಮಾರ್ ಕೊಂಡಜ್ಜಿ, ಎಸ್.ಎನ್. ಮೂರ್ತಿ, ವರಲಕ್ಷ್ಮಿ, ಎಚ್.ವಿ. ಅನಂತಸುಬ್ಬರಾವ್, ಬಾಬು ಮ್ಯಾಥ್ಯೂ, ಆಯೋಜನೆ: ಕರ್ನಾಟಕ ಇಂಡಸ್ಟ್ರಿಯಲ್ ಆ್ಯಂಡ್ ಅದರ್ ಎಸ್ಟಾಬ್ಲಿಷ್‌ಮೆಂಟ್ಸ್ ಎಂಪ್ಲಾಯೀಸ್ ಫೆಡರೇಷನ್, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 10

ಬಿ.ಎಂ.ಪ್ರಮೀಳ ಅವರ 'ಸಿರಿಮಲ್ಲಿಗೆ' ಪುಸ್ತಕ ಬಿಡುಗಡೆ: ಬಿ.ಆರ್. ಲಕ್ಷ್ಮಣರಾವ್, ಅಧ್ಯಕ್ಷತೆ: ವಸುಂಧರಾ ಭೂಪತಿ, ಪುಸ್ತಕ ಪರಿಚಯ: ಪಿ. ಚಂದ್ರಿಕಾ, ಅತಿಥಿಗಳು: ಸತೀಶ್ ಕುಮಾರ್ ಎಸ್. ಹೊಸಮನಿ, ಪಳನಿ ಡಿ. ಸೇನಾಪತಿ, ಕೋಡಿರಂಗಪ್ಪ, ಆಯೋಜನೆ: ಸಿರಿಮಲ್ಲಿಗೆ ಕನ್ನಡ ಸಾಹಿತ್ಯ ವೇದಿಕೆ, ತನ್ಮಯಿ ಪ್ರಕಾಶನ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10



ಸಾಹಿತಿ ಬಿ.ಆರ್ ಲಕ್ಷ್ಮಣರಾವ್

ಕೆ.ಎಸ್.ನ. ಸ್ಮರಣೆ–ಪ್ರೇಮ ಕವಿಗೋಷ್ಠಿ–ಪ್ರೇಮ, ಗೀತಗಾಯನ ಪ್ರಶಸ್ತಿ ಪ್ರದಾನ: ಬೆಮೆಲ್ ಸೆಲ್ವಕುಮಾರ್, ಕೆ.ಎಸ್.ನ ಸ್ಮರಣೆ: ಕೆ.ಎನ್. ಮಹಾಬಲ, ಅಧ್ಯಕ್ಷತೆ: ವಿ. ರೇಣುಕಪ್ರಸನ್ನ, ಅತಿಥಿ: ಪತ್ತಂಗಿ ಎಸ್. ಮುರಳಿ, ಉಪಸ್ಥಿತಿ: ನಾಗೇಶ್ ಡಿ. ಪಾಟಕ್, ಕುವರ ಯಲ್ಲಪ್ಪ, ಪ್ರಶಸ್ತಿ ಪುರಸ್ಕೃತರು: ಸದಾನಂದ, ಮೋಹನ್ ಆರ್. ಹಡಪದ್, ಮಮತ ಎಚ್.ಎ. ಸರ್ಜಾಪುರ, ಮಾನಸ ಕೆ.ಕೆ., ರೂಪ ಮಂಜುನಾಥ್, ಪ್ರತಿಮಾ ಹಾಸನ್, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಸುಮನ ಸುಪಥ–5: 'ಮಧ್ಯವಯಸ್ಸಿನ ಮಹಿಳೆಯರ ತಲ್ಲಣ' ಕುರಿತು ಉಪನ್ಯಾಸ: ಕೃಷ್ಣಾ ಗಲಗಲಿ, ಪ್ರಸ್ತಾವನೆ: ಡಿ. ಯಶೋದಾ, ಅತಿಥಿ: ಜ್ಯೋತಿ ಪ್ರಕಾಶ್, ಅಧ್ಯಕ್ಷತೆ: ಬಿ. ಶೃಂಗೇಶ್ವರ, ಆಯೋಜನೆ: ಸುಮನ, ಸ್ಥಳ: 53, 4ನೇ ಕ್ರಾಸ್, ಜೈಮುನಿನಗರ, ನಿಟ್ಟೆ ಮೀನಾಕ್ಷಿ ಕಾಲೇಜು ರಸ್ತೆ, ಯಲಹಂಕ, ಬೆಳಿಗ್ಗೆ 11

ಸತೀಶ್ ಹುಳಿಯಾರ್ ಅವರ 'ಯಾರೋ ಇರುವ ಭಾವನೆ' ಪುಸ್ತಕ ಬಿಡುಗಡೆ: ಎಚ್.ಎಸ್. ವೆಂಕಟೇಶಮೂರ್ತಿ, ಅತಿಥಿಗಳು: ಡುಂಡಿರಾಜ್, ಮಮತಾ ಸಾಗರ್, ಉಪಸ್ಥಿತಿ: ಶ್ರೀನಿವಾಸ್ ಜಿ. ಕಪ್ಪಣ್ಣ, ಬಿ.ಎಸ್. ವಿದ್ಯಾರಣ್ಯ, ಆಯೋಜನೆ: ಚಾರುಮತಿ ಪ್ರಕಾಶನ, ಸ್ಥಳ: ಕಪ್ಪಣ್ಣ ಅಂಗಳ, ಟಿಎಂಸಿ ಬಡಾವಣೆ, ಜೆ.ಪಿ. ನಗರ 1ನೇ ಹಂತ, ಬೆಳಿಗ್ಗೆ 11

ಬೆಂಗಳೂರು ದಕ್ಷಿಣ ಜಿಲ್ಲಾ ಕಾಂಗ್ರೆಸ್ ಪಕ್ಷದ ನೂತನ ಕಚೇರಿ ಉದ್ಘಾಟನೆ: ಅತಿಥಿಗಳು: ಡಿ.ಕೆ. ಶಿವಕುಮಾರ್, ರಾಮಲಿಂಗಾರೆಡ್ಡಿ, ಬಿ.ಕೆ. ಹರಿಪ್ರಸಾದ್, ಯು.ಬಿ. ವೆಂಕಟೇಶ್, ಸೌಮ್ಯ ರೆಡ್ಡಿ, ಮನ್ಸೂರ್ ರೆಹಮಾನ್ ಖಾನ್, ಸ್ಥಳ: #608, 10 ನೇ ಎ ಮುಖ್ಯರಸ್ತೆ, ಜಯನಗರ 4ನೇ ಬ್ಲಾಕ್, ಬೆಳಿಗ್ಗೆ 11

ಸಿ.ಆರ್. ವ್ಯಾಸ್ ಅವರ ಶತಮಾನೋತ್ಸವ ಸಮಾರಂಭ: ಭಾಗವಹಿಸುವ ಕಲಾವಿದರು: ಗಣಪತಿ ಭಟ್, ಭಾರತಿ ಪ್ರತಾಪ್, ಜಯತೀರ್ಥ ಮೇವುಂಡಿ, ಶಾಶ್ವತಿ ಮಂಡಲ್, ವೆಂಕಟೇಶ್ ಕುಮಾರ್, ರವೀಂದ್ರ ಯಾವಗಲ್, ರಾಮಕುಮಾರ್ ಮಿಶ್ರಾ, ಶ್ರೀಧರ್ ಮಾಂಡ್ರೆ, ಕೇಶವ್ ಜೋಶಿ, ವ್ಯಾಸಮೂರ್ತಿ ಕಟ್ಟಿ, ರವೀಂದ್ರ ಕಟೋಟಿ, ಸಂದೀಪ್ ಮಿಶ್ರಾ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಮಧ್ಯಾಹ್ನ 3ರಿಂದ

'ಸ್ವದೇಶಿ ಮೇಳ' ಸಮಾರೋಪ ಸಮಾರಂಭ: ಆಶೀರ್ವಚನ: ಶಿವರುದ್ರ ಸ್ವಾಮೀಜಿ, ಅತಿಥಿಗಳು: ಎಚ್.ಡಿ. ಕುಮಾರಸ್ವಾಮಿ, ತೇಜಸ್ವಿ ಸೂರ್ಯ, ಅಧ್ಯಕ್ಷತೆ: ಸಿ.ಕೆ. ರಾಮಮೂರ್ತಿ, ಮುಖ್ಯ ಭಾಷಣ: ಅಶ್ವನಿ ಮಹಾಜನ್, ಆಯೋಜನೆ: ಸ್ವದೇಶಿ ಜಾಗರಣ ಮಂಚ್ ಕರ್ನಾಟಕ, ಸ್ಥಳ: ಚಂದ್ರಗುಪ್ತ ಮೌರ್ಯ ಮೈದಾನ (ಶಾಲಿನಿ ಗ್ರೌಂಡ್ಸ್), ಜಯನಗರ, ಸಂಜೆ 5

ಮಧ್ವ ನವರಾತ್ರಿ ಪ್ರವಚನ ಮಾಲಿಕೆ: 'ಉಪನಿಷತ್ತುಗಳಲ್ಲಿ ವಾಯುದೇವರ ಚಿಂತನೆ' ಕುರಿತು ಉಪನ್ಯಾಸ: ವಿಜಯೀಂದ್ರಾಚಾರ್ಯ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಸಂಜೆ 6.30

'ಮಿಸ್ಟರ್ ರಾವ್ ಆ್ಯಂಡ್ ಅಸೋಸಿಯೇಟ್ಸ್' ನಾಟಕ ಪ್ರದರ್ಶನ: ನಿರ್ದೇಶನ: ಬಾಷ್ ರಾಘವೇಂದ್ರ, ರಚನೆ: ಭೀಷ್ಮ ರಾಮಯ್ಯ, ಸಂಗೀತ: ದೇಸಿ ಮೋಹನ್, ಪ್ರಸ್ತುತಿ: ಅಂತರಂಗ ಬಹಿರಂಗ ತಂಡ, ಸ್ಥಳ: ಡಾ.ಸಿ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 7

ಅಮೃತಹಳ್ಳಿ ಠಾಣೆಯಲ್ಲಿ ಆರೋಪಿ ಅಕ್ರಮ ಬಂಧನ ಪ್ರಕರಣ • ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹ

ಠಾಣೆ ಮೇಲೆ ದಾಳಿ, ದಾಖಲೆ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳ್ಳತನ ಪ್ರಕರಣದ ಆರೋಪಿಯನ್ನು 9 ದಿನ ಅಕ್ರಮ ಬಂಧನದಲ್ಲಿಟ್ಟುಕೊಂಡಿದ್ದ ಆರೋಪದಡಿ ಅಮೃತಹಳ್ಳಿ ಠಾಣೆಯ ಮೇಲೆ ಮಾನವ ಹಕ್ಕುಗಳ ಆಯೋಗದ ತಂಡ ದಾಳಿ ಮಾಡಿದ್ದು, ಹಲವು ದಾಖಲೆಗಳನ್ನು ಜಪ್ತಿ ಮಾಡಿದೆ.

2022ರಲ್ಲಿ ದಾಖಲಾಗಿದ್ದ ಕಳ್ಳತನ ಪ್ರಕರಣದ ಆರೋಪಿ ಯಾಸಿನ್ ಮಕ್ಬುಲ್ ಖಾನ್‌ನನ್ನು (40) ಮುಂಬೈನಲ್ಲಿ ಫೆ. 1ರಂದು ವಶಕ್ಕೆ ಪಡೆದಿದ್ದ ಅಮೃತಹಳ್ಳಿ ಠಾಣೆ ಪೊಲೀಸರು, ಲಾಕಪ್‌ನಲ್ಲಿ ಇರಿಸಿದ್ದರು. ಫೆ. 9ರವರೆಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರಲಿಲ್ಲ. ಜೊತೆಗೆ, ವಶಕ್ಕೆ ಪಡೆದ ಬಗ್ಗೆ ಹಿರಿಯ ಅಧಿಕಾರಿಗಳು ಹಾಗೂ ಆರೋಪಿ ಸಂಬಂಧಿಕರಿಗೆ ಮಾಹಿತಿ ನೀಡಿರಲಿಲ್ಲ.

ಅಕ್ರಮ ಬಂಧನದ ಬಗ್ಗೆ ಮಾಹಿತಿ ತಿಳಿದಿದ್ದ ವಕೀಲರೊಬ್ಬರು ಸಂಬಂಧಿಕರ ಮೂಲಕ ಮಾನವ ಹಕ್ಕು ಆಯೋಗಕ್ಕೆ ದೂರು ನೀಡಿದ್ದರು. ತನಿಖೆ ಕೈಗೊಂಡ ಆಯೋಗದ ಡಿವೈಎಸ್ಪಿ ಸುಧೀರ್ ಹೆಗ್ಡೆ ನೇತೃತ್ವದ ತಂಡ, ಶುಕ್ರವಾರ ಸಂಜೆ ಠಾಣೆ ಮೇಲೆ ದಾಳಿ ಮಾಡಿ ದಾಖಲೆ ಪರಿಶೀಲಿಸಿತು. ತಂಡ ದಾಳಿ ಮಾಡಿದ್ದ ಸಂದರ್ಭದಲ್ಲಿ ಆರೋಪಿ ಯಾಸಿನ್ ಖಾನ್ ಲಾಕಪ್‌ನಲ್ಲಿದ್ದದ್ದು ಕಂಡುಬಂತು.

‘ಕಳ್ಳತನ ಪ್ರಕರಣದಲ್ಲಿ ಜಾಮೀನು ಪಡೆದು ಜೈಲಿನಿಂದ ಹೊರಬಂದಿದ್ದ ದಾಬಸ್‌ಪೇಟೆ ನಿವಾಸಿ ಯಾಸಿನ್ ಖಾನ್, ನ್ಯಾಯಾಲಯದ ವಿಚಾರಣೆಗೆ ಗೈರಾಗುತ್ತಿದ್ದ. ನಗರ ತೊರೆದಿದ್ದ ಈತ, ಮುಂಬೈನಲ್ಲಿ ಹೋಟೆಲ್‌ವೊಂದರಲ್ಲಿ ಕೆಲಸಕ್ಕೆ ಸೇರಿದ್ದ. ಈತನ ಬಂಧನಕ್ಕಾಗಿ ನ್ಯಾಯಾಲಯ ಜಾಮೀನು ರಹಿತ ವಾರಂಟ್ ಜಾರಿ ಮಾಡಿತ್ತು’ ಎಂದು ಮೂಲಗಳು ಹೇಳಿವೆ.

‘ಆರೋಪಿ ಮುಂಬೈನಲ್ಲಿರುವ ಮಾಹಿತಿ ತಿಳಿದಿದ್ದ ಅಮೃತಹಳ್ಳಿ ಪೊಲೀಸರು, ಅಲ್ಲಿಗೆ ಹೋಗಿ ಫೆ. 1ರಂದು ವಶಕ್ಕೆ ಪಡೆದಿದ್ದರು. ವಿಮಾನದಲ್ಲಿ ನಗರಕ್ಕೆ ಕರೆತಂದು, ಅಂದಿನಿಂದಲೇ ಠಾಣೆಯಲ್ಲಿ ಇರಿಸಿದ್ದರು. ವಾರಂಟ್ ಇದ್ದರೂ ಕೋರ್ಟ್‌ಗೆ ಹಾಜರುಪಡಿಸಿರಲಿಲ್ಲ. ಪೊಲೀಸರು ಹಣಕ್ಕಾಗಿ ಬೇಡಿಕೆ ಇರಿಸಿದ್ದ ಆರೋಪವಿದೆ. ಸದ್ಯ ಪುರಾವೆಗಳು ಸಿಕ್ಕಿಲ್ಲ’ ಎಂದು ತಿಳಿಸಿವೆ.

‘ಅಮೃತಹಳ್ಳಿ ಪೊಲೀಸರು ಮುಂಬೈಗೆ ಹೋಗುವ ಮುನ್ನ ಡಿಸಿಪಿಗೆ ಮಾಹಿತಿ ನೀಡಿರಲಿಲ್ಲ. ವಿಮಾನದಲ್ಲಿ ಪ್ರಯಾಣಿಸಲು ಕಮಿಷನರ್ ಅನುಮತಿ ಪಡೆದಿರಲಿಲ್ಲ. ಯಾಸಿನ್ ಖಾನ್ ವಶಕ್ಕೆ ಪಡೆದ ಬಗ್ಗೆ ಮುಂಬೈ ಪೊಲೀಸರಿಗೂ ಮಾಹಿತಿ ನೀಡಿರಲಿಲ್ಲ. ವಶಕ್ಕೆ ಪಡೆದ ಬಗ್ಗೆ ಠಾಣೆಯ ಯಾವ ದಾಖಲೆಗಳಲ್ಲಿಯೂ ಉಲ್ಲೇಖವಿಲ್ಲ’ ಎಂದು ಮೂಲಗಳು ತಿಳಿಸಿವೆ.

ಇನ್‌ಸ್ಪೆಕ್ಟರ್‌ಗೆ ನೋಟಿಸ್: ‘ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಇನ್‌ಸ್ಪೆಕ್ಟರ್ ಅವರಿಗೆ ಸೂಚಿಸಲಾಗಿತ್ತು. ಇದರ ಬೆನ್ನಲ್ಲೇ ಪೊಲೀಸರು, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಸದ್ಯ ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದಾನೆ. ದಾಖಲೆಗಳ ಸಮೇತ ಆಯೋಗದ ಎದುರು ವಿಚಾರಣೆಗೆ ಬರಲು ನೋಟಿಸ್ ನೀಡಲಾಗಿದೆ. ಕಮಿಷನರ್‌ಗೆ ಈ ಬಗ್ಗೆ ವರದಿ ನೀಡಲಾಗುವುದು’ ಎಂದು ಹೇಳಿವೆ.

ಮುಖ್ಯಾಂಶಗಳು

- ಮುಂಬೈನಲ್ಲಿ ಫೆ.1ರಂದು ಆರೋಪಿ ವಶಕ್ಕೆ ಪೊಲೀಸರು
- ಫೆ. 9ರವರೆಗೆ ಕೋರ್ಟ್‌ಗೆ ಹಾಜರುಪಡಿಸಿರಲಿಲ್ಲ
- ಡಿಸಿಪಿ, ಕಮಿಷನರ್, ಮುಂಬೈ ಪೊಲೀಸರಿಗೂ ಮಾಹಿತಿ ನೀಡಿರಲಿಲ್ಲ

6 ವರ್ಷ ಮೇಲ್ಪಟ್ಟ ಮಕ್ಕಳಿಗೆ ಹೆಲ್ಮೆಟ್ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರು ವರ್ಷ ಮೇಲ್ಪಟ್ಟ ಎಲ್ಲ ಮಕ್ಕಳಿಗೂ ಹೆಲ್ಮೆಟ್ ಕಡ್ಡಾಯವಿದ್ದು, ಈ ನಿಯಮವನ್ನು ಪಾಲಿಸಬೇಕು’ ಎಂದು ಸಂಚಾರ ಪೊಲೀಸರು ಸೂಚನೆ ನೀಡಿದ್ದಾರೆ.

ನಗರದ ಶಾಲೆ- ಕಾಲೇಜು ಬಳಿ ಸಂಚಾರ ನಿಯಮ ಉಲ್ಲಂಘನೆ ಆಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸರು, ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದಾರೆ.

‘6 ವರ್ಷ ಮೇಲ್ಪಟ್ಟ ಮಕ್ಕಳಿಗೆ ಹೆಲ್ಮೆಟ್ ಕಡ್ಡಾಯವಿದೆ. ಇಂದಿನಿಂದಲೇ ಹೆಲ್ಮೆಟ್ ಹಾಕಿಸಿ’ ಎಂದು ಪೊಲೀಸರು ಸೂಚನೆ ನೀಡುತ್ತಿದ್ದಾರೆ.

ಶಾಲೆ–ಕಾಲೇಜು ಬಳಿ ಹೆಲ್ಮೆಟ್ ರಹಿತ ಚಾಲನೆ, ಪರವಾನಗಿ ಇಲ್ಲದೇ ಚಾಲನೆ, ಪಾದಚಾರಿ ಮಾರ್ಗದಲ್ಲಿ ಸವಾರಿ ಸೇರಿ ಉಲ್ಲಂಘನೆ ಮಾಡುವವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿ, ದಂಡ ವಸೂಲಿ ಮಾಡುತ್ತಿದ್ದಾರೆ.

‘6 ವರ್ಷ ಮೇಲ್ಪಟ್ಟ ಮಕ್ಕಳಿಗೆ ಹೆಲ್ಮೆಟ್ ಕಡ್ಡಾಯ ಎಂಬುದು ಹೊಸ ನಿಯಮವಲ್ಲ. ಕಾಯ್ದೆಯಲ್ಲಿ ಮೊದಲಿನಿಂದಲೂ ಇದೆ.’ ಎಂದು ಅಧಿಕಾರಿಯೊಬ್ಬರು ಹೇಳಿದರು.

ಪ್ರೆಸ್ಟೀಜ್ ಲೇಕ್ ಸೈಡ್ ಹೆಬಿಟಾಟ್ ಅಪಾರ್ಟ್‌ಮೆಂಟ್‌ನಲ್ಲಿ ಮೃತಪಟ್ಟಿದ್ದ ಬಾಲಕಿ

ಬಾಲಕಿ ಸಾವು: ಅಧ್ಯಕ್ಷ ಸೇರಿ ಏಳು ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಪ್ರೆಸ್ಟೀಜ್ ಲೇಕ್ ಸೈಡ್ ಹೆಬಿಟಾಟ್ ಅಪಾರ್ಟ್‌ಮೆಂಟ್ ಸಮುಚ್ಚಯದ ಈಜುಕೊಳದಲ್ಲಿ ವಿದ್ಯುತ್ ತಗುಲಿ ಬಾಲಕಿ ಮಾನ್ಯಾ ದಮೆರ್ಲಾ (9) ಮೃತಪಟ್ಟಿದ್ದ ಪ್ರಕರಣದಲ್ಲಿ, ಸಮುಚ್ಚಯ ನಿವಾಸಿಗಳ ಒಕ್ಕೂಟದ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸೇರಿ ಏಳು ಆರೋಪಿಗಳನ್ನು ವರ್ತೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಸಮುಚ್ಚಯದ ನಿವಾಸಿ ರಾಜೇಶ್‌ಕುಮಾರ್ ದಮೆರ್ಲಾ ಅವರ ಮಗಳು ಮಾನ್ಯಾ ಡಿ. 28ರಂದು ರಾತ್ರಿ ಮೃತಪಟ್ಟಿದ್ದರು. ರಾಜೇಶ್‌ಕುಮಾರ್ ನೀಡಿದ್ದ ದೂರು ಆಧರಿಸಿ ಐಪಿಸಿ 304 (ಕೊಲೆ ಉದ್ದೇಶವಿಲ್ಲದೆ ನಡೆದ ಹತ್ಯೆ) ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಆರೋಪಿಗಳಾದ ಅಧ್ಯಕ್ಷ ದೇಬಶಿಸ್ ಸಿನ್ಹಾ (37), ಉಪಾಧ್ಯಕ್ಷ ಜಾವೇದ್ ಶಫೀಕ್ ರಾವ್ (44), ಈಜುಕೊಳ ನಿರ್ವಹಣೆ ಗುತ್ತಿಗೆದಾರ ಎಸ್. ಟಿ.ಸುರೇಶ್ ಬಾಬು, ಎಲೆಕ್ಟ್ರಿಷಿಯನ್‌ಗಳಾದ ಸಂತೋಷ್ ಮಹಾರಾಣಾ (27), ಬಿಕಾಸ್ ಕುಮಾರ್ ಪೊರಿಡಾ (32), ಭಕ್ತಚರಣ್ ಪ್ರಧಾನ್, ಗೋಬಿಂದ್ ಮಂಡಲ್‌ರನ್ನು ಬಂಧಿಸಲಾಗಿದೆ’ ಎಂದು ಡಿಸಿಪಿ ಶಿವಕುಮಾರ ಗುಣಾರೆ ತಿಳಿಸಿದರು.

‘ನಿರ್ವಹಣೆ ಕೊರತೆಯಿಂದ ಈಜುಕೊಳದಲ್ಲಿ ವಿದ್ಯುತ್ ಹರಿಯುತ್ತಿದ್ದ ವಿಷಯ ಆರೋಪಿಗಳಿಗೆ ಗೊತ್ತಿತ್ತು. ಆದರೂ ದುರಸ್ತಿ ಕೈಗೊಂಡಿರಲಿಲ್ಲ. ಇವರ ನಿರ್ಲಕ್ಷ್ಯದಿಂದ ಮಾನ್ಯಾ ಮೃತಪಟ್ಟಿದ್ದಾಳೆಂದು ತಂದೆ ದೂರಿದ್ದರು.

ಜಾವೇದ್ ಶಫೀಕ್ ರಾವ್

ಸುರೇಶ್ ಬಾಬು

ದೇಬಶಿನ್ ಸಿನ್ಹಾ

ಈ ಬಗ್ಗೆ ಪುರಾವೆಗಳನ್ನು ಸಂಗ್ರಹಿಸಿ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ’ ಎಂದು ಹೇಳಿದರು.

ನಾಲ್ಕನೇ ತರಗತಿ ವಿದ್ಯಾರ್ಥಿನಿ: ‘ಆಂಧ್ರಪ್ರದೇಶದ ರಾಜೇಶ್, ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದು, ಪತ್ನಿ, ಮಗಳ ಜೊತೆ ಅಪಾರ್ಟ್‌ಮೆಂಟ್‌ನ 13ನೇ ಮಹಡಿ ಫ್ಲ್ಯಾಟ್‌ನಲ್ಲಿ ವಾಸವಿದ್ದರು. ಮಾನ್ಯಾ, 4ನೇ ತರಗತಿ ವಿದ್ಯಾರ್ಥಿನಿ’ ಎಂದು ಹೇಳಿದರು.

‘ಆಟವಾಡಲೆಂದು ಮಾನ್ಯಾ ಈಜುಕೊಳದ ಬಳಿ ಹೋಗಿದ್ದಳು. ವಿದ್ಯುತ್ ತಗುಲಿ ಈಜುಕೊಳಕ್ಕೆ ಬಿದ್ದು ಪ್ರಜ್ಞೆ ತಪ್ಪಿದ್ದಳು. ಆಕೆಯನ್ನು ಗಮನಿಸಿದ್ದ ನಿವಾಸಿಗಳು, ಆಸ್ಪತ್ರೆಗೆ ಕರೆದೊಯ್ದಿದ್ದರು. ಆಸ್ಪತ್ರೆಯಲ್ಲಿ ಮಾನ್ಯಾ ಮೃತಪಟ್ಟಿದ್ದಳು. ಆರಂಭದಲ್ಲಿ ಸಾವಿನ ಬಗ್ಗೆ ಶಂಕೆಯಿತ್ತು. ಮರಣೋತ್ತರ ಪರೀಕ್ಷೆಯಲ್ಲಿ ಮಾಹಿತಿ ಸಿಕ್ಕಿರಲಿಲ್ಲ. ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಬಂದಾಗ, ವಿದ್ಯುತ್ತಗುಲಿ ಮೃತಪಟ್ಟಿದ್ದು ಗೊತ್ತಾಯಿತು’ ಎಂದು ಪೊಲೀಸರು ತಿಳಿಸಿದರು.

ಪ್ರತಿಭಟಿಸಿದ್ದ ನಿವಾಸಿಗಳು: ‘ಘಟನೆ ಖಂಡಿಸಿ ನಿವಾಸಿಗಳು ಪ್ರತಿಭಟಿಸಿದ್ದರು. ಅಪಾರ್ಟ್‌ಮೆಂಟ್‌ನ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ವಹಿಸಿರುವ ಆಡಳಿತ ಮಂಡಳಿ ಹಾಗೂ ಕೆಲಸಗಾರರ ವಿರುದ್ಧ ಕ್ರಮ ಕ್ಕೆ ಆಗ್ರಹಿಸಿದ್ದರು’ ಎಂದು ತಿಳಿಸಿದರು.

ಪ್ರತ್ಯೇಕ ಅಪಘಾತ: ಇಬ್ಬರು ಸಾವು

ಬೆಂಗಳೂರು: ನಗರದ ಮಲ್ಲೇಶ್ವರ ಹಾಗೂ ಮಡಿವಾಳ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ವೃದ್ಧೆ ಸೇರಿ ಇಬ್ಬರು ಮೃತಪಟ್ಟಿದ್ದಾರೆ.

ಮಹಾಲಕ್ಷ್ಮಿ ಲೇಔಟ್ ನಿವಾಸಿ ಆಶಾರಾಣಿ (62) ಹಾಗೂ ಮಾಲೂರಿನ ಹನುಮಂತ (25) ಮೃತರು.

‘ಆಶಾರಾಣಿ ಅವರು ಬೇರೆ ಊರಿಗೆ ತೆರಳಲು ಶನಿವಾರ ಬೆಳಿಗ್ಗೆ 5.45 ಗಂಟೆ ಸುಮಾರಿಗೆ ಮಹಾಲಕ್ಷ್ಮಿ ಲೇಔಟ್ ಮೆಟ್ರೊ ನಿಲ್ದಾಣ ಬಳಿ ಬಂದಿದ್ದರು. ಅವರು ರಸ್ತೆ ದಾಟುವಾಗ ಅಪರಿಚಿತ ವಾಹನ ಡಿಕ್ಕಿ ಹೊಡೆದಿತ್ತು’ ಎಂದು ಮಲ್ಲೇಶ್ವರ ಸಂಚಾರ ಠಾಣೆ ಪೊಲೀಸರು ಹೇಳಿದರು.

‘ಇ- ಕಾಮರ್ಸ್ ಕಂಪನಿಯೊಂದರ ನೌಕರ ಹನುಮಂತ, ಶುಕ್ರವಾರ ರಾತ್ರಿ 7.30ರ ವೇಳೆಗೆ ಎನ್‌ಜಿಆರ್ ಬಡಾವಣೆ 3ನೇ ಮುಖ್ಯರಸ್ತೆಯಲ್ಲಿ ಬೈಕ್‌ನಲ್ಲಿ ಹೊರಟಿದ್ದರು’ ಎಂದು ಮಡಿವಾಳ ಸಂಚಾರ ಪೊಲೀಸರು ಹೇಳಿದರು.

ಡಿಕ್ಕಿ: ಮೂವರ ಸಾವು

ಹಾರೋಹಳ್ಳಿ: ಇಲ್ಲಿನ ತಾಮಸಂದ್ರ ಗೇಟ್ ಬಳಿ ಶನಿವಾರ ರಾತ್ರಿ ಕಾರು ಮತ್ತು ಬೈಕ್ ಮಧ್ಯೆ ಸಂಭವಿಸಿದ ಅಪಘಾತದಲ್ಲಿ, ಬೈಕ್‌ನಲ್ಲಿದ್ದ ಮೂವರು ಸವಾರರು ಮೃತಪಟ್ಟಿದ್ದಾರೆ. ಮೃತರು ಹಾರೋಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಉತ್ತರ ಭಾರತದ ಮೂಲದರು ಎನ್ನಲಾಗಿದೆ.

ಹಾರೋಹಳ್ಳಿ ಕಡೆಯಿಂದ ಹೋಗುತ್ತಿದ್ದ ಕಾರು ಮತ್ತು ಕನಕಪುರ ಕಡೆಯಿಂದ ಬರುತ್ತಿದ್ದ ಮೂವರಿದ್ದ ಬೈಕ್ ನಡುವೆ ತಿರುವಿನಲ್ಲಿ ಮುಖಾಮುಖಿ ಡಿಕ್ಕಿಯಾಗಿವೆ. ವೇಗವಾಗಿದ್ದ ಕಾರಿನ ಡಿಕ್ಕಿ ರಭಸಕ್ಕೆ ಬೈಕ್‌ನಲ್ಲಿದ್ದ ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಶವಗಳನ್ನು ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಘಟನೆ ಕುರಿತು ಪ್ರಕರಣ ದಾಖಲಿಸಿದ್ದು, ಮೃತರ ಗುರುತು ಪತ್ತೆಗೆ ಕ್ರಮವಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕ್ಯಾಬ್ ಚಾಲಕನ ಅಸಭ್ಯ ವರ್ತನೆ

ಬೆಂಗಳೂರು: ಹೆಬ್ಬಾಳ ಮೇಲ್ಸೇತುವೆ ಮೇಲೆ ಎರಡು ಕಾರುಗಳ ನಡುವೆ ಡಿಕ್ಕಿ ಸಂಭವಿಸಿದ್ದು, ಈ ಸಂಬಂಧ ನಡೆದ ಜಗಳದಲ್ಲಿ ಚಾಲಕರೊಬ್ಬರು ಪ್ಯಾಂಟ್ ಬಿಚ್ಚಿ ಅಸಭ್ಯವಾಗಿ ವರ್ತಿಸಿರುವ ಬಗ್ಗೆ ದೂರು ಸಲ್ಲಿಕೆಯಾಗಿದೆ.

ಚಾಲಕನ ಅಸಭ್ಯ ವರ್ತನೆ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿರುವ ಕುಟುಂಬದ ಸದಸ್ಯರು, ಆರೋಪಿ ವಿರುದ್ಧ ಕ್ರಮಕ್ಕೆ ಪೊಲೀಸ್ ಕಮಿಷನರ್‌ರಿಗೆ ಒತ್ತಾಯಿಸಿದ್ದಾರೆ.

ಹೆಬ್ಬಾಳ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಸದ್ಯಕ್ಕೆ ಯಾವುದೇ ದೂರು ದಾಖಲಾಗಿಲ್ಲ.

ಘಟನೆ ವಿವರ: ‘ ಹೆಬ್ಬಾಳ ಮೇಲ್ಸೇತುವೆ ಬಳಿ ಕಾರುಗಳ ನಡುವೆ ಡಿಕ್ಕಿ ಸಂಭವಿಸಿತ್ತು. ಕಾರಿನಿಂದ ಇಳಿದಿದ್ದ ಕ್ಯಾಬ್ ಚಾಲಕ, ಜಗಳ ತೆಗೆದು ಅವಾಚ್ಯವಾಗಿ ನಿಂದಿಸಿದ್ದರು. ಪ್ಯಾಂಟ್ ಬಿಚ್ಚಿ ಅಸಭ್ಯವಾಗಿ ವರ್ತಿಸಿದ್ದ ಎಂದು ದೂರಲಾಗಿದೆ.

ವಾಮಾಚಾರ ಶಂಕೆ: ಅತಿಥಿ ಶಿಕ್ಷಕನ ಹತ್ಯೆ

ಕುಣಿಗಲ್: ತಾಲ್ಲೂಕಿನ ಕುಳಿ ನಂಜಯ್ಯನಪಾಳ್ಯದ ಬಳಿ ಶನಿವಾರ ಮುಂಜಾನೆ ಅತಿಥಿ ಶಿಕ್ಷಕ ಮರಿಯಪ್ಪ (40) ಅವರನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದಾರೆ.

‘ಮರಿಯಪ್ಪ ವಾಮಾಚಾರ ಮಾಡುತ್ತಿದ್ದರು. ಶುಕ್ರವಾರ ಅಮಾವಾಸ್ಯೆಯಾದ ಕಾರಣ ವಾಮಾಚಾರ ಪೂಜೆಗೆ ಹೋಗಿ ಹಿಂದಿರುಗುವಾಗ ಕೊಲೆ ಆಗಿರಬಹುದು ಅಥವಾ ಪ್ರೇಮ ವಿವಾಹ ಪ್ರಕರಣವೊಂದರಲ್ಲಿ ಭಿನ್ನಾಭಿಪ್ರಾಯದಿಂದ ಹತ್ಯೆ ನಡೆದಿರಬಹುದು’ ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಕುಳ್ಳಿ ನಂಜಯ್ಯನಪಾಳ್ಯದ ನಿವಾಸಿ ಮರಿಯಪ್ಪ ಮೋದುರು ಸರ್ಕಾರಿ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಶುಕ್ರವಾರ ರಾತ್ರಿ ಕುಣಿಗಲ್‌ಗೆ ಹೋಗುವುದಾಗಿ ತಿಳಿಸಿ ಮನೆಯಿಂದ ತೆರಳಿದ್ದರು. ಶನಿವಾರ ಬೆಳಿಗ್ಗೆ ಅರಕೆರೆ ಗ್ರಾಮದ ಕಪ್ಪಯ್ಯನ ಜಮೀನಿನ ಬಳಿ ಕೊಲೆಯಾಗಿದ್ದಾರೆ ಎಂದು ಮಗಳು ಹೇಮಲತ ದೂರು ನೀಡಿದ್ದಾರೆ.

RAMRAJ COTTON SHOWROOMS
BANGALORE : KG ROAD • SHIVAJI NAGAR • ULSOOR • GANDHI BAZAR • MALLESHWARAM • JAYANAGAR : 30TH CROSS ROAD SS PLAZA, 10TH B MAIN ROAD • KORAMANGALA • RAJAJI NAGAR • R.T. NAGAR • VIJAYANAGAR • BANASHANKARI • YESHWANTHPUR YELACHENAHALLI • UTTARAHALLI • HSR LAYOUT • RAMAMURTHY NAGAR • J.P. NAGAR • RR NAGAR • MARATHAHALLI • KR PURAM KENGERI • HESARAGATTA • YELHANKA • NELAMANGALA • DEVANAHALLI • CHINTAMANI • KANAKAPURA • RAMNAGARA • TUMKUR • CHANDAPURA
Available at Ramraj Cotton Showrooms and All Leading Textile Shops | shop online @ www.ramrajcotton.in

KALYANAMANTAP PROPERTY FOR SALE
Commercial Land of 9000 Sft along with Building named as Shiva Parvathi Kalyanamantap constructed thereon having plinth area of 21,000 Sft. (Approx) situated at 3rd Cross Banaswadi, Bangalore.
Location: LAT:13.008666 N; LON:77.651307 E
Reserve Prices: Rs.1400 Lakhs
Date of Inspection: 15-02-2024;
Date of Public Auction: 12-03-2024
Contact: 9666488000

LAND PROPERTY FOR SALE
Commercial Land of 2400 Sft situated at 3rd Cross Banaswadi, Bangalore.
Location: LAT:13.008829 N; LON: 77.650979 E
Reserve Prices: Rs.225 Lakhs
Date of Inspection: 15-02-2024;
Date of Public Auction: 12-03-2024
Contact: 9666488000

PROPERTY CORNER

ಕ್ಲಾಸಿಫೈಡ್ಸ್

INDUSTRIAL SHEDS FOR SALE

KSSIDC Alloted 9 Sheds at Ramanagara Industrial Area.

TOTALLY 3 UNITS
1st unit 4 sheds measuring 9738 sqft
2nd unit 4 sheds measuring 7813 sq ft
3rd unit 1 shed measuring 1576 sq ft

Only Genuine Buyers Call: 984-412-5465
701-970-8767 / 701-969-2371

ROUNAQH

COMMERCIAL PROPERTY EXCHANGE WITH RESIDENTIAL

22000 sft Commercial Property at Hennur Cross available exchange for Residential or Commercial near by North Bangalore Ring Road.

Contact: 7619329425

BIAAPA APPROVED COMMERCIAL LAND FOR SALE NEAR AIRPORT

Total area of land is 28,000 Sqft
Conversion type – Commercial

GENUINE BUYERS ONLY

BROKERS EXCUSED

Property is suitable for Warehouse / Hotel / Shopping Entertainment / Hospital etc.

Property located near Devanahalli International Airport (10 kms)

Interested buyers can request inquiries on the below mentioned contact number.

CONTACT- 9686664985

E-Khata Sites for Sale

Before Devanahalli Near Hiranandani Project

DC Converted Sites

₹2599 per Sq. Ft

Upto 80% Bank Loan

Features & Amenities
- Black Tap Roads
- Street Lights
- Under Ground Drainage
- Fully Covered Compound for Entire Layout
- Individual Water Connection for Each Plot

7022160615 / 7993847390

REAL ESTATE SELLING

Sites

Anjanapura

BDA SITE For Sale, Anjanapura 8th Block 20×30 East, 30×40 South 30ft Road, Ready To Construct, Contact: 9845298419

ANJANAPURA 4TH Block BDA Commercial Site For Sale 50×80 South Facing 80ft Road Contact: 9845298419

SALE BDA Anjanapura 5th Block 30x40 South Facing 80 lakh also 20x30 East facing 2nd Block 55 lakh. 9620041313/ 9945373839

Arkavathi Layout

ARKAVATHI BDA 10th Block, 20x30 South Facing Site for Sale 60Lakhs, Behind Manyata Tech park, Builder Location. Genuine Buyers Contact: 9945564769

Banashankari

BANASHANKARI 6TH STAGE- ANJANAPURA BDA- Available/ Wanted 20x30 30x40 40x60, 50x80 Sites BRINDAVAN ASSOCIATES- 9980863245

AVAILABLE/ WANTED BDA Sites. Banashankari 6th Stage, 4th Block, 50x80, 60ft Road 7th Block,40x60, :9845082299

SALE BSK 6th stage 4th H Block 30x40 west Facing 95 lakh Also 40x60 Facing 6th Block 1.72 Cr Negotiable all owners site 9945373839, 9620041313

BANASHANKARI 6TH Stage, 7th Block 30x43, East Facing,10000/- Negotiable Owner Meeting Contact: 6366599555.

AUCTION SITE, SALE Banashankari 6th Stage 10th Block N/E Corner 1034 sqft 10500/-`Owner Meeting: 9880611211.

HSR Layout

"HSR 20X30 Duplex House 1.6Cr, 30x40,40x60 Houses & Residential/ Commercial sites sale. "Krishna"- 9886294610/ 7760526548"

Basavanagudi

BASAVANAGUDI NAGASANDRA Circle 30x40, N/W Corner Residential, 28000/- J.P.NAGARA 1st. Phase 30x40, North Near RV Dental College 3.30 Cr: 9845600007

Intl Airport Road

30X40 SALE Converted Sites @ 2,00,000/- (166/-sft) 90 Minutes journey from Yelahanka. Call: 9343510635/ 9010559539

Jayanagar

JAYANAGAR 8TH BLOCK 80x120 Excellent Location Property For Sale Near Metro Station. R.N. RAO: 9341906338

OLD HOUSE Sale 39X42 NF Society A Khata LIC Colony, 3rd Black East, Jayanagar: 8050705145

J P Nagar

J.P.NAGAR 7TH Phase, Raghavendra Layout 30x40 North facing, prime location 12,500/-, Near RBI Layout -9845000299.

Kengeri

KHB 'E' Khata East 20x30 Site for SALE, Near Hampapura, Kengeri, Brokers Excuse. CALL: 9886107471.

Kempegowda Layout

KEMPEGOWDA LAYOUT, BDA FOR SALE 20X30, 30X40, 40X60, 50X80 AND ARKAVATHI AITERNATE SITE KUMAR: 9945119449

Nagarabhavi

20X40 SITE Sale East Facing BBMP A Katha Near Manasa Gangotri School Mudalapalya: 9845410355/ 9448050938

"NAGARABHAVI BDA Complex 20x40 East 40 feet Road, 30x50 West, 30x40 outside Staircase House. 9448432633"

"RHCS LAYOUT 2nd stage 30x37 North Allottee site 40ft Road, BDA katha, 13000/-P.Sft. 9901057383"

Magadi Road

MAGADI ROAD
30X45 WEST FACE BBMP A KATHA
40 Feet Road Near East West College BEL Layout
Price10500/-Negotiable
CALL: 9916826976

Sadashiva Nagar

***SADASHIVANAGAR* RESIDENCIAL** Prime Location 54x86 Site For Sale Contact: 9945079777

Uttarahalli

40X50 SWC 30x40 WF Gated Community Rajgardinia Layout Turahalli Forest 2km From Utharalli Akatha: 9341238064

Vishweshwariah Layout

"VISVESHWARAIAH 40X60 East-facing BDA Site, 40'feet'Road,Good location,with all Amenities also 20x30 New Duplex House for-sale.Owner- 9901405391"

"28X40 W/S Corner Residential Top Location BDA Site Kanakashree Layout [Vishweshwraiah Layout] Immediate Sale. 9845143579"

'VISVESHWARAIAH 6TH Block 30x40 BDA near KLE Law College, also Residential/ Commercial sites available. 9035330491'

40X60 BDA North Facing Site Sale 'VISHVESWARAIAH LAYOUT' 2nd Block, Near 100 ft- Road, Prime Location. 9742681666

MALLATHAHALLI NGEF Layout 30X40 SITE Sale, South Face, BDA Khatha, Opposite BDA Park. RAJU: 9986869996.

ಸೈಟುಗಳು ಮಾರಾಟಕ್ಕಿವೆ

ಬಿ ಖಾತಾ ಅರಿಶಿನಕುಂಟೆ ತುಮಕೂರು ರೋಡ್

ಮಾದನಾಯಕನಹಳ್ಳಿ

NH–4 ಇಂದ 1.5 ಕಿ.ಮಿ.

ನಗರ ಸಭೆ ವ್ಯಾಪ್ತಿ ಬ್ಯಾಂಕ್ ಲೋನ್ ದೊರೆಯುತ್ತದೆ

ಸಂಪರ್ಕಿಸಿ: 8880660099

SIR.M.VISVESVARAYA LAYOUT 6th Block West Facing 40x60 Near Oxford College. 40x60 North Facing Near law College Both 40feet Road 9845117825

SMVLAYOUT BDA 5th Block 30x40 EF Near KLE LAW College Good Location Immediate Construction: 8970249997

Kanakapura Road

50x73 Commercial
SITE FOR SALE

NARAYAN NAGARA, 2nd Block, East South Corner, 80 feet Road, 40 feet Road 2 side Road, Rs. 14600/- psft. Nego. CALL : 98452 86583

KANAKAPURA ROAD Kaggalipura, BMRDA APPROVED' E' Khatha 30x40, 30x50, East Facing 3,600/- Negotiable 9916817739/ 9740150364

40X60 EF Kendriya Layout BBMP Akhatha, 40x60, 50x80 BDA Approved Judicial Layout Talaguttapura Metro: 9341238064

J P Nagar

HOUSE SALE; J.P.Nagar, 6th Phase, B.D.A site E/F, 4 Bedroom separte car shed: Contact:- 9880402575

JPNAGAR, 1 Phase BDA 30x40 SF, 2900 Sft Built up. Behind KEB Office & Ganesha Temple 2.85 Crs Owner: 9342529690

SALE. JP.NAGAR 5th PHASE 4BHK House BDA 40x60. 4.50 Crs. Buyers Contact: 'LEO ESTATES'- 9343728200.

Indiranagar

HAL 2ND Stage near 12th main 60x90 with House for Sale, and 40x60 near Indiranagar club Sale, for details Call: 9845004248

Flat

Shivajinagar

FLATS FOR Sale, Infantry Road, 2 & 3 BHK, 2000/ 2600 Sft, 3.5Cr/ 4.5Cr. 9686113614/ 9980565991.

PURVA BLUEBELLE Adjacent to Magadi Road Metro Station (Purple lane) Rajajinagar 3 Bedroom Jodi units 5 Bedroom + Servant room with all Luxurious Amenities. Direct metro from here to ITPL (Whitefield)/ KR Puram/ Byyappanahalli. Very good Convenience those who are working above Areas. Only Few units left for Sale. Contact: Owner 9844027560

Bangalore South

BUYING/ BOOKING of Flats in upcoming projects in South Bangalore Just Call Thee Ads 8088446226

Uttarahalli

3/4 BHK New Luxurious Flats Sale, Italian Vitrified, Cauvery, Security, CarParking, Near Vasanthaswamy Temple. 70L/90L. 6360501159 9844394444

POORNAPRAGNA LAYOUT Sale 3 BHK Deluxe Flats 2250 sft 2 Carpark & 1850 sft 1 Carpark. Lift & Generator Back-up, All Amenities. 9620249988.

"LUXURY 3BHK Flat 2100.Sqft ready to occupy BBMP A-Katha 2car parking 600.Sqft land share 1.60 Crore. 9845286505"

J P Nagar

RBI,1350SFT,3BHK 1.15CR,1800/2200SFT 3BHK 7000/- 30X40, House 190L :9901429794

"VISHVESHWARAIAH LAYOUT Wanted 20x30,30x40, 40x60, 50x80 for-Immediate Settlement Genuine Transaction. "Anugraha Constructions"- 9886294610"

SMV5BL 30X40 NEAR UDUPI HOTEL SMVL4BL 2 SITES NEAR KEB CIRCLE AVAILABLE ALL BLOCKS: 9900224071

SALE 30X40 VISHVESWARAIAH LAYOUT 4th Block south facing owner 84 lakh Negotiable owner Site 9945373839, 9620041313

Bidadi

EAGLETON RESORTS, BIDADI SITE 80X120, ES CORNER CLOSE GOLF GROUND CLEAR DOCUMENTS @2.70Cr: 9845065084

Bannerghatta Road

3600, 5220, 19,700 SQFT E/F Corner A-Khata Land, 600 mts from Bannerghatta Main Road, Hulimavu Metro station Suitable for Industrial/ Commercial/ Residential. 9916310226/ 9353128035. vernadevelopers.com

House

Banashankari

SALE 20X30,30X40 Thriplex & Rented House's BSK 6th Stage Anjanapura Fully furnished Granite Flooring With Lift Call:8722777999 9449812176.

BTM Layout

BTM LAYOUT 2nd Stage 30x40 house for sale, east facing, near Swadishta Aahar Hotel Contact Rajiv Broker- 9448058729

Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms with attached bathroom, built with teak wood, Italian Marble Tiles, at BEML Layout, Basaveshwaranagar, Bangalore. Clear Titles & 'A' Katha. Rs.6 Crores, (negotiable). Party going out of station, Immediate Registration, Contact: 9845765559/ 9845043282

Mysore

INDEPENDENT SEMIFURNISHED HOUSE for Sale. with Carparking at Vijayanagar 4th Stage, Sadana Layout, near SVEI School, Mysore. Genuine Buyers Contact: 8762059656.

Nagarabhavi

"20X32 DUPLEX House WF for sale D.Group Layout nexto Agastya Vidyaniketan School backside,1.30Cr Negotiable. 9916140866"

Konanakunte

5 BHK 30 x 50 Doctor's Colony Main Road Konanakunte Rs 1.80 Crs 9449852743- Brokers Excuse

Mahalakshmi Layout

HOUSE FOR sale 30x40 North facing at Mahalakshmi Layout 4floors fully furnished Contact: Manoj 8496811798/9448511064 Broker excuse

Banashankari

FOR SALE SLV V2 Launches Luxury 3 BHK Apartment 2000 & 1750 sft for Sale @ Banashankari 2nd stage near BDA complex Brokers excuse Call: 9741868566

Basaveshwaranagar

2 BHK Flat No. F-2, 1st Floor. Vaibhav Apartments Site No. 305, 5th main, 14th cross, BEML Layout, Basaveshwara Nagar, Bengaluru, SBA 860 sft + UDS 420.65 sq.ft. + one covered car parking Min Rs. 60.00 Lakh (negotiable) contact: 9900237696, 9611997352

Rajajinagar

DNR HIGHLINE @ Okalipuram near LULU Mall Rajajinagar 3 & 4 BHK FLATS with 7 Star Luxurious Amenities. Only Few Flats available for Sale. for details Contact: Owner 9844027560.

Farm House/ Land/ Resorts

Multiple Locations

NANDI HILLS rd 1/2 acre converted eKhata 15 furnished AC rooms rental income 7L/month Sale Rs.9Cr non-nego Ph:7019346409

Out-Station

SALE: FARM LAND 37000 SFT NEAR ISHA FOUNDATION/ CHIKKABALLAPUR/ NH44. INTERESTED BUYERS CALL 9964355500/ 9343728200.

DH DECCAN HERALD
To Place your ad in Deccan Herald & Prajavani Classifieds
For details contact :
9845114560 : 9731810277
080 - 45557163 / 164

General

Multiple Locations

BUYING/ SELLING multiple locations sites/ land 50 acre- 100 acres industrial/ agricultural/ yellowzone/ dobaspette, Peenya, Kolar, Malur, Chikaballapura, Doddabalapura. 9380586105.

Industrial & Factory

Tumkur Road

SALE COMMERCIAL Industrial Converted Land 1/ 4/ 6/ 12/ 15/ 35/ 53 around Nelamangala. 9141326819

Yeshwanthpur

SALE INDUSTRIAL shed, 55HP, power measuring 6806 sq ft situated at Triveni road yeswentpur Bangalore.. Contact: 9448450987 Brokers Excuse..

Agricultural Land

Mysore Road

"MADDUR 28 GUNTAS FENCING, WATER, BUS ROAD, 6 KMS TO KESTUR TOWN 34 LAKHS. 9845178335"

Commercial Building

Bannerghatta Road

FURNISHED COMMERCIAL building 6000 sft Bannerghatta Road for sale/rent. For details contact 9019185100

Commercial Land

Multiple Locations

"BANASHANKARI 2ND-STAGE 2840.sft Rs.5Crore, Rental Building ₹6.90Crore, J.P.Nagar Ring-Road 2400.sft ₹8.16crore, Jayanagar 2400.sft ₹8.64Crore, Sanjaynagar 2400.sft ₹7.68crore, Genuine Buyers Call: 9845286505"

Commerical

Malleshwaram

SALE, PRIME Commercial Site 1800 Sqft. at Sampige Road, West Facing Rs. 40000 /sqft. 7411255535

RENTAL PROPERTIES

Accommodation Available

Commercial

MYSORE ROAD, Chamarajpet, Commercial Building, Floor Wise, 3640/4040 Sqft. Ground Suitable For Showroom. Second With Full Office Setup. Contact: 9341260793.

OFFICE CUM Storage space of 6,000 sqft available for Rent in Ejipura, Bangalore. Contact: 9880524100

FRAZER TOWN Prime Office Space Rent 550 Sqft On Promenade Road, Contact Owners: Manjunath 9880064863

Flats

BASAVANAGUDI 2 UNITS THREE BEDROOM New Apartment Same Floor for RENT. Vegetarian Families. 'VASAVI' 9845376147

House

PADMANABHANGAR SPACIOUS 3 Bedroom With attach bath Carpark 1st floor for Rent 22000/- Negotiable Veg only 6 month deposit Call: 9886673794

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

HEAT REFLECTION Coating. Stay cool this summer! Contact us for the solution. Roof & Walls- 9845987989.

REAL ESTATE BUYING

Agricultural Land Converted

General

REQUIRED 4-10 Acres Land for Institution Purchase. 20 Kms Radius Vidhana Soudha. SAAJJ- 9343355898/ 9343415898

DH DECCAN HERALD

ಪ್ರಜಾವಾಣಿ

Classifieds
More value, more impact

REAL ESTATE

The 1st thing to do when *Selling/Buying your Property*

#1
PLACE YOUR AD HERE

www.dhclassifieds.com BOOK NOW

Book your ad with us now!

For more details contact:
+91 9731810277 | +91 9900428036 |
+91 9845114560 | +91 9886213331 |
+91 9901641752 | 080- 45557163/164

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 phase immediate settlement, genuine Sellers Contact: 9902038118, 9449060605

WANTED BDA,BBMP Sites Anjanapura,BCC Layout,JPNagar 8th,9th Phase30x40,40x60,50x80, ANY BLOCKS:9900894456

Banashankari

BDA SITE'S Wanted Arkavathy, Anjanapura Banashankari 6th Stage Vishweshwaraiah Kempegowda Any BDA Layout. Contact: 9845062822, 8660751654

BDA-SITES WANTED Anjanapura, Banashankari 6th Stg, Visveshwaraiah Lyt. 20x30,30x40,40x60 Any Measurement Immediate Settlement Call:9945610779

Multiple Locations

WANTED BDA SITES Anjanapura- Arkavathi Banashankari 6th Stage, Vishweswaraiah, Kempegowda, Dr.Shivaramkaranth Layout. Contact: SAPTHAGIRI. 9900268073 9448068073

Nagarabhavi

WANTED SITE 20x30, 30x40, 40x60, 50x80, Nagarabhavi, Rajajinagar Housing Co-operative Society, Vishweswaraiah, ITI, MPM. 8105688602.

Vishweshwariah Layout

"BUYING/ SELLING" 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480

Mysore

WANTED SITES Devnooru 3rd Stage, Rajivnagar, Sathagalli, Mysore 20x30, 30x40, 40x60 Contact 9845767065

Intl Airport Road

WANTED LANDS n Sites, Near ITC, Tulips Garden, Aishwarya Residency, Rashi Orchards, Florence, Utopia, Shettygere, Airport County. N.Reddy: 9844085115

JOB OPPORTUNITIES

Part-Time Jobs

RETIRED/ VRS Persons Age Above 45yrs Earn 50K- 60K PM Here No Retirement: 9886641282/ 7019215243

Teachers/ Professors

St. Joseph's Boys' High School
Museum Road, Bengaluru
TEACHERS WANTED
ISC (PG with B Ed) & ICSE (UG with B Ed) for all Subjects.
Please send an email with your CV & recent photograph mentioning the post applied for in the subject line. Also, submit a hard copy to the school office at the earliest.
#27, Museum Road, Bengaluru - 560025
Phone: 8884200548
Email: recruitment@sjbhs.edu.in
www.sjbhs.edu.in

SRI AHAM AATHMA VIDYALAYA- [ICSE/ State] Nagasandra post Bangalore-73 requires Teachers for the academic year 2024-25 (1) Computer Science- BCA/MCA/B.Sc, M.Sc B.Ed (2) Teachers for all the subjects. Nursery/ Primary/Middle/High-school. (3)Office Staff/ Receptionist/ Data/DTP Operator with Tally, IT System Admin (4) Lab-Assistant, Librarian, PT Teacher, Academic Co-Ordinator. Offers Attractive Salary. Transportation will be considered Contact 9880200172, 9663778869 sriaavapplic@gmail.com

SRI KK EDUCATION CENTRE
(Affiliated to CBSE, Aff. No. 830256)
Kadabagere, Magadi Road, Bangalore
RECRUITMENT OF STAFF
PRE-PRIMARY PROGRAMME
Early Childhood Education / NTT/ MTT
PRIMARY & SECONDARY PROGRAMME
• English • Maths • Hindi
• Social Studies • Science
• Computer Science
• Physical Educator
Qualification: B.Ed., M.Ed., B.Sc., BCA, B.P.ed.
Email: srikkec@gmail.com
Ph: 9886535292

WANTED TEACHERS
1)SSLC/ PUC/ NTT/ Montessori- for KG
2)PUC/ BA/ B.Sc- D.Ed- for Primary Section
3)BA/ MA/ B.Ed- for SOCIAL STUDIES and
4)BA/ MA/ B.PEd- PE, Apply on or before 16.02.2024 to: savm2003@gmail.com SAVM ENGLISH MEDIUM SCHOOL, #88, Park Road, Kumarswamy Layout Bangalore-61 Attend Interview on 18/02/2024 Sunday at 10.30am. Phone 9483755974/ 9663742763

ST.PHILOMENA PUBLIC School, Byalakere, Yelahanka, Bangalore. Required trained &experienced teachers all subjects primary & high school. 9480091189/ 9845036582. stphilomenas118@gmail.com

REQUIRED

Qualified and experienced candidates for our institutions for the following vacancies

CBSE SCHOOL

TEACHERS
Subjects: Science, English
B.Sc. / M.Sc. B.Ed, (Biology) TGT, B.A. / M.A. B.Ed. TGT

COMPUTER TEACHERS
Subject : Artificial Intelligence (AI)
B.E. in Computer Science, Information Technology with Data Science Machine Learning

PRE-PRIMARY CO-ORDINATOR
Graduation with MTT / NTT / ECCD Knowledge in phonetics Good Communication skills
Experience: Worked as Centre Head for Pre-school group or as Co-ordinator pre school

HIGH SCHOOL (STATE BOARD)

TEACHERS
Subject: Maths (PCM)
M.Sc. B.Ed.

PRIMARY SCHOOL (STATE BOARD)

TEACHERS
Subject: English, General Science, Social Science, Physical Education (Female)
B.A. / M.A. B.Ed., B.Sc. / M.Sc. B.Ed., B.Ped. / M.Ped

Interested candidates may apply within 7 days from the date of publication with all relevant documents along with Passport size photo.

To, The Secretary & Correspondant,
KAIRALEE NILAYAM INSTITUTIONS
Vimanapura, (HAL), Bengaluru - 560017
Mob: 9141654726
E-mail: kksvimanapura@gmail.com

AIR FORCE SCHOOL, JALAHALLI - 560014
Email ID : afsjal@rediffmail.com Website : www.afsjal.org

VACANCIES

Applications are invited for the Appointment / Empanel of Teching / Non-teaching Staff and Helpers in Air Force School Jalahalli for the academic session 2024-25 as per the following details :

Sl.No.	Post	Category	Subject
01.	PGT	Regular/ Contractual/ Empanel	Accountancy, Business Mathematics Social Studies, Chemistry, Biology Physical Education, English, Physics, Economics, Computer Science
02	TGT	Regular/ Contractual/ Empanel	English / Hindi / Maths / Science / Social Studies / Computer Science / Sanskrit
03	PRT	Regular/ Contractual/ Empanel	Academic / Games
04	Pre-Nursery / NTT	Regular / Contractual/ Empanel	Academic
05	Lab Attendant	Regular / Empanel	Computer Science
06	Clerk	Regular / Empanel	---
07	Office Superind.	Regular / Empanel	---
08	Band Master Yoga/Gymnastic Foreign Language (French/German)	Contractual/ Part-time	---
09	Helper (Male)	Regular / Contractual/ Empanel	
10	Helper (Female)	Regular / Contractual/ Empanel	---

Note : 1. For details of eligibility criteria, please visit school website.
2. Application along with the photocopies of supportive documents to reach Executive Director, AF School, Jalahalli, before 20 Feb 2024
3.For any queries contact Tel No. 080-23455069

Executive Director, AF School, Jalahalli

REQUIRED QUALIFIED teachers-NTT/DEd/BEd- English medium-All Subjects-IMAGE ENGLISH SCHOOL, J P Nagar 6th Phase #8217227181, mail to- imageenglishschool@gmail.com

NIRMAN INTERNATIONAL PUBLIC SCHOOL- CBSE,7th Block, Vishweshwaraiah Layout, Bangalore-91 Requires Qualified TEACHERS for All Subjects from Nursery to Grade-X, Computers, Front Office, Library and Yoga. Contact: 8123030731/ 9986055970.

SRI.RAMAKRISHNA EDUCATION Society, Halasuru Requires Experienced TEACHERS BSc/ MSc, BEd Science, Maths & BA/ MA, BEd for English, Kannada, NTT, Crafts Teacher & PE Teacher. 8861248642/ 9845048824 Mail: srkes1963@gmail.com

HOLY ANGEL'S High School Hampinagar, Vijayanagar, Bengaluru-560104. Phone:23404465/ 23202042 holyangels.highschoolr pclayout@gmail.com Requires Experienced Trained Teachers for the Academic year 2024-2025 for Nursery, Primary, High-School, Music Teacher & P.E.Teacher. STATE & ICSE. Qualification: B.A./B.Sc.,B.Ed, M.A/M.Sc.,M.Ed, N.T.T, CP.Ed. Only English medium candidates need to apply.

Multiple Vacancy

WANTED EXPERIENCED
1)Advocate with strong knowledge in civil conveyance with legal Opinion,Minimum 3years of Experience
2)Sales Executives Fresher/Experience Candidates Equinox Global Shelters Office @ Jakkur, Attractive salary 8217482988, egsadm159@gmail.com

ದಿ ಹನುಮಂತನಗರ ಸಹಕಾರಿ ಬ್ಯಾಂಕ್ ನಿಯಮಿತ

ಕೇಂದ್ರ ಕಛೇರಿ: ನಂ.7/29, 3ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಹನುಮಂತನಗರ, ಬೆಂಗಳೂರು–560019. ದೂರವಾಣಿ: 080–26507976 / 22428985,
E-mail: hcb_bank@yahoo.co.in, Website: https://hnrcbank.in

ಸಂಖ್ಯೆ : ಹೆಚ್‌ಸಿಬಿ/ 547 /2023–24 ದಿನಾಂಕ 09–02–2024

ಪ್ರಕಟಣೆ

ದಿ ಹನುಮಂತನಗರ ಸಹಕಾರಿ ಬ್ಯಾಂಕ್ ನಿಯಮಿತ, ಬೆಂಗಳೂರು–19, ಇಲ್ಲಿ ಖಾಲಿ ಇರುವ ಕೆಳಕಂಡ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿಗದಿತ ಅರ್ಜಿ ನಮೂನೆಗಳನ್ನು ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ರಜಾ ದಿನಗಳನ್ನು ಹೊರತುಪಡಿಸಿ ದಿನಾಂಕ 12–02–2024 ರಿಂದ ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ಪಡೆಯಬಹುದು. ಅರ್ಜಿ ಶುಲ್ಕ ರೂ.1000/–ಗಳನ್ನು ಬ್ಯಾಂಕಿನಲ್ಲಿ ನಗದು ಮೂಲಕ

ಕ್ರ ಸಂ.	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ವೇತನ ಶ್ರೇಣಿ	ವಿದ್ಯಾರ್ಹತೆ
01	ಸಹಾಯಕ ಪ್ರಧಾನ ವ್ಯವಸ್ಥಾಪಕರು/ ಸಹಾಯಕ ಮುಖ್ಯ ಕಾರ್ಯನಿರ್ವಾಹಕರು	01	52650–97100	ಅಂಗೀಕೃತ ವಿಶ್ವ ವಿದ್ಯಾನಿಲಯದಿಂದ ಪದವಿ ಪಡೆದಿರಬೇಕು. ಜೊತೆಗೆ ಕಂಪ್ಯೂಟರ್ ಅಪರೇಷನ್ಸ್ & ಆಪ್ಲಿಕೇಷನ್ಸ್ ಜ್ಞಾನ ಹೊಂದಿರುವುದು ಕಡ್ಡಾಯ. ಕನ್ನಡವನ್ನು ಒಂದು ವಿಷಯವಾಗಿ ಎಸ್.ಎಸ್.ಎಲ್.ಸಿ ಹಂತದಲ್ಲಿ ಅಭ್ಯಸಿಸಿರಬೇಕು. ಅಂಗೀಕೃತ ವಿಶ್ವ ವಿದ್ಯಾನಿಲಯದಿಂದ ಸಹಕಾರ ವಿಷಯದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದವರಿಗೆ ಆದ್ಯತೆ ನೀಡಲಾಗುವುದು. ಹಾಗೂ ಐದು (5) ವರ್ಷಗಳ ಬ್ಯಾಂಕಿಂಗ್ ಸೇವಾ ಅನುಭವ ಅಪೇಕ್ಷಣೀಯ.
02	ಕಿರಿಯ ಸಹಾಯಕ/ ಗುಮಾಸ್ತ/ ಬೆರಳಚ್ಚುಗಾರ	02	30350–58250	ಕನಿಷ್ಠ ವಿದ್ಯಾರ್ಹತೆ ಪಿ.ಯು.ಸಿ. ತೇರ್ಗಡೆ. ಕಂಪ್ಯೂಟರ್ ಅಪರೇಷನ್ಸ್ & ಆಪ್ಲಿಕೇಷನ್ಸ್ ಜ್ಞಾನ ಹೊಂದಿರಬೇಕು. ಕನ್ನಡ ಭಾಷೆಯಲ್ಲಿ ಓದು, ಬರಹ, ಮಾತನಾಡಬಲ್ಲವರಾಗಿರಬೇಕು. ಪದವೀಧರರಿಗೆ ಆದ್ಯತೆ ನೀಡ ಲಾಗುವುದು.
03	ಸೇವಕರು/ ಜವಾನರು/ ಭದ್ರತಾ ರಕ್ಷಕರು/ ವಾಹನ ಚಾಲಕರು	02	21400–42000	ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರಬೇಕು. ಕನ್ನಡ ಭಾಷಾ ಜ್ಞಾನ ಹೊಂದಿರಬೇಕು. ಸಕ್ಷಮ ಪ್ರಾಧಿಕಾರವು ನೀಡಿರುವ ಸಾರಿಗೆ ವಾಹನ ಚಾಲನಾ ಪರವಾನಗಿ (Driving Licence) ಯೊಂದಿಗೆ ಚಾಲನೆಯಲ್ಲಿ ಅನುಭವ ಹೊಂದಿರ ಬೇಕು.

ಮೇಲಿನ ವೇತನ ಶ್ರೇಣಿಗಳ ಜೊತೆಗೆ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ ನೀಡಲಾಗುವುದು.

ವಯೋಮಿತಿ :–

(1) ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ ಕನಿಷ್ಠ ವಯೋಮಿತಿ 18 ವರ್ಷ ತುಂಬಿರಬೇಕು. ಗರಿಷ್ಠ ಸಾಮಾನ್ಯ ವರ್ಗಗಳ ಅಭ್ಯರ್ಥಿ – 35 ವರ್ಷ, ಹಿಂದುಳಿದ ವರ್ಗಗಳ ಅಭ್ಯರ್ಥಿ – 38 ವರ್ಷ, ಪ.ಜಾತಿ, ಪ.ಪಂಗಡ ಮತ್ತು ಪ್ರವರ್ಗ 1ಎ ಗರಿಷ್ಠ – 40 ವರ್ಷಗಳು ಮೀರಿರಬಾರದು.
(2) **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 02–03–2024.**
(3) ಒಮ್ಮೆ ಪಾವತಿ ಮಾಡಿದ ಅರ್ಜಿ ಶುಲ್ಕವನ್ನು ಮರುಪಾವತಿಸಲಾಗುವುದಿಲ್ಲ.
(4) ವಯೋಮಿತಿಗೆ ಸಂಬಂಧಪಟ್ಟಂತೆ ಎಸ್.ಎಸ್.ಎಲ್.ಸಿ ಅಂಕಪಟ್ಟಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
(5) ಭರ್ತಿ ಮಾಡಿದ ನಿಗದಿತ ಅರ್ಜಿಯ ಜೊತೆಯಲ್ಲಿ ಪತ್ರಾಂಕಿತ ಅಧಿಕಾರಿಯವರಿಂದ ದೃಢೀಕರಿಸಿದ ಎಸ್.ಎಸ್.ಎಲ್.ಸಿ/10ನೇ ತರಗತಿ, ದ್ವಿತೀಯ ಪಿ.ಯು.ಸಿ, ಪದವಿಯ ಎಲ್ಲಾ ವರ್ಷದ ಅಂಕಪಟ್ಟಿಯೊಂದಿಗೆ ಪದವಿ ಪ್ರಮಾಣ ಪತ್ರ ಸೇರಿದಂತೆ ಅಗತ್ಯವಿರುವ ಎಲ್ಲಾ ಪ್ರಮಾಣ ಪತ್ರಗಳನ್ನು ದ್ವಿ–ಪ್ರತಿಗಳಲ್ಲಿ ಸಲ್ಲಿಸುವುದು.
(6) ಸಂದರ್ಭಾನುಸಾರ ಲಕೋಟೆಯ ಮೇಲೆ "––––––––––––" ಹುದ್ದೆಗೆ ಅರ್ಜಿ ಎಂದು ನಮೂದಿಸಿ ಸಲ್ಲಿಸತಕ್ಕದ್ದು.
(7) **ಭರ್ತಿ ಮಾಡಿದ ಅರ್ಜಿಗಳನ್ನು ಬ್ಯಾಂಕಿನ ಕೇಂದ್ರ ಕಛೇರಿಗೆ ನೇರವಾಗಿ ಅಥವಾ ನೋಂದಾಯಿತ ಅಂಚೆ ಅಥವಾ ಕೋರಿಯರ್ ಮೂಲಕ ದಿನಾಂಕ 02–03–2024 ರಂದು ಸಂಜೆ 5–30 ರೊಳಗಾಗಿ ತಲುಪಿಸತಕ್ಕದ್ದು.**
(8) ತಪ್ಪು ಮಾಹಿತಿ ಅಥವಾ ಅಪೂರ್ಣ ಮಾಹಿತಿ ನೀಡಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
(9) ಕಾನೂನು ಚೌಕಟ್ಟಿನಲ್ಲಿ ಅರ್ಜಿಗಳನ್ನು ತಿರಸ್ಕರಿಸುವ ಅಧಿಕಾರ ಬ್ಯಾಂಕಿಗೆ ದತ್ತವಾಗಿರುತ್ತದೆ.
(10) ಈ ನೇಮಕಾತಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
(11) ನೇಮಕಾತಿ ಹಕ್ಕನ್ನು ಬ್ಯಾಂಕಿನ ಆಡಳಿತ ಮಂಡಳಿ ಕಾಯ್ದಿರಿಸಿದೆ.
(12) ನಿಗದಿತ ಕಾಲಾವಧಿ ನಂತರ ಸಲ್ಲಿಕೆಯಾಗುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಆಯ್ಕೆ ವಿಧಾನ:– ಆಯ್ಕೆ ವಿಧಾನವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ನಿಯಮ 1960 ಹಾಗೂ ಸಹಕಾರ ಸಂಘಗಳ ನಿಬಂಧಕರು ಹೊರಡಿಸಿರುವ ಸುತ್ತೋಲೆ/ನಿರ್ದೇಶನದ ಪ್ರಕಾರ ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಮೌಖಿಕ ಸಂದರ್ಶನವನ್ನು ಒಳಗೊಂಡಿರುತ್ತದೆ.

ಸಹಿ/–
ಪ್ರಧಾನ ವ್ಯವಸ್ಥಾಪಕರು (ಪ್ರಭಾರ)/ಸದಸ್ಯ ಕಾರ್ಯದರ್ಶಿ
ದಿ ಹನುಮಂತನಗರ ಸಹಕಾರಿ ಬ್ಯಾಂಕ್ ನಿಯಮಿತ,
ಬೆಂಗಳೂರು–560019.

POMPOWER POM SYSTEMS AND SERVICES PVT LTD
JOB OPPORTUNITIES
A leading Manufacturers & Distributors of Online UPS Systems upto 1000 KW and Energy Storage System upto 1000 KW, Hitachi Solar Invertors upto 325 KW in Peenya, Bangalore are looking for **MANAGERS-SALES & MARKETING, BRANCH MANAGERS & Sr. MARKETING PERSONNEL** for Bangalore, Hyderabad, Chennai, New Delhi, Pune, Mumbai & Cochin. Candidates having experience more than 3 to 5 Years in Selling Power Electronics & preferably in UPS field.
also looking for **EXECUTIVE-DIGITAL MARKETING** for Bangalore Office.
For Walk-in Interview Call: **90350 10265**
Share your Resume to: pompower@pompower.in
D1, 1st Floor, SOLUS, Jain Heights, 1st Cross, J C Road, Bangalore - 560002.

ಕರ್ನಾಟಕ ರಾಜ್ಯ ವಕೀಲರ ಪರಿಷತ್ತು

ಬೆಂಗಳೂರು ಹಳೆ ಚುನಾವಣಾ ಆಯೋಗದ ಕಟ್ಟಡ, ಡಾ॥ ಬಿ ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು–560001 ದೂರವಾಣಿ 080–22868712, 22868561.
(ವಕೀಲರ ಕಾಯ್ದೆ 1961 ರ ಅಡಿಯಲ್ಲಿ ರಚಿಸಲಾದ ಶಾಸನಬದ್ಧ ಸಂಸ್ಥೆ)

ಬೇಕಾಗಿದ್ದಾರೆ

ಏಕೀಕೃತ ವೇತನ ಅಥವಾ ಗುತ್ತಿಗೆ ಆಧಾರದ ಮೇಲೆ ಈ ಕೆಳಗಿನ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸುತ್ತಿದ್ದೇವೆ.

1. ಕಾರ್ಯದರ್ಶಿ – ಒಂದು ಹುದ್ದೆ

ಅರ್ಹತೆ ಮತ್ತು ಅನುಭವ:
ಅ) ಭಾರತದಲ್ಲಿನ ಕಾನೂನು ವಿಶ್ವವಿದ್ಯಾಲಯದಿಂದ ಕಾನೂನು ಪಡೆದಿರಬೇಕು.
ಆ) ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನಲ್ಲಿ ನೋಂದಾವಣಿ ಮಾಡಿಸಿಕೊಂಡಿರಬೇಕು.
ಇ) ವಕೀಲರಾಗಿ 15 ವರ್ಷಗಳ ವಕೀಲಿ ವೃತ್ತಿಯ ಅನುಭವವಿರಬೇಕು ಅಥವಾ ನಿವೃತ್ತ ಜಿಲ್ಲಾ ನ್ಯಾಯಾಧೀಶರಾಗಿರಬೇಕು / ಪಬ್ಲಿಕ್ ಪ್ರಾಸಿಕ್ಯೂಟರ್‌ರಾಗಿರಬೇಕು.
ಈ) ಮೇಲಿನ ಅರ್ಹತೆಗಳನ್ನು ಹೊಂದಿರುವ ನಿವೃತ್ತ ಸರ್ಕಾರಿ ಅಧಿಕಾರಿಗಳಾಗಿರಬೇಕು.
ಉ) ಪೂರ್ಣ ಸಮಯದ ಕಾರ್ಯದರ್ಶಿಗೆ 50 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು. ಕಾರ್ಯದರ್ಶಿಯನ್ನು ನೇಮಕ ಮಾಡಿಕೊಳ್ಳುವ ಅಧಿಕಾರ ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನದ್ದೇ ಅಂತಿಮ ನಿರ್ಧಾರವಾಗಿರುತ್ತದೆ.

ಸಂಭಾವನೆ: ವಿದ್ಯಾರ್ಹತೆ ಮತ್ತು ಅನುಭವದ ಆಧಾರದ ಮೇಲೆ ಸಂಭಾವನೆ ನಿಗದಿಪಡಿಸಲಾಗುತ್ತದೆ.

ಕಛೇರಿಯ ಅವಧಿ ನಿವೃತ್ತ ವ್ಯಕ್ತಿಗಳಾದ ಸಂದರ್ಭದಲ್ಲಿ ಗರಿಷ್ಠ ಅಧಿಕಾರವಧಿ ಮೂರು ವರ್ಷಗಳಾಗಿರುತ್ತದೆ.

2. ಸಹಾಯಕರು : ಮೂರು ಹುದ್ದೆಗಳು
ಅ) ಇಂಗ್ಲೀಷ, ಕಂಪ್ಯೂಟರ್ ಸಾಕ್ಷರತೆ ಮತ್ತು ಕಚೇರಿ ಕಾರ್ಯವಿಧಾನದಲ್ಲಿ ಪ್ರಾವೀಣ್ಯತೆ ಹೊಂದಿರುವ ಯಾವುದೇ ವಿಭಾಗದಲ್ಲಿ ಪದವೀಧರರು ಅಥವಾ ಸ್ನಾತಕೋತ್ತರ ಪದವೀಧರರು, ಅಭ್ಯರ್ಥಿಗಳು ಕನ್ನಡ ಮತ್ತು ಇಂಗ್ಲೀಷ ಎರಡೂ ಭಾಷೆಯ ಜ್ಞಾನವನ್ನು ಹೊಂದಿರಬೇಕು.
ಆ) ಇಂಗ್ಲೀಷ ಮತ್ತು ಕನ್ನಡ ಎರಡರಲ್ಲೂ ಟೈಪಿಂಗ್ ಮತ್ತು ಶೀಘ್ರಲಿಪಿಗಾರರ ದೃಢೀಕೃತ ಪ್ರಮಾಣಪತ್ರವನ್ನು ಹೊಂದಿರುವ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು.
ಇ) ಅಭ್ಯರ್ಥಿಗಳು 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು.

3. ಜವಾನ – ಒಂದು ಹುದ್ದೆ
ಅ) ಎಸ್ ಎಸ್ ಎಲ್ ಸಿ ಪಾಸಾಗಿರಬೇಕು.
ಆ) ಅಭ್ಯರ್ಥಿಗಳು 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು.

ಅರ್ಜಿಗಳನ್ನು ಮತ್ತು ಅದರೊಂದಿಗೆ ಎಲ್ಲ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು –560001. ಈ ಮೇಲ್ಕಂಡ ವಿಳಾಸಕ್ಕೆ ದಿನಾಂಕ 24.02.2024ರ ಒಳಗೆ ಅರ್ಜಿಯನ್ನು ಕಳುಹಿಸತಕ್ಕದ್ದು, ತದನಂತರ ಬಂದಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಸ್ಥಳ: ಬೆಂಗಳೂರು.
ದಿನಾಂಕ: 10.02.2024
ಎಚ್.ಎಲ್. ವಿಶಾಲ ರಘು
ಅಧ್ಯಕ್ಷರು

Engg/ Production Technical

WE REQUIRE: QUALITY ASSURANCE ENGINEER-BE(Mech) 8-10 years Experience, QUALITY ENGINEER-BE(Mech) 2-3 Years for Pump Manufacturing unit at Jigani/Haragadde Industrial Area-Bangalore. Email: hr@flowtechblr.com What'sApp: 9353401640

The Power Engineering Co.,
Engineers and Contractors
WANTED
■ Diploma Electrical Site Engineers: 3-4 Yrs Experience
■ ITI Electrical: 1-2 Yrs Experience
■ Safety Engineers: 1-2 Yrs Experience
Contact: 9902758647 9845022834
thepowerengineering@gmail.com

WANTED SALES & SERVICE ENGINEER and SERVICE MECHANIC/ TECHNICIAN. PACKING & DISPATCH ASSISTANT also wanted. For a Hydraulic Company. Experience of 2/ 3 years in a Hydraulic Company/ MHE is preferable. Walk-in Interview between 10 am to 5 pm. Contact: VANDEC 47, RAR MANSION 1st Main Road (Albert Victor Road), Chamrajpet, Bangalore- 560018. Call: 8217843233 OR Email your resume to: vandec.office@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Marketing & Sales

WANTED SALES Staff Silver Jewellery Store. Male/ Female Minimum 2 Years experience in Retail Jewellery Sales, Chickpet Area. 8494925925

WANTED MALE/ Female SALES EXECUTIVE for FMCG Company in Vasanthnagar. Call: 7411252299. Candidate having two wheelers preferred.

Hospital & Medical Jobs

PHARMACIST, NURSES, LAB TECHNICIAN for Dr. PushpaDevaraj Hospital, Jeevanbhimanagar Main Road, HAL 3rd stage, Bengaluru. 9945250588

General

WANTED
"Office Assistant" to HMT Employees Co-Operative House Building Society, to work at Jalahalli. Preferably Graduate with Computer knowledge
Mob:9845345391

URGENT HIRING! Required Male Candidate for Operational job in Bangalore. General shift 2 wheeler Mandatory, Salary upto 15,000/- & other benefits. Call @ 6292232465/ 6292266575.

EMPLOYEE NEEDED! Business Development Office for property developer company No investment, age above 30 years experienced required. Earning Rs. 50,000/- per month Retired persons are eligible. Contact:- 9845334751.

WANTED IMMEDIATELY PLACEMENT MANAGER, TRAVELS MANAGER, BUSINESS EXECUTIVES, RECEPTIONIST, TELECALLERS, CAB DRIVERS. Good Salary. Bengaluru South Candidates Call: 99000-54461/62

DH DECCAN HERALD ಪ್ರಜಾವಾಣಿ
Classifieds
More value, more impact
JOB HUNT
Get your HIRING NEEDS answered
JOB
Get the right people for your company... Book your Ad with us now !
www.dhclassifieds.com BOOK NOW
For more details contact:
+91 9901641752 | +91 9731810277 | +91 9900428036 | +91 9886213331 | +91 9845114560 | 080-45557163/164

EDUCATION
To Place your Classified Ads Contact:
9845114560

WEEKEND CORNER

VEERDENCY LUXURY RESORT
BEST PURE VEGETARIAN RESORT

Weddings / Birthday Party
Anniversary / Corporate Events
10mins From kempegowda International Airport
+91 7676942445 | +91 7676057436
www.veerdencyresort.com

BOUCHERIE INDIA LOCATED AT BANASWADI, BANGALORE.
Into manufacturing of special purpose machinery is looking for following personnel on long term employment basis.
1) **Accountant:** B.Com with 5 to 8 years experience in maintaining books of accounts, make trail BS, proficiency in Tally, and MS Office, good knowledge of statutory government regulations plus filing of tax papers. Able to draw L & P statements.
2) **Store keeper:** B.Com with minimum 5 yrs exp. in engineering stores. Responsible for inventory management, including ordering, tracking, and documentation preparation. Proficiency in Tally, and MS Office skills.
3) **Secretary:** Graduate from any university. Good communication skill, draft letters, able to speak Kannada, Hindi is a must. Requires experience in proficiency in MS Office skills.
Important : Selected candidates should be able to Join with in 30 days.
Apply by post or email: Machines Boucherie India Pvt. Ltd. 2EC902, 2 E Cross, 9th A Main Road, Kalyan Nagar, 1st Block, Banaswadi, Bangalore-560043 info@boucherieindia.com

NISA & CO.
NISA & Co., offers expert Water proofing solutions to water leakage problems right from minus floors to terraces without damaging the structure.
• SPECIALIZED WATER PROOFING TREATMENT TO • BATHROOM WATERPROOFING & SUMP WATERPROOFING WITHIN 4 HOURS. • WALL CRACKS *TERRACE LEAKAGE *BASEMENT LEAKAGE *CONSTRUCTION JOINTS • EXPANSION JOINTS *PODIUM *BALCONY* STAIRCASE* SWIMMING POOL • PLANTER BOX* KITCHEN SLAB , ETC.
9980021835/ 9481251835

EDUCATIONAL

General

SSLC 48 QUESTION PAPERS 24 Mock Papers + 24 Practice Papers both in Kannada & English Medium at just Rs.200 by Email, Rao's Academy- 9900575990/ 7026602990.

Special Courses

DIPLOMA IN Life Skills & Emotional Intelligence 6 months, ONLINE, Starts 15 Feb. For parents teachers, counsellors. Become a Life Skills&EI coach. WhatsApp 9886044221 www.darwinpsychologycentre.com

STYLE 9 Training Academy, BTM Layout 2nd stage, Hair Dresser Course only 30k, Beautician Course only 20k. Call: 9019532027.

MATRIMONIAL

Grooms Wanted

Hindu

MUDALIAR BRIDE, B.Sc, 32. Fair, beautiful, own apartment seeking alliance preferably Civil Engineer. Contact: 9482839075.

Brides Wanted

Brahmin

SEEKING BRIDE FOR GSB BOY
From a Reputed Family from North Kanara, settled in Bangalore.
Working as Software Engineer in Bangalore
Vatsa Gotra
Age 25, Height 6'3"
B.E. Comp. Science
PH: 9901934569

Hindu

BRIDE WANTED
Specialist surgeon (sc), seeking alliance for his only son aged 30, 5'11" working in a reputed bank as senior data science analyst (caste no bar) with own house and financially affluent. Contact: 8618296787

WANTED BRIDE
HINDU - LINGAYATH
Civil Engineering, for Handsome Boy 31 years, 5.9" working MNC Company, Very well settled in Bangalore. Looking very fair girl, within 28 years, good background family.
Call : 7892081511

Tamil

MUDLIYAR BOY BE,MS 27/5'5" working in Europe is looking for suitable girl from same community. 9448476176

OTHERS

For Sale

SALE- IMPORTED 4 Stations integrated Training Machine (Gym) and other gym equipments, party going out of station. Contact: 9845765559/ 9845043282

AUTOMOTIVE

Four Wheelers Selling

Toyota

INNOVA 2008G, 245000km, Good Service History, No Accidents, Leather Seats, Alloy Wheels, 3rd owner, KA03, Genuine buyer - Call 90350 98765

Maruti

SALE. MARUTI Super carry refrigerator (reefer) vehicle. With South Korean make Dongin refrigeration unit fitted in brand new condition.. very low usage. Bangalore. Mobile: 9886972374/ 99802 83865

BUSINESS

Business Offers

Finance

WANTED BUSINESS Partners Gold Business 5, 10, 25 Lakhs Investment Monthly Income 1Lakhs WE PURCHASE GOLD Contact: 8892501007/ 9606701007

WE ARRANGE Housing /Mortgage, Construction loan From Financial Institutions. LocationBangalore, Chikkaballapur, Anekal, Chandapura, Devanahalli, Bidadi, Kolar, KGF, Hoskote. Jyothi 8971377299, 9353410567.

Business to Business

Business

HOSMAT HOSPITAL
HOSMAT HOSPITALS, intends to sell the following Medical Equipments, which are in good working conditions, the details of which are furnished below:
1. Lithotripsy Machine – Make Siemen, Modular's Variostar, year of Manufacture 2017,other components are table and Siemens Ultrasound Acuson X 300 with 1 probe
2. Brain Lab Computer Navigation Machine Vector Vision Model
3. Surgical Microscope Machine Zeiss Make - S5 Model
Interested parties can approach Mrs. Ashwini – Bio Medical Engineer on her Email Id: biomedical@hosmathospitals.com or reach out, on her Cell phone: 8660987793

PERSONAL

Change of Name

I,"PALAGIRI ASHA" alias "ASHA SHAIK BEPARI" changed my-name-to "AYESHA HAQ SHAIK BEPARI" dtd:05.02.2024. Sworn before notary H.S.Sakalesh Aradhya, Bengaluru.

CHANGE OF NAME
I, **SANNA HANUMANTHARAYAPPA** aged about 66 Years, S/o. Late Narasanna R/a Melkunte Grama, Kasaba Hobali, Sira Taluk, Tumkur District. Declare that **SANNA HANUMANTHARAYAPPA** alias **SUDHA HANUMANTHAPPA** Both Names are one and the same person, i.e. myself only. Vide affidavit dated: 08.02.2024 Sworn before Notary Y. R. Basavaraju, Sira.

I, NAYANA SRINIVAS W/o Srinivasa Prasad BV R/a, #.1758, 18th main, 9th cross, Near RV Dental College, JP.Nagar 2nd Phase, Bangalore- 560078 Have Changed my Name To RASHMIREKHA DUTTA Vide Affidavit Dated 09/02/2024 before Notary Mamatha N.K Bangalore

I SHRUTI T.K. W/O:GIRISH SORTUR R/O: Kodiyal, Kumarapattana, District: Haveri My minor daughter's name is being changed from DHRITI to DHRITI SORTUR For all future purpose vide affidavit sworn before notary C.H.Kotegoudra on 30-01-2024

ಒಂದನೇ ಪುಟದಿಂದ..

ಐದನೇ ತರಗತಿಯಿಂದ ಪದವಿ ಹಂತದವರೆಗಿನ 2,482 ಕ್ರೀಡಾಪಟುಗಳು ಈ ಹಾಸ್ಟೆಲ್‌ಗಳಲ್ಲಿ ತರಬೇತಿ ಪಡೆಯುತ್ತಾರೆ. ಎಳೆವಯಸ್ಸಿನಲ್ಲೇ ಅಗತ್ಯ ತರಬೇತಿ ನೀಡಿ, ಅವರನ್ನು ವಿಶ್ವದ ಪ್ರಮುಖ ಕ್ರೀಡಾಕೂಟ, ಒಲಿಂಪಿಕ್ಸ್‌ಗೆ ತಯಾರು ಮಾಡುವುದು ರಾಜ್ಯ ಸರ್ಕಾರದ ಉದ್ದೇಶ. ಆದರೆ ಈ ಎಲ್ಲಾ ಶಾಲೆಗಳದ್ದೂ ಒಂದೇ ಕೂಗು– ಅಂತರರಾಷ್ಟ್ರೀಯ ದರ್ಜೆಗೇರಿಸಿ ಎನ್ನುವ ಬೇಡಿಕೆಯಲ್ಲ. ಕನಿಷ್ಠ ಸೌಲಭ್ಯ ನೀಡಿ ಎನ್ನುವ ಆಗ್ರಹ.

ಕ್ರೀಡಾಂಗಣದ ಗ್ಯಾಲರಿ ಕೆಳಗಿರುವ ಮಡಿಕೇರಿಯ ಹಾಸ್ಟೆಲ್ ಮತ್ತು ವ್ಯಾಯಾಮ ಶಾಲೆಯಲ್ಲಿರುವ ಪೊನ್ನಂಪೇಟೆಯ ಹಾಸ್ಟೆಲ್‌ನಲ್ಲಿ ಉಸಿರುಗಟ್ಟುವ ಸ್ಥಿತಿಯಿದೆ. ಹೆಚ್ಚು ಮಳೆ ಬೀಳುವ ಪ್ರದೇಶವಾದ್ದರಿಂದ ಈ ಕಟ್ಟಡಗಳ ನಿರ್ವಹಣೆಗೆ ನಿರೀಕ್ಷೆಯಂತೆ ಹಣ ಬಿಡುಗಡೆ ಆಗುತ್ತಿಲ್ಲ. ಮೂಲಸೌಲಭ್ಯದ ಕೊರತೆಯಿದ್ದು, ಉಪಲೋಕಾಯುಕ್ತರು ಸ್ವಯಂಪ್ರೇರಣೆಯಿಂದ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ದಾವಣಗೆರೆಯ ಹಾಸ್ಟೆಲ್‌ನಲ್ಲಿ ತರಬೇತಿ ಪಡೆದವರು ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪದಕ ಗಳಿಸಿದ್ದಾರೆ. ಇಲ್ಲಿ ಸದ್ಯ 161 ಮಂದಿ ಕ್ರೀಡಾಪಟುಗಳಿದ್ದು, ಅವರಲ್ಲಿ 75 ಮಂದಿ ಕುಸ್ತಿಪಟುಗಳು ಇದ್ದಾರೆ. ಕ್ರೀಡಾಪಟುಗಳ ಸಂಖ್ಯೆಗೆ ತಕ್ಕಂತೆ ಕೊಠಡಿಗಳಿಲ್ಲ. ಹಾಸನದ ಹಾಸ್ಟೆಲ್‌ನಲ್ಲಿ ಉತ್ತಮ ಸೌಲಭ್ಯಗಳಿವೆ. ಇವರಲ್ಲಿ 6 ಕ್ರೀಡಾಪಟುಗಳು ಕಳೆದ ವರ್ಷ ಮಹಿಳೆಯರ ರಾಷ್ಟ್ರೀಯ ಜ್ಯೂನಿಯರ್ ಹಾಕಿ ಪಂದ್ಯಾವಳಿಯಲ್ಲಿ ಕರ್ನಾಟಕ ತಂಡ ಪ್ರತಿನಿಧಿಸಿದ್ದರು.

ಒಡಿಶಾ, ಗೋವಾಕ್ಕೆ ಹೋಲಿಸಿದರೆ ಕರ್ನಾಟಕದ ಕ್ರೀಡಾಪಟುಗಳಿಗೆ ನಿರೀಕ್ಷಿತ ಪ್ರೋತ್ಸಾಹ ಸಿಗುತ್ತಿಲ್ಲ. ಒಡಿಶಾ ಸರ್ಕಾರ 2023–24ರಲ್ಲಿ ಕ್ರೀಡಾ ಕ್ಷೇತ್ರಕ್ಕೆ ₹1,217 ಕೋಟಿ ಮತ್ತು ಗೋವಾ ಸರ್ಕಾರ ₹384 ಕೋಟಿ ಮೀಸಲಿರಿಸಿವೆ. ಆದರೆ, ಯುವ ಸಬಲೀಕರಣ ಮತ್ತು ಕ್ರೀಡಾ ಕ್ಷೇತ್ರಕ್ಕೆ ಕರ್ನಾಟಕ ಸರ್ಕಾರವು ಮೀಸಲಿಟ್ಟಿದ್ದು ಬರೀ ₹211 ಕೋಟಿ. ಈ ಹಣದಲ್ಲೇ ಸಿಬ್ಬಂದಿ ವೇತನ, ಹಾಸ್ಟೆಲ್, ಜಿಲ್ಲಾ ಕ್ರೀಡಾಂಗಣ ನಿರ್ವಹಣೆ, ಹೊಸ ಕಟ್ಟಡ ನಿರ್ಮಾಣ ಸೇರಿ ಮತ್ತಿತರ ಚಟುವಟಿಕೆ ನಿರ್ವಹಿಸಬೇಕು. ರಾಜ್ಯದ ಕ್ರೀಡಾಭಿವೃದ್ಧಿಗೆ ಇದು ಸಾಕಾಗದು ಎಂಬ ಅಳಲು ಅಧಿಕಾರಿಗಳದ್ದು.

ಭಾರತ ಹಾಕಿ ತಂಡದ ಮಾಜಿ ನಾಯಕ ವಿ.ಆರ್. ರಘುನಾಥ, ಕಬಡ್ಡಿ ಪಟು ಹೊನ್ನಪ್ಪಗೌಡ, ಕ್ರಿಕೆಟ್‌ಪಟು ಎಸ್. ಅರವಿಂದ ಮತ್ತಿತರರನ್ನು ಒಳಗೊಂಡ ಕ್ರೀಡಾ ತಜ್ಞರ ಸಮಿತಿ, ರಾಜ್ಯದ ಕ್ರೀಡಾಂಗಣಗಳು, ಕ್ರೀಡಾಶಾಲೆ ಮತ್ತು ವಸತಿ ನಿಲಯಗಳನ್ನು ವೈಜ್ಞಾನಿಕವಾಗಿ ಮೇಲ್ದರ್ಜೆಗೇರಿಸಲು ಹಿಂದಿನ ಸರ್ಕಾರಕ್ಕೆ ವರದಿ ಕೊಟ್ಟಿತ್ತು. ಬಹುತೇಕ ಕ್ರೀಡಾಂಗಣಗಳು ದುಃಸ್ಥಿತಿಯಲ್ಲಿದ್ದು, ಸೌಲಭ್ಯಗಳ ಕೊರತೆಯೂ ಇದೆ. ಅವುಗಳನ್ನು ಉನ್ನತೀಕರಿಸಬೇಕು. ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕ ಹಾಸ್ಟೆಲ್ ನಿರ್ಮಿಸಬೇಕು. ಅಲ್ಲಿ ಕ್ರೀಡಾಪಟುಗಳ ಸಂಖ್ಯೆಗೆ ಅನುಗುಣವಾಗಿ ಸ್ನಾನಗೃಹ, ಶೌಚಗೃಹ ಹೆಚ್ಚಿಸಬೇಕು. ಮಹಿಳಾ ತರಬೇತುದಾರರನ್ನು ಹೆಚ್ಚಿಸಿ, ಬಾಲಕಿಯರನ್ನು ಕ್ರೀಡಾ ಕ್ಷೇತ್ರದತ್ತ ಸೆಳೆಯಲು ಉತ್ತೇಜಿಸಬೇಕು ಎಂದೆಲ್ಲ ಶಿಫಾರಸು ಮಾಡಿತ್ತು. ಆದರೆ ಈವರೆಗೆ ಶಿಫಾರಸಿಗೆ ಸಂಬಂಧಿಸಿ ಯಾವುದೇ ಪ್ರಗತಿ ಕಂಡುಬಂದಿಲ್ಲ.

ನಿತ್ಯ ಮಣ್ಣಿನ ಅಂಕಣದಲ್ಲಿ ಓಡುವ ಕ್ರೀಡಾಪಟುಗಳು ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಸಿಂಥೆಟಿಕ್ ಟ್ರ್ಯಾಕ್‌ನಲ್ಲಿ ಓಡಲು ಪ್ರಯಾಸ ಪಡುತ್ತಾರೆ. ಐದಾರು ವರ್ಷಗಳ ಹಿಂದೆ ರಾಜ್ಯದ ವಿಜಯಪುರ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಅಂತರ ಕಾಲೇಜು ಕ್ರೀಡಾಕೂಟ ಧಾರವಾಡದಲ್ಲಿ ನಡೆದಿತ್ತು. ಅಲ್ಲಿನ ಸಿಂಥೆಟಿಕ್ ಟ್ರ್ಯಾಕ್‌ನಲ್ಲಿ ಓಡಲು ಅಥ್ಲೀಟುಗಳಿಗೆ ಕಷ್ಟವಾಗಿತ್ತು. ಕಾರಣ, ಅವರು ಯಾವತ್ತೂ ಅಂಥ ಟ್ರ್ಯಾಕ್‌ನಲ್ಲಿ ಓಡಿರಲಿಲ್ಲ.

ಕ್ರೀಡಾ ತರಬೇತುದಾರರ ಸ್ಥಿತಿಯಂತೂ ಇನ್ನೂ ಶೋಚನಿಯವಾಗಿದೆ. ಕ್ರೀಡಾಪಟುಗಳನ್ನು ರೂಪಿಸಿ, ಮಾರ್ಗದರ್ಶನ ನೀಡುವ ಅವರು, ತಮ್ಮ ಬದುಕು ಸುಧಾರಿಸಿಕೊಳ್ಳಲು ಸಾಧ್ಯವಾಗಿಲ್ಲ. ವಾಸ್ತವ ಸಮಸ್ಯೆಗಳನ್ನು ಬಿಚ್ಚಿಡುವ ಬೆಳಗಾವಿಯ ವಾಲಿಬಾಲ್ ಕ್ರೀಡಾ ತರಬೇತುದಾರ ಬಸವರಾಜ ಹೊಸಮಠ, ‘ಎರಡು ದಶಕಗಳಿಂದ ಸಾಕಷ್ಟು ಆಟಗಾರರನ್ನು ರೂಪಿಸಿದ್ದೇನೆ. ಅವರು ಹಲವು ಪ್ರಶಸ್ತಿಗಳನ್ನು ಪಡೆದು, ನೌಕರಿ ಗಿಟ್ಟಿಸಿ ಸುಭದ್ರ ಬದುಕು ರೂಪಿಸಿಕೊಂಡಿದ್ದಾರೆ. ಆದರೆ, ನಮ್ಮ ಬದುಕು ಈಗಲೂ ಅಭದ್ರ’ ಎನ್ನುತ್ತಾರೆ.

'ಕ್ರೀಡಾ ಹಾಸ್ಟೆಲ್‌ಗಳಲ್ಲಿ 20 ವರ್ಷಗಳಿಂದ

ದಾವಣಗೆರೆಯ ಕುಸ್ತಿ ತರಬೇತಿ ಶಾಲೆಯ ಒಳಗೆ ಕತ್ತಲೆ ಆವರಿಸಿದ್ದು, ಇದರ ನಡುವೆಯೇ ಕ್ರೀಡಾಪಟುಗಳು ತಾಲೀಮು ನಡೆಸುತ್ತಿರುವುದು ಪ್ರಜಾವಾಣಿ ಚಿತ್ರ: ಸತೀಶ ಬಡಿಗೇರ್

ನೆರವಿಗೆ ಕಾಯುತ್ತಿದೆ ‘ಆಟ’

ದುಡಿಯುತ್ತಿದ್ದರೂ, ಸೇವಾ ಭದ್ರತೆ ಇಲ್ಲ. ಪಿ.ಎಫ್ ಹೊರತುಪಡಿಸಿದರೆ ಪಿಂಚಣಿ ಸೇರಿ ಯಾವ ಸೌಲಭ್ಯವೂ ಇಲ್ಲ. ಪ್ರತಿ ವರ್ಷ ನಮ್ಮ ಸೇವಾವಧಿ ನವೀಕರಣ ಆಗುತ್ತದೆ. ಒಂದು ವೇಳೆ ನವೀಕರಣ ಆಗದಿದ್ದರೆ, ಕೆಲಸ ಹೋಯಿತು ಎಂದೇ ಅರ್ಥ. ಕೆಲಸವಿಲ್ಲದೇ ಜೀವನ ನಡೆಸುವುದು ಹೇಗೆ’ ಎಂಬ ಆತಂಕ ತರಬೇತುದಾರರದ್ದು.

ಪಾಲನೆಯಾಗದ ಊಟದ ಮೆನು: ಹಾಸ್ಟೆಲ್‌ಗಳಲ್ಲಿ ಮೆನು ಪ್ರಕಾರ, ಊಟ ನೀಡುವುದಿಲ್ಲ. ದೈಹಿಕ ಸಾಮರ್ಥ್ಯ ಕಾಯ್ದುಕೊಳ್ಳಲು ಹಣ್ಣು ಸೇರಿ ಪೌಷ್ಟಿಕಾಂಶವುಳ್ಳ ಆಹಾರ ಕೊಡಬೇಕು. ಆದರೆ, ಸಚಿವರು ಅಥವಾ ಹಿರಿಯ ಅಧಿಕಾರಿಗಳು ಬಂದಾಗಷ್ಟೇ, ಮೆನುವಿನಂತೆ ಊಟ ಸಿಗುತ್ತದೆ. ಉಳಿದ ಸಮಯದಲ್ಲಿ ಸಿಗಲ್ಲ.

‘ನಾವು ಮಾಡಿದ ಅಡುಗೆ ಚೆನ್ನಾಗಿದೆ ಎನ್ನಬೇಕು. ದೂರು ಹೇಳದಂತೆ ಬೆದರಿಸಲಾಗುತ್ತದೆ. ನಮಗೆಲ್ಲ ಜೋಳದ ರೊಟ್ಟಿ ತಿಂದು ರೂಢಿ. ಆದರೆ ಹಾಸ್ಟೆಲ್‌ಗಳಲ್ಲಿ ಚಪಾತಿ ಕೊಡುತ್ತಾರೆ. ದೈಹಿಕ ಸಾಮರ್ಥ್ಯ ಹೇಗೆ ತಾನೇ ಕಾಪಾಡಿಕೊಳ್ಳಲು ಸಾಧ್ಯ’ ಎಂಬ ಪ್ರಶ್ನೆ ಕಲಬುರಗಿಯ ಕ್ರೀಡಾಪಟುಗಳದ್ದು.

‘ಕುಸ್ತಿಪಟುಗಳಿಗೆ ತಾಲೀಮಿಗೆ ತಕ್ಕಂತೆ ಆಹಾರ ನೀಡಬೇಕು. ಪ್ರತಿ ಭಾನುವಾರ ಮಾರುಕಟ್ಟೆಗೆ ಹೋಗಿ ವಿವಿಧ ಹಣ್ಣುಗಳು, ಡ್ರೈಫ್ರುಟ್ಸ್‌ಗಳನ್ನು ನಾವೇ ಖರೀದಿಸಿ, ತಿನ್ನುತ್ತೇವೆ. ಇದಕ್ಕೆ ತಿಂಗಳಿಗೆ ₹5 ಸಾವಿರ ಖರ್ಚಾಗುತ್ತದೆ’ ಎನ್ನುತ್ತಾರೆ ಬೆಳಗಾವಿಯ ಕುಸ್ತಿಪಟುಗಳು.

ಗದಗ ಕ್ರೀಡಾ ಹಾಸ್ಟೆಲ್‌ನಲ್ಲಿ 5 ರಿಂದ 10ನೇ ತರಗತಿಯ 34 ವಿದ್ಯಾರ್ಥಿಗಳು ಕುಸ್ತಿ, 48 ಮಂದಿ ಸೈಕ್ಲಿಂಗ್ ಮತ್ತು 14 ಮಂದಿ ಹಾಕಿ ತರಬೇತಿ ಪಡೆಯುತ್ತಾರೆ. ಪ್ರತಿ ವಿದ್ಯಾರ್ಥಿಗೆ ಸರ್ಕಾರ ದಿನಕ್ಕೆ ₹ 225 ಖರ್ಚು ಮಾಡುತ್ತದೆ. ಆಹಾರ ತಯಾರಿಕೆಗೆ ಬೇಕಾಗುವ ಸಾಮಗ್ರಿ ಪೂರೈಸಲು ಟೆಂಡರ್ ಕರೆಯಲಾಗುತ್ತದೆ. ಇಲ್ಲಿ ಟೆಂಡರ್‌ದಾರರು ₹193 ರಿಂದ ₹199ರವರೆಗೆ ಬಿಡ್ ಮಾಡುತ್ತಾರೆ. ಆದರೆ, ಕ್ರೀಡಾ ಇಲಾಖೆಯು ವಿದ್ಯಾರ್ಥಿಗಳಿಗೆ ಕೊಡಬೇಕಿರುವ ಆಹಾರದ ಮೆನು ಕಾರ್ಡ್ ನೋಡಿದಾಗ, ‘ಟೆಂಡರ್‌ದಾರರು ₹199ಕ್ಕೆ ಗುಣಮಟ್ಟದ ಸಾಮಗ್ರಿಗಳನ್ನು ಪೂರೈಸಲು ಸಾಧ್ಯವೇ’ ಎಂಬ ಸಂದೇಹ ಮೂಡುತ್ತದೆ.

‘ಟೆಂಡರ್ ಪಡೆದವರು ನಮ್ಮ ಮೆನುವಿಗೆ ಅನುಸಾರ ಗುಣಮಟ್ಟದ ಸಾಮಗ್ರಿ ಪೂರೈಸಬೇಕು. ಇದರಲ್ಲಿ ರಾಜಿ ಇಲ್ಲ. ಕಳಪೆ ಸಾಮಗ್ರಿ ಪೂರೈಸಿದರೆ ಅವರನ್ನು ಕಪ್ಪುಪಟ್ಟಿಗೆ ಸೇರಿಸುತ್ತೇವೆ’ ಎನ್ನುತ್ತಾರೆ ಕ್ರೀಡಾ ಇಲಾಖೆ ಅಧಿಕಾರಿ ಶರಣು ಗೋಗೇರಿ.

ಆಗೊಮ್ಮೆ–ಈಗೊಮ್ಮೆ ಸಣ್ಣಪುಟ್ಟ ಲೋಪಗಳನ್ನು ಹೊರತುಪಡಿಸಿದರೆ, ದಾವಣಗೆರೆ ಹಾಸ್ಟೆಲ್‌ನಲ್ಲಿ ಕ್ರೀಡಾಪಟುಗಳಿಗೆ ಗುಣಮಟ್ಟದ ಆಹಾರ ಸಿಗುತ್ತದೆ. ಮೈಸೂರಿನಲ್ಲಿ ಬೆಳಿಗ್ಗೆ 6.30ರಿಂದ ಕ್ರೀಡಾಪಟುಗಳಿಗೆ ಪೌಷ್ಟಿಕ ಆಹಾರ ನೀಡಲಾಗುತ್ತದೆ. ಬಾದಾಮಿ, ದ್ರಾಕ್ಷಿ ಸೇರಿ ಒಣಹಣ್ಣುಗಳ ಪಾನೀಯದೊಂದಿಗೆ ಆರಂಭವಾಗುವ ಮೆನು, ದೋಸೆ, ಮಟನ್ ಬಿರಿಯಾನಿ ಸೇರಿ ವಿವಿಧ ಪೌಷ್ಟಿಕಯುಕ್ತ ಆಹಾರ ಒಳಗೊಂಡಿದೆ. ಆಹಾರದ ವಿಷಯದಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳಿಗಿಂತ ದಕ್ಷಿಣ ಕರ್ನಾಟಕದ ಜಿಲ್ಲೆಗಳೇ ಉತ್ತಮ. ಕ್ರೀಡೆಗೆ ಅನುಗುಣವಾಗಿ ಮೆನು ಬದಲಿಸಬೇಕೆಂಬ ಆಗ್ರಹವೂ ಇದೆ.

ಎರವಲು ಸೇವೆ: ಬಹುತೇಕ ಜಿಲ್ಲೆಗಳಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಮೂಲತಃ ಇದೇ ಇಲಾಖೆಯವರಲ್ಲ. ಬೇರೆ ಇಲಾಖೆಗಳಲ್ಲಿ ಜಂಟಿ ನಿರ್ದೇಶಕ, ಸಹಾಯಕ ನಿರ್ದೇಶಕ ಹುದ್ದೆಯಲ್ಲಿದ್ದು, ಇಲ್ಲಿ ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸುತ್ತಾರೆ. ಕ್ರೀಡಾ ಹಿನ್ನೆಲೆ ಅಥವಾ ಇದಕ್ಕೆಂದೇ ಪ್ರತ್ಯೇಕವಾಗಿ ನೇಮಕಗೊಂಡ ಅಧಿಕಾರಿಗಳು ಇಲ್ಲ.

ಹೀಗಾಗಿ ಅವರಿಗೆ ಕ್ರೀಡಾ ಕ್ಷೇತ್ರದ ಆಗುಹೋಗು, ಸಮಸ್ಯೆಗಳ ಬಗ್ಗೆ ಹೆಚ್ಚು ಜ್ಞಾನ, ಮಾಹಿತಿ ಇರುವುದಿಲ್ಲ. ಒಮ್ಮೆ ನಿಯೋಜನೆಗೊಂಡವರು ಇಲ್ಲೇ ಮುಂದುವರಿಯಲು ಬಯಸುತ್ತಾರೆ. ಅಮಾನತುಗೊಂಡವರು ಶಿಫಾರಸು ತಂದು ಮರಳಿ ಅದೇ ಇಲಾಖೆಗೆ ನಿಯೋಜನೆಗೊಂಡ ಉದಾಹರಣೆಗಳಿವೆ.

ತರಬೇತುದಾರರ ಕೊರತೆ: ಅಥ್ಲೆಟಿಕ್ಸ್, ಹಾಕಿ, ವಾಲಿಬಾಲ್, ಫುಟ್‌ಬಾಲ್, ಕುಸ್ತಿ, ಸೈಕ್ಲಿಂಗ್, ಜಿಮ್ನಾಸ್ಟಿಕ್, ಬ್ಯಾಸ್ಕೆಟ್‌ಬಾಲ್ ಮತ್ತಿತರ ಕ್ರೀಡೆಗಳಿಗೆ ಆಯಾ ಕ್ರೀಡಾ ಹಾಸ್ಟೆಲ್‌ಗಳಲ್ಲಿ ತರಬೇತಿ ಕೊಡಲಾಗುತ್ತದೆ. ರಾಜ್ಯದಲ್ಲಿ 139 ತರಬೇತುದಾರರಿಗೆ ಬೇಡಿಕೆಯಿದೆ. ಆದರೆ, 72 ಮಂದಿ ಇದ್ದಾರೆ. ಬಹುತೇಕ ಹಾಸ್ಟೆಲ್‌ನಲ್ಲಿ ವಾರ್ಡನ್ ಇಲ್ಲ. ವಿದ್ಯಾರ್ಥಿಗಳನ್ನು ನೋಡಿಕೊಳ್ಳುವ ‘ಹೆಚ್ಚುವರಿ ಜವಾಬ್ದಾರಿ’ ತರಬೇತುದಾರರಿಗೆ ಹೊರಿಸಲಾಗಿದೆ.

ಮಂಗಳೂರಿನ ಮಂಗಳಾ ಕ್ರೀಡಾಂಗಣದ ಕಾಮಗಾರಿ ಇನ್ನೂ ಅಪೂರ್ಣ

‘ಗುರಿ’ ತಪ್ಪಿದ ಬಿಲ್ಗಾರಿಕೆ ಶಾಲೆ

ಚಾಮರಾಜನಗರ ಜಿಲ್ಲೆಯ ಸಂತೇಮರಹಳ್ಳಿಯಲ್ಲಿ 8 ವರ್ಷಗಳ ಹಿಂದೆ ಬಿಲ್ವಿದ್ಯೆ ಮತ್ತು ಕತ್ತಿವರಸೆ ತರಬೇತಿ ಶಾಲೆ ಆರಂಭವಾಗಿದ್ದು, ನಿಗದಿತ ‘ಗುರಿ’ ತಲುಪಲು ಸಾಧ್ಯವಾಗಿಲ್ಲ.

2016ರಲ್ಲಿ ಪರಿಶಿಷ್ಟ ವರ್ಗ ಹಾಗೂ ಬುಡಕಟ್ಟು ಸಮುದಾಯದ ವಿದ್ಯಾರ್ಥಿಗಳಿಗೆ ನಿರ್ಮಿಸಿರುವ ರಾಜ್ಯದ ಏಕೈಕ ವಸತಿ ಶಾಲೆ ಇದಾಗಿದೆ. ಇಲ್ಲಿ ಉತ್ತರ ಕರ್ನಾಟಕ ಮತ್ತು ಕರಾವಳಿ ಪ್ರದೇಶದ ಜಿಲ್ಲೆಗಳ ವಿದ್ಯಾರ್ಥಿಗಳು ಬಿಲ್ಲು ವಿದ್ಯೆ ಮತ್ತು ಕತ್ತಿ ವರಸೆ ಕಲಿಯುತ್ತಾರೆ. ಆದರೆ, ಕಾಯಂ ತರಬೇತುದಾರರನ್ನು ಸರ್ಕಾರ ಇಂದಿಗೂ ನೇಮಿಸಿಲ್ಲ. ತರಬೇತುದಾರರಿಗೆ ಪ್ರತ್ಯೇಕ ವಸತಿ ಗೃಹಗಳ ವ್ಯವಸ್ಥೆ ಇಲ್ಲ. ವಿದ್ಯಾರ್ಥಿಗಳ ಕೊಠಡಿಗಳನ್ನೇ ಇವರಿಗೂ ಕೊಡಲಾಗಿದೆ.

ಯಾದಗಿರಿ ಜಿಲ್ಲಾ ಕ್ರೀಡಾಂಗಣದಲ್ಲಿ ಕ್ರೀಡಾಪಟುಗಳಿಗೆ ಸೂಕ್ತ ಸೌಲಭ್ಯಗಳಿಲ್ಲ. ಅದನ್ನು ಕೇಳಿದರೆ ನಮ್ಮನ್ನೇ ದೂಷಿಸುತ್ತಾರೆ. ಹೀಗಾಗಿ ಹೊಂದಿಕೊಂಡು ಹೋಗುವ ಸ್ಥಿತಿಯಿದೆ.
ಹಣಮಂತ ನಾಯಕ, ಕ್ರೀಡಾಪಟು, ಯಾದಗಿರಿ

1984ರಲ್ಲಿ ನಿರ್ಮಾಣವಾದ ಕಲಬುರಗಿ ಜಿಲ್ಲಾ ಕ್ರೀಡಾಂಗಣದ ಸಂಪೂರ್ಣ ನವೀಕರಣಕ್ಕೆ ಯೋಜನೆ ಸಿದ್ಧವಾಗಿದೆ. ₹33 ಕೋಟಿ ವೆಚ್ಚದಲ್ಲಿ ಎಲ್ಲ ಅಂಕಣಗಳನ್ನು ನವೀಕರಿಸಲು ನಿರ್ಧರಿಸಲಾಗಿದೆ
ಜಿ.ಗಾಯತ್ರಿ, ಸಹಾಯಕ ನಿರ್ದೇಶಕಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕಲಬುರಗಿ

ಆಯಾ ಕ್ರೀಡೆಗೆ ತಕ್ಕಂತೆ ಕ್ರೀಡಾಪಟುಗಳಿಗೆ ಪೌಷ್ಟಿಕ ಆಹಾರ ನೀಡಬೇಕು ಎಂಬ ಬೇಡಿಕೆಯಿದೆ. ಇದನ್ನು ಸರ್ಕಾರದ ಗಮನಕ್ಕೆ ತರಲಾಗುವುದು. ಜಿಮ್ನಾಸ್ಟಿಕ್ ತರಬೇತುದಾರರ ನೇಮಕಕ್ಕೆ ಕ್ರಮ ವಹಿಸಲಾಗುವುದು
ಬಿ.ಶ್ರೀನಿವಾಸ, ಉಪನಿರ್ದೇಶಕ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಳಗಾವಿ

ಬೇರೆ ರಾಜ್ಯಕ್ಕೆ ಪ್ರತಿಭಾ ಪಲಾಯನ ಆಗುವುದು ತಪ್ಪಿಸಬೇಕು. ಜಿಲ್ಲಾ ಕ್ರೀಡಾಂಗಣ ಅಥವಾ ಹಾಸ್ಟೆಲ್‌ನಲ್ಲಿ ಕ್ರೀಡಾಪಟುಗಳಿಗೆ ಉತ್ತಮ ತರಬೇತಿ ಕೊಡಬೇಕು. ಪ್ರತಿಭೆ ಬೆಳಕಿಗೆ ತರಬೇಕು.
ಸಚಿನ್, ಹ್ಯಾಮರ್ ಥ್ರೋ ಅಥ್ಲೀಟ್, ಕೊಪ್ಪಳ

ಬೆಳಗಾವಿಯಲ್ಲಿ ಜಿಮ್ನಾಸ್ಟಿಕ್ ತರಬೇತಿ ಶಾಲೆಗೆ ₹1 ಕೋಟಿಗೂ ಅಧಿಕ ಮೌಲ್ಯದ ಕ್ರೀಡಾ ಸಾಮಗ್ರಿ ಖರೀದಿಸಲಾಗಿದೆ. ಆದರೆ, ಸೂಕ್ತ ತರಬೇತುದಾರರು ಇಲ್ಲದ ಕಾರಣ ಟಾರ್ಪಲ್ ಹೊದಿಸಿ ‘ಮೂಲೆಗುಂಪು’ ಮಾಡಲಾಗಿದೆ. ಮಂಗಳೂರಿನ ಹಾಸ್ಟೆಲ್‌ನಲ್ಲಿ ಅಥ್ಲೆಟಿಕ್ಸ್ ಮತ್ತು ವಾಲಿಬಾಲ್ ತರಬೇತಿಗೆ ಅವಕಾಶವಿದೆ. ವಾಲಿಬಾಲ್ ತರಬೇತುದಾರ ನೇಮಕವಾಗದ ಕಾರಣ ಅಲ್ಲಿನ 50 ಕ್ರೀಡಾಪಟುಗಳಿಗೆ ಅಥ್ಲೆಟಿಕ್ಸ್‌ನಲ್ಲೇ ತರಬೇತಿ ನೀಡಲಾಗುತ್ತಿದೆ.

ಕ್ರೀಡಾಂಗಣದ್ದು ಅದೇ ವ್ಯಥೆ: ಕಲಬುರಗಿಯ ಚಂದ್ರಶೇಖರ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಟ್ರ್ಯಾಕ್ ಇದ್ದರೂ ಬಹುದಿನಗಳಿಂದ ನೀರಿನ ಸ್ಪರ್ಶವಾಗಿಲ್ಲ. ಅಖಿಲ ಭಾರತ ಮಟ್ಟದ ಟೂರ್ನಿಯಲ್ಲಿ ಆಡಿರುವ ಕೊಪ್ಪಳದ ವಾಲಿಬಾಲ್ ಕ್ರೀಡಾಪಟುಗಳಿಗೆ ಸಿಂಥೆಟಿಕ್ ಅಂಕಣವಿಲ್ಲ. ದಕ್ಷಿಣ ವಲಯ ಹಾಗೂ ರಾಷ್ಟ್ರಮಟ್ಟದ ಹ್ಯಾಮರ್ ಥ್ರೋ ಸ್ಪರ್ಧೆಯಲ್ಲಿ ಸಾಧನೆ ಮಾಡಿರುವ ಕೊಪ್ಪಳದ ಸಚಿನ್ ಅವರಿಗೆ ನಡಿಗೆಪಥವೇ ಅವರ ತಾಲೀಮು ಸ್ಥಳ.

ವಿಜಯಪುರದ ಸೈಕ್ಲಿಸ್ಟ್‌ಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದರೂ ವೆಲೊಡ್ರೋಮ್ ಟ್ರ್ಯಾಕ್ ಅಭ್ಯಾಸಕ್ಕೆ ಈಗಲೂ ದೆಹಲಿ ನೆಚ್ಚಿಕೊಳ್ಳಬೇಕಿದೆ. ವಿಜಯಪುರದಲ್ಲಿ ಟ್ರ್ಯಾಕ್ ಇದೆ. ಆದರೆ, ಉದ್ಘಾಟನೆ ಆಗಿಲ್ಲ. ಬಾಗಲಕೋಟೆ ಸೈಕ್ಲಿಸ್ಟ್‌ಗಳದ್ದೂ ಇದೇ ಪಾಡು. ಪ್ರತಿಭಾವಂತ ಈಜುಪಟುಗಳಿದ್ದರೂ ಕೋಲಾರದಲ್ಲಿ ಸರ್ಕಾರಿ ಈಜುಕೊಳ ಇಲ್ಲ. ತಾಲೀಮಿಗೆ ಅವರು ಬೆಂಗಳೂರಿಗೆ ಹೋಗಬೇಕು.

ದಾವಣಗೆರೆ ಜಿಲ್ಲಾ ಕ್ರೀಡಾಂಗಣದಲ್ಲಿ ಒಂದೇ ಮೈದಾನದಲ್ಲಿ ಕೊಕ್ಕೊ, ವಾಲಿಬಾಲ್ ಅಂಕಣಗಳಿವೆ. ಕ್ರಿಕೆಟಿಗರು ಮತ್ತು ಫುಟ್‌ಬಾಲ್ ಆಟಗಾರರೂ ಅಲ್ಲಿಯೇ ಅಕ್ಕಪಕ್ಕ ಆಡುತ್ತಾರೆ. ಅವರು ಬಾರಿಸುವ ಚೆಂಡು ತಾಗಿ, ಕೆಲವು ಅಥ್ಲೀಟ್‌ಗಳು ಗಾಯಗೊಂಡಿದ್ದಾರೆ.

‘ಕ್ರೀಡಾಪಟುಗಳ ಅಗತ್ಯಕ್ಕೆ ಅನುಗುಣವಾಗಿ ಮೂಲಸೌಲಭ್ಯ ಒದಗಿಸಬೇಕು ಎಂಬ ಉದ್ದೇಶ ನಮಗೂ ಇದೆ. ಆದರೆ, ಇಲಾಖೆ ಖಾತೆಯಲ್ಲಿ ₹20 ಸಾವಿರ ಮೊತ್ತವಷ್ಟೇ ಇದೆ. ಇದರಲ್ಲಿ ಏನು ತಾನೆ ಮಾಡಲು ಸಾಧ್ಯ?’ ಎಂದು ಕ್ರೀಡಾ ಇಲಾಖೆ ದಾವಣಗೆರೆ ಸಹಾಯಕ ನಿರ್ದೇಶಕಿ ಜಯಲಕ್ಷ್ಮಿ ಬಾಯಿ ಅಸಹಾಯಕರಾಗಿ ನುಡಿಯುತ್ತಾರೆ.

(ಪೂರಕ ಮಾಹಿತಿ: ಜಿಲ್ಲಾ ವರದಿಗಾರರಿಂದ)

ವ್ಯವಸ್ಥೆ ಮೇಲ್ದರ್ಜೆಗೇರಿಸಲು ಕ್ರಮ: ಸಚಿವ ನಾಗೇಂದ್ರ

‘ಗ್ರಾಮೀಣ ಭಾಗದ ಕ್ರೀಡಾ ಪ್ರತಿಭೆಯನ್ನೂ ಮುಖ್ಯವಾಹಿನಿಗೆ ತಂದು ಪ್ರೋತ್ಸಾಹಿಸುವುದೇ ನಮ್ಮ ಗುರಿ. ಅದಕ್ಕೆ ರಾಜ್ಯದ ಕ್ರೀಡಾಶಾಲೆ ಮತ್ತು ಹಾಸ್ಟೆಲ್‌ಗಳಲ್ಲಿ ವ್ಯವಸ್ಥೆ ಮೇಲ್ದರ್ಜೆಗೇರಿಸಲು ಕ್ರಮ ವಹಿಸಲಾಗುವುದು’ ಎಂದು ಕ್ರೀಡಾ ಸಚಿವ ಬಿ.ನಾಗೇಂದ್ರ ‘ಪ್ರಜಾವಾಣಿ’ಗೆ ತಿಳಿಸಿದರು.

‘ನಾನು ವಿವಿಧ ಜಿಲ್ಲೆಗಳ ಕ್ರೀಡಾ ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದೇನೆ. ಊಟ, ಶೌಚಗೃಹದ ವಿಚಾರವಾಗಿ ಹಲವು ಸಮಸ್ಯೆ ಗಮನಕ್ಕೆ ಬಂದಿವೆ. ಅವುಗಳನ್ನೆಲ್ಲ ಬಗೆಹರಿಸುತ್ತೇವೆ. ಊಟದ ಮೆನುವಿನಲ್ಲಿ ಇನ್ನಷ್ಟು ಪೌಷ್ಟಿಕಾಂಶಯುಕ್ತ ಆಹಾರ ಸೇರಿಸಲು ಪ್ರಯತ್ನ ನಡೆದಿದೆ’ ಎಂದರು.

‘ಬೇರೆ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕದಲ್ಲಿ ಕ್ರೀಡಾ ರಂಗಕ್ಕೆ ಮೀಸಲಿಟ್ಟ ಅನುದಾನ ಕಡಿಮೆ. ಮುಂದಿನ ಬಜೆಟ್‌ನಲ್ಲಿ ಅನುದಾನದ ಪ್ರಮಾಣ ಹೆಚ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೋರಿರುವೆ. ಏಷ್ಯನ್ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಪದಕ ಗಳಿಸಿದವರಿಗೆ ನಗದು ಪುರಸ್ಕಾರ ನೀಡಿ ಪ್ರೋತ್ಸಾಹಿಸುತ್ತಿದ್ದೇವೆ’ ಎಂದು ಹೇಳಿದರು.

‘ಈ ಹಿಂದೆ ಪೊಲೀಸ್ ಮತ್ತು ಅರಣ್ಯ ಇಲಾಖೆಯಲ್ಲಿ ಕ್ರೀಡಾಪಟುಗಳಿಗೆ ಇದ್ದ ಶೇ 2ರಷ್ಟು ಹುದ್ದೆಗಳ ಮೀಸಲಾತಿಯನ್ನು ಶೇ 3ಕ್ಕೆ ಹೆಚ್ಚಿಸಿದ್ದೇವೆ. ಇನ್ಮುಂದೆ ಎಲ್ಲ ಇಲಾಖೆಗಳ ನೇಮಕಾತಿಯಲ್ಲೂ ಕ್ರೀಡಾಪಟುಗಳಿಗೆ ಆದ್ಯತೆ ಸಿಗಲಿದೆ’ ಎಂದರು.

ನಾಳೆಯಿಂದ ರಾಜ್ಯದಾದ್ಯಂತ ಬಿಜೆಪಿಯ ಗ್ರಾಮ ಪರಿಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣಾ ತಯಾರಿ ಮತ್ತು ಪಕ್ಷ ಸಂಘಟನೆಗಾಗಿ ಬಿಜೆಪಿ ರೈತ ಮೋರ್ಚಾ ಸೋಮವಾರ ರಾಜ್ಯದಾದ್ಯಂತ ‘ಗ್ರಾಮ ಪರಿಕ್ರಮ ಯಾತ್ರೆ’ಗೆ ಚಾಲನೆ ನೀಡಲಿದೆ ಎಂದು ಮೋರ್ಚಾದ ರಾಜ್ಯ ಘಟಕದ ಅಧ್ಯಕ್ಷ ಎ.ಎಸ್. ಪಾಟೀಲ ನಡಹಳ್ಳಿ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ದೇಶದಾದ್ಯಂತ ಗ್ರಾಮ ಪರಿಕ್ರಮ ಯಾತ್ರೆ ಹಮ್ಮಿಕೊಳ್ಳಲಾಗಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಉತ್ತರ ಪ್ರದೇಶದ ಹಳ್ಳಿಯೊಂದರಲ್ಲಿ ಸೋಮವಾರ ಮಧ್ಯಾಹ್ನ 12 ಗಂಟೆಗೆ ಯಾತ್ರೆಗೆ ಚಾಲನೆ ನೀಡುವರು. ಅದೇ ಸಂದರ್ಭದಲ್ಲಿ ರಾಜ್ಯದಲ್ಲಿ ಬಿಜೆಪಿ 32 ಸಂಘಟನಾತ್ಮಕ ಜಿಲ್ಲೆಗಳಲ್ಲೂ ಚಾಲನೆ ದೊರಕಲಿದೆ’ ಎಂದರು.

ರಾಜ್ಯದಲ್ಲೂ ಯಾತ್ರೆ ನಡೆಸುವಂತೆ ಬಿಜೆಪಿ ಕಿಸಾನ್ ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷ ರಾಜ್‌ಕುಮಾರ್ ಚಾಹರ್ ಸೂಚನೆ ನೀಡಿದ್ದಾರೆ. ರಾಜ್ಯದಲ್ಲಿ ಬೃಹತ್ ನಗರಗಳನ್ನು ಹೊರತುಪಡಿಸಿ ಉಳಿದ ಎಲ್ಲ ಕಡೆಗಳಲ್ಲೂ ಗ್ರಾಮ ಪರಿಕ್ರಮ ಯಾತ್ರೆ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಪಕ್ಷದ ಚುನಾಯಿತ ಪ್ರತಿನಿಧಿಗಳು, ರೈತ ಮೋರ್ಚಾ ಪದಾಧಿಕಾರಿಗಳು ಸೇರಿದಂತೆ ಪ್ರಮುಖ ಮುಖಂಡರು ಈ ಅಭಿಯಾನದಲ್ಲಿ ಪಾಲ್ಗೊಳ್ಳುವರು. ಒಂದು ತಿಂಗಳ ಕಾಲ, ದಿನವೊಂದಕ್ಕೆ ಐದು ಹಳ್ಳಿಗಳಿಗೆ ಭೇಟಿ ನೀಡಲಾಗುವುದು. ಅಲ್ಲಿನ ಸಮಸ್ಯೆಗಳು ಮತ್ತು ಜನರ ಅಹವಾಲುಗಳ ಕುರಿತು ಮಾಹಿತಿ ಸಂಗ್ರಹಿಸಿ ಬಿಜೆಪಿ ರಾಷ್ಟ್ರೀಯ ಘಟಕದ ಅಧ್ಯಕ್ಷರಿಗೆ ರವಾನಿಸಲಾಗುವುದು ಎಂದರು.

ಪ್ರಾಥಮಿಕ ಶಾಲಾ ಸಹ ಶಿಕ್ಷಕರ ಬಡ್ತಿ: 13ರಿಂದ ಕೌನ್ಸೆಲಿಂಗ್

ಬೆಂಗಳೂರು: ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕರಿಂದ ಮುಖ್ಯ ಶಿಕ್ಷಕರ ಹುದ್ದೆಗೆ ಹಾಗೂ ಮುಖ್ಯ ಶಿಕ್ಷಕರ ಹುದ್ದೆಯಿಂದ ಹಿರಿಯ ಮುಖ್ಯ ಶಿಕ್ಷಕ ಹುದ್ದೆಗೆ ಫೆ. 13ರಿಂದ 26ರವರೆಗೆ ಕೌನ್ಸೆಲಿಂಗ್ ಮೂಲಕ ಬಡ್ತಿ ನೀಡಲು ಹೊಸ ವೇಳಾ ಪಟ್ಟಿಯನ್ನು ಶಾಲಾ ಶಿಕ್ಷಣ ಇಲಾಖೆ ಪ್ರಕಟಿಸಿದೆ.

2023–24ನೇ ಸಾಲಿನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ‘ಸಿ’ ವೃಂದದ ಹುದ್ದೆಗಳಿಗೆ ಬಡ್ತಿ ನೀಡುವ ಸಂಬಂಧ ಕಳೆದ ತಿಂಗಳು ನಡೆಯಬೇಕಿದ್ದ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಇಲಾಖೆಯು ಮುಂದೂಡಿತ್ತು. ಹೊಸ ವೇಳಾಪಟ್ಟಿಯ ಪ್ರಕಾರ ಫೆ. 13ರಂದು ಬಡ್ತಿಗೆ ಅಗತ್ಯವಿರುವ ಖಾಲಿ ಹುದ್ದೆಗಳನ್ನು ಜಿಲ್ಲಾ ಮಂಜೂರಾತಿ ಹುದ್ದೆಗಳಿಗೆ ಮೀರದಂತೆ ಕರ್ತವ್ಯನಿರತ ಹುದ್ದೆಗಳನ್ನು ಪರಿಗಣಿಸಿ ಅಂತಿಮವಾಗಿ ಬಡ್ತಿಗೆ ಪರಿಗಣಿಸ ಬೇಕಾದ ಖಾಲಿ ಹುದ್ದೆಗಳನ್ನು ಪ್ರಕಟಿಸಲಾಗುವುದು.

14ರಂದು ಅರ್ಹರ 1:2 ಅನುಪಾತದಲ್ಲಿ ಅಂತಿಮ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿ ಪ್ರಕಟಣೆ, 16ರಂದು ಅಂತಿಮಪಟ್ಟಿಗೆ ಬಡ್ತಿ ಮೀಸಲು ಬಿಂದು ಮತ್ತು ರೋಸ್ಟರ್ ಬಿಂದು ಗುರುತಿಸುವುದು, 15ರಿಂದ 17ರವರೆಗೆ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ, 26ರಂದು ಮುಖ್ಯ ಶಿಕ್ಷಕ ಮತ್ತು ಹಿರಿಯ ಮುಖ್ಯ ಶಿಕ್ಷಕ ಹುದ್ದೆಗೆ ಕೌನ್ಸೆಲಿಂಗ್ ನಡೆಯಲಿದೆ.

ಕುಣಿಗಲ್: ಇಂಟಿಗ್ರೇಟೆಡ್ ಟೌನ್‌ಶಿಪ್‌ಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಕುಣಿಗಲ್ ಕುದುರೆ ಫಾರಂನಲ್ಲಿ ಇಂಟಿಗ್ರೇಟೆಡ್ ಟೌನ್‌ಶಿಪ್ ನಿರ್ಮಿಸಲು ಉದ್ದೇಶಿಸಿರುವ ಯೋಜನೆಯನ್ನು ಕೂಡಲೇ ಕೈಬಿಡಬೇಕು ಎಂದು ವೃಕ್ಷ ಫೌಂಡೇಷನ್ ಮತ್ತು ಪಾರಂಪರಿಕ ಕುಣಿಗಲ್ ಕುದುರೆ ಫಾರಂ ಉಳಿವಿಗಾಗಿ ಹೋರಾಟ ಸಮಿತಿ ಆಗ್ರಹಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಸದಸ್ಯ ನಾಗಣ್ಣ, ‘ಕುಣಿಗಲ್ ತಾಲ್ಲೂಕಿನ ಜನ ಅಭಿವೃದ್ಧಿ ವಿರೋಧಿಗಳಲ್ಲ. ಸರ್ಕಾರ ಇಲ್ಲಿನ ಯುವ ಸಮುದಾಯಕ್ಕೆ ಉದ್ಯೋಗ ನೀಡಲು ಕೈಗಾರಿಕೆ, ಐಟಿ–ಬಿಟಿ ಕಂಪನಿಗಳನ್ನು ಸ್ಥಾಪಿಸುವ ಉದ್ದೇಶವಿದ್ದರೆ, ಕುಣಿಗಲ್ ತಾಲ್ಲೂಕಿನ ಬೇರೆ ಕಡೆ, ಖಾಲಿ ಇರುವ ಜಾಗದಲ್ಲಿ ಸ್ಥಾಪಿಸಬಹುದು. ಅದನ್ನು ಬಿಟ್ಟು ಐತಿಹಾಸಿಕ ಪರಂಪರೆ ಹೊಂದಿರುವ ಕುದುರೆ ಫಾರಂನಲ್ಲಿ ಇಂಟಿಗ್ರೇಟೆಡ್ ಟೌನ್‌ಶಿಪ್ ನಿರ್ಮಿಸುವ ಸರ್ಕಾರದ ನಿಲುವಿಗೆ ಕುಣಿಗಲ್‌ನ ಪ್ರತಿಯೊಬ್ಬ ಸ್ವಾಭಿಮಾನಿ ನಾಗರಿಕನ ವಿರೋಧವಿದೆ’ ಎಂದು ತಿಳಿಸಿದರು.

‘ವಿಶ್ವಕ್ಕೆ ಉತ್ತಮ ತಳಿಯ ಕುದುರೆಗಳನ್ನು ನೀಡಿರುವ ಕುಣಿಗಲ್‌ಪ್ರದೇಶವನ್ನು ಸಂರಕ್ಷಣೆ ಮಾಡುವುದು ಸರ್ಕಾರದ ಜವಾಬ್ದಾರಿ ಆಗಿದೆ. ಈ ಫಾರಂ 400 ವರ್ಷಗಳ ಇತಿಹಾಸ ಹೊಂದಿದ್ದು, ಈಗಲೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುವ ಕಾರಣ 1961ರ ಕಲಂ 2 ಮತ್ತು 3ರ ಅಡಿಯಲ್ಲಿ ಕರ್ನಾಟಕ ಐತಿಹಾಸಿಕ ಸ್ಮಾರಕಗಳ ಅಧಿನಿಯಮದ ಅನ್ವಯ ಪಾರಂಪರಿಕ ಸ್ಥಳವೆಂದು ಘೋಷಿಸಬೇಕು. ಇಲ್ಲಿ ಕುದುರೆ ತಳಿ ಸಂಶೋಧನಾ ಕೇಂದ್ರ ಸ್ಥಾಪಿಸಬೇಕು. ಇಲ್ಲಿ ಯಾವುದೇ ರೀತಿಯ ವಾಣಿಜ್ಯ ಉದ್ದೇಶದ ಕಟ್ಟಡಗಳನ್ನು ನಿರ್ಮಿಸಲು ಜಾಗ ಮಂಜೂರು ಮಾಡಬಾರದು’ ಎಂದರು.

‘421 ಎಕರೆ ಪ್ರದೇಶದಲ್ಲಿರುವ ಈ ಫಾರಂನಲ್ಲಿ ಸದ್ಯ 185 ಕುದುರೆಗಳಿದ್ದು, ಜತೆಗೆ 120 ಜನ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ, ಈ ಪಾರಂಪರಿಕ ಕುದುರೆ ಫಾರಂ ಯಥಾಸ್ಥಿತಿಯಲ್ಲಿ ಉಳಿಸಿ ಬೆಳೆಸಬೇಕು. ಈಗಾಗಲೇ ರಾಜ್ಯಸಭೆ ಸದಸ್ಯ ಎಚ್.ಡಿ. ದೇವೇಗೌಡ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಗಿದೆ’ ಎಂದರು.

ಗುಂಡಣ್ಣ

25 ವರ್ಷಗಳ ಹಿಂದೆ — ಗುರುವಾರ, 11-02-1999

● **ಗೋವಾದಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿ**

ನವದೆಹಲಿ, ಫೆ. 10 (ಪಿಟಿಐ)– ಗೋವಾದಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಗೊಳಿಸಲಾಗಿದ್ದು, ವಿಧಾನಸಭೆಯನ್ನು ವಿಸರ್ಜಿಸಲಾಗಿದೆ.

ರಾಷ್ಟ್ರಪತಿ ಆಳ್ವಿಕೆ ಜಾರಿಗೊಳಿಸಲು ಮತ್ತು ವಿಧಾನ ಸಭೆಯನ್ನು ವಿಸರ್ಜಿಸಲು ರಾಷ್ಟ್ರಪತಿಯವರು ಒಪ್ಪಿಗೆ ನೀಡಿದರು ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಗೋವಾದಲ್ಲಿ ರಾಜಕೀಯ ಅಸ್ಥಿರತೆ ಉಂಟಾಗಿರುವ ಹಿನ್ನೆಲೆಯಲ್ಲಿ ರಾಷ್ಟ್ರಪತಿ ಆಳ್ವಿಕೆ ಜಾರಿಗೊಳಿಸುವಂತೆ ಕೇಂದ್ರ ಸಚಿವ ಸಂಪುಟ ರಾಷ್ಟ್ರಪತಿಯವರಿಗೆ ನಿನ್ನೆ ಶಿಫಾರಸು ಮಾಡಿತ್ತು.

50 ವರ್ಷಗಳ ಹಿಂದೆ — ಸೋಮವಾರ, 11-02-1974

● **ದಾರಿದ್ರ್ಯದ ದವಡೆಯಲ್ಲಿ 100 ಕೋಟಿ ಜನ**

ವಿಶ್ವಸಂಸ್ಥೆ, ಫೆ. 10– ವಿಶ್ವದ ಸುಮಾರು 370 ಕೋಟಿ ಜನರಲ್ಲಿ ನೂರು ಕೋಟಿ ಜನ ಬಡತನದಲ್ಲಿ ಜೀವಿಸುತ್ತಿದ್ದಾರೆಂದು ವಿಶ್ವಸಂಸ್ಥೆ ಮಾನವೀಯ ಹಕ್ಕುಗಳ ಸಮಿತಿಯೊಂದು ವರದಿ ಮಾಡಿದೆ.

ಅಭಿವೃದ್ಧಿ ಹೊಂದದ ಅಥವಾ ಅಲ್ಪ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಬಡತನ ತಾಂಡವವಾಡುತ್ತಿದ್ದು, ಈ ರಾಷ್ಟ್ರಗಳಲ್ಲಿ ಬಹುತೇಕ ಜನರ ದೈನಿಕ ಕೊಳ್ಳುವ ಶಕ್ತಿ 30 ಸೆಂಟ್ಸ್ ಮಾತ್ರ ಎಂದು ಸಮಿತಿ ತಿಳಿಸಿದೆ.

ಇರಾನಿನ ತಜ್ಞ ಮನೂಚಹ್ರ್ ವರ್ಷಾನುಗಟ್ಟಲೆ ಅಧ್ಯಯನ ನಡೆಸಿ ವರದಿಯನ್ನು ಸಿದ್ಧಪಡಿಸಿದ್ದಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಫೆಬ್ರುವರಿ 11, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ದ್ವಿತೀಯ ಗಂ. 21-10 ನಕ್ಷತ್ರ: ಶತಭಿಷ ಗಂ. 17-40 ಯೋಗ: ಪರಿಘ ಗಂ. 10-38 ನಂತರ ಶಿವ ಗಂ. 30-30 ಕರಣ: ಬಾಲವ ಗಂ. 10-58, ಮಕರ ಮಾಸದ 28 ನೇ ದಿನ, ಮಳೆನಕ್ಷತ್ರ: ಧನಿಷ್ಠಾ 2. ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-58 **ಸೂರ್ಯಾಸ್ತ :** 06-31
ಮುಸ್ಲಿಂ ದಿನಾಂಕ : 30 ರಜಬ್
ಅದೃಷ್ಟ ಸಂಖ್ಯೆ : 8, 5

ಮೇಷ: ಉತ್ತಮ ಸಂತಾನ ಪ್ರಾಪ್ತಿಯಾಗಲಿದ್ದು, ಸಂತೃಪ್ತ ಜೀವನ ನಡೆಸುವಿರಿ. ತತ್ವ ಆದರ್ಶಗಳ ಜೊತೆಗೆ ಹಿರಿಯರ ಅನುಭವ ಸಲಹೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಿರಿ. ನಿಮ್ಮ ಸ್ಥಾನಮಾನದ ಬಗ್ಗೆ ನಿಮಗೆ ಅರಿವಿರಲಿ.

ವೃಷಭ: ಪಶುಸಂಗೋಪನೆ ಮಾಡುವವರಿಗೆ ಮನೆಯಲ್ಲಿ ಶಾಂತ ವಾತಾವರಣವಿದ್ದು ಮನಸ್ಸಿಗೆ ತುಸು ನೆಮ್ಮದಿ ಬರುವುದು. ದಿನಬಳಕೆಯ ವಸ್ತುಗಳ ಅಥವಾ ಉಡುಗೊರೆಯ ವಸ್ತುಗಳ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ ಸಿಗಲಿದೆ.

ಮಿಥುನ: ವಿದ್ಯಾಭ್ಯಾಸದಲ್ಲಿ ಉದಾಸೀನತೆ ತೋರಿದರೆ ಅನಿವಾರ್ಯವಾಗಿ ಹಿನ್ನಡೆ ಎದುರಿಸಬೇಕಾಗುವುದು. ಲೋಹ, ಪ್ಲಾಸ್ಟಿಕ್ ವಸ್ತುಗಳ ವ್ಯಾಪಾರ ನಡೆಸುವವರಿಗೆ ವ್ಯವಹಾರದಲ್ಲಿ ಲಾಭ ಇರಲಿದೆ.

ಕರ್ಕಾಟಕ: ಇತರರಿಂದಾಗಿ ನಿಮ್ಮ ಸ್ವಂತ ಕೆಲಸಗಳು ನಿಧಾನ ಗತಿಯಲ್ಲಿ ಸಾಗಲಿದೆ. ಸಾಮಾಜಿಕ ಸಮಾರಂಭದಲ್ಲಿ ಭಾಗವಹಿಸುವುದರಿಂದ ಮಗನ ಮದುವೆಯ ವಿಚಾರದಲ್ಲಿ ಅನುಕೂಲವಾಗುವುದು.

ಸಿಂಹ: ನಿಮ್ಮ ಮನೋಭಿಲಾಷೆಗೆ ಕುಟುಂಬ ವರ್ಗದವರು ಅಭಿವೃದ್ಧಿ ದಾರಿಯನ್ನು ಕಲ್ಪಿಸುವರು. ವಾಹನ ಸಂಚಾರದಲ್ಲಿ ಮಿತ ವೇಗ ಅಗತ್ಯ. ದಾಂಪತ್ಯದಲ್ಲಿರುವ ಬಿರುಕು ಹೊಂದಾಣಿಕೆಯಿಂದ ಸರಿಯಾಗುವುದು.

ಕನ್ಯಾ: ಸಹೋದ್ಯೋಗಿಗಳಲ್ಲಿ ಗೌರವಾನ್ವಿತವಾಗಿ ವರ್ತಿಸುವುದರಿಂದ ನಿಮ್ಮ ಕೆಲಸಗಳು ಸರಾಗವಾಗಿ ಸಾಗಲಿದೆ. ನಿಮ್ಮ ಸಮಯೋಚಿತವಾದ ಬುದ್ಧಿಶಕ್ತಿಯು ಸಂಕಟಗಳನ್ನು ದೂರ ಮಾಡಲಿದೆ. ಸ್ನೇಹಿತರಲ್ಲಿ ವಿಶ್ವಾಸ ವೃದ್ಧಿಯಾಗುವುದು.

ತುಲಾ: ಏಜೆನ್ಸಿಯಂತಹ ಉದ್ಯೋಗ ತೆರೆಯಲು ಸೂಕ್ತ ಸ್ಥಳದ ಹುಡುಕಾಟದ ಕೆಲಸ ಆರಂಭಿಸುವಿರಿ. ಗಾಯನ ಅಥವಾ ಅಭಿನಯ ಕಲಿಯಲು ಆಸಕ್ತಿ ಉಂಟಾಗುವುದು. ಕಟ್ಟಡದ ಕೆಲಸಗಳು ಪೂರ್ಣಗೊಳ್ಳುವವು.

ವೃಶ್ಚಿಕ: ಗುರಿ ಮುಟ್ಟುವತ್ತ ನಿಮ್ಮ ಹಾದಿಯನ್ನು ಮತ್ತೊಮ್ಮೆ ಪರಿಶೀಲಿಸಿದರೆ ಯೋಜನೆಗಳು ನೀವು ಆಲೋಚಿಸಿದಕ್ಕಿಂತಲೂ ಹೆಚ್ಚು ಪ್ರಾಯೋಗಿಕವಾಗಿರುವವು. ಮೂಳೆಗೆ ಸಂಬಂಧಿಸಿದ ಸಮಸ್ಯೆಯನ್ನು ನಿರ್ಲಕ್ಷಿಸಬೇಡಿ.

ಧನು: ಮಾತೃವರ್ಗದವರಿಂದ ಅಯಾಚಿತವಾಗಿ ನೆರವು ಸಿಕ್ಕಿ ಅನ್ಯರಲ್ಲಿನ ಋಣ ಪರಿಹಾರವಾಗಲಿದೆ. ನಿವೃತ್ತಿಯ ನಂತರದ ಕೆಲಸಗಳ ಬಗ್ಗೆ ಹೆಂಡತಿಯೊಡನೆ ಚರ್ಚೆ ನಡೆಸುವಿರಿ. ಮಕ್ಕಳ ವಿದ್ಯಾಭ್ಯಾಸ ನಿರಾತಂಕವಾಗಿ ಸಾಗುತ್ತದೆ.

ಮಕರ: ವೈದ್ಯರು ನೀಡಿದ ಸಲಹೆಯನ್ನು ಚಾಚೂ ತಪ್ಪದೆ ಆಚರಿಸುವುದರಿಂದ ಆರೋಗ್ಯವನ್ನು ಹಿಡಿತದಲ್ಲಿ ಇರಿಸಿಕೊಳ್ಳಬಹುದು. ಗುತ್ತಿಗೆದಾರರಿಂದ ಗೃಹ ನಿರ್ಮಾಣದ ವಿಚಾರದಲ್ಲಿ ಪುನಃ ಪುನಃ ಪಾಠ ಕಲಿಯುವಂತಾಗುವುದು.

ಕುಂಭ: ನೀವು ಹಿಂದೆ ಮಾಡಿದ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಿದರೆ ಲೇಸು. ನಿಮ್ಮಲ್ಲಿರುವ ಉದ್ವೇಗ ಹಾಗೂ ಕೆಲ ವೈಮನಸ್ಯಗಳು ದೂರಾಗುವುದು. ಆರೋಗ್ಯದಲ್ಲಿ ಮತ್ತು ಧನವ್ಯಯದಲ್ಲಿ ಗಮನವಿರಲಿ.

ಮೀನ: ಭೂಮಿಯ ಅದರಲ್ಲೂ ಕೃಷಿ ಭೂಮಿಯ ಖರೀದಿ, ಮಾರಾಟದಂತಹ ವ್ಯವಹಾರದಿಂದ ಅಧಿಕ ಲಾಭವಿದೆ. ಹಿಂದಿನ ದಿನಗಳ ಪರಿಶ್ರಮದ ಫಲವನ್ನು ಈ ದಿನ ಪಡೆಯುವ ಸಾಧ್ಯತೆ ಇದೆ. ಮಹಾಗಣಪತಿಯನ್ನು ಪೂಜಿಸಿ.

ಪದಬಂಧ 5588 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಭಾವಚಿತ್ರವನ್ನು ತೆಗೆಯುವವನು (4)
3.ಈ ಪರಿ ಎಲ್ಲವನ್ನೂ ಬಿಟ್ಟುಬಿಡುವಿಕೆ! (4)
5.ಕಾರಿನಲ್ಲಿ ಕುಳಿತು ಆಡಿರುವ ಬೇಟಿ! (3)
6.ಬೀಜ ಬಿತ್ತಲು ಮಾಡಿರುವ ಮಡಿ (2)
7.ನೆನಪಲ್ಲೇ ಇರುವ ಕಾರಣ (2)
9.ರಜತಕ್ಕಂಟಿದ ಧೂಳು (2)
11.ಏಳು ದಿನಗಳ ಅವಧಿಯಿದು (2)
12.ಗ್ರಂಥದ ಮೂಲಪ್ರತಿ (3)
14.ಒಳ್ಳೆಯ ಶಿಕ್ಷಣ ಪಡೆದವನು (4)
15.ಮರ್ಯಾದೆ ನಡುವಿದ್ದಾಗ ಸರಿಸಮವಾಗಿರುವಿಕೆ! (4)

ಮೇಲಿಂದ ಕೆಳಕ್ಕೆ
1.ಅಚ್ಚು ಮಾಡುವ ಸ್ಥಳ (4)
2.ಹಿತಚಿಂತಕ ಇಲ್ಲಿದ್ದಾನೆ (3)
3.ಈ ಪರಿ ಓಡಿ ಹೋಗುವಿಕೆ! (3)
4.ಗರ ಬಡಿದಂತಿರುವ ಪತಿವ್ರತೆ (3)
6.ಟಪಾಲು ಹಿಡಿದಿರುವ ಭಾಗಸ್ಥ (4)
8. ಕರದಲ್ಲಿ ಹಿಡಿದಿರುವ ಸಾಮಾನು (4)
10.ಬಳ್ಳಿ ಕೊನೆಗಿದ್ದಾಗಿನ ಸಂಕೀರ್ಣತೆ (4)
11.ವಾರದ ಮೊದಲೇ ದೊರೆತಿರುವ ಒಡೆತನ (3)
12.ವಿಕ್ರಯಿಸು ಎಂದಾಗ ಬೀಸಿದ ಗಾಳಿ (3)
13.ಕೆಲವರು ಮಾಡುವ ಕಾರ್ಯ (3)



5587ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಮಾಣು 4.ಬಡನಡು
6.ಪಲ್ಲವಿ 8.ಮಸಣ
9.ಜ್ಞಾತಿಕಲಹ 10.ಪಾವನ
11.ತ್ವರಿತ 13.ಪಡಪೋಸಿ
15.ಆರೋಪಣೆ

ಮೇಲಿಂದ ಕೆಳಕ್ಕೆ:
1.ಪರಿತಾಪ 2.ಲಬ
3.ಕಡುಜಾಣ 5.ಏಕೀಕರಣ
7.ವಿಜ್ಞಾನ 8.ಮಹತ್ವ
10.ಪಾರುಪತ್ಯ 12.ತಪಾಸಣೆ
14.ಸಿಪ್ಪೆ

ಸುಡೊಕು 5973

	7	6		4				9
			6		9			2
2		4		7		3		
7	8						5	
			4			6		7
6		5		8			2	
		7	2				9	
				1	7		3	6
9		1		5		2		4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5972 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರೊ.ಎಂ.ಡಿ. ನಂಜುಂಡಸ್ವಾಮಿ ನೆನಪು, ರೈತ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರಿನಲ್ಲಿ ಶನಿವಾರ ನಡೆದ ಪ್ರೊ.ಎಂ.ಡಿ. ನಂಜುಂಡಸ್ವಾಮಿ ನೆನಪು ಹಾಗೂ ರೈತ ಸಮಾವೇಶದಲ್ಲಿ ವಿವಿಧ ಜಿಲ್ಲೆಗಳಿಂದ ಬಂದಿದ್ದ ರೈತರು ಹಸಿರು ಶಾಲು ಬೀಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: 'ಭೂ ಸುಧಾರಣಾ ಕಾಯ್ದೆ-2020ಕ್ಕೆ ತಿದ್ದುಪಡಿ ತರುವಂತೆ ರೈತರಿಂದ ಬೇಡಿಕೆಯಿದ್ದು ಸದ್ಯದಲ್ಲೇ ಆ ಕಾಯ್ದೆಗೆ ತಿದ್ದುಪಡಿ ತರಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ರಾಜ್ಯ ರೈತ ಸಂಘ ಶನಿವಾರ ಇಲ್ಲಿ ಆಯೋಜಿಸಿದ್ದ ಪ್ರೊ.ಎಂ.ಡಿ.ನಂಜುಂಡಸ್ವಾಮಿ ನೆನಪು, ರೈತ ಸಮಾವೇಶ ಹಾಗೂ ರೈತರ ಪರ ಬಜೆಟ್ ರೂಪಿಸಲು ಹಕ್ಕೊತ್ತಾಯ ಮಂಡನಾ ಸಭೆಯಲ್ಲಿ ಅವರು ಮಾತನಾಡಿದರು.

'ಎಪಿಎಂಸಿ ಕಾಯ್ದೆಗೂ ತಿದ್ದುಪಡಿ ತರಲಾಗಿದೆ. ಆಕ್ಷೇಪಣೆಗಳು ಬಂದ ಕಾರಣಕ್ಕೆ ಜಂಟಿ ಸದನ ಸಮಿತಿ ರಚಿಸಲಾಗಿದೆ. ಸಮಿತಿ ವರದಿ ಬಂದ ಬಳಿಕ ಮತ್ತೆ ಉಭಯ ಸದನಗಳಲ್ಲಿ ಮಸೂದೆ ಮಂಡಿಸಲಾಗುವುದು' ಎಂದು ಹೇಳಿದರು.

'ಕೃಷಿಕರ ಗಂಡು ಮಕ್ಕಳ ಮದುವೆಗೆ ವಧು ಸಿಗುತ್ತಿಲ್ಲ ಎಂದು ರೈತ ಮುಖಂಡರು ಗಮನ ಸೆಳೆದಿದ್ದಾರೆ. ಮೂಲತಃ ಎಲ್ಲರೂ ಕೃಷಿಕರ ಮಕ್ಕಳೇ. ಕೃಷಿಯನ್ನು ಲಾಭದಾಯಕ ಮಾಡಿದರೆ, ರೈತರು ಎದುರಿಸುತ್ತಿರುವ ಕೆಲವು ಸಮಸ್ಯೆಗಳಿಗೆ ಪರಿಹಾರ ದೊರೆಯಲು ಸಾಧ್ಯ. ಬಜೆಟ್‌ನಲ್ಲಿ ರೈತ ಪರ ಯೋಜನೆಗಳಿಗೆ ಆದ್ಯತೆ ಸಿಗಲಿದೆ' ಎಂದು ಹೇಳಿದರು.

'ಕೃಷಿ ಅವಲಂಬಿತರ ಸಂಖ್ಯೆ ಶೇ 80ರಿಂದ ಶೇ 60ಕ್ಕೆ ಇಳಿಕೆಯಾಗಿದೆ. ಕೃಷಿ ಕ್ಷೇತ್ರಕ್ಕೆ ಇನ್ನಷ್ಟು ಪ್ರೋತ್ಸಾಹ ನೀಡುವುದು ಅಗತ್ಯ' ಎಂದು ಪ್ರತಿಪಾದಿಸಿದರು.

ರಾಜ್ಯ ರೈತ ಸಂಘದ ಗೌರವಾಧ್ಯಕ್ಷ ಚಾಮರಸ ಮಾಲೀಪಾಟೀಲ ಮಾತನಾಡಿ, 'ರಾಜ್ಯದಲ್ಲಿ ನೀರಿನ ಸಮಸ್ಯೆ ತೀವ್ರವಾಗಿದೆ. ಬಗರ್‌ಹುಕುಂ ಸಾಗುವಳಿ ಪತ್ರ ಪಡೆಯಲು ಅರಣ್ಯಾಧಿಕಾರಿಗಳು ಅಡ್ಡಗಾಲು ಹಾಕುತ್ತಿದ್ದಾರೆ. ಕಂದಾಯ ಇಲಾಖೆಯಲ್ಲಿ ರೈತರಿಗೆ ಸಂಬಂಧಿಸಿದ ಕೆಲಸಗಳನ್ನು ಅಧಿಕಾರಿಗಳು ಮಾಡಿಕೊಡುತ್ತಿಲ್ಲ' ಎಂದು ಆಪಾದಿಸಿದರು.

'₹5 ಲಕ್ಷ ಪ್ರೋತ್ಸಾಹಧನ ಕೊಡಿ': 'ಕೃಷಿಕರ ಮಕ್ಕಳನ್ನು ಮದುವೆಯಾಗುವ ಹೆಣ್ಣು ಮಕ್ಕಳಿಗೆ ₹5 ಲಕ್ಷ ಪ್ರೋತ್ಸಾಹಧನ ನೀಡುವ ಯೋಜನೆಯನ್ನು ಫೆ.16ರಂದು ಬಜೆಟ್‌ನಲ್ಲಿ ಘೋಷಿಸಬೇಕು' ಎಂದು ಸಂಘದ ರಾಜ್ಯ ಅಧ್ಯಕ್ಷ ಬಡಗಲಪುರ ನಾಗೇಂದ್ರ ಆಗ್ರಹಿಸಿದರು.

'ಕೋವಿಡ್–19 ನಂತರ ಯುವಕರು ಕೃಷಿಯತ್ತ ಆಸಕ್ತಿ ತೋರುತ್ತಿದ್ದಾರೆ. ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ₹20 ಲಕ್ಷದ ವರೆಗೆ ಪ್ರೋತ್ಸಾಹಧನ ನೀಡಬೇಕು' ಎಂದು ಒತ್ತಾಯಿಸಿದರು.

ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ, ಮುಖ್ಯಮಂತ್ರಿ ಸಲಹೆಗಾರ ಬಿ.ಆರ್‌.ಪಾಟೀಲ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ಶಾಸಕ ದರ್ಶನ್ ಪುಟ್ಟಣ್ಣಯ್ಯ, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಹಾಜರಿದ್ದರು.

'ಪೊಲೀಸರಿಂದ ಎರಡು ಬಾರಿ ಪೆಟ್ಟು ತಿಂದಿದ್ದೆ'

'ನಾನು ಕಾನೂನು ಪದವಿ ಪಡೆಯುತ್ತಿದ್ದ ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ನಂಜುಂಡಸ್ವಾಮಿ ಅವರು ಪ್ರಾಧ್ಯಾಪಕರಾಗಿದ್ದರು. ನಿತ್ಯ ಸಂಜೆ ಕ್ಯಾಂಟೀನ್‌ನಲ್ಲಿ ಸೇರಿ ರಾಜಕೀಯ ವಿಚಾರಗಳ ಬಗ್ಗೆ ಚರ್ಚೆ ಮಾಡುತ್ತಿದ್ದೆವು. ಅವರ ಮುಂದಾಳತ್ವದಲ್ಲಿ ಪ್ರತಿಭಟನೆ ನಡೆಸಿದಾಗ ನಾನೂ ಎರಡು ಬಾರಿ ಪೊಲೀಸರಿಂದ ಪೆಟ್ಟು ತಿಂದಿದ್ದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಿಂದಿನ ಘಟನಾವಳಿಗಳನ್ನು ನೆನಪಿಸಿಕೊಂಡರು.

'ನಾನು ರಾಜಕೀಯ ಕ್ಷೇತ್ರಕ್ಕೆ ಬರುವುದಕ್ಕೂ ಮೊದಲು ರೈತ ಸಂಘದ ಪ್ರಧಾನ ಕಾರ್ಯದರ್ಶಿಯಾಗಿದ್ದೆ. ನಂತರ, ಚುನಾವಣೆಗೆ ಸ್ಪರ್ಧಿಸಲು ನಿರ್ಧರಿಸಿದಾಗ ರೈತ ಸಂಘದಿಂದ ನನ್ನನ್ನು ಉಚ್ಚಾಟನೆ ಮಾಡಲಾಗಿತ್ತು' ಎಂದು ಹೇಳಿದರು.

ಸಮಾವೇಶದ ಪ್ರಮುಖ ನಿರ್ಣಯಗಳು

- ಬರ ಪರಿಹಾರಕ್ಕೆ ಅನುದಾನ ಕಲ್ಪಿಸದ ಕೇಂದ್ರ ಸರ್ಕಾರದ ಕ್ರಮಕ್ಕೆ ಖಂಡನೆ
- ಪ್ರತಿ ಹೆಕ್ಟೇರ್‌ಗೆ ₹25 ಸಾವಿರ ಬರ ಪರಿಹಾರ ಒದಗಿಸಲು ಆಗ್ರಹ
- ಕೃಷಿ ಬೆಲೆ ಆಯೋಗ ಸಬಲೀಕರಣಕ್ಕೆ ಒತ್ತಾಯ. ಆಯೋಗದ ಅಧ್ಯಕ್ಷರಾಗಿ ಕೃಷಿ ತಜ್ಞರನ್ನೇ ನೇಮಿಸಲು ಪಟ್ಟು
- ಕೊಡಗು, ಚಿಕ್ಕಮಗಳೂರು, ಹಾಸನ ಜಿಲ್ಲೆಯ ಕಾಫಿ ಬೆಳೆಗಾರರಿಗೂ ಉಚಿತ ವಿದ್ಯುತ್ ನೀಡಬೇಕು
- ತುಮಕೂರು ಜಿಲ್ಲೆಯಲ್ಲಿ ವಿಮಾನ ನಿಲ್ದಾಣಕ್ಕಾಗಿ ಜಮೀನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಸ್ಥಗಿತಗೊಳಿಸಬೇಕು

'ಪ್ರಣಾಳಿಕೆಯಲ್ಲಿ ಅನಾಹುತ ತಡೆಯುವ ಘೋಷಣೆ'

ಬೆಂಗಳೂರು: 'ದೇಶದ ಸಂವಿಧಾನ, ಪ್ರಜಾಪ್ರಭುತ್ವ, ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುವ ಯತ್ನ ನಡೆಯುತ್ತಿದ್ದು, ಈ ಅನಾಹುತಗಳನ್ನು ತಡೆಯುವ ಪರಿಣಾಮಕಾರಿ ಘೋಷಣೆ, ಕಾರ್ಯಕ್ರಮಗಳನ್ನು ಚುನಾವಣಾ ಪ್ರಣಾಳಿಕೆ ಒಳಗೊಂಡಿರಲಿದೆ' ಎಂದು ಲೋಕಸಭೆ ಚುನಾವಣೆಯ ಕಾಂಗ್ರೆಸ್ ಪ್ರಣಾಳಿಕೆ ಸಮಿತಿ ಸದಸ್ಯರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕ್ಯಾಪಿಟಲ್ ಹೋಟೆಲ್‌ನಲ್ಲಿ ಶನಿವಾರ ನಡೆದ ಸಮಿತಿಯ ಸಭೆಯಲ್ಲಿ ಮಾತನಾಡಿದ ಅವರು, 'ದೇಶದ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ವಾಗ್ದಾನಗಳನ್ನು ಕೊಡಬೇಕು ಮತ್ತು ಅವುಗಳನ್ನು ಈಡೇರಿಸಬೇಕು. ಜನರ ವಿಶ್ವಾಸ ಉಳಿಸಿಕೊಳ್ಳುವಂಥ ವಾಗ್ದಾನಗಳನ್ನು ನೀಡಬೇಕು ಎನ್ನುವುದು ಕಾಂಗ್ರೆಸ್ ಬದ್ಧತೆ' ಎಂದರು.

'ದೇಶದ ಅಭಿವೃದ್ಧಿ, ಜಾರಿಯಾಗಿರುವ ಸಾಮಾಜಿಕ ಭದ್ರತೆ, ಆಹಾರ ಭದ್ರತೆ ಕಾರ್ಯಕ್ರಮಗಳಲ್ಲಿ ಬಹುತೇಕ ಎಲ್ಲವೂ ಕಾಂಗ್ರೆಸ್ ಅವಧಿಯವು. ಆಹಾರ ಭದ್ರತಾ ಕಾಯ್ದೆ, ಶಿಕ್ಷಣ ಹಕ್ಕು ಮತ್ತು ಮಾಹಿತಿ ಹಕ್ಕು ಕಾಯ್ದೆಗಳು ಮನಮೋಹನ್ ಸಿಂಗ್ ಅವರ ಅವಧಿಯಲ್ಲಿ ಜಾರಿ ಆದವು' ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, 'ಎಲ್ಲರಿಂದ ಅಭಿಪ್ರಾಯ ಸಂಗ್ರಹಿಸಿ, ಅವುಗಳ ಆಧಾರದಲ್ಲಿ ಪಕ್ಷದ ಪ್ರಣಾಳಿಕೆಯನ್ನು ಸಿದ್ಧಪಡಿಸಲಾಗುವುದು' ಎಂದರು.

'ಬಡವರಿಗೆ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಉತ್ತೇಜನ ನೀಡುವ ಯಾವುದೇ ಕಾರ್ಯಕ್ರಮಗಳಿದ್ದರೂ ಅವುಗಳನ್ನು ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿದೆ. ಕಳೆದ ಲೋಕಸಭೆ ಚುನಾವಣೆ ಸಮಯದಲ್ಲಿ 'ನ್ಯಾಯ್' ಯೋಜನೆ ಪರಿಚಯಿಸಿದ್ದೆವು' ಎಂದರು.

ಸಭೆಯಲ್ಲಿ ಮಾತನಾಡಿದ ಇತರರು, 'ರಾಷ್ಟ್ರಮಟ್ಟದಲ್ಲಿ ಜಾತಿ ಸಮೀಕ್ಷೆ ನಡೆಸಬೇಕು, ಎನ್‌ಡಿಎ ರದ್ದುಪಡಿಸಿರುವ ದಲಿತ ಸಮುದಾಯದ ಮಕ್ಕಳ ಶಿಷ್ಯವೇತನ ಮರು ಜಾರಿ ಮಾಡಬೇಕು, ರಾಷ್ಟ್ರಮಟ್ಟದಲ್ಲಿ ಪರಿಶಿಷ್ಟ ಸಮುದಾಯದ ಯೋಜನೆಗಳಿಗೆ ವಿಶೇಷ ಅನುದಾನ ಮೀಸಲಿಡಬೇಕು, ಅಲೆಮಾರಿ, ಅರೆ ಅಲೆಮಾರಿ ಸಮುದಾಯವನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕು' ಮುಂತಾದ ಸಲಹೆ ನೀಡಿದರು.

ಎಐಸಿಸಿ ಮುಖಂಡರೂ, ಪ್ರಣಾಳಿಕೆ ಸಮಿತಿ ಸದಸ್ಯರೂ ಆದ ರಾಜಾ, ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆಯ (ಯೋಜನಾ ಮಂಡಳಿ) ಉಪಾಧ್ಯಕ್ಷ ರಾಜೀವ್ ಗೌಡ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಪ್ರಣಾಳಿಕೆ ಸಮಿತಿ ಮುಖ್ಯಸ್ಥ ಮೆಹರೂಜ್ ಖಾನ್ ಸಭೆಯಲ್ಲಿದ್ದರು. ಕಾಂಗ್ರೆಸ್ ಪಕ್ಷದ ಪ್ರಣಾಳಿಕೆ ಸಮಿತಿ ಅಧ್ಯಕ್ಷ ಪಿ. ಚಿದಂಬರಂ ಗೈರಾದರು.

89 ವರ್ಷದ ಅಜ್ಜನಿಗೆ ಪಿಎಚ್‌.ಡಿ ಪದವಿ

ಧಾರವಾಡ: ಬರೋಬ್ಬರಿ 89 ವರ್ಷದ ದೊಡಮನಿ ಮಾರ್ಕಂಡೇಯ ಯಲ್ಲಪ್ಪ ಮಂಡಿಸಿದ 'ಶಿವಶರಣ ಡೋಹರ ಕಕ್ಕಯ್ಯ: ಒಂದು ಅಧ್ಯಯನ' ಮಹಾಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಪಿಎಚ್‌.ಡಿ ಪದವಿಗೆ ಅಂಗೀಕರಿಸಿದೆ. ಇಳಿ ವಯಸ್ಸಿನಲ್ಲಿ ಅವರು 18 ವರ್ಷ ಅಧ್ಯಯನ ನಡೆಸಿದ್ದಾರೆ.

2006 ನವೆಂಬರ್‌ನಲ್ಲಿ ಪಿಎಚ್‌.ಡಿ ಅಧ್ಯಯನಕ್ಕೆ ಮಾರ್ಕಂಡೇಯ ನೋಂದಣಿ ಮಾಡಿಸಿದರು. ಆದರೆ, ಮಾರ್ಗದರ್ಶಕರಾಗಿದ್ದ ಕರ್ನಾಟಕ ಕಾಲೇಜಿನ ಪ್ರೊ.ತಳವಾರ ನಿಧನರಾದರು. ನಂತರ, ಕರ್ನಾಟಕ ವಿಶ್ವವಿದ್ಯಾಲ ಯದ ಸಹಾಯಕ ಪ್ರಾಧ್ಯಾಪಕ ನಿಂಗಪ್ಪ ಎನ್. ಹಳ್ಳಿ (ನಿಂಗಪ್ಪ ಮುದೇನೂರು) ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಮುಂದುವರಿಸಿದರು. ಮಾರ್ಕಂಡೇಯ ಮಹಾಪ್ರಬಂಧ ಸಿದ್ಧಪಡಿಸಿ ಕಳೆದ ವರ್ಷ ನವೆಂಬರ್ 9ರಂದು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದರು. ಮೌಖಿಕ ಪರೀಕ್ಷೆ ಈಚೆಗೆ ನಡೆದು, ಫೆಬ್ರುವರಿ 8ರಂದು ಪದವಿಗೆ ಅಂಗೀಕರಿಸಲಾಯಿತು.

'ಬೆಳಗಾವಿ ಜಿಲ್ಲೆಯ ರಾಮದುರ್ಗದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ವೃತ್ತಿ ಆರಂಭಿಸಿದ ನನಗೆ ನಂತರ ಧಾರವಾಡಕ್ಕೆ ವರ್ಗಾವಣೆ ಯಾಯಿತು. ಧಾರವಾಡದಲ್ಲಿ ಪಿಯುಸಿ, ಬಿ.ಎ, ಎಂ.ಎ, ಬಿ.ಇಡಿ ಅಧ್ಯಯನ ಮಾಡಿದೆ. ಡಯೆಟ್ ಪ್ರಶಿಕ್ಷಕನಾಗಿ ಕಾರ್ಯನಿರ್ವಹಿಸಿ 1994ರಲ್ಲಿ ನಿವೃತ್ತನಾದೆ. ಈವರೆಗೆ 26 ಕೃತಿಗಳನ್ನು ಬರೆದಿದ್ದೇನೆ.

ಮಹಾಪ್ರಬಂಧದ ಪ್ರತಿಯನ್ನು ಮಾರ್ಕಂಡೇಯ ಅವರು ನಿಂಗಪ್ಪ ಮುದೇನೂರು ಅವರಿಗೆ ನೀಡಿದರು

ಮಾರ್ಕಂಡೇಯ ಅವರಂತೆ 89 ವರ್ಷ ವಯಸ್ಸಿನಲ್ಲಿ ಪಿಎಚ್‌.ಡಿ ಪಡೆದವರು ರಾಜ್ಯದ ಇತರ ಯಾವ ವಿ.ವಿಯಲ್ಲೂ ಇರಲಿಕ್ಕಿಲ್ಲ
ಪ್ರೊ.ಕೆ.ಬಿ.ಗುಡಸಿ
ಕುಲಪತಿ, ಕರ್ನಾಟಕ ವಿಶ್ವವಿದ್ಯಾಲಯ

'ಸಮಗಾರ ಹರಳಯ್ಯ' ಕುರಿತು ಪತ್ರಿಕೆಯೊಂದನ್ನು ನಿರ್ವಹಿಸುತ್ತಿದ್ದೇನೆ' ಎಂದು ಮಾರ್ಕಂಡೇಯ ತಿಳಿಸಿದರು.

'ನನಗಿಂತ 36 ವರ್ಷ ಹಿರಿಯರಾದ ಮಾರ್ಕಂಡೇಯ ಅವರಿಗೆ ಮಾರ್ಗದರ್ಶನ ನೀಡಿದ್ದು ಮರೆಯಲಾಗದ ಕಾರ್ಯ. ಡೋಹರ ಕಕ್ಕಯ್ಯ ಅವರದ್ದು ಆರು ವಚನಗಳು ಮಾತ್ರ ಇವೆ. ಶರಣ ಚಳವಳಿಯಲ್ಲಿ ಕಕ್ಕಯ್ಯ ಅವರು ವಚನ ಸಾಹಿತ್ಯವನ್ನು ಕಾಪಿಟ್ಟು ಸಂರಕ್ಷಿಸಿದರು. ಾರ್ಕಂಡೇಯ ಅವರು ಕ್ಷೇತ್ರ ಕಾರ್ಯದಲ್ಲಿ ಇಡೀ ರಾಜ್ಯವನ್ನು ಸುತ್ತಾಡಿ ಎಲ್ಲ ಮಾಹಿತಿ ಕಲೆ ಹಾಕಿ ಮಹಾಪ್ರಬಂಧ ಸಿದ್ಧಪಡಿಸಿದ್ದಾರೆ' ಎಂದು ನಿಂಗಪ್ಪ ಮುದೇನೂರು ತಿಳಿಸಿದರು.

ಫೆ.15ಕ್ಕೆ ಹಾಜರಾಗಲು ಸೂಚನೆ • ಇಂತಹ ನೂರು ಎಫ್‌ಐಆರ್ ದಾಖಲಾದರೂ ಬಗ್ಗಲ್ಲ: ಬಿಜೆಪಿ ನಾಯಕ

ವಿಚಾರಣೆಗೆ ಹಾಜರಾಗಲು ಈಶ್ವರಪ್ಪಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ದೇಶ ವಿಭಜನೆಯ ಹೇಳಿಕೆ ನೀಡುವವರನ್ನು ಗುಂಡಿಕ್ಕಿ ಕೊಲ್ಲುವ ಕಾನೂನು ಜಾರಿಗೊಳಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಗ್ರಹಿಸುತ್ತೇನೆ ಎಂದು ಹೇಳಿದ್ದ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಅವರಿಗೆ ದಾವಣಗೆರೆ ಪೊಲೀಸರು ನೋಟಿಸ್ ನೀಡಿದ್ದಾರೆ.

ಶಿವಮೊಗ್ಗದ ಗುಂಡಪ್ಪ ಶೆಡ್‌ನ ಮಲ್ಲೇಶ್ವರ ಬಡಾವಣೆಯಲ್ಲಿರುವ ಈಶ್ವರಪ್ಪ ನಿವಾಸಕ್ಕೆ ಶನಿವಾರ ಭೇಟಿ ನೀಡಿದ ದಾವಣಗೆರೆಯ ಬಡಾವಣೆ ಠಾಣೆಯ ಪಿಎಸ್‌ಐ ಲತಾ ನೋಟಿಸ್ ನೀಡಿದರು. ಫೆಬ್ರುವರಿ 15ರಂದು ವಿಚಾರಣೆಗಾಗಿ ಠಾಣೆಗೆ ಹಾಜರಾಗುವಂತೆ ನೋಟಿಸ್‌ನಲ್ಲಿ ಸೂಚಿಸಲಾಗಿದೆ.

ನೋಟಿಸ್ ಕುರಿತು ಶನಿವಾರ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಈಶ್ವರಪ್ಪ, 'ದೇಶ ವಿಭಜನೆಯ ಮಾತನಾಡಿರುವ ಸಂಸದ ಡಿ.ಕೆ. ಸುರೇಶ್ ಅವರನ್ನು ಬಂಧಿಸುವುದನ್ನು ಬಿಟ್ಟು ಪೊಲೀಸರು ನನಗೆ ನೋಟಿಸ್ ಕೊಟ್ಟಿರುವುದು ಏಕೆ' ಎಂದು ಪ್ರಶ್ನಿಸಿದರು. 'ಕಾಂಗ್ರೆಸ್ಸಿಗರು ನನ್ನ ಹೇಳಿಕೆ ತಿರುಚಿದ್ದಾರೆ. ಡಿ.ಕೆ. ಸುರೇಶ್ ಅವರನ್ನೇ ಗುಂಡಿಕ್ಕಿ ಕೊಲ್ಲುವಂತೆ ನಾನು ಹೇಳಿರುವುದಾಗಿ ಬಿಂಬಿಸಿದ್ದಾರೆ. ಇಂತಹ ನೂರು ಎಫ್‌ಐಆರ್ ದಾಖಲಿಸಿದರೂ ದೇಶ ಭಕ್ತನಾದ ನಾನು ಹೆದರುವುದಿಲ್ಲ' ಎಂದು ಗುಡುಗಿದರು.

'ದೇಶ ವಿಭಜನೆಯ ಹೇಳಿಕೆ ನೀಡುವವರಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಹೇಳುವುದು ತಪ್ಪೇ. ರಾಜ್ಯದ ಜನ ಇದನ್ನು ತೀರ್ಮಾನಿಸಲಿ. ಕಾಂಗ್ರೆಸ್ ನಾಯಕರು ಡಿ.ಕೆ. ಸುರೇಶ್ ಅವರ ಕಿವಿ ಹಿಂಡುವುದನ್ನು ಬಿಟ್ಟು ನನ್ನ ಹೇಳಿಕೆಯನ್ನು ಟೀಕಿಸುತ್ತಿರುವುದು ಅತ್ಯಂತ ಖಂಡನೀಯ. ಮೊದಲು ಅವರಿಗೆ ನೋಟಿಸ್ ಕೊಡಲಿ' ಎಂದು ಆಗ್ರಹಿಸಿದರು.

'ನನ್ನ ವಿರುದ್ಧ ಎಷ್ಟೇ ಕೇಸು ಹಾಕಿದರೂ ಹೆದರುವುದಿಲ್ಲ. ನನಗೆ ಯಾವ ಕೇಸ್‌ನಲ್ಲಿಯೂ ದಂಡ ಹಾಕಿಲ್ಲ, ಶಿಕ್ಷೆಯೂ ಆಗಿಲ್ಲ. ಹತ್ತಾರು ಕೇಸುಗಳಲ್ಲಿ ನನಗೆ ನ್ಯಾಯ ಸಿಕ್ಕಿದೆ. ಈ ಕೇಸಿನಲ್ಲಿಯೂ ನ್ಯಾಯ ಸಿಗುತ್ತದೆ' ಎಂದರು.

ನೀವೇ ಗುಂಡು ಹೊಡೆಯಿರಿ: ಸಂಸದ ಸುರೇಶ್

ಬೆಂಗಳೂರು: 'ಈಶ್ವರಪ್ಪ ಅವರ ಮನೆಗೆ ನಾನೇ ಹೋಗುತ್ತೇನೆ. ಅವರೇ ನನಗೆ ಗುಂಡು ಹೊಡೆಯಲಿ' ಎಂದು ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಅವರಿಗೆ ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ಸವಾಲು ಹಾಕಿದರು.

ಫೆ.8ರಂದು ದಾವಣಗೆರೆಯಲ್ಲಿ ನಡೆದ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷರ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದ್ದ ಈಶ್ವರಪ್ಪ, 'ದೇಶ ವಿಭಜನೆಯ ಹೇಳಿಕೆ ನೀಡುವವರನ್ನು ಗುಂಡಿಕ್ಕಿ ಕೊಲ್ಲುವ ಕಾನೂನು ತರುವಂತೆ ಪ್ರಧಾನಿಯವರನ್ನು ಒತ್ತಾಯಿಸುತ್ತೇನೆ' ಎಂದಿದ್ದರು.

ಈ ಹೇಳಿಕೆಗೆ ಶನಿವಾರ ಪ್ರತಿಕ್ರಿಯಿಸಿದ ಸುರೇಶ್, 'ಮಹಾತ್ಮ ಗಾಂಧಿ ಅವರನ್ನು ಕೊಂದ ಪಕ್ಷ ಅವರದ್ದು. ನಾನೊಬ್ಬ ಸಣ್ಣ ವ್ಯಕ್ತಿ. ಕನ್ನಡಿಗರ ಪರ ಮಾತನಾಡಿದ್ದಕ್ಕೆ ಹೀಗೆ ಹೇಳಿರಬಹುದು' ಎಂದರು.

'ಇಂತಹ ಹೇಳಿಕೆ ನೀಡುವ ಮೂಲಕ ಬಡವರ ಮಕ್ಕಳನ್ನು ಯಾಕೆ ಬಾವಿಗೆ ತಳ್ಳುತ್ತೀರಿ' ಎಂದು ಪ್ರಶ್ನಿಸಿದ ಸುರೇಶ್, 'ನಾನೇ ಸಮಯ ಕೊಡುತ್ತೇನೆ. ಒಂದು ವಾರದಲ್ಲಿ ಯಾವಾಗ ಎಂದೂ ಹೇಳುತ್ತೇನೆ. ನಾನೇ ಈಶ್ವರಪ್ಪ ಅವರ ಮನೆಗೆ ಹೋಗುತ್ತೇನೆ. ಅವರೇ ನನಗೆ ಗುಂಡು ಹೊಡೆಯಲಿ. ಬಡವರ ಮಕ್ಕಳನ್ನು ಅವರು ರೊಚ್ಚಿಗೆಬ್ಬಿಸುವುದು ಬೇಡ. ಅವರೇ ಆ ಕೆಲಸ ಮಾಡಲಿ' ಎಂದು ತಿರುಗೇಟು ನೀಡಿದರು. 'ಪಕ್ಷದಲ್ಲಿ ಈಶ್ವರಪ್ಪ ಅವರನ್ನು ಮೂಲೆಗುಂಪು ಮಾಡಿದ್ದಾರೆ. ಗಮನ ಸೆಳೆಯಲು ಈ ರೀತಿ ಮಾತನಾಡುತ್ತಿದ್ದಾರೆ' ಎಂದರು.

ನಮ್ಮ ಸುದ್ದಿಗೆ ಬಂದವರ ಸೆಟ್ಲಮೆಂಟ್ ಆಗಿದೆ– ಡಿಕೆಶಿ

'ಈಶ್ವರಪ್ಪನವರ ಗುಂಡಿನ ಬೆದರಿಕೆಗೆ ಹೆದರುವ ರಕ್ತ ಡಿ.ಕೆ. ಸುರೇಶ್ ಮೈಯಲ್ಲಿ ಹರಿಯುತ್ತಿಲ್ಲ. ನಮ್ಮ ಸುದ್ದಿಗೆ ಬಂದವರಿಗೆ ಒಂದೊಂದೇ ಹಂತದಲ್ಲಿ ಸೆಟ್ಲಮೆಂಟ್ ಆಗಿದೆ' ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

'ದಾವಣಗೆರೆಯಲ್ಲಿ ನಾನು ಹೇಳಿದ ಮಾತಿಗೆ ಈಗಲೂ ಬದ್ಧ' ಎಂಬ ಈಶ್ವರಪ್ಪ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಕ್ಷಮೆ ಕೇಳುವಂತೆ ಅವರಿಗೆ ಯಾರೂ ಹೇಳಿಲ್ಲ. ಸದನದಲ್ಲಿ ನಮ್ಮ ತಂದೆ ಬಗ್ಗೆ ಮಾತನಾಡಿದ್ದರು. ಅದಕ್ಕೆ ಒಂದು ಸುತ್ತಿನ ಸೆಟ್ಲಮೆಂಟ್ ಮಾಡಿದ್ದೇವೆ' ಎಂದರು.

'ಈಶ್ವರಪ್ಪ ಈಗ ಎಲ್ಲಿದ್ದಾರೆ? ನಮ್ಮ ವಿಚಾರಕ್ಕೆ ಬಂದವರಿಗೆ ಒಂದೊಂದೇ ಹಂತದಲ್ಲಿ ಸೆಟ್ಲಮೆಂಟ್ ಆಗಿದೆ. ಈಶ್ವರಪ್ಪ ಗುಂಡಿಟ್ಟು ಕೊಲ್ಲುವುದಾದರೆ ಕೊಲ್ಲಲಿ' ಎಂದ ಅವರು, 'ನಮ್ಮ ಪೂರ್ವಜರಾದ ಕೆಂಪೇಗೌಡರ ಇತಿಹಾಸ ಗೊತ್ತಿದೆಯೇ? ನಮಗೆ ನಮ್ಮದೇ ಆದ ಇತಿಹಾಸವಿದೆ. ನಾವು ಕಿವಿ ಮೇಲೆ ಹೂವು ಇಟ್ಟುಕೊಂಡು ರಾಜಕಾರಣ ಮಾಡಲು ಬಂದಿಲ್ಲ' ಎಂದರು.

ರಾಷ್ಟ್ರದ್ರೋಹದ ಹೇಳಿಕೆ ನೀಡುವವರನ್ನು ಗುಂಡಿಕ್ಕಿ ಕೊಲ್ಲುವ ಕಾನೂನು ಜಾರಿಗೆ ತರುವಂತೆ ಈಶ್ವರಪ್ಪ ಮನವಿ ಮಾಡಿದ್ದಾರೆ. ಅದನ್ನು ತಪ್ಪಾಗಿ ಅರ್ಥೈಸಲಾಗಿದೆ. ಅವರ ವಿರುದ್ಧ ಎಫ್‌ಐಆರ್ ಹಾಕಿದ್ದರೆ ಅದನ್ನು ನಾವು ಎದುರಿಸುತ್ತೇವೆ
ಬಿ.ಎಸ್. ಯಡಿಯೂರಪ್ಪ
ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

'ಖರ್ಗೆ ಹೊಟ್ಟೆಯಲ್ಲಿ ಕೆಟ್ಟ ಹುಳು ಹುಟ್ಟಿದೆ'

'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅತ್ಯುತ್ತಮ ರಾಜಕಾರಣಿ. ಅಂತಹವರ ಹೊಟ್ಟೆಯಲ್ಲಿ ಪ್ರಿಯಾಂಕ್ ಖರ್ಗೆಯಂತಹ ಕೆಟ್ಟ ಹುಳು ಹುಟ್ಟಿಕೊಂಡಿದೆ. ಅವರು ತಳ ಬುಡವಿಲ್ಲದೆ ಬಡಬಡಿಸುತ್ತಾರೆ. ಆರ್‌ಎಸ್‌ಎಸ್ ವಿರುದ್ಧ ಏನೇನೊ ಹೇಳಿಕೆ ನೀಡುತ್ತಾರೆ. ಇವರಿಗೆಲ್ಲ ಅಧಿಕಾರದ ಪಿತ್ತ ನೆತ್ತಿಗೇರಿದೆ' ಎಂದು ಈಶ್ವರಪ್ಪ ವಾಗ್ದಾಳಿ ನಡೆಸಿದರು.

'ನನ್ನ ಹೇಳಿಕೆಗೂ ಆರ್‌ಎಸ್‌ಎಸ್‌ಗೂ ಸಂಬಂಧವಿಲ್ಲ. ಆದರೂ ಕಾಂಗ್ರೆಸ್ಸಿಗರು ಆರ್‌ಎಸ್‌ಎಸ್ ಸಂಘಟನೆಯನ್ನು ಮಧ್ಯ ತಂದಿದ್ದಾರೆ. ಆರ್‌ಎಸ್‌ಎಸ್ ಸುದ್ದಿ ಇವರಿಗೇಕೆ? ಆರ್‌ಎಸ್‌ಎಸ್ ನಮಗೆ ದೇಶಪ್ರೇಮವನ್ನೇ ಕಲಿಸಿದೆ. ಸಂಘಟನೆಯ ಬಗ್ಗೆ ಮಾತನಾಡುವ ಹಕ್ಕು ಕಾಂಗ್ರೆಸ್ಸಿಗರಿಗೆ ಇಲ್ಲ' ಎಂದರು.

ದೇಶದ್ರೋಹಿ ಹೇಳಿಕೆ ನೀಡುವವರಿಗೆ ಕಠಿಣ ಶಿಕ್ಷೆ ವಿಧಿಸುವ ಕಾನೂನು ಜಾರಿಗೆ ತರುವಂತೆ ಪ್ರಧಾನಿ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರಿಗೆ ಭಾನುವಾರ ಪತ್ರ ಬರೆಯುವೆ
ಕೆ.ಎಸ್. ಈಶ್ವರಪ್ಪ, ಮಾಜಿ ಡಿಸಿಎಂ

'ಯಾವ ಹುಳವೋ ನಿಮಗೇಕೆ?'

ಕಲಬುರಗಿ: 'ನಾನು ಕೆಟ್ಟ ಹುಳವೋ, ಒಳ್ಳೆಯ ಹುಳವೋ ತೆಗೆದುಕೊಂಡು ನಿಮಗೇನು ಮಾಡುವುದಿದೆ? ನಮ್ಮ ತಂದೆ–ತಾಯಿ ತಾನೇ ನಮ್ಮ ಸಂಬಾಳಿಸುತ್ತಿರುವುದು. ನಿಮ್ಮ ರಾಜಾರೋಷವನ್ನು ಕೇಂದ್ರ ಸರ್ಕಾರದ ಮುಂದೆ ತೋರಿ. ಕರ್ನಾಟಕದ ಜನರಿಗೆ, ಕನ್ನಡಿಗರಿಗೆ ಅನ್ಯಾಯವಾಗುತ್ತಿದೆ. ಅದರ ಬಗ್ಗೆ ಮಾತನಾಡಿ' ಎಂದು ಸಚಿವ ಪ್ರಿಯಾಂಕ್ ಖರ್ಗೆ ವಾಗ್ದಾಳಿ ನಡೆಸಿದರು.

'ಈಶ್ವರಪ್ಪ ಅವರ ಹೇಳಿಕೆ ಅವರ ಸಂಸ್ಕೃತಿಯನ್ನು ತೋರಿಸುತ್ತಿದೆ. ಅವರು ಏನಾದರೂ ಬಾಯಿ ಬಡಿದುಕೊಳ್ಳಲಿ, ಎಲ್ಲಾದರೂ ಬಟ್ಟೆ ಹರಿದುಕೊಳ್ಳಲಿ, ನನಗೇನು ಮಾಡುವುದಿದೆ?' ಎಂದು ಪ್ರತಿಕ್ರಿಯಿಸಿದರು.

ಬಳ್ಳಾರಿ ಕಾಂಗ್ರೆಸ್ ಶಾಸಕ ಎನ್. ಭರತ್ ರೆಡ್ಡಿ ಮನೆ ಮೇಲೆ ಇಡಿ ದಾಳಿ ನಡೆಸಿದ ಕುರಿತು ಪ್ರತಿಕ್ರಿಯಿಸಿದ ಪ್ರಿಯಾಂಕ್, 'ಸಿಬಿಐ, ಐಟಿ, ಇಡಿ ಇವರೆಲ್ಲರೂ ಬಿಜೆಪಿಯ ಸ್ಟಾರ್ ಪ್ರಚಾರಕರು. ಬಿಜೆಪಿಯವರು ನೇರವಾಗಿ ಚುನಾವಣೆ ಎದುರಿಸುವ ಚಾನ್ಸೇ ಇಲ್ಲ. ಇಡೀ ದೇಶದಲ್ಲಿ ಶೇ 99ರಷ್ಟು ದಾಳಿಗಳು ನಡೆದಿರುವುದು ವಿರೋಧ ಪಕ್ಷದವರ ಮೇಲೆ. ಐಟಿ, ಇಡಿ ದಾಳಿಗೆ ನಾವು ಬಗ್ಗುವವರಲ್ಲ' ಎಂದು ಸ್ಪಷ್ಟಪಡಿಸಿದರು.

ನಾರಾ ಭರತ್ ರೆಡ್ಡಿ ಮನೆ ಮೇಲೆ ಇ.ಡಿ ದಾಳಿ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿ ನಗರ ಕಾಂಗ್ರೆಸ್ ಶಾಸಕ ನಾರಾ ಭರತ್ ರೆಡ್ಡಿ ಮತ್ತು ಅವರ ಸಂಬಂಧಿಕರ ಮನೆ ಮತ್ತು ಕಚೇರಿಗಳ ಮೇಲೆ ಶನಿವಾರ ಬೆಳಿಗ್ಗೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ದಾಳಿ ನಡೆಸಿದರು.

ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಇ.ಡಿ ಅಧಿಕಾರಿಗಳು ಕರ್ನಾಟಕ, ತಮಿಳುನಾಡು, ತೆಲಂಗಾಣದಲ್ಲಿ ಭರತ್ ರೆಡ್ಡಿ ಮತ್ತು ಅವರ ಕುಟುಂಬಕ್ಕೆ ಸಂಬಂಧಿಸಿದ 12ಕ್ಕೂ ಹೆಚ್ಚು ಕಡೆ ದಾಖಲೆಗಳನ್ನು ರಾತ್ರಿಯವರೆಗೆ ಪರಿಶೀಲಿಸಿದರು.

'ಸಿಆರ್‌ಪಿಎಫ್ ಭದ್ರತೆಯೊಂದಿಗೆ 7 ವಾಹನಗಳಲ್ಲಿ ಬಳ್ಳಾರಿಗೆ ಬಂದ ಅಧಿಕಾರಿಗಳ ತಂಡ ನೆಹರು ಕಾಲೊನಿಯಲ್ಲಿರುವ ಶಾಸಕ ಭರತ್ ರೆಡ್ಡಿ, ಗಾಂಧಿನಗರದಲ್ಲಿರುವ ಅವರ ತಂದೆ, ಮಾಜಿ ಶಾಸಕ ಸೂರ್ಯನಾರಾಯಣ ರೆಡ್ಡಿ ಕಚೇರಿ ಮೇಲೆ ಏಕಕಾಲಕ್ಕೆ ದಾಳಿ ನಡೆಸಿತು. ದಾಳಿ ಕುರಿತು ಸ್ಥಳೀಯ ಪೊಲೀಸರಿಗೆ ಮಾಹಿತಿ ಇರಲಿಲ್ಲ' ಎಂದು ಮೂಲಗಳು ತಿಳಿಸಿವೆ.

ಭರತ್ ರೆಡ್ಡಿ ಕುಟುಂಬ ಹಲವು ವರ್ಷಗಳಿಂದ ಗ್ರಾನೈಟ್ ಉದ್ಯಮದಲ್ಲಿ ತೊಡಗಿಸಿಕೊಂಡಿದೆ. ಕೊಪ್ಪಳ ಜಿಲ್ಲೆ ಕುಕನೂರು ತಾಲ್ಲೂಕಿನ ಗಾವರಾಳ ಗ್ರಾಮದ ಹೊರವಲಯದ ಗ್ರಾನೈಟ್ ಕ್ವಾರಿ ಬಳಿಯೂ ಅಧಿಕಾರಿಗಳು ಶೋಧ ನಡೆಸಿದರು. ಈ ಹಿಂದೆ, ಶಾಸಕ ರೆಡ್ಡಿ ಅವರ ತಂದೆ ಸೂರ್ಯನಾರಾಯಣ ರೆಡ್ಡಿ ಕಚೇರಿ ಮೇಲೆ ಆದಾಯ ತೆರಿಗೆ ಅಧಿಕಾರಿಗಳೂ ದಾಳಿ ನಡೆಸಿದ್ದರು. ಭರತ್ ರೆಡ್ಡಿ ಅವರು ಇತ್ತೀಚೆಗೆ ತಮ್ಮ ಹುಟ್ಟು ಹಬ್ಬದ ಸಲುವಾಗಿ ಬಳ್ಳಾರಿ ನಗರ ಕ್ಷೇತ್ರದ ನಾಗರಿಕರಿಗೆ ಕುಕ್ಕರ್ ವಿತರಿಸಿದ್ದರು.

'ರಾಜಕೀಯ ಪ್ರೇರಿತ'

'ಶಾಸಕ ನಾರಾ ಭರತ್ ರೆಡ್ಡಿ ಮತ್ತು ಕುಟುಂಬದವರ ಮನೆ, ಕಚೇರಿಗಳ ಮೇಲೆ ಇ.ಡಿ ದಾಳಿ ನಡೆದಿದ್ದು ಖಂಡನೀಯ. ಇದು ರಾಜಕೀಯ ಪ್ರೇರಿತ. ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅನ್ನು ಕಟ್ಟಿ ಹಾಕಲು ಬಿಜೆಪಿಯು ಇ.ಡಿ ದಾಳಿ ನಡೆಸಿದೆ. ಭರತ್ ರೆಡ್ಡಿ ಅವರನ್ನು ಕುಗ್ಗಿಸುವ ಕೆಲಸ ಮಾಡಿದೆ' ಎಂದು ಕಾಂಗ್ರೆಸ್ ಮುಖಂಡರು ಆರೋಪಿಸಿದರು.

ದಾಳಿ ವಿಷಯ ತಿಳಿಯುತ್ತಿದ್ದಂತೆಯೇ ಪಕ್ಷದ ಮುಖಂಡರು, ಕಾರ್ಯಕರ್ತರು ಭರತ್ ರೆಡ್ಡಿ ಅವರ ಕಚೇರಿ ಎದುರು ಜಮಾಯಿಸಿದರು.

ಅಂಜನಾದ್ರಿ ಬೆಟ್ಟಕ್ಕೆ ರೋಪ್‌ವೇ

ನಿತಿನ್ ಗಡ್ಕರಿ

ನವದೆಹಲಿ: 'ಪರ್ವತಮಾಲಾ ಪರಿಯೋಜನೆ' ಅಡಿಯಲ್ಲಿ ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಬೆಟ್ಟಕ್ಕೆ ರೋಪ್‌ವೇ ನಿರ್ಮಿಸಲು ವಿಸ್ತೃತ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲಾಗುತ್ತಿದೆ ಎಂದು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದರು.

ಲೋಕಸಭೆಯಲ್ಲಿ ಸದಸ್ಯರ ಪ್ರಶ್ನೆಗೆ ಉತ್ತರಿಸಿರುವ ಸಚಿವರು, 'ಈ ರೋಪ್‌ವೇ 0.74 ಕಿ.ಮೀ ಇರಲಿದೆ' ಎಂದರು.

ಕೇಶವಾನಂದ ಭಾರತೀ ಪ್ರಕರಣದಿಂದ ಸಮಾನತೆ ನಾಶ: ರವಿವರ್ಮ ಕುಮಾರ್

ಅಡ್ವಾಣಿ, ಪಿವಿಎನ್‌ಗೆ ಭಾರತ ರತ್ನ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಕೇಶವಾನಂದ ಭಾರತೀ ಪ್ರಕರಣದ ತೀರ್ಪು ಪ್ರಕಟಗೊಂಡ 50ನೇ ವರ್ಷದ ಅವಲೋಕನದ ಕಾರ್ಯಕ್ರಮದಲ್ಲಿ ಹಿರಿಯ ವಕೀಲ ರವಿವರ್ಮ ಕುಮಾರ್ ಹಾಗೂ ನ್ಯಾ. ಸಂತೋಷ ಹೆಗ್ಡೆ ಅವರು ಮಾತುಕತೆಯಲ್ಲಿ ತೊಡಗಿದ್ದರು. ನ್ಯಾ. ಎಚ್‌.ಎನ್‌. ನಾಗಮೋಹನದಾಸ್, ಆರ್‌. ಉಪೇಂದ್ರ ಶೆಟ್ಟಿ ಉಪಸ್ಥಿತರಿದ್ದರು

ಬೆಂಗಳೂರು: 'ಬಾಬರಿ ಮಸೀದಿ ಧ್ವಂಸಗೊಳಿಸುವ ಚಳವಳಿಯ ರೂವಾರಿಯಾಗಿದ್ದ ಲಾಲ್ ಕೃಷ್ಣ ಅಡ್ವಾಣಿ, ಈ ಧ್ವಂಸ ಕಾರ್ಯ ನಡೆಯುವಾಗ ಅಧಿಕಾರದಲ್ಲಿದ್ದರೂ ಅದನ್ನು ಮೌನವಾಗಿ ವೀಕ್ಷಿಸಿದ ಮಾಜಿ ಪ್ರಧಾನಿ ದಿವಂಗತ ಪಿ.ವಿ.ನರಸಿಂಹರಾವ್ ಅಂಥವರಿಗೆ ಭಾರತ ರತ್ನ ಪ್ರಶಸ್ತಿ ಘೋಷಿಸಿರುವ ಇಂದಿನ ದಿನಗಳಲ್ಲಿ ಜಾತ್ಯತೀತ ಶಬ್ದಕ್ಕೆ ಅರ್ಥ ಎಲ್ಲಿ ಉಳಿದಿದೆ' ಎಂದು ಹಿರಿಯ ವಕೀಲ ರವಿವರ್ಮ ಕುಮಾರ್ ಪ್ರಶ್ನಿಸಿದರು.

ದೇಶದ ನ್ಯಾಯಾಂಗ ಇತಿಹಾಸದಲ್ಲೇ ಮಹತ್ವವಾದ ಕೇಶವಾನಂದ ಭಾರತೀ ಪ್ರಕರಣದ ತೀರ್ಪು ಪ್ರಕಟಗೊಂಡ 50ನೇ ವರ್ಷದ ಅವಲೋಕನದ ಅಂಗವಾಗಿ, ಶನಿವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪ್ರಧಾನಿ ಮೋದಿ ದೇಶದ ಉದ್ದಗಲಕ್ಕೂ ದೇವಸ್ಥಾನಗಳಿಗೆ ಪ್ರದಕ್ಷಿಣೆ ಹಾಕುತ್ತಿರುವಾಗ ಮತ್ತು ಸ್ವತಃ ಸುಪ್ರೀಂ ಕೋರ್ಟ್, ಮಸೀದಿ ಧ್ವಂಸಗೊಂಡ ಜಾಗದಲ್ಲೇ ರಾಮ ಮಂದಿರ ನಿರ್ಮಾಣವಾಗಬೇಕು ಎಂದು ತೀರ್ಪು ನೀಡಿರುವಾಗ ಸಂವಿಧಾನದ ಮೂಲ ಸ್ವರೂಪಕ್ಕೆ ಧಕ್ಕೆ ಉಂಟಾಗಿದೆ' ಎಂದರು.

'ಕಾಂಗ್ರೆಸ್ ಅಥವಾ ಬಿಜೆಪಿ ಎರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ' ಎಂದು ಬಣ್ಣಿಸಿದ ಅವರು, 'ಹಲ್ದ್ವಾನಿಯಲ್ಲಿ ಹಿಂಸಾಚಾರಕ್ಕೆ ಆರು ಜನ ಬಲಿಯಾಗುವುದು, ದ್ವೇಷ ಭಾಷಣಗಳು ದೇಶದ ಉದ್ದಗಲಕ್ಕೂ ವ್ಯಾಪಿಸುತ್ತಿರುವುದು ಮತ್ತು ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಯ ಮಾತುಗಳು ಈ ದಿನಗಳಲ್ಲಿ ಕೇಳಿ ಬರುತ್ತಿರುವುದು ಸಂವಿಧಾನದ ಮೂಲತತ್ವಗಳು ಮರೆಯಾಗಿರುವುದಕ್ಕೆ ಸಾಕ್ಷಿ' ಎಂದರು.

ಸಮಾರಂಭದಲ್ಲಿ ಭಾಗಿಯಾಗಿ ಮಾತನಾಡಿದ ಶಂಕರಾಚಾರ್ಯ ಪರಂಪರೆಯ ಕಾಸರಗೋಡು ಜಿಲ್ಲೆ ಎಡನೀರು ಮಠದ ಸಚ್ಚಿದಾನಂದ ಭಾರತೀ ಸ್ವಾಮೀಜಿ, 'ಅಂದಿನ ಕೇರಳ ಭೂ ಸುಧಾರಣಾ ಕಾನೂನು ಜಾರಿಯಿಂದಾಗಿ ಮಠ 400 ಎಕರೆಗೂ ಹೆಚ್ಚಿನ ಜಮೀನನ್ನು ಕಳೆದುಕೊಳ್ಳುವಂತಾಯಿತು. ಆದರೆ, ಇದರಿಂದಾಗಿ ಉಂಟಾದ ಕಾನೂನು ಸಮರದಲ್ಲಿ ದೇಶದ ಪ್ರಜಾಪ್ರಭುತ್ವ ಉಳಿಯುವಂತಾಯಿತು' ಎಂದರು.

ಆದರೆ, ಈ ಮಾತುಗಳನ್ನು ಬಲವಾಗಿ ವಿರೋಧಿಸಿದ ರವಿವರ್ಮ ಕುಮಾರ್, 'ಆಸ್ತಿಯ ಹಕ್ಕಿನಲ್ಲೇ ಮೂಲಭೂತ ಹಕ್ಕುಗಳು ಅಡಗಿವೆ. ಕೇಶವಾನಂದ ಭಾರತೀ ಪ್ರಕರಣದ ತೀರ್ಪಿನಿಂದಾಗಿ, ಮಹಿಳೆ–ಪುರುಷ, ಶ್ರೀಮಂತ–ಬಡವ, ಬ್ರಾಹ್ಮಣ–ಭಂಗಿ, ಮಾಧ್ವ–ಮಾದಿಗ ಎಂಬ ಅಸಮಾನತೆ ಮತ್ತೂ ಮುಂದುವರಿಸುವಂತಾಯಿತು. ಈ ದೇಶದ ಆರ್ಥಿಕತೆ ನಾಶವಾಯಿತು' ಎಂದು ವಿಶ್ಲೇಷಿಸಿದರು.

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನಾಗಮೋಹನ ದಾಸ್ ಮಾತನಾಡಿ, 'ಕಳೆದ 10 ವರ್ಷಗಳಲ್ಲಿ ಸಂಸತ್ತಿನಲ್ಲಿ ನಡೆದ ಚರ್ಚೆಗಳಲ್ಲಿ ಶೇ 24ರಷ್ಟು ಕೂಗಾಟ, ಅರಚಾಟ, ಬಡಿದಾಟ, ಧರಣಿ ಮತ್ತು ಕಲಾಪ ಬಹಿಷ್ಕಾರದಂತಹ ಘಟನೆಗಳೇ ಜರುಗಿವೆ. ಶೇ 47ರಷ್ಟು ಮಸೂದೆಗಳು ಚರ್ಚೆಯಾಗದೇ ಅಂಗೀಕಾರಗೊಂಡಿವೆ. ಇಂತಹ ಸಮಯದಲ್ಲಿ ಸಂವಿಧಾನ ತಿದ್ದುಪಡಿಯ ಮಾತುಗಳನ್ನು ಕೆಲವರು ಆಡುತ್ತಿದ್ದು, ಇದರ ಅಗತ್ಯವೇನೆಂಬುದನ್ನು ಪ್ರಶ್ನಿಸಬೇಕಾಗಿದೆ' ಎಂದರು.

ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆ, ಕೇಶವಾನಂದ ಭಾರತೀ ಪ್ರಕರಣದ ತೀರ್ಪು ನೀಡಿದ 13 ನ್ಯಾಯಮೂರ್ತಿಗಳ ಪೀಠದಲ್ಲಿ ತಮ್ಮ ತಂದೆ ಕೆ.ಎಸ್.ಹೆಗ್ಡೆ ಅವರೂ ಇದ್ದುದನ್ನು ಸ್ಮರಿಸಿದರು.

ರಾಜ್ಯ ವಕೀಲರ ಪರಿಷತ್ ಅಧ್ಯಕ್ಷ ಎಚ್‌.ಎಲ್‌.ವಿಶಾಲ ರಘು, ಕಾರ್ಯಕ್ರಮ ಆಯೋಜಿಸಿದ್ದ 'ಯೂನಿವರ್ಸಲ್ ಸ್ಕೂಲ್ ಆಫ್ ಲಾ' ಪ್ರಾಂಶುಪಾಲ ವಿಶ್ವಾಸ್ ಪುಟ್ಟಸ್ವಾಮಿ, ಸಂಸ್ಥೆಯ ಅಧ್ಯಕ್ಷ ಆರ್‌.ಉಪೇಂದ್ರ ಶೆಟ್ಟಿ, ಆಡಳಿತಾಧಿಕಾರಿ ಸಂತೋಷ ಶೆಟ್ಟಿ, ಬೆಂಗಳೂರು ಬಂಟರ ಸಂಘದ ಅಧ್ಯಕ್ಷ ಮುರಳೀಧರ ಹೆಗ್ಡೆ, ಕಾಲೇಜಿನ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ನಾಳೆ ಯು.ಎಸ್ ಸ್ನಾತಕೋತ್ತರ ವಿದ್ಯಾರ್ಥಿ ಮೇಳ

ಬೆಂಗಳೂರು: ಅಮೆರಿಕದಲ್ಲಿರುವ ಉನ್ನತ ಶಿಕ್ಷಣ ವ್ಯವಸ್ಥೆ, ಅವಕಾಶಗಳು, ಹೊಸ ಕೋರ್ಸ್‌ಗಳು ಸೇರಿ ವಿವಿಧ ವೈಶಿಷ್ಟ್ಯತೆ ಕುರಿತು ತಿಳಿಸಲು ಇದೇ 12ರಂದು ಸಂಜೆ 4ರಿಂದ 7 ಗಂಟೆಯವರೆಗೆ ವಿಠ್ಠಲ ಮಲ್ಯ ರಸ್ತೆಯಲ್ಲಿರುವ ಜೆಡಬ್ಲ್ಯು ಮ್ಯಾರಿಯಟ್ ಹೋಟೆಲ್‌ನಲ್ಲಿ 'ಯು.ಎಸ್ ಸ್ನಾತಕೋತ್ತರ ವಿದ್ಯಾರ್ಥಿ ಮೇಳ' ಆಯೋಜಿಸಲಾಗಿದೆ.

ಯುಎಸ್ ಡಿಪಾರ್ಟ್‌ಮೆಂಟ್ ಆಫ್ ಕಾಮರ್ಸ್, ಇಂಟರ್‌ನ್ಯಾಷನಲ್ ಟ್ರೇಡ್ ಅಡ್ಮಿನಿಸ್ಟ್ರೇಷನ್, ಇಲ್ಲಿನ ಯುಎಸ್ ಕಮರ್ಷಿಯಲ್ ಸರ್ವಿಸ್ ಮತ್ತು ಯುಎಸ್ ಕಾನ್ಸುಲೇಟ್ ಜನರಲ್ ಚೆನ್ನೈ ಮೇಳ ಆಯೋಜಿಸಿದೆ. ಅಮೆರಿಕದ 18 ಸಂಸ್ಥೆಗಳು ಪಾಲ್ಗೊಳ್ಳುತ್ತಿವೆ.

ಮೇಳಕ್ಕೆ ಪ್ರವೇಶ ಉಚಿತ. https://yocket.com/events/graduate-student-fair-a-world-class-education-awaits-you-in-the-us-3533 ಮೂಲಕ ನೋಂದಾಯಿಸಿಕೊಳ್ಳಬೇಕು ಎಂದು ಚೆನ್ನೈನಲ್ಲಿರುವ ಯುಎಸ್ ಕಾನ್ಸುಲೇಟ್ ಜನರಲ್ ಕ್ರಿಸ್ಟೊಫರ್ ಹಾಡ್ಜಸ್ ತಿಳಿಸಿದ್ದಾರೆ.

ಬೆಂಗಳೂರು ನಗರ ಸುತ್ತಲಿನ ಪ್ರದೇಶಗಳಿಗೆ ತಡೆರಹಿತ ರೈಲು ಸೇವೆ • ಅಂತಿಮ ಸಮೀಕ್ಷೆಗೆ ಅಸ್ತು

742 ಕಿ.ಮೀ. ರೈಲ್ವೆ ಮಾರ್ಗಕ್ಕೆ ಸಮೀಕ್ಷೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ನಗರ ಪ್ರದೇಶಗಳ ನಡುವೆ ತಡೆರಹಿತ ರೈಲು ಸೇವೆ ಒದಗಿಸುವ ಉದ್ದೇಶದಿಂದ ಮಾಹಿತಿ ತಂತ್ರಜ್ಞಾನ ನಗರದ ಸುತ್ತಲೂ 742 ಕಿ.ಮೀ. ಹೊಸ ರೈಲು ಮಾರ್ಗ ನಿರ್ಮಿಸಲು ಅಂತಿಮ ಸ್ಥಳ ಸಮೀಕ್ಷೆಗೆ ಮಂಜೂರಾತಿ ನೀಡಲಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ರಾಜ್ಯಸಭೆಯಲ್ಲಿ ಬಿಜೆಪಿ ಸದಸ್ಯ ಲಹರ್ ಸಿಂಗ್ ಸಿರೋಯಾ ಕೇಳಿದ ಪ್ರಶ್ನೆಗೆ ಸಚಿವರು ಈ ಉತ್ತರ ನೀಡಿದರು.

ಬೆಂಗಳೂರಿನ ಸುತ್ತಮುತ್ತಲಿನ ಪ್ರಮುಖ ಪಟ್ಟಣಗಳನ್ನು ಸಂಪರ್ಕಿಸುವ ದೇಶದ ಅತಿದೊಡ್ಡ ವೃತ್ತರೈಲು ಸಂಪರ್ಕಜಾಲವನ್ನು (ಸರ್ಕ್ಯುಲರ್ ರೈಲ್ವೆ) ನಿರ್ಮಿಸುವ ಯೋಜನೆ ಇದಾಗಿದೆ. ಕಾರ್ಯಸಾಧ್ಯತೆಯ ಬಗ್ಗೆ ಅಧ್ಯಯನ ನಡೆದಿದೆ ಎಂದರು.

ನಿಡವಂದ–ದೊಡ್ಡ ಬಳ್ಳಾಪುರ–ದೇವನಹಳ್ಳಿ–ಮಾಲೂರು–ಹೀಲಲಿಗೆ–ಸೋಲೂರು–ನಿಡವಂದ ನಿಲ್ದಾಣಗಳನ್ನು ಸಂಪರ್ಕಿಸುವ ವೃತ್ತರೈಲು ಸಂಪರ್ಕ ಜಾಲ 287 ಕಿ.ಮೀ.ನಷ್ಟು ಇರಲಿದೆ ಎಂದು ಹೇಳಿದರು.

ಬೆಂಗಳೂರು - ತುಮಕೂರು ನಡುವೆ ಚತುಷ್ಪಥ (70 ಕಿ.ಮೀ); ಚಿಕ್ಕಬಾಣಾವರ - ಹಾಸನ (180 ಕಿ.ಮೀ) ನಡುವೆ ದ್ವಿಪಥ; ಬೆಂಗಳೂರು-ಮೈಸೂರು ನಡುವೆ ಚತುಷ್ಪಥ (135 ಕಿ.ಮೀ); ಬಂಗಾರಪೇಟೆ - ಜೋಲಾರ್‌ಪೇಟೆ (70 ಕಿ.ಮೀ) ನಡುವೆ ಚತುಷ್ಪಥ ರೈಲು ಮಾರ್ಗಕ್ಕೆ ಅಂತಿಮ ಸ್ಥಳ ಸಮೀಕ್ಷೆ ನಡೆಸಲು ಒಪ್ಪಿಗೆ ನೀಡಲಾಗಿದೆ ಎಂದೂ ಮಾಹಿತಿ ನೀಡಿದರು.

ಮುಖ್ಯಾಂಶಗಳು

- ಯೋಜನೆಯ ಕಾರ್ಯಸಾಧ್ಯತೆ ಅಧ್ಯಯನಕ್ಕೆ ಮಂಜೂರಾತಿ
- ವೃತ್ತರೈಲು ಸಂಪರ್ಕ ಜಾಲ ಅಂದಾಜು 287 ಕಿ.ಮೀ.
- ಜಾರಿಗೊಂಡರೆ ದೇಶದ ಅತಿದೊಡ್ಡ ವೃತ್ತರೈಲು ಸಂಪರ್ಕಜಾಲ ಆಗಲಿದೆ

ಸ್ವಯಂಚಾಲಿತ ಸಿಗ್ನಲಿಂಗ್ ಪ್ರಸ್ತಾವಕ್ಕೆ ಅನುಮೋದನೆ

ಬೆಂಗಳೂರು: ನೈರುತ್ಯ ರೈಲ್ವೆಯು ಸಲ್ಲಿಸಿರುವ ಆರು ಮಾರ್ಗಗಳಲ್ಲಿ ಸ್ವಯಂಚಾಲಿತ ಸಿಗ್ನಲಿಂಗ್ ಅಳವಡಿಸುವ ಪ್ರಸ್ತಾವಕ್ಕೆ ರೈಲ್ವೆ ಮಂಡಳಿ ಅನುಮೋದನೆ ನೀಡಿದೆ.

ಬೆಂಗಳೂರು ನಗರ-ಯಶವಂತಪುರ-ಯಲಹಂಕ 17.75 ಕಿ.ಮೀ., ಯಶವಂತಪುರ-ಅರಸಿಕೆರೆ 160.65 ಕಿ.ಮೀ., ಲೊಟ್ಟೆಗೊಲ್ಲಹಳ್ಳಿ-ಹೊಸೂರು 63.6 ಕಿ.ಮೀ., ವೈಟ್‌ಫೀಲ್ಡ್-ಜೋಲಾರ್‌ಪೇಟೆ 119 ಕಿ.ಮೀ., ಬೈಯಪ್ಪನಹಳ್ಳಿ- ಪೆನುಕೊಂಡ (ಚನ್ನಸಂದ್ರ ಮೂಲಕ) 139.8 ಕಿ.ಮೀ., ಬೆಂಗಳೂರು ನಗರ– ಮೈಸೂರು 138.25 ಕಿ.ಮೀ. ಸೇರಿ ಒಟ್ಟು 639.05 ಕಿ.ಮೀ. ಉದ್ದದ ಈ ಮಾರ್ಗಗಳನ್ನು ₹874.12 ಕೋಟಿ ವೆಚ್ಚದಲ್ಲಿ ಸ್ವಯಂಚಾಲಿತ ಸಿಗ್ನಲಿಂಗ್ ಅಳವಡಿಸುವ ಯೋಜನೆ ಇದಾಗಿದೆ.

ಯೋಜನೆ ಅನುಷ್ಠಾನಗೊಂಡರೆ ಮಾರ್ಗದ ಸಾಮರ್ಥ್ಯ ಗಣನೀಯವಾಗಿ ಹೆಚ್ಚಲಿದೆ. ರೈಲುಗಳು ತಡೆರಹಿತವಾಗಿ ಕಾರ್ಯಾಚರಿಸಲಿವೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ಉಪನಗರ ರೈಲು ಯೋಜನೆಯನ್ನು ಕರ್ನಾಟಕ ರೈಲು ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆ-ರೈಡ್) ಅನುಷ್ಠಾನಗೊಳಿಸುತ್ತಿದೆ. 148 ಕಿ.ಮಿ. ಉದ್ದದ ಈ ಯೋಜನೆಗೆ ಕೇಂದ್ರ ಸಂಪುಟವು 2020ರಲ್ಲಿ ಅನುಮೋದನೆ ನೀಡಿತ್ತು. ಈ ಯೋಜನೆಯು ನಾಲ್ಕು ಕಾರಿಡಾರ್‌ಗಳನ್ನು ಒಳಗೊಂಡಿದೆ ಎಂದರು.

ಈ ಯೋಜನೆ ಕಾಲಮಿತಿಯಲ್ಲಿ ಪೂರ್ಣಗೊಳ್ಳಲಿದೆಯೇ ಎಂಬ ಪ್ರಶ್ನೆಗೆ ಸಚಿವರು, 'ಇದು ರಾಜ್ಯ ಸರ್ಕಾರದಿಂದ ತ್ವರಿತ ಭೂಸ್ವಾಧೀನ, ಅರಣ್ಯ ಭೂಮಿ ಬಳಕೆಗೆ ಒಪ್ಪಿಗೆ, ಯೋಜನಾ ವೆಚ್ಚ ಹಂಚಿಕೆ ಮತ್ತಿತರ ಅಂಶಗಳನ್ನು ಒಳಗೊಂಡಿರುತ್ತದೆ' ಎಂದು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

'ಮನೆಗಳ ಹಂಚಿಕೆಯಲ್ಲಿ ಲೋಪವಾದರೆ ಕ್ರಮ'

ಬೆಂಗಳೂರು: 'ಮನೆ ಹಂಚಿಕೆಯಲ್ಲಿ ಲೋಪಗಳು ಕಂಡುಬಂದರೆ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಎಚ್ಚರಿಸಿದರು.

ಈ ತಿಂಗಳಾಂತ್ಯದಲ್ಲಿ 36 ಸಾವಿರ ಮನೆ ಹಂಚಿಕೆ ಮಾಡುತ್ತಿದ್ದು, ಈ ಸಂಬಂಧ ಶನಿವಾರ ನಡೆದ ವಿಡಿಯೊ ಕಾನ್ಫರೆನ್ಸ್ ಮೂಲಕ ಪ್ರಗತಿ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

'ಕೊಳೆಗೇರಿ ಅಭಿವೃದ್ಧಿ ಮಂಡಳಿಯಿಂದ ಬಡ ಕುಟುಂಬಗಳಿಗೆ ನಿರ್ಮಿಸಿ ಕೊಡುತ್ತಿರುವ ಮನೆಗಳ ಗುಣಮಟ್ಟ ಉತ್ತಮ ಆಗಿರಬೇಕು. ಜತೆಗೆ, ಮೂಲಸೌಕರ್ಯ ಸಹಿತ ಎಲ್ಲ ಕಾಮಗಾರಿ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಬೇಕು' ಎಂದು ಸೂಚನೆ ನೀಡಿದರು.

'ಮುಖ್ಯಮಂತ್ರಿ ಅವರು ಏಕಕಾಲದಲ್ಲಿ ರಾಜ್ಯದೆಲ್ಲೆಡೆ ಮನೆಗಳ ಹಂಚಿಕೆಗೆ ಚಾಲನೆ ನೀಡಲಿದ್ದು, ಅದೇ ದಿನ ಫಲಾನುಭವಿಗಳಿಗೆ ಕೀ ನೀಡಬೇಕು. ಕುಡಿಯುವ ನೀರು, ಒಳಚರಂಡಿ, ವಿದ್ಯುತ್ ಸಂಪರ್ಕ ಸಹಿತ ಮೂಲ ಸೌಕರ್ಯ ಕಾಮಗಾರಿ ಫೆ.20 ರೊಳಗೆ ಮುಕ್ತಾಯ ಆಗಿರಬೇಕು. ಇಲ್ಲದಿದ್ದರೆ ಸಂಬಂಧಪಟ್ಟ ಅಧಿಕಾರಿಗಳನ್ನು ಹೊಣೆ ಮಾಡಲಾಗುವುದು' ಎಂದು ಎಚ್ಚರಿಕೆ ನೀಡಿದರು.

'ಪ್ರತಿ ಯೋಜನೆಯಲ್ಲಿ ನಿಗದಿತ ಮನೆ ಹಂಚಿಕೆ ಮಾಡಬೇಕು. ಗುತ್ತಿಗೆದಾರರಿಂದ ಲೋಪಗಳು ಕಂಡುಬಂದರೆ, ಕಪ್ಪುಪಟ್ಟಿಗೆ ಸೇರಿಸಲಾಗುವುದು. ಅಧಿಕಾರಿಗಳ ನಿರ್ಲಕ್ಷ್ಯದಿಂದ ಸಮಸ್ಯೆ ಆಗಿದ್ದರೆ ಅಂತಹವರನ್ನು ಅಮಾನತು ಮಾಡಲಾಗುವುದು' ಎಂದು ಹೇಳಿದ್ದಾರೆ.

ಇಲಾಖೆಯ ಕಾರ್ಯದರ್ಶಿ ನವೀನ್‌ರಾಜ್ ಸಿಂಗ್, ಆಯುಕ್ತ ವೆಂಕಟೇಶ್, ಪ್ರಧಾನ ಎಂಜಿನಿಯರ್ ಬಾಲರಾಜು ಉಪಸ್ಥಿತರಿದ್ದರು.

ಡಿಜಿಪಿ ಪ್ರತಾಪ್ ರೆಡ್ಡಿ ರಾಜೀನಾಮೆ

ಪ್ರಜಾವಾಣಿ ವಾರ್ತೆ



ಪ್ರತಾಪ್ ರೆಡ್ಡಿ

ಬೆಂಗಳೂರು: ರಾಜ್ಯ ಆಂತರಿಕ ಭದ್ರತಾ ವಿಭಾಗದ (ಐಎಸ್‌ಡಿ) ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಸಿ.ಎಚ್. ಪ್ರತಾಪ್ ರೆಡ್ಡಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

1991ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿ ಆಗಿರುವ ಪ್ರತಾಪ್ ರೆಡ್ಡಿ ಅವರ ಸೇವಾವಧಿ ಇನ್ನೂ ನಾಲ್ಕೂವರೆ ತಿಂಗಳು ಇದೆ. ಇದರ ನಡುವೆಯೇ ಸ್ವಯಂ ನಿವೃತ್ತಿ ಕೋರಿ ಜ. 22ರಂದು ಮುಖ್ಯಕಾರ್ಯದರ್ಶಿಗೆ ರಾಜೀನಾಮೆ ಸಲ್ಲಿಸಿರುವುದು ಚರ್ಚೆಗೆ ಗ್ರಾಸವಾಗಿದೆ.

'ಪ್ರತಾಪ್ ರೆಡ್ಡಿ ಅವರ ಸೇವಾವಧಿ ಜೂನ್ 30ಕ್ಕೆ ಮುಗಿಯಲಿದೆ. ಏಪ್ರಿಲ್ 30ಕ್ಕೆ ತಮ್ಮನ್ನು ಸೇವೆಯಿಂದ ಬಿಡುಗಡೆ ಮಾಡುವಂತೆ ಅವರು ಕೋರಿರುವುದಾಗಿ ಗೊತ್ತಾಗಿದೆ' ಎಂದು ತಿಳಿಸಿವೆ.

ಬೆಂಗಳೂರು ಕಮಿಷನರ್: ಆಂಧ್ರ ಪ್ರದೇಶ ಗುಂಟೂರು ಜಿಲ್ಲೆಯ ಪ್ರತಾಪ್ ರೆಡ್ಡಿ, ಬಿ.ಟೆಕ್ ಪದವೀಧರರು. ಹಾಸನ ಜಿಲ್ಲೆಯ ಸಹಾಯಕ ಪೊಲೀಸ್ ಅಧೀಕ್ಷಕರಾಗಿ ವೃತ್ತಿ ಆರಂಭಿಸಿದ್ದರು. ನಂತರ, ಹಲವು ಜಿಲ್ಲೆ ಹಾಗೂ ಕಮಿಷನರೇಟ್ ವ್ಯಾಪ್ತಿಯಲ್ಲಿ ಕೆಲಸ ಮಾಡಿದ್ದರು.

ಸಿಬಿಐ ವಿವಿಧ ಹುದ್ದೆಗಳಲ್ಲಿ, ಮುಂಬೈ ಮತ್ತು ಬೆಂಗಳೂರು ಕಚೇರಿಗಳಲ್ಲಿ ಅವರು ಕೆಲಸ ಮಾಡಿದ್ದರು. ಬೆಂಗಳೂರು ನಗರದ 37ನೇ ಪೊಲೀಸ್ ಕಮಿಷನರ್ ಆಗಿಯೂ ಪ್ರತಾಪ್ ರೆಡ್ಡಿ ಕರ್ತವ್ಯ ನಿರ್ವಹಿಸಿದ್ದರು.

'ಗೈರಾಗಿದ್ದಕ್ಕೆ ನೋಟಿಸ್'

ಪೊಲೀಸ್ ಇಲಾಖೆಯು ಕೋರಮಂಗಲದ ರಾಜ್ಯ ಮೀಸಲು ಪೊಲೀಸ್ ಪಡೆಯ (ಕೆಎಸ್‌ಆರ್‌ಪಿ) ಮೈದಾನದಲ್ಲಿ '12ನೇ ಅಖಿಲ ಭಾರತ ಪೊಲೀಸ್ ಆರ್ಚರಿ ಚಾಂಪಿಯನ್‌ಷಿಪ್ ಟೂರ್ನಿ'ಯನ್ನು ಇತ್ತೀಚೆಗೆ ಆಯೋಜಿಸಲಾಗಿತ್ತು. ಉದ್ಘಾಟನಾ ಸಮಾರಂಭಕ್ಕೆ ಗೃಹ ಸಚಿವ ಜಿ. ಪರಮೇಶ್ವರ ಹಾಗೂ ಅಧಿಕಾರಿಗಳು ಪಾಲ್ಗೊಂಡಿದ್ದರು.

'ಗೃಹ ಸಚಿವರು ಪಾಲ್ಗೊಂಡಿದ್ದ ಕಾರ್ಯಕ್ರಮಕ್ಕೆ ಗೈರಾಗಿದ್ದರು' ಎಂಬ ಕಾರಣಕ್ಕೆ ಪ್ರತಾಪ್ ರೆಡ್ಡಿ ಸೇರಿದಂತೆ ಕೆಲ ಅಧಿಕಾರಿಗಳಿಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ನೋಟಿಸ್ ನೀಡಿದ್ದರು. 'ಗೈರು ಹಾಜರಿಗೆ ಕಾರಣವೇನು' ಎಂಬುದನ್ನು ತಿಳಿಸುವಂತೆ ಸೂಚಿಸಿದ್ದರು. ಈ ನೋಟಿಸ್‌ನಿಂದಾಗಿ ಹಲವರು ಅಧಿಕಾರಿಗಳು ಬೇಸರಗೊಂಡಿದ್ದರೆಂದು ಗೊತ್ತಾಗಿದೆ.

'ಅಲೋಕ್ ಮೋಹನ್ ಬಗ್ಗೆ ಬೇಸರ'

ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರು ಅಧಿಕಾರಿಗಳನ್ನು ನಡೆಸಿಕೊಳ್ಳುವ ರೀತಿಯ ಬಗ್ಗೆ ಕೆಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆಂದು ಗೊತ್ತಾಗಿದೆ.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರ ಬಳಿ ಅಳಲು ತೋಡಿಕೊಂಡಿರುವ ಹಿರಿಯ ಅಧಿಕಾರಿಯೊಬ್ಬರು, ಸಣ್ಣಪುಟ್ಟ ಕೆಲಸಗಳನ್ನು ಮುಂದಿಟ್ಟುಕೊಂಡು ಹಿರಿಯ ಅಧಿಕಾರಿಗಳನ್ನು ಹೀಯಾಳಿಸುತ್ತಿದ್ದಾರೆ. ಅಲೋಕ್ ಮೋಹನ್ ಬಳಿ ಕೆಲಸ ಮಾಡಲು ಸಾಧ್ಯವಿಲ್ಲ. ಪೊಲೀಸ್ ಇಲಾಖೆ ಬಿಟ್ಟು ಬೇರೆ ಹುದ್ದೆ ನೀಡಿ' ಎಂದಿರುವುದಾಗಿ ಮೂಲಗಳು ಹೇಳಿವೆ.

ಪ್ರತಾಪ್ ರೆಡ್ಡಿ ಅವರ ರಾಜೀನಾಮೆಗೂ ಇದೇ ಕಾರಣ ಇರಬಹುದು ಎಂಬ ಚರ್ಚೆ ಪೊಲೀಸ್ ವಲಯದಲ್ಲಿದೆ. ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಯತ್ನಿಸಿದರೂ ಅಲೋಕ್ ಮೋಹನ್ ಲಭ್ಯರಾಗಲಿಲ್ಲ.

ಪತ್ನಿ ಕಾಡಿಗೆ ಕಳುಹಿಸಿದ ರಾಮ ನಮ್ಮವನಲ್ಲ

ಕಾಯಕ ಶರಣರ ಜಯಂತಿ ಕಾರ್ಯಕ್ರಮದಲ್ಲಿ ಬಸವ ಹರಳಯ್ಯ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ತ್ರೀಯ ಮುಂದೆಲೆ, ಮೂಗು ಕೊಯ್ದು, ಪತ್ನಿಯನ್ನೇ ಕಾಡಿಗಟ್ಟಿದ ರಾಮ ನಮ್ಮ ರಾಮನಲ್ಲ. ಆದರೂ ಎಲ್ಲರೂ ಈ ರಾಮನ ಬೆನ್ನತ್ತಿರುವುದು ವಿಪರ್ಯಾಸ' ಎಂದು ಚಿತ್ರದುರ್ಗದ ಹರಳಯ್ಯ ಗುರುಪೀಠದ ಬಸವ ಹರಳಯ್ಯ ಸ್ವಾಮೀಜಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಶನಿವಾರ ನಗರದಲ್ಲಿ ಆಯೋಜಿಸಿದ್ದ ಕಾಯಕ ಶರಣರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನಾವು ಯಾವ ರಾಮನ ಬೆನ್ನತ್ತಿದ್ದೇವೆ ಎಂಬ ತಿಳಿವಳಿಕೆ ಇರಬೇಕು. ಸ್ತ್ರೀಯರನ್ನು ಅಗೌರವಿಸಿದ ರಾಮನ ಬದಲು, 12ನೇ ಶತಮಾನದಲ್ಲಿ ಮಾದಾರ ಚೆನ್ನಯ್ಯ ಶರಣರು ಹೇಳಿರುವ ಕುಲ, ಹೊಲೆ, ಸೂತಕವಿಲ್ಲದ ರಾಮ ನಮ್ಮವನಾಗಬೇಕು' ಎಂದು ಪ್ರತಿಪಾದಿಸಿದರು.

'ರಾಮ ಮಂದಿರ ಉದ್ಘಾಟನೆಗೆ ಹೋದ ಸುತ್ತೂರು ಶ್ರೀಗಳು, ಅಮಿತಾಬ್ ಬಚ್ಚನ್ ಎಲ್ಲ ಹೊರಗೆ ನಿಲ್ಲಬೇಕಾಯಿತು. ಕಾಯಕ ಮಾಡುವವರು ಮೋಚಿ, ಮಾದರ, ಸಮಗಾರ ಬೇರೆ ಬೇರೆ ಎಂದೆಲ್ಲ ಹೇಳುತ್ತಾ ಪ್ರತ್ಯೇಕವಾಗಿ ಉಳಿದರೆ ನಾವೂ ಹೊರಗುಳಿಯಬೇಕಾಗುತ್ತದೆ. ಎಲ್ಲ ಸಮುದಾಯಗಳು ಒಗ್ಗೂಡಬೇಕು' ಎಂದು ಸಲಹೆ ನೀಡಿದರು.

'ಕಲ್ಲಿಗೆ ಪ್ರಾಣ ಪ್ರತಿಷ್ಠೆ ಮಾಡುವವರು ತಮ್ಮ ಪತ್ನಿ, ಮಕ್ಕಳು ಸತ್ತರೆ ಯಾಕೆ ಪ್ರಾಣ ಪ್ರತಿಷ್ಠೆ ಮಾಡಿ ಬದುಕಿಸುತ್ತಿಲ್ಲ. ಪ್ರಾಣ ಪ್ರತಿಷ್ಠೆಯ ಹೆಸರಲ್ಲಿ ನಮ್ಮನ್ನು ಮೂರ್ಖರನ್ನಾಗಿ ಮಾಡುತ್ತಿದ್ದಾರೆ' ಎಂದು ಟೀಕಿಸಿದರು.

ಮಾದಾರ ಚೆನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ಅವರು, 'ಕಾಯಕ ಶರಣರು ಎಂದು ಮಾದಾರ ಚೆನ್ನಯ್ಯ, ಮಾದಾರ ಧೂಳಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಉರಿಲಿಂಗಪೆದ್ದಿ ಮುಂತಾದ ಶರಣರ ಜಯಂತಿಯನ್ನು ಒಟ್ಟಿಗೆ ಮಾಡುವ ಮೂಲಕ ನಾವೆಲ್ಲ ಒಟ್ಟಿಗೆ ಇರಬೇಕು ಎಂಬ ಸಂದೇಶವನ್ನು ಸರ್ಕಾರವೇ ನೀಡಿದೆ' ಎಂದು ಹೇಳಿದರು.

ಕನ್ನಡ ಸಹಾಯಕ ಪ್ರಾಧ್ಯಾಪಕ ಎಚ್.ಲಕ್ಷ್ಮೀನಾರಾಯಣ ಸ್ವಾಮಿ ಉಪನ್ಯಾಸ ನೀಡಿದರು. ಬೀದರ್‌ನ ಹರಳಯ್ಯ ಮಠದ ಬಸವಪ್ರಭು ಸ್ವಾಮೀಜಿ, ಆಹಾರ, ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ, ಕೇಂದ್ರ ಮಾಜಿ ಸಚಿವೆ ರತ್ನಮಾಲಾ, ಮಾಜಿ ಸಚಿವ ಎಚ್.ಆಂಜನೇಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಎನ್. ಮಂಜುಳಾ, ನಿರ್ದೇಶಕಿ ಧರಣಿದೇವಿ ಮಾಲಗತ್ತಿ, ಸಮಾಜದ ಮುಖಂಡರು ಭಾಗವಹಿಸಿದ್ದರು.

ನಗರದಲ್ಲಿ ಶನಿವಾರ ಆಯೋಜಿಸಲಾಗಿದ್ದ ಕಾಯಕ ಶರಣರ ಜಯಂತಿಯನ್ನು ಸಚಿವ ಶಿವರಾಜ ಎಸ್. ತಂಗಡಗಿ ಉದ್ಘಾಟಿಸಿದರು. ಚಿತ್ರದುರ್ಗದ ಹರಳಯ್ಯ ಗುರುಪೀಠದ ಬಸವಹರಳಯ್ಯ ಸ್ವಾಮೀಜಿ, ಮಾಜಿ ಸಚಿವ ಎಚ್. ಆಂಜನೇಯ, ಬೀದರ್‌ನ ಹರಳಯ್ಯ ಮಠದ ಬಸವ ಪ್ರಭು ಸ್ವಾಮೀಜಿ, ಚಿತ್ರದುರ್ಗ ಮಾದಾರ ಚೆನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

'ಅಧ್ಯಯನ ಪೀಠ ಸ್ಥಾಪನೆಗೆ ಕ್ರಮ'

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆಗೆ ಚರ್ಚಿಸಿ ಮಾದಾರ ಚೆನ್ನಯ್ಯ, ಮಾದಾರ ಧೂಳಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಉರಿಲಿಂಗಪೆದ್ದಿ ಅವರ ಅಧ್ಯಯನ ಪೀಠ ಸ್ಥಾಪನೆಗೆ ಕ್ರಮವಹಿಸಲಾಗುವುದು' ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ಎಸ್. ತಂಗಡಗಿ ತಿಳಿಸಿದರು.

'ಅತ್ಯುನ್ನತ ನಾಗರಿಕ ಪ್ರಶಸ್ತಿ 'ಭಾರತರತ್ನ'ವನ್ನು ಬಾಬು ಜಗಜೀವನ್ ರಾಮ್ ಅವರಿಗೆ ಕೇಂದ್ರ ಘೋಷಿಸಬೇಕು. ಈ ಬಗ್ಗೆ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಕೇಂದ್ರ ಪತ್ರ ಬರೆಯಲಾಗುವುದು' ಎಂದರು.

15ರಿಂದ ಎನ್‌ಎಚ್‌ಎಂ ನೌಕರರ ಅನಿರ್ದಿಷ್ಟಾವಧಿ ಪ್ರತಿಭಟನೆ

ಬೆಂಗಳೂರು: 'ಸಮುದಾಯ ಆರೋಗ್ಯ ಅಧಿಕಾರಿಗಳನ್ನು ಕಾಯಂಗೊಳಿಸಬೇಕು ಎಂಬ ಬೇಡಿಕೆಯು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇದೇ 15ರಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು' ಎಂದು ಅಖಿಲ ಕರ್ನಾಟಕ ರಾಜ್ಯ ಸಮುದಾಯ ಆರೋಗ್ಯ ಎನ್‌ಎಚ್‌ಎಂ ಗುತ್ತಿಗೆ ನೌಕರರ ಸಂಘ ತಿಳಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಮಮಿತ ಗಾಯಕವಾಡ್, 'ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಗುತ್ತಿಗೆ ಆಧಾರದ ಇತರೆ ನೌಕರರಿಗೆ ನೀಡಿದಂತೆ ಶೇ 15ರಷ್ಟು ವೇತನ ಹೆಚ್ಚಳವನ್ನು ಸಮುದಾಯ ಆರೋಗ್ಯ ಅಧಿಕಾರಿಗಳಿಗೂ ನೀಡಬೇಕು. ತಡೆಹಿಡಿದ ಶೇ 5ರಷ್ಟು ವಾರ್ಷಿಕ ವೇತನ, ಶೇ 10ರಷ್ಟು ಬೋನಸ್ ಕೂಡಲೇ ಪಾವತಿಸಬೇಕು' ಎಂದು ಆಗ್ರಹಿಸಿದರು.

'ವಿನಾಕಾರಣ ವಜಾಗೊಳಿಸಿದ ಎಲ್ಲ ಸಮುದಾಯ ಆರೋಗ್ಯ ಅಧಿಕಾರಿಗಳನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳಬೇಕು. ಮಾಸಿಕ ₹15 ಸಾವಿರ ಪ್ರೋತ್ಸಾಹ ಧನ ನೀಡಬೇಕು. ಜಿಲ್ಲೆಯಿಂದ ಜಿಲ್ಲೆಗೆ ವರ್ಗಾವಣೆಗೆ ಅವಕಾಶ ಕಲ್ಪಿಸಬೇಕು. ಆರೋಗ್ಯ, ಕ್ಷೇಮ ಕೇಂದ್ರಗಳಲ್ಲಿ ಕುಡಿಯುವ ನೀರು, ಶೌಚಾಲಯ, ಸ್ವಚ್ಛತಾ ಸೇವೆ ಇತರೆ ಔಷಧಗಳನ್ನು ಕಡ್ಡಾಯವಾಗಿ ಒದಗಿಸಬೇಕು' ಎಂದು ಒತ್ತಾಯಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಚನ್ನಪ್ಪ ನಾಯ್ಕ ಬಣಕಾರ ಭಾಗವಹಿಸಿದ್ದರು.

ಗೋಕರ್ಣದಲ್ಲಿ ನಾಪತ್ತೆಯಾಗಿದ್ದ ಜಪಾನ್ ಮಹಿಳೆ ಕೇರಳದಲ್ಲಿ ಪತ್ತೆ

ಪ್ರಜಾವಾಣಿ ವಾರ್ತೆ

ಗೋಕರ್ಣ: ಗೋಕರ್ಣದಿಂದ ಫೆಬ್ರುವರಿ 5ರಂದು ನಾಪತ್ತೆಯಾಗಿದ್ದ ಜಪಾನ ದೇಶದ ಮಹಿಳೆ ಎಮಿ ಯಮಾಝಾಕಿ (43) ಶುಕ್ರವಾರ ರಾತ್ರಿ ಕೇರಳದ ತಿರುವನಂತಪುರದಲ್ಲಿ ಪತ್ತೆ ಆಗಿದ್ದಾರೆ.

'ಪ್ರವಾಸಕ್ಕೆಂದು ಗೋಕರ್ಣಕ್ಕೆ ಬಂದಿದ್ದ ಎಮಿ, ಪತಿ ದೈ ಯಮಾಝಾಕಿ ಜೊತೆ ಜಗಳವಾಡಿ ರೈಲಿನಲ್ಲಿ ಕೇರಳಕ್ಕೆ ಹೋಗಿದ್ದರು. ಗೋಕರ್ಣ ಪೊಲೀಸ್ ಠಾಣೆಗೆ ನಾಪತ್ತೆ ಕುರಿತು ಪತಿ ದೂರು ದಾಖಲಿಸಿದ್ದರು. ಮೊಬೈಲ್ ನೆಟ್‌ವರ್ಕ್ ಮೂಲಕ ಎಮಿ ಕೇರಳದಲ್ಲಿ ಇದ್ದಾರೆ ಎಂಬುದು ಗೊತ್ತಾಯಿತು. ನಂತರ ಅವರನ್ನು ಪತಿಗೆ ಒಪ್ಪಿಸಲಾಯಿತು' ಎಂದು ಪೊಲೀಸರು ತಿಳಿಸಿದ್ದಾರೆ.

ಗೋಕರ್ಣ ಪಿಎಸ್‌ಐ ಖಾದರ್ ಭಾಷಾ ಮತ್ತು ಸುಧಾ ಅಘನಾಶಿನಿ ನೇತೃತ್ವದಲ್ಲಿ ಪೊಲೀಸರ ವಿಶೇಷ ತಂಡ ರಚಿಸಲಾಗಿತ್ತು. ಈ ಕುರಿತು ಜಪಾನ್ ರಾಯಭಾರಿ ಕಚೇರಿಯ ಗಮನಕ್ಕೂ ತರಲಾಗಿತ್ತು.

'ಸಂಗೀತಕ್ಕಿದೆ ವಿಶೇಷ ಸಮ್ಮೋಹನ ಶಕ್ತಿ'

ಪ್ರಜಾವಾಣಿ ವಾರ್ತೆ

ಹೇಮಾ ಪಟ್ಟಣಶೆಟ್ಟಿ

ಬೆಂಗಳೂರು: 'ಸಂಗೀತ ಹೃದಯ ಸ್ಪರ್ಶಿ ಕಲೆಯಾಗಿದ್ದು, ಅದಕ್ಕೆ ವಿಶಿಷ್ಟ ಸಮ್ಮೋಹನ ಶಕ್ತಿಇದೆ' ಎಂದು ಲೇಖಕಿ ಹೇಮಾ ಪಟ್ಟಣಶೆಟ್ಟಿ ತಿಳಿಸಿದರು.

ಸಂಗೀತಗಂಗಾ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಮಾನಿನಿ ಕಲಾ ಕೂಟ' ಮಹಿಳಾ ಕಲಾವಿದರ ಹತ್ತನೆ ಸಮ್ಮೇಳನದಲ್ಲಿ ಅವರು ಮಾತನಾಡಿದರು.

'ಸಂಗೀತಕ್ಕೆ ಪ್ರಾಣಿ–ಪಕ್ಷಿಗಳು ಹಾಗೂ ಸಸ್ಯಗಳೂ ಪ್ರತಿಕ್ರಿಯೆ ನೀಡುತ್ತವೆ ಎನ್ನುವುದು ವೈಜ್ಞಾನಿಕ ಸಂಶೋಧನೆಗಳಿಂದ ದೃಢಪಟ್ಟಿದೆ. ಲಲಿತ ಕಲೆಗಳಲ್ಲಿ ಸಂಗೀತ ಒಂದು ಶುದ್ಧ ಕಲೆಯಾಗಿದ್ದು, ಅದು ಯಾವ ಆಶಯ ಹೇಳುವುದೋ ಅದೇ ಆಕೃತಿಯನ್ನು ಹೊಂದಿರುತ್ತದೆ. ಸಂಗೀತದಲ್ಲಿ ಪಾತ್ರ-ಪಾತ್ರೆ ಎರಡೂ ಒಂದೇ ಆಗಿರುತ್ತದೆ' ಎಂದು ಹೇಳಿದರು.

ಇದಕ್ಕೂ ಮೊದಲು ಚಿತ್ರರಂಗದ ಸಾಧನೆಗಾಗಿ ನಟಿ ವಿನಯಾ ಪ್ರಸಾದ್, ಸಂಗೀತ ಕ್ಷೇತ್ರದ ಸಾಧನೆಗಾಗಿ ಚಂದ್ರಿಕಾ ಗುರುರಾಜ್, ಕಾವ್ಯ ಕ್ಷೇತ್ರದ ಸಾಧನೆಗಾಗಿ ಎಲ್.ಜಿ. ಮೀರಾ ಅವರಿಗೆ 'ಸಾಧಕ ಮಾನಿನಿ ಪುರಸ್ಕಾರ- 2024' ಪ್ರದಾನ ಮಾಡಲಾಯಿತು.

ಸಮ್ಮೇಳನಾಧ್ಯಕ್ಷೆ, ಗಾಯಕಿ ಎಂ.ಕೆ. ಜಯಶ್ರೀ ಅವರು ಹಾಡಿ, ಸಭಿಕರನ್ನು ರಂಜಿಸಿದರು. ದಿನವಿಡೀ ನಡೆದ ಕಾರ್ಯಕ್ರಮದಲ್ಲಿ ಗೀತ ಪೂಜಾರಿ ಅವರ ಕಲಾಭಾರತಿ ತಂಡವು 'ಪುಣ್ಯಕೋಟಿ' ಗೀತ ನೃತ್ಯ ರೂಪಕ ಪ್ರಸ್ತುತಪಡಿಸಿತು. ಯಕ್ಷಶ್ರೀ ಕಲಾವೃಂದವು 'ಕಂಸವಧೆ' ಯಕ್ಷಗಾನ ಪ್ರದರ್ಶಿಸಿತು.

'ಈಡಿಗ ಜನಾಂಗದ ಮರೆಯಲಾರದ ಮಹನೀಯರು' ಕೃತಿ ಬಿಡುಗಡೆ

'ಕನ್ನಡ ಸಂಸ್ಕೃತಿಗೆ ಈಡಿಗರ ಕೊಡುಗೆ ಅಪಾರ'

ಪ್ರಜಾವಾಣಿ ವಾರ್ತೆ

ಮೈಸೂರು: 'ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಈಡಿಗ ಸಮುದಾಯದ ಪಾತ್ರ ಮಹತ್ವದ್ದಾಗಿದೆ. ನಾಡು ಕಟ್ಟುವ ಪ್ರಕ್ರಿಯೆಯಲ್ಲಿ ಹಲವು ಕೊಡುಗೆಗಳನ್ನು ನೀಡಿದೆ' ಎಂದು ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಪದ್ಮಾ ಶೇಖರ್ ಬಣ್ಣಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ, ಸ್ಪಂದನ ಸಾಂಸ್ಕೃತಿಕ ಪರಿಷತ್ತು, ಕದಂಬ ಕಲಾಪೀಠ ಹಾಗೂ ಉದಯಗಿರಿ ಕನ್ನಡ ಸಂಘದ ಸಹಯೋಗದಲ್ಲಿ ಇಲ್ಲಿನ ಎಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಸುಜಯಾ ಸುರೇಶ್ ಸಂಪಾದಕತ್ವದ 'ಈಡಿಗ ಜನಾಂಗದ ಮರೆಯಲಾರದ ಮಹನೀಯರು' ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ಸೇಂದಿ ತಯಾರಿಕೆಯು ಈಡಿಗರ ಮೂಲಕಸುಬಾದರೂ ಅಷ್ಟಕ್ಕೇ ಅವರ ಸೇವೆ ಸೀಮಿತವಾಗಿರಲಿಲ್ಲ. ಸೇನೆ ಒಳಗೊಂಡು ಅನೇಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದರು ಎನ್ನುವುದನ್ನು ಹಲವು ಶಾಸನಗಳು ದಾಖಲಿಸಿವೆ. ಆಧುನಿಕ ಕರ್ನಾಟಕ ಕಟ್ಟುವಲ್ಲೂ ಈ ಸಮುದಾಯ ಮುಂಚೂಣಿಯಲ್ಲಿದ್ದು, ಮಾಧ್ಯಮ, ರಾಜಕೀಯ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ಛಾಪು ಮೂಡಿಸಿದೆ' ಎಂದರು.

'ಈಡಿಗ ಸಮುದಾಯದ ಬಗ್ಗೆ ಬಿಡಿಬಿಡಿ ಲೇಖನಗಳು ಬಂದಿವೆಯಾದರೂ ಸಮಗ್ರ ಕೃತಿಯ ಕೊರತೆ ಇತ್ತು. ಅದನ್ನು ಈ ಪುಸ್ತಕವು ನೀಗಿಸಿದೆ. ಹೊಸ ಸಂಶೋಧಕರು ಹಾಗೂ ಸಮುದಾಯದ ಆಸಕ್ತರಿಗೆ ಕೈಪಿಡಿ ಆಗಿದೆ. ಲೇಖಕಿ ಕೇವಲ 7ನೇ ತರಗತಿ ಓದಿದ್ದರೂ ಸಂಶೋಧಕರ ಶಿಸ್ತಿನಂತೆ ಕೆಲಸ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪುಸ್ತಕ ಬಿಡುಗಡೆ ಮಾಡಿದ ಸಾಹಿತಿ ಸಿ.ಪಿ. ಕೃಷ್ಣಕುಮಾರ್, 'ಈಡಿಗರು ದೇಶವಿಶಾಲ ಮನೋಭಾವ ಹೊಂದಿರುವವರು. ಬೇರೆ ರಾಜ್ಯಗಳಲ್ಲಿ ಬೇರೆ ಹೆಸರಿನಿಂದ ಗುರುತಿಸಲ್ಪಟ್ಟಿದ್ದಾರೆ. ಈ ಸಮುದಾಯದ ಅನೇಕ ಮಹನೀಯರು ಸಮಾಜಕ್ಕೆ ಕೊಡುಗೆ ನೀಡಿದ್ದಾರೆ' ಎಂದು ಸ್ಮರಿಸಿದರು.

'ಸಮುದಾಯದವರಾದ ನಾರಾಯಣ ಗುರುಗಳು ರಕ್ತಸಿಕ್ತ ಇತಿಹಾಸವುಳ್ಳ ಇಡೀ ಕೇರಳವನ್ನು ಪರಿವರ್ತಿಸಿದ ಕ್ರಾಂತಿಕಾರಿ ಸಮಾಜ ಸುಧಾರಕ. ಬಸವಣ್ಣರ ಸಾಲಿನಲ್ಲಿ ನಿಲ್ಲುವಂತ ಸಾಂಸ್ಕೃತಿಕ ನಾಯಕ. ಈ ಸಮುದಾಯದವರೇ ಆದ ರಾಜಕುಮಾರ್, ಎಸ್. ಬಂಗಾರಪ್ಪ ಅವರಂಥವರು ನಾಡಿನ ಸಂಸ್ಕೃತಿಗೆ ಕೊಟ್ಟ ಮೌಲ್ವಿಕ ಕೊಡುಗೆ ಅಪಾರ' ಎಂದು ನೆನೆದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು.

ಮೈಸೂರಿನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ 'ಈಡಿಗ ಜನಾಂಗದ ಮರೆಯಲಾರದ ಮಹನೀಯರು' ಕೃತಿಯನ್ನು ಸಾಹಿತಿ ಸಿ.ಪಿ. ಕೃಷ್ಣಕುಮಾರ್ ಬಿಡುಗಡೆ ಮಾಡಿದರು. ಸತೀಶ್ ಜವರೇಗೌಡ, ಕೃತಿಯ ಲೇಖಕಿ ಸುಜಯಾ ಸುರೇಶ್, ಮಡ್ಡೀಕೆರೆ ಗೋಪಾಲ್, ಪದ್ಮಾ ಶೇಖರ್, ವೈ.ಡಿ. ರಾಜಣ್ಣ, ಎಚ್.ಕೆ. ಪಾಂಡು, ವಿದ್ಯಾಸಾಗರ ಕದಂಬ ಹಾಗೂ ಬಸವರಾಜು ಪಾಲ್ಗೊಂಡಿದ್ದರು

'ಪುಸ್ತಕ ಸಂತೆ'ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ

'ಪುಸ್ತಕ ಕೊಂಡು ಓದಿ, ವೈಚಾರಿಕತೆ ಬೆಳೆಸಿಕೊಳ್ಳಿ'

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಎಚ್‌ಎಸ್‌ಆರ್ ಬಡಾವಣೆಯ ಸ್ವಾಭಿಮಾನ ಉದ್ಯಾನದಲ್ಲಿ ವೀರಲೋಕ ಪ್ರಕಾಶನದ ನೇತೃತ್ವದಲ್ಲಿ ಆಯೋಜಿಸಿರುವ ಎರಡು ದಿನಗಳ 'ಪುಸ್ತಕ ಸಂತೆ'ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಚಾಲನೆ ನೀಡಿದರು.

'ತಂತ್ರಜ್ಞಾನ ಯುಗದಲ್ಲಿ ಯುವಜನತೆ ಗ್ಯಾಜೆಟ್, ಸಾಮಾಜಿಕ ಜಾಲತಾಣದಲ್ಲಿ ಮುಳುಗಿ ಹೋಗದೇ ಓದುವ ಸಂಸ್ಕೃತಿ ರೂಢಿಸಿಕೊಳ್ಳಬೇಕು ಮತ್ತು ಪುಸ್ತಕಗಳನ್ನು ಕೊಂಡು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು' ಎಂದು ಸಿದ್ದರಾಮಯ್ಯ ಕರೆ ನೀಡಿದರು.

ಕರ್ನಾಟಕ ರಾಣಿಯರ ಆಡಳಿತ ನೀತಿ, ಮೂಲಭೂತ ಹಕ್ಕುಗಳು, ಸಂಸದೀಯ ಇತಿಹಾಸ, 1897ರ ಸಾಮಾನ್ಯ ಖಂಡಗಳ ಅಧಿನಿಯಮ, ವಕೀಲೆ ಮತ್ತು ಧರ್ಮವೃತ್ತಿ, ಪ್ರಜಾಪ್ರಭುತ್ವ ಮತ್ತು ಚುನಾವಣೆ ಪದ್ಧತಿ ಎಂಬ ಏಳು ಪುಸ್ತಕಗಳಿಗೆ ₹1 ಸಾವಿರ ನೀಡಿ ಸಿದ್ದರಾಮಯ್ಯ ಅವರು ಖರೀದಿಸಿದರು.

'ಸಾಹಿತ್ಯಿಕ ಚಟುವಟಿಕೆಗಳು ಅಪರೂಪವಾಗಿರುವ ಎಚ್‌ಎಸ್‌ಆರ್ ಬಡಾವಣೆ ಭಾಗದಲ್ಲಿ ಪುಸ್ತಕ ಸಂತೆಯಂತಹ ಕಾರ್ಯಕ್ರಮ ನಡೆಯುತ್ತಿರುವುದು ವಿಶೇಷ' ಎಂದು ಜನರು ಹರ್ಷ ವ್ಯಕ್ತಪಡಿಸಿದರು. ಮೊದಲ ದಿನ ಸುಮಾರು ಎಂಟು ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಗುಂಪುಗೂಡಿ ಖರೀದಿಯಲ್ಲಿ ಮಗ್ನರಾಗಿದ್ದರು. ಮಕ್ಕಳಿಗಾಗಿ ಕ್ಲೇ ಮಾಡೆಲಿಂಗ್, ಚಿತ್ರ ಕಲೆ ಸ್ಪರ್ಧೆ ಇತ್ಯಾದಿಗಾಗಿ ಪ್ರತ್ಯೇಕ ಸ್ಥಳ ನಿಗದಿಪಡಿಸಲಾಗಿತ್ತು. ಸ್ಥಳೀಯ ಶಾಲಾ ಮಕ್ಕಳು ಇಲ್ಲಿ ತಮಗಿಷ್ಟವಾದ ಆಟಿಕೆಗಳಲ್ಲಿ ಭಾಗವಹಿಸಿ ಖುಷಿಪಟ್ಟರು.

ಇದೇ ವೇದಿಕೆಯಲ್ಲಿ ಕವಿ ಬಿ.ಆರ್. ಲಕ್ಷ್ಮಣ್ ರಾವ್ ಸೇರಿದಂತೆ ವಿವಿಧ ಲೇಖಕರು 11 ಪುಸ್ತಕಗಳ ಬಿಡುಗಡೆ ಮಾಡಲಾಯಿತು.

ಹತ್ತು ಎಕರೆ ಪ್ರದೇಶದಲ್ಲಿರುವ ಸ್ವಾಭಿಮಾನ ಉದ್ಯಾನದಲ್ಲಿ ಪುಸ್ತಕ ಸಂತೆ ನಡೆಯುತ್ತಿದೆ. ಎರಡು ಸಾವಿರಕ್ಕೂ ವಿವಿಧ ಜಾತಿಯ ಮರಗಿಡಗಳು, ಕಲ್ಯಾಣಿ, ಬುದ್ಧಮಂದಿರ, ಕಾರಂಜಿ ಇರುವ ಹಸಿರು ಪರಿಸರವು 'ಪುಸ್ತಕ ಸಂತೆ'ಗೆ ಮತ್ತಷ್ಟು ಮೆರಗು ನೀಡಿತು.

ಒಂದೇ ಪ್ರದೇಶದಲ್ಲಿ ಸಾವಿರಾರೂ ವೈವಿಧ್ಯಮ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟವಿದೆ. ಮಕ್ಕಳ ಸಂತೆ, ಆಹಾರ ಮೇಳ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರ ಗಮನ ಸೆಳೆಯುತ್ತಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ನಟಿಯರಾದ ಮಮತಾ ರಾವತ್, ಚೈತ್ರಾ ಕೊಟ್ಟೂರು ಭಾಗವಹಿಸಿದ್ದರು. ಮಾಜಿ ಶಾಸಕ ವಿ.ಎಸ್.ಉಗ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ವೀರಲೋಕ ಬುಕ್ಸ್ ಸಂಸ್ಥಾಪಕ ವೀರಕಪುತ್ರ ಶ್ರೀನಿವಾಸ್ ಭಾಗವಹಿಸಿದ್ದರು.

ಮಳಿಗೆಯೊಂದರಲ್ಲಿ ಸಾಹಿತ್ಯಾಸಕ್ತರು ಪುಸ್ತಕಗಳನ್ನು ಖರೀದಿಸಿದರು.

'ಗ್ರಂಥಾಲಯಗಳನ್ನು ಸಂಸ್ಕೃತಿ ಕೇಂದ್ರಗಳನ್ನಾಗಿ ಮಾಡಿ'

'ರಾಜ್ಯ ಸರ್ಕಾರವು ಗ್ರಂಥಾಲಯಗಳಿಗಾಗಿ ಪುಸ್ತಕಗಳ ಸಗಟು ಖರೀದಿ ಮಾಡುವುದನ್ನು ಆಯಾ ವರ್ಷವೇ ಮಾಡಬೇಕು. ಗ್ರಂಥಾಲಯಗಳು ಉಗ್ರಾಣಗಳಂತಾಗದೇ ಸಂಸ್ಕೃತಿ ಕೇಂದ್ರಗಳನ್ನಾಗಿ ಕಾರ್ಯನಿರ್ವಹಿಸುವಂತೆ ಮಾರ್ಪಾಡು ಮಾಡಬೇಕು' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

'ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ಗ್ರಂಥಾಲಯ ಇಲಾಖೆಯನ್ನು ಆಯವ್ಯಯ ಪಟ್ಟಿಯಲ್ಲಿ ತಂದಿರುವುದಕ್ಕೆ ರಾಜ್ಯ ಸರ್ಕಾರವನ್ನು ಅಭಿನಂದಿಸುತ್ತೇನೆ. ಗ್ರಂಥಾಲಯ ಇಲಾಖೆಗೆ ಮುಂದಿನ ಬಜೆಟ್‌ನಲ್ಲಿ ಕನಿಷ್ಠ ₹25 ಕೋಟಿ ಮೀಸಲಿಡಬೇಕು' ಎಂದು ಮನವಿ ಮಾಡಿದರು.

ಸಂಕ್ಷಿಪ್ತ ಸುದ್ದಿ

ಉಮೇಶ್ ಶೆಟ್ಟಿ ವಿರುದ್ಧ ದೂರು

ಬೆಂಗಳೂರು: ಕಳೆದ ವಿಧಾನಸಭಾ ಚುನಾವಣೆಯಲ್ಲಿ ಗೋವಿಂದರಾಜನಗರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದ ಪಾಲಿಕೆಯ ಮಾಜಿ ಸದಸ್ಯ ಕೆ.ಉಮೇಶ್ ಶೆಟ್ಟಿ ಅವರು ಪಕ್ಷ ವಿರೋಧಿ ಚಟುವಟಿಕೆ ನಡೆಸುತ್ತಿದ್ದಾರೆ ಎಂದು ಆರೋಪಿಸಿ ಬಿಜೆಪಿ ಗೋವಿಂದರಾಜನಗರ ಮಂಡಲ ಸಮಿತಿ ಅಧ್ಯಕ್ಷ ವಿಶ್ವನಾಥ ಗೌಡ ಪಕ್ಷದ ಜಿಲ್ಲಾ ಘಟಕ ಹಾಗೂ ರಾಜ್ಯ ಘಟಕಕ್ಕೆ ದೂರು ನೀಡಿದ್ದಾರೆ.

'ಗೋವಿಂದರಾಜನಗರ ಕ್ಷೇತ್ರದ ವ್ಯಾಪ್ತಿಯಲ್ಲಿ ಪಕ್ಷದ ಕಚೇರಿ ಇದೆ. ಆದರೂ, ಉಮೇಶ್ ಶೆಟ್ಟಿ ಪ್ರತ್ಯೇಕ ಕಚೇರಿ ತೆರೆಯುವ ಮೂಲಕ ಪಕ್ಷದ ಕಾರ್ಯಕರ್ತರಲ್ಲಿ ಗೊಂದಲ ಮೂಡಿಸುತ್ತಿದ್ದಾರೆ. ಮಂಡಲ ಸಮಿತಿಯಿಂದ ನಡೆದ ಕಾರ್ಯಕಾರಿಣಿಗೆ ಹಾಜರಾಗದೇ ಪ್ರತ್ಯೇಕ ಸಭೆ ನಡೆಸಿರುತ್ತಾರೆ' ಎಂದು ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷರಿಗೆ ಬರೆದಿರುವ ಪತ್ರದಲ್ಲಿ ದೂರಿದ್ದಾರೆ.

ಉಮೇಶ್ ಶೆಟ್ಟಿ ಪಕ್ಷದ ಶಿಸ್ತು ಉಲ್ಲಂಘಿಸಿ ಚಟುವಟಿಕೆ ನಡೆಸುತ್ತಿದ್ದಾರೆ. ಪಕ್ಷ ವಿರೋಧಿ ಚಟುವಟಿಕೆ ನಡೆಸುತ್ತಿರುವ ಅವರ ವಿರುದ್ಧ ತಕ್ಷಣ ಶಿಸ್ತುಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದ್ದಾರೆ.

ಗಂಗಬೈರಯ್ಯ, ಮೋಹನ್ ಕುಮಾರ್, ದಾಸೇಗೌಡ, ಎಂ. ಚನ್ನಪ್ಪ, ಶಿಲ್ಪಾ ಶ್ರೀಧರ್, ರಾಜೇಶ್ವರಿ ಬೆಳಗೋಡು ಸೇರಿದಂತೆ ಪಾಲಿಕೆಯ ಒಂಬತ್ತು ಮಂದಿ ಮಾಜಿ ಸದಸ್ಯರು, ಬಿಜೆಪಿಯ ಯುವ ಮೋರ್ಚಾ, ಮಹಿಳಾ ಮೋರ್ಚಾ, ಅಲ್ಪಸಂಖ್ಯಾತರ ಮೋರ್ಚಾ, ಹಿಂದುಳಿದ ವರ್ಗಗಳ ಮೋರ್ಚಾ, ಪರಿಶಿಷ್ಟ ಜಾತಿ ಮೋರ್ಚಾ ಮತ್ತು ಪರಿಶಿಷ್ಟ ಪಂಗಡಗಳ ಮೋರ್ಚಾಗಳ ಅಧ್ಯಕ್ಷರು ಪತ್ರಕ್ಕೆ ಸಹಿ ಮಾಡಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತು ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಅವರಿಗೂ ದೂರಿನ ಪ್ರತಿಯನ್ನು ಕಳುಹಿಸಿದ್ದಾರೆ.

ನಿಗಮ: ಅಧಿಕಾರ ಸ್ವೀಕರಿಸದ ಜೆ.ಟಿ. ಪಾಟೀಲ

ಬಾಗಲಕೋಟೆ: ಜಿಲ್ಲೆಯ ಬೀಳಗಿ ಶಾಸಕ ಜೆ.ಟಿ. ಪಾಟೀಲ ಅವರು ಹಟ್ಟಿ ಚಿನ್ನದ ಗಣಿ ನಿಗಮದ ಅಧ್ಯಕ್ಷರಾಗಿ ನೇಮಕಗೊಂಡು ಎರಡು ವಾರವಾದರೂ ಇನ್ನೂ ಅಧಿಕಾರ ಸ್ವೀಕರಿಸಿಲ್ಲ. ಇವರು ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿ ವಿರುದ್ಧ ಪತ್ರ ಬರೆದು ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದರು.

'ಹಟ್ಟಿ ಚಿನ್ನದ ಗಣಿ ಕೆಲ ಪ್ರದೇಶಕ್ಕೆ ಮಾತ್ರ ಸೀಮಿತವಾಗಿದೆ. ಜನರ ಸಮಸ್ಯೆಗಳಿಗೆ ಸ್ಪಂದಿಸುವ ಅವಕಾಶ ಇಲ್ಲ' ಎಂದು ಆಪ್ತರ ಜೊತೆ ಬೇಸರ ವ್ಯಕ್ತಪಡಿಸಿದ್ದಾರೆ.

'ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಭೇಟಿಯಾಗುವವರೆಗೆ ಅಧಿಕಾರ ವಹಿಸಿಕೊಳ್ಳಲ್ಲ. ಅಸಮಾಧಾನವಿದೆ ಎನ್ನುವುದಕ್ಕಿಂತ ಅವರೊಂದಿಗೆ ಮಾತನಾಡಬೇಕಿದೆ' ಎಂದು ಜೆ.ಟಿ. ಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದರು.

ಶಾರ್ಟ್ ಸರ್ಕಿಟ್–ಪೋಷಕ ಸಾವು: 18 ಮಂದಿ ಅಸ್ವಸ್ಥ

ಗೌರಿಬಿದನೂರು: ಇಲ್ಲಿನ ಕಲ್ಲಂತರಾಯನಗುಟ್ಟೆಯ ಶಾಲೆಯಲ್ಲಿ ಶನಿವಾರ ನಡೆದ ಕ್ರೀಡಾಕೂಟ ಸಮಾರೋಪ ಸಮಾರಂಭದ ವೇಳೆ ವೇದಿಕೆ ಶಾಮಿಯಾನ ವಿದ್ಯುತ್ ತಂತಿಗೆ ತಗುಲಿ ಶಾರ್ಟ್ ಸರ್ಕಿಟ್‌ನಿಂದ ಪೋಷಕರೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಬಿಬಿಎಂಪಿಗೆ ಹೊಸದಾಗಿ ಸೇರಿರುವ ಹಳ್ಳಿಗಳಲ್ಲಿ ಮೂಲಸೌಕರ್ಯ ಮರೀಚಿಕೆ; ತಪ್ಪದ ಬವಣೆ

ಯಲಹಂಕದಲ್ಲಿ ಸೊರಗಿದ ಹಳ್ಳಿಗಳು...

• ಡಿ.ಸುರೇಶ್

ದೊಡ್ಡಬೆಟ್ಟಹಳ್ಳಿ ಗ್ರಾಮದಲ್ಲಿ ಬಂದ್ ಆಗಿರುವ ಸರ್ಕಾರಿ ಆಸ್ಪತ್ರೆ.

ದೊಡ್ಡಬೆಟ್ಟಹಳ್ಳಿ ಗ್ರಾಮದ ಮುಖ್ಯರಸ್ತೆಯ ನಾಡಕಚೇರಿ ಬಳಿ ಹರಡಿರುವ ಕಸದ ರಾಶಿ.

ಯಲಹಂಕ: ಒಳಚರಂಡಿ ಸೌಲಭ್ಯ ಮತ್ತು ಕಾವೇರಿ ನೀರು ಪೂರೈಕೆಯ ಅಪೂರ್ಣ ಕಾಮಗಾರಿ, ಕಟ್ಟಿಕೊಂಡಿರುವ ಚರಂಡಿ, ರಸ್ತೆ ಪಕ್ಕದಲ್ಲೇ ಕಸದ ರಾಶಿ, ಬಾಗಿಲು ಮುಚ್ಚಿರುವ ಸರ್ಕಾರಿ ಆಸ್ಪತ್ರೆ, ಹೂಳು ತುಂಬಿದ ರಾಜಕಾಲುವೆ, ಮಳೆ ಬಂದರೆ ಮನೆಗಳಿಗೆ ನುಗ್ಗುವ ಚರಂಡಿ ನೀರು...

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾಗಿರುವ 110 ಹಳ್ಳಿಗಳ ಪೈಕಿ ಯಲಹಂಕ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಕೆಲವು ಗ್ರಾಮಗಳ ಶೋಚನೀಯ ಸ್ಥಿತಿ ಇದು.

ಗೋವಿಂದಪುರ, ಹಾರೋಹಳ್ಳಿ, ಕೆಂಚೇನಹಳ್ಳಿ, ಅನಂತಪುರ, ಮಂಚೇನಹಳ್ಳಿ, ವಸುದೇವಪುರ, ಚಿಕ್ಕಬೆಟ್ಟಹಳ್ಳಿ ಹಾಗೂ ದೊಡ್ಡಬೆಟ್ಟಹಳ್ಳಿ ಗ್ರಾಮಗಳು ಪಾಲಿಕೆಗೆ ಸೇರ್ಪಡೆಯಾಗಿ 15 ವರ್ಷ ಕಳೆದಿದ್ದರೂ ಕೆಲವು ಗ್ರಾಮಗಳಲ್ಲಿ ಮೂಲಸೌಕರ್ಯಗಳು ಇಂದಿಗೂ ಮರೀಚಿಕೆಯಾಗಿಯೇ ಉಳಿದಿವೆ.

ಭಾಷಣವೇ ಭೂಷಣ ಅಭಿವೃದ್ಧಿ ಗೌಣ

ದೊಡ್ಡಬೆಟ್ಟಹಳ್ಳಿ ಗ್ರಾಮದ ಮುಖ್ಯರಸ್ತೆ ಮತ್ತು ಕೆಲವು ಅಡ್ಡರಸ್ತೆಗಳಲ್ಲಿ ಒಳಚರಂಡಿ ಮತ್ತು ಕಾವೇರಿ ನೀರಿನ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಪೂರ್ಣಗೊಂಡು ಮೂರು ವರ್ಷಗಳು ಕಳೆದಿದ್ದರೂ ಇನ್ನೂ ಸಂಪರ್ಕ ಕಲ್ಪಿಸಿಲ್ಲ. ಸುತ್ತಮುತ್ತಲ ಕೆಲವು ಬಡಾವಣೆಗಳಲ್ಲಿ ಶೇ 50ರಷ್ಟು ಕಾಮಗಾರಿ ಪೂರ್ಣಗೊಂಡಿದ್ದರೆ, ಗ್ರಾಮದ ಒಳಗಿನ ಕೆಲವು ರಸ್ತೆಗಳಲ್ಲಿ ಇದುವರೆಗೂ ಕಾಮಗಾರಿಯೇ ಆರಂಭವಾಗಿಲ್ಲ ಎಂದು ಸ್ಥಳೀಯ ನಿವಾಸಿ ಎ.ಎಂ.ಕಲಂದರ್ ದೂರುತ್ತಾರೆ.

12 ವರ್ಷಗಳ ಹಿಂದೆ ದೊಡ್ಡಬೆಟ್ಟಹಳ್ಳಿಯಲ್ಲಿ ಬಿಬಿಎಂಪಿಯಿಂದ ಪ್ರಾಥಮಿಕ ಆರೋಗ್ಯ ಕೇಂದ್ರ ಆರಂಭವಾಯಿತು. ಉತ್ತಮ ವೈದ್ಯರು ಹಾಗೂ ಸಿಬ್ಬಂದಿ ನಿಯೋಜಿಸಿ, ಮೂರು ವರ್ಷ ಸುತ್ತಮುತ್ತಲ ಗ್ರಾಮಗಳ ಬಡಜನರಿಗೆ ಉತ್ತಮ ಆರೋಗ್ಯ ಸೇವೆ ಕಲ್ಪಿಸಲಾಯಿತು. ನಂತರ, ವೈದ್ಯರ ಕೊರತೆ ಕಾರಣನೀಡಿ ಬಾಗಿಲು ಬಂದ್ ಮಾಡಲಾಯಿತು. ಇದಾಗಿ 8 ವರ್ಷ ಕಳೆದಿದೆ. ಇನ್ನು ತೆರೆದಿಲ್ಲ. ಜನರು ಆರೋಗ್ಯ ಸೇವೆಗೆ ದೂರದ ಯಲಹಂಕ, ಯಶವಂತಪುರ ಹಾಗೂ ಅಬ್ಬಿಗೆರೆ ಸರ್ಕಾರಿ ಆಸ್ಪತ್ರೆಗಳಿಗೆ ತೆರಳಬೇಕಾದ ಸ್ಥಿತಿಯಿದೆ.

'ದೊಡ್ಡಬೆಟ್ಟಹಳ್ಳಿ ನಾಡ ಕಚೇರಿ ಹಿಂಭಾಗದ ಸಣ್ಣ ಓಣಿಯಲ್ಲಿ 18 ಮನೆಗಳಿದ್ದು, ಕೇವಲ 8 ಅಡಿ ಮಣ್ಣಿನ ರಸ್ತೆಯಿದೆ. ಈ ಪ್ರದೇಶದಲ್ಲಿ ಚರಂಡಿ ಮತ್ತು ಕಾಂಕ್ರೀಟ್ ರಸ್ತೆ ನಿರ್ಮಿಸಿಲ್ಲ. ಇದರಿಂದ ವಾಹನ ಸಂಚಾರ, ಮಕ್ಕಳು ಮತ್ತು ವೃದ್ಧರು ನಡೆದಾಡಲು ಸಮಸ್ಯೆಯಿದೆ. ಸಮರ್ಪಕ ಬೀದಿದೀಪದ ವ್ಯವಸ್ಥೆಯಿಲ್ಲದೆ ರಾತ್ರಿ ವೇಳೆ ಸಂಚರಿಸುವುದೇ ಕಷ್ಟವಾಗಿದೆ. ಕೊಳಚೆನೀರು ಹರಿದುಹೋಗಲು ಚರಂಡಿಯಿ. ಮನೆಯ ಮುಂದೆ ನಿರ್ಮಿಸಿಕೊಂಡಿರುವ ಗುಂಡಿಗಳಿಗೆ ನೀರು ಬಿಡಲಾಗುತ್ತಿದೆ' ಎಂದು ಸ್ಥಳೀಯ ನಿವಾಸಿ ನಗೀನಾ ದೂರಿದರು.

'ಮಳೆಗಾಲದಲ್ಲಿ ಮಳೆನೀರಿನ ಜೊತೆಗೆ ಕೊಳಚೆನೀರು ಮನೆಗಳಿಗೆ ನುಗ್ಗುವುದರಿಂದ ತೊಂದರೆ ಅನುಭವಿಸಬೇಕಾಗಿದೆ. ಕಳೆದ 8 ವರ್ಷಗಳಿಂದ ಬಿಬಿಎಂಪಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಗೆ ಮನವಿ ಮಾಡುತ್ತಿದ್ದರೂ ಪ್ರಯೋಜನವಾಗಿಲ್ಲ. ಚಿಕ್ಕಜಾಗದಲ್ಲಿ ಕಾಮಗಾರಿ ಕೈಗೊಳ್ಳಲು ಸಾಧ್ಯವಿಲ್ಲ ಎಂದು ಅಧಿಕಾರಿಗಳು ಸಬೂಬು ನೀಡುತ್ತಿದ್ದಾರೆ. ಕೇವಲ ಚುನಾವಣೆ ಸಂದರ್ಭಗಳಲ್ಲಿ ಭೇಟಿ ನೀಡುವ ಜನಪ್ರತಿನಿಧಿಗಳು ಮತ್ತೆ ಇತ್ತ ಸುಳಿಯುವುದೇ ಇಲ್ಲ' ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸುತ್ತಾರೆ.

ವಾಹನ ಸಂಚಾರಕ್ಕೆ ತೊಂದರೆ



ಕೆಂಚೇನಹಳ್ಳಿ ಮತ್ತು ಹಾರೋಹಳ್ಳಿ ಗ್ರಾಮಗಳಲ್ಲಿ ಒಳಚರಂಡಿ ಕಾಮಗಾರಿ ಪ್ರಗತಿಯಲ್ಲಿದೆ. ಕಾವೇರಿ ನೀರಿನ ಮುಖ್ಯ ಪೈಲ್‌ಲೈನ್ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿದ್ದು, ಮನೆಗಳಿಗೆ ಇನ್ನೂ ಸಂಪರ್ಕ ನೀಡಿಲ್ಲ. ಒಳಚರಂಡಿಗಾಗಿ ಮುಖ್ಯರಸ್ತೆಯಲ್ಲಿ ಅಗೆದಿರುವ ಗುಂಡಿಗಳನ್ನು ಸರಿಯಾಗಿ ಮುಚ್ಚದ ಪರಿಣಾಮ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಈ ಪ್ರದೇಶಗಳಲ್ಲಿ ದೂಳು ಹರಡುತ್ತಿರುವುದರಿಂದ ಸ್ಥಳೀಯ ನಿವಾಸಿಗಳಿಗೆ ಸಮಸ್ಯೆಯಾಗುತ್ತಿದೆ. ಹಾರೋಹಳ್ಳಿಯಲ್ಲಿ ರಾಜಕಾಲುವೆ ಮತ್ತು ಗ್ರಾಮದ ಒಳಗಿನ ಚರಂಡಿಗಳಲ್ಲಿ ಕಸ ತುಂಬಿಕೊಂಡಿರುವುದರಿಂದ ಸರಿಯಾಗಿ ನೀರು ಹರಿಯಲು ಅವಕಾಶವಿಲ್ಲದಂತಾಗಿದೆ.

ನಾಗರಾಜರೆಡ್ಡಿ, ಕೆಂಚೇನಹಳ್ಳಿ

ಸಾರ್ವಜನಿಕರಿಗೆ ಕಿರಿಕಿರಿ

ದೊಡ್ಡಬೆಟ್ಟಹಳ್ಳಿ ಮುಖ್ಯರಸ್ತೆಯಲ್ಲಿ ಕಸದ ತೊಟ್ಟಿಗಳಿಲ್ಲದೇ ಜನರು ರಸ್ತೆಯ ಪಕ್ಕದಲ್ಲೇ ಕಸ ಎಸೆಯುವುದರಿಂದ ನಾಡಕಚೇರಿ ಬಳಿ ಕಸದರಾಶಿ ಹರಡಿದೆ. ಬಿಬಿಎಂಪಿ ವಲಯ ಕಚೇರಿ, ನಾಡ ಕಚೇರಿ ಕಟ್ಟಡಗಳ ಆವರಣದಲ್ಲಿ ಸ್ವಚ್ಛತೆ ಯಿಲ್ಲದೆ ಇಲ್ಲಿಗೆ ಭೇಟಿ ನೀಡುವ ಸಾರ್ವಜನಿಕರಿಗೆ ಕಿರಿಕಿರಿಯಾಗುತ್ತಿದೆ.

ಎನ್.ಬಾಷಾ ಸಾಹೇಬ್, ದೊಡ್ಡಬೆಟ್ಟಹಳ್ಳಿ ಬಡಾವಣೆ ನಿವಾಸಿ

ಪ್ರತಿಭಟನೆ; ಟೆಂಡರ್ ಪ್ರಕ್ರಿಯೆ ರದ್ದು

ಪರಿಹಾರ ನೀಡದೇ ರಸ್ತೆ ಅಭಿವೃದ್ಧಿಗೆ ರೈತರ ಆಕ್ರೋಶ

ಪ್ರಜಾವಾಣಿ ವಾರ್ತೆ

ಪಿಆರ್‌ಆರ್ ರಸ್ತೆ ಅಭಿವೃದ್ಧಿ ಕುರಿತು ಕರೆದಿರುವ ಟೆಂಡರ್ ವಿರೋಧಿಸಿ ಪಿ.ಆರ್.ಆರ್. ರೈತ ಹಾಗೂ ನಿವೇಶನದಾರರ ಸಂಘದ ಸದಸ್ಯರು ಶುಕ್ರವಾರ ಬಿಡಿಎ ಕೇಂದ್ರ ಕಚೇರಿ ಬಳಿ ಪ್ರತಿಭಟನೆ ನಡೆಸಿದರು. –ಪ್ರಜಾವಾಣಿ ಚಿತ್ರ

ಬೆಂಗಳೂರು: ಸಂತ್ರಸ್ತ ರೈತರಿಗೆ ಪರಿಹಾರ ಘೋಷಣೆ ಮಾಡದೇ ಪೆರಿಫೆರಲ್ ರಿಂಗ್ ರಸ್ತೆ (ಪಿಆರ್‌ಆರ್) ಅಭಿವೃದ್ಧಿಗಾಗಿ ಟೆಂಡರ್ ಕರೆಯಲು ಬಿಡುವುದಿಲ್ಲ ಎಂದು ಪಿಆರ್‌ಆರ್ ರೈತ ಮತ್ತು ನಿವೇಶನದಾರರ ಸಂಘದ ನೇತೃತ್ವದಲ್ಲಿ ರೈತರು ಬಿಡಿಎ ಕೇಂದ್ರ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಸಿದರು. ರೈತರು ಪಟ್ಟು ಸಡಿಲಿಸದ ಕಾರಣ ಟೆಂಡರ್ ಪ್ರಕ್ರಿಯೆಯನ್ನು ಬಿಡಿಎ ರದ್ದುಗೊಳಿಸಿತು.

ಪೆರಿಫೆರಲ್ ರಸ್ತೆ ಅಭಿವೃದ್ಧಿ ಯೋಜನೆಗಾಗಿ ತುಮಕೂರು ರಸ್ತೆಯಿಂದ ಹೊಸೂರು ರಸ್ತೆವರೆಗೆ 1,810 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು 2005ರಲ್ಲಿ ಪ್ರಾಥಮಿಕ ಹಾಗೂ 2007ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. ಇಲ್ಲಿಯವರೆಗೆ ರೈತರಿಗೆ ಪರಿಹಾರ ನೀಡಿಲ್ಲ. 5 ವರ್ಷದೊಳಗೆ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿ ಸಾಧಿಸದೇ ಇದ್ದರೆ ಯೋಜನೆ ರದ್ದಾಗುತ್ತದೆ ಎಂದು ಬಿಡಿಎ ಕಾಯ್ದೆಯಲ್ಲಿದೆ ಎಂದು ಪ್ರತಿಭಟನಕಾರರು ತಿಳಿಸಿದರು.

ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ರೈತರಿಗೆ ಪರಿಹಾರ ನೀಡಲು ಮಾನದಂಡ ರೂಪಿಸಿ 2013ರಲ್ಲಿ ಕೇಂದ್ರ ಸರ್ಕಾರವು ಪುನರ್ವಸತಿ ಮತ್ತು ಪರಿಹಾರ ಕಾಯ್ದೆಯನ್ನು ಜಾರಿ ಮಾಡಿತ್ತು. ಅದರ ಆಧಾರದಲ್ಲಿಯೇ ಪರಿಹಾರ ನೀಡಬೇಕು. ಇಲ್ಲದೇ ಇದ್ದರೆ ಯೋಜನೆ ರದ್ದು ಮಾಡಬೇಕು ಎಂದು ಆಗ್ರಹಿಸಿದರು.

60ಕ್ಕೂ ಅಧಿಕ ಮಂದಿ ನ್ಯಾಯಾಲಯದಲ್ಲಿ ದಾವೆ ಹೂಡಿರುವುದರಿಂದ ಟೆಂಡರ್ ಕರೆಯಲು ಅವಕಾಶವಿಲ್ಲ. ಆದರೂ ಬಿಡಿಎ ಕಾನೂನು ಬಾಹಿರವಾಗಿ ಟೆಂಡರ್ ಪ್ರಕ್ರಿಯೆ ಆರಂಭಿಸಿದೆ ಎಂದು ಆರೋಪಿಸಿದರು.

ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್ ಸ್ಥಳಕ್ಕೆ ಭೇಟಿ ನೀಡಿ ಪ್ರತಿಭಟನಕಾರರೊಂದಿಗೆ ಮಾತುಕತೆ ನಡೆಸಿದರು. ರೈತರಿಗೆ ಪರಿಹಾರ ಒದಗಿಸಿದ ಬಳಿಕ ಟೆಂಡರ್ ಕರೆಯಲಾಗುವುದು ಎಂದು ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಪಿಆರ್‌ಆರ್ ರೈತ ಮತ್ತು ನಿವೇಶನದಾರರ ಸಂಘದ ಅಧ್ಯಕ್ಷ ಮಾವಳಿಪುರ ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಗೌತಮ್‌ಚಂದ್ ಜೈನ್, ಉಪಾಧ್ಯಕ್ಷ ಗೋವಿಂದರಾಜು, ಕಾರ್ಯದರ್ಶಿ ವೆಂಕಟೇಶ್, ಖಜಾಂಚಿ ನರಸಿಂಹಮೂರ್ತಿ ಸೇರಿದಂತೆ ಪದಾಧಿಕಾರಿಗಳು, ಸಂತ್ರಸ್ತರು ಭಾಗವಹಿಸಿದ್ದರು.

ಶ್ರೀರಾಮನ ಅವಹೇಳನ ಆರೋಪ; ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಸೇಂಟ್ ಜೆರೋಸಾ ಇಂಗ್ಲಿಷ್ ಮಾಧ್ಯಮ ಶಾಲೆಯ ಶಿಕ್ಷಕಿಯೊಬ್ಬರು ಶ್ರೀರಾಮದೇವರ ಹಾಗೂ ಹಿಂದೂ ಧರ್ಮದ ಕುರಿತು ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ ವಿದ್ಯಾರ್ಥಿಗಳ ಪೋಷಕರು, ಬಜರಂಗ ದಳದ ಕಾರ್ಯಕರ್ತರು ಶಾಲೆಯ ಎದುರು ಶನಿವಾರ ಮಧ್ಯಾಹ್ನ ಸೇರಿ ಆಕ್ರೋಶ ವ್ಯಕ್ತಪಡಿಸಿದರು.

ಶಿಕ್ಷಕಿ ಜೊತೆ ಮಾತನಾಡಲು ಅವಕಾಶ ನೀಡಬೇಕು ಎಂದು ಆಗ್ರಹಿಸಿದರು. ಪೊಲೀಸರು ಅವಕಾಶ ಕಲ್ಪಿಸಲಿಲ್ಲ.

'ವಿದ್ಯಾರ್ಥಿಗಳನ್ನು ಹಾಗೂ ಶಿಕ್ಷಕಿಯನ್ನು ಮಾತನಾಡಿಸಿ ನಿಜಾಂಶ ತಿಳಿದುಕೊಂಡು ಸೂಕ್ತ ಕ್ರಮ ಕೈಗೊಳ್ಳುತ್ತೇವೆ ಎಂದು ಮುಖ್ಯಶಿಕ್ಷಕಿ ತಿಳಿಸಿದ್ದಾರೆ' ಎಂದು ಪೋಷಕರೊಬ್ಬರು ತಿಳಿಸಿದರು. ವಿಧಾನ ಪರಿಷತ್ ಮಾಜಿ ಸದಸ್ಯ ಐವನ್ ಡಿಸೋಜ ಶಾಲೆಗೆ ಭೇಟಿ ನೀಡಿ ಮುಖ್ಯ ಶಿಕ್ಷಕಿ ಜೊತೆಗೆ ಚರ್ಚಿಸಿದರು. ಐವನ್ ಹೊರಡುವಾಗ ಪೋಷಕರು ಹಾಗೂ ಬಜರಂಗದಳದ ಕಾರ್ಯಕರ್ತರು ಅವರ ಕಾರು ಸುತ್ತುವರಿದರು. ಪೊಲೀಸರು ಅವರನ್ನು ಚದುರಿಸಿದರು.

ಕೆಂಗಲ್ ಹನುಮಂತಯ್ಯ ಜನ್ಮದಿನ

ಮಾಜಿ ಮುಖ್ಯಮಂತ್ರಿ ದಿವಂಗತ ಕೆಂಗಲ್ ಹನುಮಂತಯ್ಯ ಅವರ ಜನ್ಮದಿನದ ಅಂಗವಾಗಿ ವಿಧಾನಸೌಧ ಆವರಣದಲ್ಲಿರುವ ಅವರ ಪ್ರತಿಮೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಪುಷ್ಪನಮನ ಸಲ್ಲಿಸಿದರು. ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ, ಕೆಂಗಲ್ ಹನುಮಂತಯ್ಯ ಅವರ ಮಗಳು ವಿಜಯಲಕ್ಷ್ಮಿ ತಿಮ್ಮಯ್ಯ, ಮೊಮ್ಮಗ ಶ್ರೀಪಾದ ರೇಣು ಪಾಲ್ಗೊಂಡಿದ್ದರು.

– ಪ್ರಜಾವಾಣಿ ಚಿತ್ರ

ಶ್ರಮದಾನ: ಅಪಾರ್ಟ್‌ಮೆಂಟ್ ಅಸೋಸಿಯೇಷನ್ ಸದಸ್ಯರಿಂದ ಸಾಮಾಜಿಕ ಕಳಕಳಿ

ರಸ್ತೆ, ಪಾದಚಾರಿ ಮಾರ್ಗದ ಸ್ವಚ್ಛತಾ ಕಾರ್ಯ

• ಶಿವರಾಜ್ ಮೌರ್ಯ

ಅಪಾರ್ಟ್‌ಮೆಂಟ್ ನಿವಾಸಿಗಳು ಸ್ವಚ್ಛತಾ ಕಾರ್ಯ ನಡೆಸಿದರು

ಕೆ.ಆರ್.ಪುರ: ವೈಟ್‌ಫೀಲ್ಡ್‌ನ ಬ್ರಿಗೇಡ್ ವುಡ್ಸ್ ಅಪಾರ್ಟ್‌ಮೆಂಟ್ ಅಸೋಸಿಯೇಷನ್ ಸದಸ್ಯರು ಮತ್ತು ಸಾರ್ವಜನಿಕರರು ಸ್ವಯಂ ಪ್ರೇರಿತವಾಗಿ ರಸ್ತೆ, ಪಾದಚಾರಿ ಮಾರ್ಗದಲ್ಲಿ ಸ್ವಚ್ಛತಾ ಅಭಿಯಾನ ಕೈಗೊಂಡು ಮಾದರಿಯಾಗಿದ್ದಾರೆ.

ನೂರಕ್ಕೂ ಹೆಚ್ಚು ಮಂದಿ ಕೈಗೊಂಡ ಈ ಅಭಿಯಾನದಲ್ಲಿ ಚರಂಡಿಯನ್ನೂ ಸ್ವಚ್ಛಗೊಳಿಸಿದ್ದಾರೆ. ಪರಿಣಾಮವಾಗಿ ಈ ಭಾಗದಲ್ಲಿ ಗಬ್ಬೆದ್ದಿದ್ದ ವಾತಾವರಣ ಬದಲಾಗಿದೆ.

ವೈಟ್‌ಫೀಲ್ಡ್‌ನ ಜಿ.ಆರ್.ಪಾರ್ಕ್ ಮುಖ್ಯರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹೆಚ್ಚಾಗಿ ಐ.ಟಿ-ಬಿ.ಟಿ ಕಂಪನಿಗಳಿವೆ. ಈ ಭಾಗದಲ್ಲಿ ಎಲ್ಲೆಂದರಲ್ಲಿ ಕಸ ಎಸೆಯಲಾಗುತ್ತಿದೆ. ಅಪಾರ್ಟ್‌ಮೆಂಟ್ ಅಸೋಸಿಯೇಷನ್ ಸದಸ್ಯರು, ಸಾರ್ವಜನಿಕರೊಂದಿಗೆ ಸೇರಿ ಸ್ವಚ್ಛತಾ ಅಭಿಯಾನ ಕೈಗೊಂಡು ಪಾದಚಾರಿ ಮಾರ್ಗವನ್ನು ನಳನಳಿಸುವಂತೆ ಮಾಡಿದ್ದಾರೆ.

ಅಪಾರ್ಟ್‌ಮೆಂಟ್ ನಿವಾಸಿಗಳು ಬಿಡುವಿನ ಸಮಯದಲ್ಲಿ ಆಗಾಗ್ಗೆ ಸ್ವಚ್ಛತಾ ಕಾರ್ಯ ಕೈಗೊಳ್ಳುತ್ತಾರೆ. ಆರು ತಿಂಗಳ ಹಿಂದೆ ಇದೇ ಸ್ಥಳದಲ್ಲಿ ಸ್ವಚ್ಛತಾ ಕಾರ್ಯ ಕೈಗೊಂಡಿದ್ದರು. ಈಗ ಮತ್ತೊಮ್ಮೆ ತಮ್ಮ ಕೆಲಸ ಕಾರ್ಯಗಳನ್ನು ಬದಿಗೊತ್ತಿ, ತಂಡದೊಂದಿಗೆ ಪಾದಚಾರಿ ಮಾರ್ಗ, ಮಲಿನಗೊಂಡ ಚರಂಡಿ, ರಸ್ತೆ ಬದಿಯಲ್ಲಿ ಗಿಡ ನೆಟ್ಟು ಪರಿಸರದ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯ ನಡೆಸಿದರು.

ಜಿ.ಆರ್.ಟೆಕ್ ಪಾರ್ಕ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಸ್ತೆ ಉದ್ದಕ್ಕೂ ಗುಟ್ಕಾ– ಪಾನ್ ಮಸಾಲಾ ಅಂಗಡಿ, ಎಳನೀರು ಅಂಗಡಿ, ಸಿಗರೇಟ್ ಮಾರಾಟ ಅಂಗಡಿಗಳೇ ಆವರಿಸಿವೆ. ಪಾದಚಾರಿ ಮಾರ್ಗ ಹಾಗೂ ತೆರೆದ ಚರಂಡಿಯಲ್ಲಿ ತಂಬಾಕು ಉತ್ಪನ್ನಗಳು, ಪಾನ್ ಮಸಾಲಾ ಚೀಟಿಗಳು, ಟೀ ಕಪ್, ಮದ್ಯದ ಬಾಟಲಿಗಳು, ಆಹಾರದ ತಟ್ಟೆಗಳು ತ್ಯಾಜ್ಯ ಅವಶೇಷಗಳನ್ನು ಎಲ್ಲೆಂದರಲ್ಲಿ ಎಸೆಯಲಾಗುತ್ತಿತ್ತು. ಈ ರಸ್ತೆ ಮಲಿನಗೊಂಡು ರಸ್ತೆಯಲ್ಲಿ ಓಡಾಡದ ಸ್ಥಿತಿ ನಿರ್ಮಾಣವಾಗಿತ್ತು. ಅಪಾರ್ಟ್‌ಮೆಂಟ್ ನಿವಾಸಿಗಳು, ಸಾರ್ವಜನಿಕರು ಹಾಗೂ ಬಿಬಿಎಂಪಿ ಸಿಬ್ಬಂದಿಯೊಂದಿಗೆ ಸ್ವಚ್ಛಗೊಳಿಸುವ ಕಾರ್ಯ ನಡೆಸಲಾಯಿತು ಎಂದು ಅಸೋಸಿಯೇಷನ್ ಸದಸ್ಯರು ಹೇಳಿದರು.

ಬಿಡುವಿನ ವೇಳೆ ಸ್ವಚ್ಛತಾ ಅಭಿಯಾನ

ಈ ರಸ್ತೆಯಲ್ಲಿ ನಿತ್ಯ ಸಾವಿರಾರು ಜನರು ಓಡಾಡುತ್ತಾರೆ. ಸ್ವಚ್ಛತೆ ಎಂಬುದು ಮರೀಚಿಕೆಯಾಗಿದೆ. ಹಾಗಾಗಿ ಅಪಾರ್ಟ್‌ಮೆಂಟ್ ನಿವಾಸಿಗಳೊಂದಿಗೆ ನೂರಕ್ಕೂ ಹೆಚ್ಚು ಜನರು ಸ್ವಯಂಪ್ರೇರಿತರಾಗಿ ಸ್ವಚ್ಛತಾ ಅಭಿಯಾನ ನಡೆಸಿದವು. ಬಿಬಿಎಂಪಿ ಹಾಗೂ ಸಾರ್ವಜನಿಕರ ಸಹಕಾರದಿಂದ ರಸ್ತೆಯ ಉದ್ದಕ್ಕೂ ಸ್ವಚ್ಛಗೊಳಿಸಿದ್ದೇವೆ. ಮುಂದಿನ ದಿನಗಳಲ್ಲಿ ಕೂಡ ಬಿಡುವಿನ ವೇಳೆಯಲ್ಲಿ ಸ್ವಚ್ಛತಾ ಅಭಿಯಾನ ನಡೆಸಲಾಗುವುದು. ಅಪಾರ್ಟ್‌ಮೆಂಟ್ ನಿವಾಸಿಗಳು ಸ್ವಚ್ಛಗೊಳಿಸಿದ ಜಾಗದಲ್ಲಿ ಕಸದ ಬುಟ್ಟಿಗಳನ್ನು ಇಡಬೇಕೆಂದು ಬಿಬಿಎಂಪಿ ಆರೋಗ್ಯ ನಿರೀಕ್ಷಕರಿಗೆ ಎಂದು ಮನವಿ ಮಾಡಿದ್ದೇವೆ.

ರಮಾಕಾಂತ್, ಗ್ರೀನ್‌ವುಡ್ ಅಪಾರ್ಟ್‌ಮೆಂಟ್ ನಿವಾಸಿ

> **ಸ್ವಚ್ಛಗೊಳಿಸಿದ ಸ್ಥಳದಲ್ಲಿ ಕಸದ ಬುಟ್ಟಿಗಳನ್ನು ಇಡುವ ಕುರಿತು ಮಹದೇವಪುರ ಜಂಟಿ ಆಯುಕ್ತರೊಂದಿಗೆ ಚರ್ಚಿಸುತ್ತೇನೆ.**
> **ಉಜ್ವಲ್,** ಬಿಬಿಎಂಪಿ ಆರೋಗ್ಯ ನಿರೀಕ್ಷಕ

ನಾರಾಯಣ ನೇತ್ರಾಲಯದ ವೈದ್ಯರು ಕಳವಳ

'ಅಧಿಕ ಅವಧಿ ಓದು– ಕಣ್ಣಿನ ಸಮಸ್ಯೆ'

ಪ್ರಜಾವಾಣಿ ವಾರ್ತೆ

ಕಣ್ಣಿನ ಆರೋಗ್ಯಕ್ಕೆ ಸಲಹೆಗಳು

- ಓದುವಾಗ ಪುಸ್ತಕವನ್ನು 14-16 ಇಂಚುಗಳಷ್ಟು ದೂರ ಇಟ್ಟುಕೊಳ್ಳಬೇಕು
- ಮೊಬೈಲ್‌ನಂತಹ ಡಿಜಿಟಲ್ ಸಾಧನಗಳ ಬಳಕೆ ಕಡಿಮೆ ಮಾಡಬೇಕು
- 20-20 ನಿಯಮವನ್ನು (20 ನಿಮಿಷಕ್ಕೊಮ್ಮೆ 20 ಬಾರಿ ಕಣ್ಣು ಮಿಟುಕಿಸಿ) ಅನುಸರಿಸಿ, ಕಣ್ಣಿಗೆ ವಿರಾಮ ನೀಡಬೇಕು
- ವಿರಾಮದ ಸಮಯದಲ್ಲಿ ಮೊಬೈಲ್ ಫೋನ್ ಬಳಸುವುದನ್ನು ಅಥವಾ ಟಿ.ವಿ ನೋಡುವುದನ್ನು ತಪ್ಪಿಸಬೇಕು
- ಕಣ್ಣುಗಳಿಗೆ ವಿಶ್ರಾಂತಿ ನೀಡಲು ಮತ್ತು ಏಕಾಗ್ರತೆಗೆ ಧ್ಯಾನ ಮಾಡುವುದನ್ನು ರೂಢಿಸಿಕೊಳ್ಳಬೇಕು
- ಸೊಪ್ಪು, ತರಕಾರಿ ಸೇರಿ ಆರೋಗ್ಯಕರ ಆಹಾರ ಸೇವಿಸಿ, ಸಾಕಷ್ಟು ನಿದ್ದೆ ಮಾಡಬೇಕು
- ನಿಯಮಿತವಾಗಿ ಕಣ್ಣಿನ ತಪಾಸಣೆ ಮಾಡಿಸಿಕೊಳ್ಳಬೇಕು

ಬೆಂಗಳೂರು: 'ಪರೀಕ್ಷಾ ಅವಧಿಯಲ್ಲಿ ದಿನಕ್ಕೆ 10ರಿಂದ 14 ಗಂಟೆಗಳು ಓದುವುದು ಹಾಗೂ ಬರೆಯುವುದರಿಂದ ಕಣ್ಣಿನ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಆದ್ದರಿಂದ ಪರೀಕ್ಷಾ ಸಿದ್ಧತೆಯಲ್ಲಿ ತೊಡಗಿರುವ ವಿದ್ಯಾರ್ಥಿಗಳು ಮೊಬೈಲ್‌ನಂತಹ ಡಿಜಿಟಲ್ ಸಾಧನಗಳ ಬಳಕೆಗೆ ಕಡಿವಾಣ ಹಾಕಿ, ವಿಶ್ರಾಂತಿ ಹಾಗೂ ನಿದ್ದೆಗೂ ಆದ್ಯತೆ ನೀಡಬೇಕು' ಎಂದು ನಾರಾಯಣ ನೇತ್ರಾಲಯದ ವೈದ್ಯರು ಸಲಹೆ ನೀಡಿದ್ದಾರೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಸ್ಪತ್ರೆಯ ಅಧ್ಯಕ್ಷ ಡಾ.ರೋಹಿತ್ ಶೆಟ್ಟಿ, 'ಪರೀಕ್ಷೆ ಸಮೀಪಿಸುತ್ತಿದ್ದಂತೆ ಕೆಲ ವಿದ್ಯಾರ್ಥಿಗಳು ದಿನಕ್ಕೆ 16 ಗಂಟೆಗಳವರೆಗೂ ಓದುವುದರಲ್ಲಿ ನಿರತರಾಗುತ್ತಿದ್ದಾರೆ. ಇದರಿಂದ ಅಗತ್ಯ ನಿದ್ದೆಯಿಲ್ಲದೆ ಒತ್ತಡಕ್ಕೆ ಒಳಗಾಗುವ ಸಾಧ್ಯತೆ ಇರುತ್ತದೆ. ಶೈಕ್ಷಣಿಕ ಯಶಸ್ಸಿಗೆ ಓದು ಅತ್ಯಗತ್ಯವಾದರೂ ಅಧಿಕ ಅವಧಿ ಪುಸ್ತಕ ಹಿಡಿದು ಕುಳಿತುಕೊಳ್ಳಬಾರದು. ಸಮೀಪ ದೃಷ್ಟಿ ಹೆಚ್ಚಳದಂತಹ ಸಾಮಾನ್ಯ ಸಮಸ್ಯೆಗಳು ಮಕ್ಕಳ ಮೇಲೆ ಪರಿಣಾಮ ಬೀರುತ್ತವೆ. ಎಸ್ಸೆಸ್ಸೆಲ್ಸಿ, ಪಿ.ಯು.ಸಿ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವವರಲ್ಲಿ ಹೆಚ್ಚಾಗಿ ಕಣ್ಣಿನ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿದೆ' ಎಂದು ಹೇಳಿದರು.

'ಶೇ 95 ರಷ್ಟು ಪ್ರಕರಣಗಳಲ್ಲಿ ಕಣ್ಣಿನ ಸಮಸ್ಯೆ ಗಮನಕ್ಕೆ ಬಂದಿರುವುದಿಲ್ಲ. ಮೊಬೈಲ್‌ನಂತಹ ಡಿಜಿಟಲ್ ಸಾಧನಗಳ ಅತಿಯಾದ ಬಳಕೆಯಿಂದ ಕಣ್ಣು ಶುಷ್ಕಗೊಳ್ಳುವಿಕೆ, ಸಮೀಪ ದೃಷ್ಟಿ ಹೆಚ್ಚಾಗುವಿಕೆ, ನಿದ್ರಾಹೀನತೆ ಸೇರಿ ವಿವಿಧ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಕಳೆದ ಐದು ವರ್ಷಗಳಲ್ಲಿ ಪರೀಕ್ಷಾ ಅವಧಿಯಲ್ಲಿ ಕಣ್ಣಿನ ಸಮಸ್ಯೆ ಪತ್ತೆಯಾದ ಪ್ರಕರಣಗಳ ಸಂಖ್ಯೆ 50 ಪಟ್ಟು ಹೆಚ್ಚಾಗಿದೆ' ಎಂದು ತಿಳಿಸಿದರು.

ಮಕ್ಕಳ ನೇತ್ರ ವಿಭಾಗದ ಮುಖ್ಯಸ್ಥೆ ಡಾ. ಭಾನುಮತಿ ಎಂ., 'ಕಣ್ಣಿನ ಆರೋಗ್ಯವನ್ನು ಕಡೆಗಣಿಸಿದರೆ ಭವಿಷ್ಯದಲ್ಲಿ ಗಂಭೀರ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಪ್ರಾರಂಭಿಕ ಹಂತದಲ್ಲಿಯೇ ಸಮಸ್ಯೆ ಗುರುತಿಸಿದಲ್ಲಿ ನಿಖರ ಚಿಕಿತ್ಸೆ ನೀಡಬಹುದು' ಎಂದು ಹೇಳಿದರು.

ಭದ್ರಾ ಮೇಲ್ದಂಡೆ: ಜಲಶಕ್ತಿ ಸಚಿವರ ಸ್ಪಷ್ಟೋಕ್ತಿ

ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸಿಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಹನಿ ನೀರಾವರಿ ಮೂಲಕ ಮಧ್ಯ ಕರ್ನಾಟಕ ಜಿಲ್ಲೆಗಳಿಗೆ ನೀರುಣಿಸುವ ಭದ್ರಾ ಮೇಲ್ದಂಡೆ ಯೋಜನೆಯನ್ನು 'ರಾಷ್ಟ್ರೀಯ ನೀರಾವರಿ ಯೋಜನೆ'ಯನ್ನಾಗಿ ಘೋಷಿಸಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ.

ಲೋಕಸಭೆಯಲ್ಲಿ ಹಾಸನದ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಕೇಳಿರುವ ಪ್ರಶ್ನೆಗೆ ಕೇಂದ್ರ ಜಲಶಕ್ತಿ ಇಲಾಖೆಯ ರಾಜ್ಯ ಸಚಿವ ಬಿಶ್ವೇಶ್ವರ ತುಡು ಈ ಉತ್ತರ ನೀಡಿದ್ದಾರೆ.

ಕೇಂದ್ರ ಜಲಶಕ್ತಿ ಸಚಿವಾಲಯದ ಮಾರ್ಗಸೂಚಿಗಳ ಪ್ರಕಾರ, ಈ ಯೋಜನೆಯು ರಾಷ್ಟ್ರೀಯ ಯೋಜನೆಯಾಗಲು ಅರ್ಹತೆ ಪಡೆದಿದೆ. ಈ ಸಂಬಂಧ ಜಲಶಕ್ತಿ ಸಚಿವಾಲಯದ ಉನ್ನತಾಧಿಕಾರ ಸಮಿತಿ ಸಹ ಶಿಫಾರಸು ಮಾಡಿದೆ. ಇದನ್ನು ರಾಷ್ಟ್ರೀಯ ಯೋಜನೆ ಎಂದು ಪರಿಗಣಿಸಲು ಕೇಂದ್ರ ಹಣಕಾಸು ಸಚಿವಾಲಯದ ಸಾರ್ವಜನಿಕ ಹೂಡಿಕೆ ಮಂಡಳಿಯು 2022ರ ಅಕ್ಟೋಬರ್ 12ರಂದು ಒಪ್ಪಿಗೆ ನೀಡಿದೆ. ಇದಾಗಿ ಎಂಟು ತಿಂಗಳು ಕಳೆದರೂ ಮತ್ತೆ ಯಾವ ಪ್ರಕ್ರಿಯೆಯೂ ನಡೆದಿಲ್ಲ.

ಈ ಯೋಜನೆಯಲ್ಲಿ 29.90 ಟಿಎಂಸಿ ಅಡಿ ನೀರು (ತುಂಗಾ ನದಿಯಿಂದ 17.40 ಟಿಎಂಸಿ ಅಡಿ ಹಾಗೂ ಭದ್ರಾ ಜಲಾಶಯದಿಂದ 12.50 ಟಿಎಂಸಿ ಅಡಿ) ಬಳಕೆ ಮಾಡಲಾಗುತ್ತದೆ. ಈ ಯೋಜನೆ ಮೂಲಕ 367 ಕೆರೆಗಳನ್ನು ತುಂಬಿಸಲಾಗುತ್ತದೆ. 2.25 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ವ್ಯವಸ್ಥೆ ಆಗಲಿದೆ.

ಈ ಯೋಜನೆಗೆ ತಗಲುವ ಒಟ್ಟು ವೆಚ್ಚ ₹16,125 ಕೋಟಿ. ಯೋಜನೆಗೆ ₹5,300 ಕೋಟಿ ಹಣಕಾಸಿನ ನೆರವು ನೀಡಲಾಗುತ್ತದೆ ಎಂದು 2023ರ ಕೇಂದ್ರದ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಈ ಅನುದಾನ ಇಲ್ಲಿಯವರೆಗೆ ಬಿಡುಗಡೆ ಆಗಿಲ್ಲ.

ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸುವಂತೆ ಒತ್ತಾಯಿಸಿ ಕರ್ನಾಟಕದ ಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವರು ಕೇಂದ್ರ ಸರ್ಕಾರಕ್ಕೆ ಸುಮಾರು 10 ಸಲ ಮನವಿ ಸಲ್ಲಿಸಿದ್ದಾರೆ.

ಮೇಕೆದಾಟು ಯೋಜನೆಯ ವಿಸ್ತೃತ ಯೋಜನಾ ವರದಿಯ (ಡಿಪಿಆರ್) ಕುರಿತು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ 28ನೇ ಸಭೆಯಲ್ಲಿ ಚರ್ಚಿಸಲಾಗಿದೆ. ಬಹುತೇಕ ಸದಸ್ಯರ ಅಭಿಪ್ರಾಯಗಳನ್ನು ಪರಿಗಣಿಸಿ ಯೋಜನೆಯ ಕಾರ್ಯಸಾಧ್ಯತೆ ಪರಿಶೀಲಿಸಲು ಹಾಗೂ ಮುಂದಿನ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಡಿಪಿಆರ್ ಅನ್ನು ಕೇಂದ್ರ ಜಲ ಆಯೋಗಕ್ಕೆ ವಾಪಸ್ ಕಳುಹಿಸಲಾಗಿದೆ. ಆಯೋಗವು ವಿವಿಧ ತಾಂತ್ರಿಕ ಹಾಗೂ ಆರ್ಥಿಕ ಅಂಶಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಿದೆ ಎಂದು ತಿಳಿಸಿದರು.

ಯೋಜನೆಗೆ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯವು ಅರಣ್ಯ ಅನುಮೋದನೆ ನೀಡಿಲ್ಲ ಎಂದು ಹೇಳಿದರು.

ಚಿತ್ರಾವಳಿ

ಭಾರತ ಯಾತ್ರಾ ಕೇಂದ್ರ, ರಂಗಸೌರಭ ಜಂಟಿಯಾಗಿ ನಗರದಲ್ಲಿ ಶನಿವಾರ ಆಯೋಜಿಸಿದ್ದ 'ಸೌರಭ 24' ಸಮಾರಂಭದಲ್ಲಿ ರಾಜ್ಯಮಟ್ಟದ ಅಂತರ ಕಾಲೇಜು ರಂಗ ಸ್ಪರ್ಧೆಗಳಲ್ಲಿ ಪಾಲ್ಗೊಂಡಿದ್ದ ತಂಡಗಳ ವಿದ್ಯಾರ್ಥಿಗಳಿಗೆ ಚಲನಚಿತ್ರ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜಕುಮಾರ್ ಪ್ರಮಾಣ ಪತ್ರ ವಿತರಿಸಿದರು. ಚಿತ್ರ ನಟ ಕಿಶೋರ್ ಹಾಗೂ ಭಾರತ ಯಾತ್ರಾ ಕೇಂದ್ರದ ಪ್ರಧಾನ ಕಾರ್ಯದರ್ಶಿ ಕೆ.ವಿ. ನಾಗರಾಜಮೂರ್ತಿ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಕರ್ನಾಟಕ ಪ್ರವಾಸೋದ್ಯಮ ಇಲಾಖೆ, ಅಟ್ಟಕ್ಕಳರಿ ಸೆಂಟರ್ ಫಾರ್ ಮೂವ್‌ಮೆಂಟ್ ಆರ್ಟ್ಸ್, ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ವಿವಿಧ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ಶನಿವಾರ ಚರ್ಚ್ ಸ್ಟ್ರೀಟ್‌ನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸೃಷ್ಟಿ ಸಂಸ್ಥೆಯ ಕಲಾವಿದರು 'ಜೀವ ಪ್ರವಾಹ' ಎಂಬ ಸಾಂಸ್ಕೃತಿಕ ನೃತ್ಯ ಪ್ರದರ್ಶಿಸಿದರು. ಪ್ರಜಾವಾಣಿ ಚಿತ್ರ / ಎಸ್.ಕೆ. ದಿನೇಶ್

ಬೆಂಗಳೂರು ಸಂಚಾರ ಪೊಲೀಸರು ಶನಿವಾರ ಆಯೋಜಿಸಿದ್ದ ರಸ್ತೆ ಸುರಕ್ಷತಾ ತಿಂಗಳು ರ್‍ಯಾಲಿಯಲ್ಲಿ ಸಾರ್ವಜನಿಕರು ಹಾಗೂ ಬ್ಯಾಂಕ್ ಉದ್ಯೋಗಿಗಳು ಭಾಗಹಿಸಿದ್ದರು. –ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ಕೃತಕ ಬುದ್ಧಿಮತ್ತೆಗೆ ಹೊಂದಿಸಲು 'ಮಾದರಿ ಕೊಂಕಣಿ'

ಪ್ರಜಾವಾಣಿ ವಾರ್ತೆ

ಮಂಗಳೂರು: ಕೃತಕ ಬುದ್ಧಿಮತ್ತೆಯಂತಹ ಹೊಸ ತಂತ್ರಜ್ಞಾನ ಅಡಿ ಇಡುತ್ತಿರುವ ಕಾಲಘಟ್ಟದಲ್ಲಿ ಪ್ರಾದೇಶಿಕ ಭಿನ್ನತೆಗಳನ್ನು ಮೀರಿ ಸರ್ವಸಮ್ಮತವಾಗುವಂತಹ 'ಮಾದರಿ ಭಾಷೆ'ಯೊಂದನ್ನು ರೂಪಿಸುವ ಕಾರ್ಯ ಯೋಜನೆಗೆ ವಿಶ್ವ ಕೊಂಕಣಿ ಕೇಂದ್ರ ನೇತೃತ್ವ ವಹಿಸಲಿದೆ.

ಕೊಂಕಣಿ ಭಾಷೆ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನವು ಇಲ್ಲಿ ಏರ್ಪಡಿಸಿರುವ ವಿಶ್ವ ಕೊಂಕಣಿ ಸಮಾರಂಭದಲ್ಲಿ ಶನಿವಾರ ನಡೆದ 'ಕೊಂಕಣಿ ಭಾಷಾಭಿವೃದ್ಧಿಗೆ ಕೃತಕ ಬುದ್ಧಿಮತ್ತೆ ಅಳವಡಿಕೆ' ಗೋಷ್ಠಿಯ ಅಂತ್ಯದಲ್ಲಿ ವಿಶ್ವ ಕೊಂಕಣಿ ಕೇಂದ್ರದ ಅಧ್ಯಕ್ಷ ನಂದಗೋಪಾಲ ಶೆಣೈ ಅವರು ಈ ವಿಚಾರವನ್ನು ಪ್ರಕಟಿಸಿದರು.

ವಿಜಯನಗರ ಜಿಲ್ಲೆ ಚಿಮ್ಮನಹಳ್ಳಿ ಗ್ರಾಮದ ದುರ್ಗಾಂಬಿಕೆ ದೇವಸ್ಥಾನ

ಸವರ್ಣೀಯರೇ ಭಕ್ತರು, ದಲಿತರೇ ಅರ್ಚಕರು

• ಸಿ.ಶಿವಾನಂದ

ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಚಿಮ್ಮನಹಳ್ಳಿ ದುರ್ಗಾಂಬಿಕೆ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುತ್ತಿರುವ ಅರ್ಚಕ ಪೂಜಾರಿ ಭರಮಪ್ಪ

ಹಗರಿಬೊಮ್ಮನಹಳ್ಳಿ (ವಿಜಯನಗರ): ತಾಲ್ಲೂಕಿನ ಚಿಮ್ಮನಹಳ್ಳಿ ಗ್ರಾಮದ ಐತಿಹಾಸಿಕ ದುರ್ಗಾಂಬಿಕೆ, ಮರಿಯಮ್ಮದೇವಿ ಮತ್ತು ಸಮಾದೆಮ್ಮ ದೇವಸ್ಥಾನದಲ್ಲಿ 200 ವರ್ಷಗಳಿಂದ ದಲಿತರೇ ಅರ್ಚಕರಾಗಿದ್ದಾರೆ. ಭಕ್ತರಲ್ಲಿ ಬಹುತೇಕ ಮಂದಿ ಸವರ್ಣೀಯರು ಮತ್ತು ಮುಸ್ಲಿಮರು ಇದ್ದಾರೆ

ದಾವಣಗೆರೆ, ಗದಗ, ಕೊಪ್ಪಳ, ಬಳ್ಳಾರಿ, ಜಗಳೂರು ಮತ್ತು ಆಂಧ್ರ ಪ್ರದೇಶದ ರಾಯದುರ್ಗದಿಂದ ದೇವಸ್ಥಾನಕ್ಕೆ ಪ್ರತಿ ವರ್ಷ ಸಾವಿರಾರು ಭಕ್ತರು ಬರುತ್ತಾರೆ. ಜಾತ್ರೋತ್ಸವ ಕಾರ್ಯಕ್ರಮ ಅದ್ದೂರಿಯಾಗಿ ನಡೆಯುತ್ತವೆ.

ವಂಶಪಾರಂಪಾರ್ಯವಾಗಿ ಪೂಜಾರಿಗಳಾದ ಅಸ್ಪೃಶ್ಯ ದಲಿತರ ನಾಲ್ಕನೇ ತಲೆಮಾರು ಪೂಜಾ ಕೈಂಕರ್ಯದಲ್ಲಿ ತೊಡಗಿದೆ. ಅವಿಭಕ್ತ ಕುಟುಂಬದ ಪೂಜಾರಿ ಮನೆತನದ ಧರ್ಮಕರ್ತರಾದ ಭರಮಪ್ಪ, ಅರ್ಜುನಪ್ಪ, ನಾಗಪ್ಪ, ಪುಷ್ಪಾ, ನಾಗರಾಜ ಮತ್ತು ಸಿದ್ದಪ್ಪ ಅವರು ದೇವಸ್ಥಾನದಲ್ಲಿನ ಧಾರ್ಮಿಕ ಕಾರ್ಯಕ್ರಮಗಳ ಸಂಪೂರ್ಣ ಜವಾಬ್ದಾರಿ ಹೊತ್ತಿದ್ದಾರೆ. ಅರ್ಚಕ ಕುಟುಂಬದ ಎಲ್ಲರೂ ಸಸ್ಯಹಾರಿಗಳು. ದೇವರಿಗೆ ಹುರುಳಿ ಹೋಳಿಗೆ ನೈವೇದ್ಯ ನೀಡುವುದು ಇಲ್ಲಿನ ಸಂಪ್ರದಾಯ.

'ದೇವಸ್ಥಾನಕ್ಕೆ ವೀರಶೈವರು, ಲಿಂಗಾಯತರು, ಕುರುಬರು, ವಾಲ್ಮೀಕಿ, ಉಪ್ಪಾರರು, ಗಂಗಾಮತಸ್ಥರು ಸೇರಿ ಎಲ್ಲ ಸವರ್ಣೀಯ ಜನಾಂಗದವರು ಬರುತ್ತಾರೆ, ಭಕ್ತಿಭಾವದಿಂದ ಪಾಲ್ಗೊಂಡು ಅರ್ಚಕರಿಗೆ ನಮಿಸುತ್ತಾರೆ. ಇಲ್ಲಿ ಯಾವುದೇ ತಾರತಮ್ಯ ಮಾಡದೇ ಎಲ್ಲರೂ ಪಾಲ್ಗೊಳ್ಳುತ್ತಾರೆ' ಎಂದು ಅರ್ಚಕ ಪೂಜಾರಿ ಸಿದ್ದಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

'ದೇವಸ್ಥಾನದ ಪಟ್ಟದ ಕುದುರೆ ಇದೆ, ಗೌರಿ ಹುಣ್ಣಿಮೆಯ ಮುಂಚೆ ಬಳ್ಳಾರಿ-ವಿಜಯನಗರ ಜಿಲ್ಲೆಗಳ 36 ಗ್ರಾಮಗಳಲ್ಲಿ ಸಂಚರಿಸುತ್ತದೆ. ಭಕ್ತರ ಮನೆಗಳಲ್ಲಿ ಪೂಜೆ ಸಲ್ಲಿಸಲಾಗುತ್ತದೆ. ಭಕ್ತರ ಅನುಕೂಲಕ್ಕೆ ಸರ್ಕಾರದಿಂದ ಸಮುದಾಯ ಭವನ ನಿರ್ಮಿಸಿಕೊಡಬೇಕಿದೆ. ದೇವಸ್ಥಾನದ ಕಟ್ಟಡ ಹಳೆಯದಾಗಿದ್ದು ನವೀಕರಣ ಆಗಬೇಕಿದೆ' ಎಂದರು.

> **ಫೆ.19ರಂದು ದುರ್ಗಾಂಬಿಕೆ ದೇವಿಯ ಕಲಶ ಸ್ಥಾಪನೆ ಮತ್ತು ಜಾತ್ರಾ ಮಹೋತ್ಸವ ನಡೆಯಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಜಾತ್ರೆಯಲ್ಲಿ ಭಾಗವಹಿಸುವರು**
> **ಪೂಜಾರಿ ಸಿದ್ದಪ್ಪ, ಅರ್ಚಕ**

‘ಶ್ರೀರಾಮನ ದೈವಿಕ ಆಶೀರ್ವಾದ’

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಜಿ ಪ್ರಧಾನಿಗಳಾದ ಚೌಧರಿ ಚರಣ್ ಸಿಂಗ್, ಪಿ.ವಿ. ನರಸಿಂಹರಾವ್ ಹಾಗೂ ಕೃಷಿ ವಿಜ್ಞಾನಿ ಡಾ.ಎಂ.ಎಸ್.ಸ್ವಾಮಿನಾಥನ್ ಅವರಿಗೆ ಕೇಂದ್ರ ಸರ್ಕಾರ 'ಭಾರತರತ್ನ' ಪುರಸ್ಕಾರ ಘೋಷಣೆ ಮಾಡಿದ್ದರ ಬಗ್ಗೆ ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಸಂತಸ ವ್ಯಕ್ತಪಡಿಸಿದರು.

ಶನಿವಾರ ರಾಜ್ಯಸಭೆಯಲ್ಲಿ ಮಾತನಾಡಿದ ಅವರು, ‘ಕೇಂದ್ರ ಸರ್ಕಾರವು ಈ ಗೌರವಕ್ಕೆ ಅರ್ಹರು, ಮಹಾನ್ ಸಾಧಕರನ್ನೇ ಆಯ್ಕೆ ಮಾಡಿದೆ. ಈ ಬಗ್ಗೆ ಅನಗತ್ಯವಾಗಿ ಚರ್ಚೆ ಮಾಡುವುದು ಅಥವಾ ಟೀಕಿಸುವುದು ಸರಿಯಲ್ಲ’ ಎಂದರು.

ಅಯೋಧ್ಯೆಯಲ್ಲಿ ಜನವರಿ 22ರಂದು ನಡೆದ ಬಾಲರಾಮ ದೇವರ ಪ್ರಾಣ ಪ್ರತಿಷ್ಠೆ ಕಾರ್ಯಕ್ರಮಕ್ಕೆ ಕುಟುಂಬ ಸಮೇತ ಹಾಜರಾದ ಬಗ್ಗೆ ಮಾತನಾಡಿದ ಅವರು, ‘ಈ ದೇಶವನ್ನು ಒಗ್ಗೂಡಿಸುವಿಕೆಯಲ್ಲಿ ಶ್ರೀರಾಮದೇವರ ದೈವಿಕ ಆಶೀರ್ವಾದವಿದೆ’ ಎಂದರು.

ರಾಮಮಂದಿರ ನಿರ್ಮಾಣದಿಂದ ಕೋಟ್ಯಂತರ ಭಾರತೀಯರ ಕನಸು ಸಾಕಾರವಾಗಿದೆ. ಅದು ನನ್ನ ಪಾಲಿಗೆ ಭಕ್ತಿ ಪರವಶತೆಯ ಕ್ಷಣವಾಗಿತ್ತು. ಶ್ರೀರಾಮದೇವರು ನಮ್ಮ ಹೃದಯ ಮತ್ತು ಮನಸ್ಸಿನಲ್ಲಿ ಇರುವವನು ಎನ್ನುವುದಕ್ಕೆ ಅದುವೇ ಸಾಕ್ಷಿ. ಶ್ರೀರಾಮರು ಸದ್ವಿಚಾರಗಳು ಮತ್ತು ದಯೆ, ಪ್ರೀತಿಯ ಪ್ರತೀಕ. ಹೀಗಾಗಿ ಪ್ರತಿಯೊಬ್ಬರಿಗೂ ಆ ರಾಮನು ಆರಾಧ್ಯ ದೈವ ಎಂದು ಬಣ್ಣಿಸಿದರು.

ಶ್ರೀರಾಮ ದೇವರ ತತ್ವಾದರ್ಶಗಳಿಂದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ಪ್ರಭಾವಿತರಾಗಿದ್ದರು. ಅಲ್ಲದೆ, ಶ್ರೀರಾಮರನ್ನು ಬಾಪೂ ಅವರು ನಮ್ಮ ದೇಶದ ಸದ್ಗುಣಗಳ ಪ್ರತೀಕವನ್ನಾಗಿಸಿದರು. ಆ ರಾಮರ ಆಶೀರ್ವಾದ, ಕರುಣೆಯಿಂದಲೇ ಅವರು ಭಾರತವನ್ನು ಒಗ್ಗೂಡಿಸಿದರು ಎಂದು ಅವರು ಪ್ರತಿಪಾದಿಸಿದರು.

17ನೇ ಲೋಕಸಭೆಯ ಕೊನೆಯ ಅಧಿವೇಶನಕ್ಕೆ ತೆರೆ; ರಾಮಮಂದಿರ ಕುರಿತು ಸುದೀರ್ಘ ಚರ್ಚೆ

ಕೊನೇ ದಿನದ ಕಲಾಪದಲ್ಲಿ ‘ರಾಮಜಪ’

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಅಯೋಧ್ಯೆ ರಾಮಮಂದಿರ ನಿರ್ಮಾಣ ಹಾಗೂ ಬಾಲರಾಮನ ವಿಗ್ರಹ ಪ್ರತಿಷ್ಠಾಪನೆ ಮೇಲಿನ ಸುದೀರ್ಘ ಚರ್ಚೆಯೊಂದಿಗೆ 17ನೇ ಲೋಕಸಭೆಯ ಕೊನೆಯ ಅಧಿವೇಶನಕ್ಕೆ ಶನಿವಾರ ತೆರೆಬಿತ್ತು.

ರಾಜ್ಯಸಭೆಯ ಅಧಿವೇಶನದಲ್ಲೂ ಕೊನೆಯ ದಿನ ರಾಮಮಂದಿರದ ಬಗ್ಗೆ ಚರ್ಚೆ ನಡೆಯಿತು. ಜನವರಿ 31 ರಂದು ಆರಂಭವಾಗಿದ್ದ ಬಜೆಟ್ ಅಧಿವೇಶನವು 17ನೇ ಲೋಕಸಭೆಯ ಕೊನೆಯ ಅಧಿವೇಶನವಾಗಿತ್ತು. ಏಪ್ರಿಲ್– ಮೇ ತಿಂಗಳಲ್ಲಿ ನಡೆಯಲಿರುವ ಲೋಕಸಭಾ ಚುನಾವಣೆಯ ವೇಳಾಪಟ್ಟಿ ಶೀಘ್ರದಲ್ಲೇ ಹೊರಬೀಳುವ ಸಾಧ್ಯತೆಯಿದೆ.

‘ರಾಜ್ಯಸಭೆಯ 263ನೇ ಅಧಿವೇಶನ ಕೊನೆಗೊಂಡಿದೆ. ಚುನಾವಣೆಗೆ ಮುನ್ನ ಇದು ಕೊನೆಯ ಅಧಿವೇಶನ ಆಗಿದೆ. ಕೆಲವೇ ದಿನಗಳಲ್ಲಿ ನಮಗೆ ‘ಪ್ರಜಾಪ್ರಭುತ್ವದ ಹಬ್ಬ’ ಎನಿಸಿರುವ ಸಾರ್ವತ್ರಿಕ ಚುನಾವಣೆ ಎದುರಾಗಲಿದೆ’ ಎಂದು ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಹೇಳಿದರು.

ಲೋಕಸಭೆಯಲ್ಲಿ ಮಾತನಾಡಿದ ಗೃಹ ಸಚಿವ ಅಮಿತ್ ಶಾ, ‘ಅಯೋಧ್ಯೆ ರಾಮಮಂದಿರ ವಿಷಯದ ಕುರಿತು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಭಾರತದ ಜಾತ್ಯತೀತ ತತ್ವವನ್ನು ಜಗತ್ತಿನಲ್ಲಿ ಪ್ರತಿಫಲಿಸುವಂತೆ ಮಾಡಿದೆ’ ಎಂದು ಬಣ್ಣಿಸಿದರು.

'ಯಾವುದೇ ದೇಶದ ಬಹುಸಂಖ್ಯಾತ ಸಮುದಾಯವು ತನ್ನ ಧಾರ್ಮಿಕ ನಂಬಿಕೆಗೆ ಸಂಬಂಧಿಸಿದ ಕನಸು ಈಡೇರಲು ಇಷ್ಟು ಸುದೀರ್ಘ ಅವಧಿಯವರೆಗೆ ಕಾಯುತ್ತಿರಲಿಲ್ಲ. ರಾಮರಾಜ್ಯದ ಕಲ್ಪನೆಯು ಯಾವುದೇ ಒಂದು ಧರ್ಮ ಅಥವಾ ಪಂಗಡಕ್ಕೆ ಸೀಮಿತವಾದುದಲ್ಲ’ ಎಂದು ಹೇಳಿದರು.

ರಾಮಮಂದಿರ ಕುರಿತು ನಾಲ್ಕು ಗಂಟೆ ನಡೆದ ಚರ್ಚೆಯ ಬಳಿಕ ನಿರ್ಣಯವನ್ನು ಓದಿದ ಸ್ಪೀಕರ್ ಓಂ ಬಿರ್ಲಾ, ‘ರಾಮಮಂದಿರ ನಿರ್ಮಾಣ ಐತಿಹಾಸಿಕ ಸಾಧನೆಯಾಗಿದ್ದು, ಇದು ಭವಿಷ್ಯದ ಪೀಳಿಗೆಗೆ ಭರವಸೆ ಮತ್ತು ಏಕತೆಯ ಸಂದೇಶವನ್ನು ಸಾರಲಿದೆ’ ಎಂದು ನುಡಿದರು.

ಚರ್ಚೆಯಲ್ಲಿ ಪಾಲ್ಗೊಂಡ ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಓವೈಸಿ, ‘ದೇಶದ 17 ಕೋಟಿ ಮುಸ್ಲಿಮರಲ್ಲಿ ತಾವು ಪರಕೀಯರು ಎಂಬ ಭಾವನೆ ಮೂಡಿದೆ. ನಾನು ಬಾಬರ್, ಜಿನ್ನಾ ಅಥವಾ ಔರಂಗಜೇಬನ ವಕ್ತಾರನೇ? ಮರ್ಯಾದಾ ಪುರುಷೋತ್ತಮನಾದ ರಾಮನನ್ನು ನಾನು ಗೌರವಿಸುತ್ತೇನೆ. ಆದರೆ ನಾಥೂರಾಮ್ ಗೋಡ್ಸೆಯನ್ನು ದ್ವೇಷಿಸುವೆ’ ಎಂದು ಹೇಳಿದರು.

ಕಾಂಗ್ರೆಸ್, ಎನ್‌ಸಿಪಿ ಮತ್ತು ಶಿವಸೇನಾ (ಯುಬಿಟಿ) ಹೊರತುಪಡಿಸಿ ‘ಇಂಡಿಯಾ’ ಮೈತ್ರಿಕೂಟದ ಇತರ ಪಕ್ಷಗಳು ಚರ್ಚೆಯಲ್ಲಿ ಪಾಲ್ಗೊಳ್ಳಲಿಲ್ಲ. ಡಿಎಂಕೆ, ಸಿಪಿಎಂ, ಮುಸ್ಲಿಂ ಲೀಗ್, ಟಿಎಂಸಿ ಮತ್ತು ಆರ್‌ಎಸ್‌ಪಿ ಸದಸ್ಯರು ಚರ್ಚೆ ಆರಂಭವಾಗುತ್ತಿದ್ದಂತೆಯೇ ಉಭಯ ಸದನಗಳಿಂದ ಹೊರನಡೆದರು.

17ನೇ ಲೋಕಸಭೆಯ ಕೊನೆಯ ಅಧಿವೇಶನ ಮುಕ್ತಾಯಗೊಳ್ಳುತ್ತಿದ್ದಂತೆಯೇ ಸಚಿವೆ ಸ್ಮೃತಿ ಇರಾನಿ ಹಾಗೂ ಇತರ ಸಂಸದರು ಎದ್ದು ನಿಂತ ಕ್ಷಣ —ಪಿಟಿಐ ಚಿತ್ರ

ರಾಮಮಂದಿರ ವಿಷಯವು ಇಡೀ ದೇಶಕ್ಕೆ ಸಂಬಂಧಿಸಿದ್ದಾಗಿದೆ. ಈ ವಿಚಾರದಲ್ಲಿ ಬಿಜೆಪಿಯು ಯಾವುದೇ ರಾಜಕೀಯ ಲಾಭ ಪಡೆಯಲು ಪ್ರಯತ್ನಿಸಿಲ್ಲ

ಜೆ.ಪಿ.ನಡ್ಡಾ, ಬಿಜೆಪಿ ಅಧ್ಯಕ್ಷ

'ಈಗಿನ ಸರ್ಕಾರ ಒಂದು ನಿರ್ದಿಷ್ಟ ಸಮುದಾಯಕ್ಕೆ ಸೀಮಿತವಾಗಿದೆಯೇ? ಇದು ಕೇವಲ ಹಿಂದುತ್ವಕ್ಕಾಗಿ ಇರುವ ಸರ್ಕಾರವೇ?

ಅಸಾದುದ್ದೀನ್ ಓವೈಸಿ, ಎಐಎಂಐಎಂ ಮುಖ್ಯಸ್ಥ

ಪ್ರಮುಖ ಅಂಶಗಳು

- 17ನೇ ಲೋಕಸಭೆಯ ಐದು ವರ್ಷಗಳ ಅವಧಿಯಲ್ಲಿ 222 ಮಸೂದೆಗಳನ್ನು ಅಂಗೀಕರಿಸಲಾಗಿದೆ: ಸ್ಪೀಕರ್ ಓಂ ಬಿರ್ಲಾ
- ‘ಐತಿಹಾಸಿಕ ರಾಮಮಂದಿರ ನಿರ್ಮಾಣ ಹಾಗೂ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ’ ವಿಷಯದಲ್ಲಿ ಚರ್ಚೆ– ನಿರ್ಣಯ ಅಂಗೀಕಾರ
- ಚರ್ಚೆಗೆ ರಾಮಮಂದಿರ ವಿಷಯ ಆಯ್ಕೆ ಮಾಡುವ ಮೂಲಕ ಮೋದಿ ಸರ್ಕಾರವು ಸಂಸತ್ತನ್ನು ಅಣಕಿಸಿದೆ: ಟಿಎಂಸಿ ಸಂಸದ ಸಾಕೇತ್ ಗೋಖಲೆ
- **17ನೇ ಲೋಕಸಭೆಯ ಅವಧಿ ‘ಐತಿಹಾಸಿಕ’:** ಹಲವು ಸಂಸದರ ಬಣ್ಣನೆ
- ಐದು ವರ್ಷಗಳ ಪೂರ್ಣಾವಧಿಯ ಸರ್ಕಾರದಲ್ಲಿ ಲೋಕಸಭೆಯು ಅತಿಕಡಿಮೆ ಕಲಾಪಗಳನ್ನು (274) ಕಂಡಿದ್ದು ಇದೇ ಮೊದಲು. 16ನೇ ಲೋಕಸಭೆ ಅವಧಿಯಲ್ಲಿ 331 ಕಲಾಪಗಳು, ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಆಡಳಿತದ 15 ಹಾಗೂ 14ನೇ ಲೋಕಸಭೆಯಲ್ಲಿ ಕ್ರಮವಾಗಿ 332, 356 ಕಲಾಪಗಳು ನಡೆದಿದ್ದವು

17ನೇ ಲೋಕಸಭೆ ಚಿತ್ರಣ

(2019-2024)

- 15 ಒಟ್ಟು ಅಧಿವೇಶನ
- 274 ಒಟ್ಟು ಕಲಾಪ
- 1,354 ಗಂಟೆ ಕಲಾಪ ಅವಧಿ
- 345 ಗಂಟೆ ಹೆಚ್ಚುವರಿ ಕಲಾಪ ಅವಧಿ
- 387 ಗಂಟೆ ಗದ್ದಲದಿಂದ ನಷ್ಟವಾದ ಕಲಾಪ ಅವಧಿ

2019ರ ಜೂನ್ 17 ಮೊದಲ ಕಲಾಪ

ಮಸೂದೆ

- 729 ಖಾಸಗಿ ಸದಸ್ಯರ ಮಸೂದೆ
- 202 ಸರ್ಕಾರಿ ಮಸೂದೆ ಮಂಡನೆ
- 222 ಸರ್ಕಾರಿ ಮಸೂದೆಗಳಿಗೆ ಅಂಗೀಕಾರ
- 11 ವಾಪಸ್ ಪಡೆದಿರುವ ಮಸೂದೆಗಳು

ಪ್ರಶ್ನೋತ್ತರ

- 4,663 ಚುಕ್ಕೆ ಪ್ರಶ್ನೆಗಳು
- 1,116 ಚುಕ್ಕೆ ಪ್ರಶ್ನೆಗಳಿಗೆ ಮೌಖಿಕ ಉತ್ತರ
- 55,889 ಚುಕ್ಕೆರಹಿತ ಪ್ರಶ್ನೆಗಳು
- 691 ಇಲಾಖೆ ಸಂಬಂಧಿತ ಸಂಸದೀಯ ಸ್ಥಾಯಿ ಸಮಿತಿ ವರದಿಗಳು
- 543 ಸಂಸದರಲ್ಲಿ 540 ಮಂದಿ ಚರ್ಚೆಗಳಲ್ಲಿ ಪಾಲ್ಗೊಂಡಿದ್ದಾರೆ

‘ರಾಜ್ಯಸಭೆಗೆ ಜೈರಾಮ್ ಅರ್ಹರಲ್ಲ’

‘ಜೈರಾಮ್ ರಮೇಶ್ ಅವರು ರಾಜ್ಯಸಭೆಯಲ್ಲಿ ಇರುವುದಕ್ಕೆ ಅರ್ಹರಲ್ಲ’ ಎನ್ನುವ ಮೂಲಕ ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ಅವರು ಕಾಂಗ್ರೆಸ್ ನಾಯಕನ ಕಾಲೆಳೆದರು.

ಚರಣ್ ಸಿಂಗ್ ಅವರನ್ನು ‘ಭಾರತ ರತ್ನ’ ಪ್ರಶಸ್ತಿಗೆ ಆಯ್ಕೆ ಮಾಡಿರುವುದರ ಬಗ್ಗೆ ಮಾತನಾಡಲು ಅವರ ಮೊಮ್ಮಗ, ಆರ್‌ಎಲ್‌ಡಿ ಮುಖ್ಯಸ್ಥ ಜಯಂತ್ ಸಿಂಗ್ ಅವರಿಗೆ ಧನಕರ್ ಅವಕಾಶ ನೀಡಿದರು. ಜೈರಾಮ್ ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ಅದಕ್ಕೆ ಧನಕರ್, ‘ಈ ರೀತಿಯ ಅನುಚಿತ ವರ್ತನೆ ತೋರುವ ನಿಮಗೆ ರಾಜ್ಯಸಭೆಯಲ್ಲಿರಲು ಅರ್ಹತೆಯಿಲ್ಲ’ ಎಂದರು.

‘ಕುವೈತ್‌ನ ನೋ ಫ್ಲೈ ಲಿಸ್ಟ್’ನಲ್ಲಿ ಬಂಧಿತರು’

ಮುಂಬೈ (ಪಿಟಿಐ): ದೋಣಿಯಲ್ಲಿ ಅಕ್ರಮವಾಗಿ ಭಾರತ ಪ್ರವೇಶಿಸಿದ್ದಕ್ಕಾಗಿ ಬಂಧಿಸಲಾಗಿದ್ದ ಮೂವರು ಕುವೈತ್‌ನ ‘ನೋ ಫ್ಲೈ ಲಿಸ್ಟ್’ (ವಿದೇಶ ಪ್ರಯಾಣ ನಿಷಿದ್ಧ ಪಟ್ಟಿ)ನಲ್ಲಿದ್ದಾರೆ ಎಂದು ಮುಂಬೈ ಪೊಲೀಸರು ಶನಿವಾರ ಇಲ್ಲಿ ನ್ಯಾಯಾಲಯಕ್ಕೆ ಮಾಹಿತಿ ನೀಡಿದ್ದಾರೆ.

ಕುವೈತ್‌ನಲ್ಲಿರುವ ಕಾನ್ಸುಲೇಟ್‌ನ ಮಾಹಿತಿಯ ಪ್ರಕಾರ, ಆರೋಪಿಗಳು ಮಧ್ಯಪ್ರಾಚ್ಯ ದೇಶದ ‘ನೋ ಫ್ಲೈ ಲಿಸ್ಟ್’ನಲ್ಲಿದ್ದಾರೆ. ಇದನ್ನು ಪರಿಶೀಲಿಸಲು ಆರೋಪಿಗಳ ಕಸ್ಟಡಿ ವಿಚಾರಣೆಯ ಅಗತ್ಯವಿದೆ. ದೋಣಿಯ ಜಿಪಿಎಸ್ ಮಾರ್ಗವನ್ನು ಇನ್ನೂ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ನ್ಯಾಯಾಲಯಕ್ಕೆ ತಿಳಿಸಿದರು.

ಪಾಸ್‌ಪೋರ್ಟ್ ನಿಯಮಗಳನ್ನು ಉಲ್ಲಂಘಿಸಿರುವ ಆರೋಪದಡಿ ಬಂಧಿಸಿರುವ ಆರೋಪಿಗಳ ಪೊಲೀಸ್ ಕಸ್ಟಡಿಯನ್ನು ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಫೆಬ್ರುವರಿ 12ರವರೆಗೆ ವಿಸ್ತರಿಸಿದ್ದಾರೆ.

ಕುವೈತ್‌ನಿಂದ ಪಾಕಿಸ್ತಾನದ ಮೂಲಕ ಸಮುದ್ರ ಮಾರ್ಗವಾಗಿ ದೋಣಿಯಲ್ಲಿ ಭಾರತದ ತೀರವನ್ನು ಅಕ್ರಮವಾಗಿ ಪ್ರವೇಶಿಸಿದ್ದ ತಮಿಳುನಾಡು ಮೂಲದ ನಿಟ್ಸೋ ಡಿಟ್ಟೋ (31), ವಿಜಯ್ ವಿನಯ್ ಆಂಥೋನಿ (29), ಜೆ. ಸಹಾಯತ್ತ ಅನೀಶ್ (29) ಅವರನ್ನು ಫೆ.7ರಂದು ಬಂಧಿಸಲಾಗಿತ್ತು.

ಆರೋಪಿಗಳ ಪರ ವಾದಿಸಿದ ವಕೀಲ ಸುನೀಲ್ ಪಾಂಡೆ, ಬಂಧಿತರ ಜತೆಗೆ ಕೆಲಸದ ನಿಮಿತ್ತ ಕುವೈತ್‌ಗೆ ತೆರಳಿದ್ದ ಇತರ ಎಂಟು ಮಂದಿಯನ್ನು ಅಲ್ಲಿ ಉದ್ಯೋಗದಾತರು ಒತ್ತೆಯಾಳಾಗಿ ಇರಿಸಿಕೊಂಡು, ಪಾಸ್‌ಪೋರ್ಟ್ ವಶದಲ್ಲಿರಿಸಿಕೊಂಡಿದ್ದಾರೆ ಎಂದು ಹೇಳಿದ್ದಾರೆ.

ಮಂಗನ ಕಾಯಿಲೆಗೆ ಹೊಸ ಲಸಿಕೆ ಶೀಘ್ರ: ಸಚಿವ

ಪ್ರಜಾವಾಣಿ ವಾರ್ತೆ

ಉಡುಪಿ: ಮಂಗನ ಕಾಯಿಲೆಗೆ ಹೊಸ ಲಸಿಕೆ ತಯಾರಿಸುವ ಸಂಬಂಧ ಐಸಿಎಂಆರ್ ಜೊತೆ ಚರ್ಚಿಸಲಾಗಿದ್ದು, ಲಸಿಕೆ ತಯಾರಿಸಲು ಒಪ್ಪಿಗೆ ದೊರೆತಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಮಂಗನ ಕಾಯಿಲೆ ನಿಯಂತ್ರಣ ಕುರಿತು ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಯ ಅಧಿಕಾರಿಗಳ ಜತೆ ಸಭೆ ನಡೆಸಿದ ಬಳಿಕ ಸಚಿವರು ಮಾತನಾಡಿದರು.

ಮಂಗನ ಕಾಯಿಲೆಗೆ ಹಳೆಯ ಲಸಿಕೆ ಬಳಸುವಂತಿಲ್ಲ ಎಂಬ ಆದೇಶದ ಹಿನ್ನೆಲೆಯಲ್ಲಿ ಹೊಸ ಲಸಿಕೆ ತಯಾರಿಸಲು ಐಸಿಎಂಆರ್‌ಗೆ 2 ತಿಂಗಳ ಹಿಂದೆ ಮನವಿ ಮಾಡಲಾಗಿತ್ತು. ಅದರಂತೆ, ಹೈದರಾಬಾದ್‌ನ ಇಂಡಿಯನ್ ಇಮ್ಯುನಾಲಜಿಕಲ್ ಸಂಸ್ಥೆ ಸಂಶೋಧನೆ ಹಾಗೂ ಲಸಿಕೆ ತಯಾರಿಸುವ ಹೊಣೆ ಹೊತ್ತಿದ್ದು, ಮುಂದಿನ ವರ್ಷ ಹೊಸ ಲಸಿಕೆ ಲಭ್ಯವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ವರ್ಷ ಮಂಗನ ಕಾಯಿಲೆಗೆ ಇಬ್ಬರು ಮೃತಪಟ್ಟಿದ್ದು, ಇಬ್ಬರು ಗಂಭೀರ ಸ್ಥಿತಿಯಲ್ಲಿದ್ದು ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಉತ್ತರ ಕನ್ನಡ 38, ಶಿವಮೊಗ್ಗ 25 ಹಾಗೂ ಚಿಕ್ಕಮಗಳೂರಿನಲ್ಲಿ 6 ಮಂದಿಗೆ ಕೆಎಫ್‌ಡಿ ಸೋಂಕು ದೃಢಪಟ್ಟಿದ್ದು, 20 ಸಕ್ರಿಯ ಪ್ರಕರಣಗಳಿವೆ. ಸಾವು ಸಂಭವಿಸದಂತೆ ಎಚ್ಚರಿಕೆ ವಹಿಸಲಾಗಿದ್ದು, ಔಷಧ ಪೂರೈಕೆ ಜತೆಗೆ ಸೋಂಕು ಹರಡದಂತೆ ಕ್ರಮ ತೆಗೆದುಕೊಳ್ಳಲಾಗಿದೆ ಎಂದರು.

ಮಹಾರಾಷ್ಟ್ರ: ರಾಷ್ಟ್ರಪತಿ ಆಳ್ವಿಕೆಗೆ ಆಗ್ರಹ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಕಾನೂನು ಸುವ್ಯವಸ್ಥೆ ಬಗ್ಗೆ ಹರಿಹಾಯ್ದಿರುವ ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಏಕನಾಥ ಶಿಂದೆ ನೇತೃತ್ವದ ಸರ್ಕಾರವನ್ನು ವಜಾಗೊಳಿಸಿ, ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಜಾರಿಗೊಳಿಸಲು ಶನಿವಾರ ಆಗ್ರಹಿಸಿದ್ದಾರೆ.

ಪಕ್ಷದ ಮುಖಂಡ ಅಭಿಷೇಕ್ ಘೋಸಾಲಕರ್ ಅವರ ಹತ್ಯೆ ಹಿನ್ನೆಲೆಯಲ್ಲಿ ಇಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಗಲಭೆಕೋರರನ್ನು ರಾಜ್ಯ ಸರ್ಕಾರವು ರಕ್ಷಿಸುತ್ತಿದೆ ಎಂದು ಆರೋಪಿಸಿದರು.

ಪೊಲೀಸರಿಗೆ ಯಾವುದೇ ನಿರ್ಬಂಧಗಳನ್ನು ಹೇರದಿದ್ದರೆ, ಅವರು 24 ಗಂಟೆಗಳಲ್ಲಿ ಗಲಭೆಕೋರರನ್ನು ಬಂಧಿಸುತ್ತಾರೆ. ಆದರೆ, ಸರ್ಕಾರವೇ ಗಲಭೆಕೋರರನ್ನು ಬೆಂಬಲಿಸುತ್ತಿದೆ ಎಂದರು.

ಪರಸ್ಪರ ಟೀಕಾ ಪ್ರಹಾರ: ಈ ಪ್ರಕರಣದ ಹಿನ್ನೆಲೆಯಲ್ಲಿ ರಾಜ್ಯದ ಉಪಮುಖ್ಯಮಂತ್ರಿ, ಗೃಹ ಸಚಿವ ದೇವೇಂದ್ರ ಫಡಣವೀಸ್ ಅವರು ರಾಜೀನಾಮೆ ನೀಡಬೇಕು ಎಂದು ಉದ್ಧವ್ ಕೇಳಿದ್ದರು. ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದ ಫಡಣವೀಸ್, ‘ಈ ರಾಜ್ಯದಲ್ಲಿ ವಾಹನದ ಚಕ್ರಕ್ಕೆ ನಾಯಿ ಸಿಲುಕಿ ಸತ್ತರೂ ಗೃಹ ಸಚಿವರ ರಾಜೀನಾಮೆ ಆಗ್ರಹಿಸಲಾಗುತ್ತದೆ’ ಎಂದು ವ್ಯಂಗ್ಯವಾಡಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ್ದ ಉದ್ಧವ್, ಫಡಣವೀಸ್ ‘ಮಾನಸಿಕ ಅಸ್ವಸ್ಥ’ ಗೃಹ ಸಚಿವ ಎಂದಿದ್ದರು. ಉದ್ಧವ್‌ಗೆ ತಿರುಗೇಟು ನೀಡಿರುವ ಫಡಣವೀಸ್ ‘ಉದ್ಧವ್ ಠಾಕ್ರೆ ಅವರು ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದಾರೆ. ಆದಷ್ಟು ಶೀಘ್ರವಾಗಿ ಗುಣಮುಖರಾಗಲಿ ಎಂದು ನಾನು ಹಾರೈಸಬಹುದಷ್ಟೇ’ ಎಂದಿದ್ದಾರೆ.

‘ಗೂಂಡಾರಾಜ್’ ಆಗಿ ಬದಲಾದ ಮಹಾರಾಷ್ಟ್ರ: ಖರ್ಗೆ

ನವದೆಹಲಿ (ಪಿಟಿಐ): ಶಿವಸೇನಾ (ಯುಟಿಬಿ) ಮುಖಂಡನ ಹತ್ಯೆ ಮತ್ತು ಪತ್ರಕರ್ತರೊಬ್ಬರ ಕಾರಿನ ಮೇಲೆ ದಾಳಿ ನಡೆದ ಪ್ರಕರಣಗಳ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ನಾಯಕತ್ವದಲ್ಲಿ ಮಹಾರಾಷ್ಟ್ರವು ‘ಗೂಂಡಾರಾಜ್’ ಆಗಿ ಬದಲಾಗಿದೆ ಎಂದಿದ್ದಾರೆ.

‘ಜನಾಭಿಪ್ರಾಯವನ್ನು ತಿರುಚಿ ಬಿಜೆಪಿಯು ಸರ್ಕಾರ ರಚಿಸಿದ ಬಳಿಕ ಮಹಾರಾಷ್ಟ್ರದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿದೆ. ರಾಜಕಾರಣಿಯೊಬ್ಬರು ಭೀಕರವಾಗಿ ಹತ್ಯೆಗೀಡಾಗುತ್ತಾರೆ. ಪತ್ರಕರ್ತರೊಬ್ಬರ ಮೇಲೆ ಆರ್‌ಎಸ್‌ಎಸ್– ಬಿಜೆಪಿ ಗೂಂಡಾಗಳು ದಾಳಿ ನಡೆಸುತ್ತಾರೆ. ಪೊಲೀಸ್ ಠಾಣೆಯಲ್ಲಿ ಬಿಜೆಪಿ ಶಾಸಕರೊಬ್ಬರು ಮತ್ತೊಬ್ಬ ರಾಜಕಾರಣಿ ಮೇಲೆ ದಾಳಿ ನಡೆಸುತ್ತಾರೆ’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಜಮ್ಮು: ವಿವಿಧೆಡೆ ಎನ್‌ಐಎ ದಾಳಿ

ಜಮ್ಮು/ಶ್ರೀನಗರ (ಪಿಟಿಐ): ನಿಷೇಧಿತ ಜಮಾತ್–ಎ–ಇಸ್ಲಾಮಿ ಸಂಘಟನೆಗೆ ಸಂಬಂಧಿಸಿದ ಉಗ್ರ ಚಟುವಟಿಕೆಗೆ ಹಣಕಾಸು ನೆರವು ನೀಡಿದ ಪ್ರಕರಣದ ತನಿಖೆಯ ಭಾಗವಾಗಿ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಶನಿವಾರ ಜಮ್ಮು ಮತ್ತು ಕಾಶ್ಮೀರದ 15 ಸ್ಥಳಗಳಲ್ಲಿ ಶೋಧ ನಡೆಸಿತು.

ಶ್ರೀನಗರ, ಜಮ್ಮು, ಬುದ್ಗಾಂ, ಕುಲ್ಗಾಂ, ಅನಂತ್‌ನಾಗ್‌ನಲ್ಲಿ ಶೋಧ ಕೈಗೊಂಡಿತ್ತು. ಉಗ್ರ ಸಂಘಟನೆ ಮತ್ತು ಅದರ ಟ್ರಸ್ಟ್‌ಗೆ ಸಂಬಂಧಿಸಿದ ದಾಖಲೆಗಳು ಮತ್ತು ಡಿಜಿಟಲ್ ಸಾಧನಗಳು ಹಾಗೂ ₹20 ಲಕ್ಷ ಮೊತ್ತವನ್ನು ವಶಕ್ಕೆ ಪಡೆದಿದೆ ಎಂದು ತನಿಖಾ ಸಂಸ್ಥೆಯ ವಕ್ತಾರರು ತಿಳಿಸಿದ್ದಾರೆ.

ಪ್ರಜಾವಾಣಿ facebook LIVE fb.com/prajavani.net

ದ್ವಿತೀಯ ಪಿಯು ವಿದ್ಯಾರ್ಥಿಗಳೇ, ಗಮನಿಸಿ!

ಭಯ ಬೇಡ, ಧೈರ್ಯದಿಂದ ಪರೀಕ್ಷೆ ಎದುರಿಸಿ

ಸುಬ್ಬರಾಜು, ಇಂಗ್ಲಿಷ್ ಉಪನ್ಯಾಸಕರು, ದಾವಣಗೆರೆ

ಇವರಿಂದ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಉಪನ್ಯಾಸ

ಇಂದಿನ ವಿಷಯ: ಇಂಗ್ಲಿಷ್

ಸಂಯೋಜನೆ: AIDSO ಕರ್ನಾಟಕ ರಾಜ್ಯ ಸಮಿತಿ

ಫೆಬ್ರುವರಿ 4 ಮಧ್ಯಾಹ್ನ 3.00 ರಿಂದ 5.00

ಕ್ರಾಂತಿಕಾರಿ ಸುಧಾರಣೆ ಕಾಲ: ಮೋದಿ

ಒಂದನೇ ಪುಟದಿಂದ...

‘ಕಳೆದ ಐದು ವರ್ಷಗಳಲ್ಲಿ ಆಗಿರುವ ಬದಲಾವಣೆಗಳಿಗಾಗಿ ದೇಶವು ಈ ಲೋಕಸಭೆಯನ್ನು ಸದಾ ನೆನಪಿಸಿಕೊಳ್ಳಲಿದೆ’ ಎಂದು ಅಭಿಪ್ರಾಯಪಟ್ಟರು. '17ನೇ ಲೋಕಸಭೆಯು ಶೇ 97ರಷ್ಟು ಫಲಪ್ರದವಾಗಿದೆ. 18ನೇ ಲೋಕಸಭೆಯಲ್ಲಿ ಶೇ 100 ಮೀರಬೇಕೆಂಬುದು ನಮ್ಮ ಉದ್ದೇಶ‘ ಎಂದು ಮೋದಿ ಹೇಳಿದರು.

ಜೈಶ್ರೀರಾಮ್ ಘೋಷಣೆ: ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಡಳಿತಾರೂಢ ಪಕ್ಷದ ಸದಸ್ಯರು 'ಜೈ ಶ್ರೀರಾಮ್' ಘೋಷಣೆಯೊಂದಿಗೆ ಸದನಕ್ಕೆ ಸ್ವಾಗತಿಸಿದರು.

ಸ್ಪೀಕರ್‌ಗೆ ಮೋದಿ ಮೆಚ್ಚುಗೆ: ಸಂಸದರು ಮತ್ತು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಧನ್ಯವಾದ ಸಲ್ಲಿಸಿದ ಪ್ರಧಾನಿ ಮೋದಿ, ‘ಏನೇ ಸಂಭವಿಸಿದರೂ ನಿಮ್ಮ (ಓಂ ಬಿರ್ಲಾ) ಮುಖದಲ್ಲಿ ಯಾವಾಗಲೂ ನಗು ಇರುತ್ತದೆ. ನೀವು ಈ ಸದನವನ್ನು ನಿಷ್ಪಕ್ಷಪಾತವಾಗಿ ಮುನ್ನಡೆಸಿದ್ದೀರಿ. ಅದಕ್ಕಾಗಿ ನಾನು ನಿಮ್ಮನ್ನು ಶ್ಲಾಘಿಸುವೆ. ಕೋಪ ಮತ್ತು ಆರೋಪಗಳ ಸಂದರ್ಭ ಎದುರಾದಾಗಲೂ ನೀವು ತಾಳ್ಮೆಯಿಂದ ನಿಭಾಯಿಸಿ, ಸದನವನ್ನು ಜಾಣ್ಮೆಯಿಂದ ನಡೆಸಿದ್ದೀರಿ’ ಎಂದು ಬಿರ್ಲಾ ಅವರನ್ನು ಪ್ರಶಂಸಿಸಿದರು.

ಕಳೆದ ಐದು ವರ್ಷಗಳಲ್ಲಿ ಕೋವಿಡ್ ಸಾಂಕ್ರಾಮಿಕದಂತಹ ‘ಶತಮಾನದ ಅತಿದೊಡ್ಡ ಬಿಕ್ಕಟ್ಟು’ ಅನ್ನು ದೇಶ ಕಂಡಿದೆ. ಬಿರ್ಲಾ ಅವರು ಸದನದ ಘನತೆ ಎತ್ತಿಹಿಡಿಯಲು, ಸಂಸದೀಯ ಕಾರ್ಯಗಳಿಗೆ ಅಡ್ಡಿಯಾಗದಂತೆ ವ್ಯವಸ್ಥೆ ಮಾಡಿದರು. ಹಿಂದೆ ಸಂಸತ್ ಹೊಸ ಕಟ್ಟಡದ ಅಗತ್ಯತೆಯ ಬಗ್ಗೆ ಪ್ರಸ್ತಾಪಿಸಲಾಗುತ್ತಿತ್ತು. ಆದರೆ, ಸ್ಪೀಕರ್ ನಿರ್ಧಾರವು 17ನೇ ಲೋಕಸಭೆಯ ಸಮಯದಲ್ಲಿ ಇದನ್ನು ಸಾಕಾರಗೊಳಿಸಿತು. ಬಿರ್ಲಾ ಅವರ ನೇತೃತ್ವದಲ್ಲಿ ಸದನದಲ್ಲಿ ಸೆಂಗೋಲ್ ಅನ್ನು ವಿಧ್ಯುಕ್ತವಾಗಿ ಪ್ರತಿಷ್ಠಾಪನೆ ಕೂಡ ಮಾಡಲಾಯಿತು ಎಂದು ಮೋದಿ ಹೇಳಿದರು.

ರಥೋತ್ಸವ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಸುಕ್ಷೇತ್ರ ಯಡೂರಿನಲ್ಲಿ ಶನಿವಾರ ವಿಶಾಳಿ ಜಾತ್ರೆ ಪ್ರಯುಕ್ತ ವೀರಭದ್ರೇಶ್ವರ ಮಹಾ ರಥೋತ್ಸವ ನಡೆಯಿತು – ಪ್ರಜಾವಾಣಿ ಚಿತ್ರ

ಚುನಾವಣೆಗೂ ಮುನ್ನ ಸಿಎಎ ಜಾರಿ

ಒಂದನೇ ಪುಟದಿಂದ

‘ಆದರೆ, ಕಾಂಗ್ರೆಸ್ ಓಲೈಕೆ ರಾಜಕಾರಣದ ಭಾಗವಾಗಿ ಯುಸಿಸಿಯನ್ನು ನಿರ್ಲಕ್ಷಿಸಿತ್ತು. ಉತ್ತರಾಖಂಡದಲ್ಲಿ ಯುಸಿಸಿ ಜಾರಿಯು ಸಾಮಾಜಿಕ ಬದಲಾವಣೆಗೆ ನಾಂದಿಯಾಗಲಿದೆ. ಜಾತ್ಯತೀತ ರಾಷ್ಟ್ರವೊಂದು ಧರ್ಮ ಆಧಾರಿತ ನಾಗರಿಕ ಸಂಹಿತೆಯನ್ನು ಹೊಂದಲು ಸಾಧ್ಯವಿಲ್ಲ’ ಎಂದರು.

‘ಒಬಿಸಿ ಪಟ್ಟಿಗೆ ಸೇರಿಸಿದ್ದು ಕಾಂಗ್ರೆಸ್’: ಪ್ರಧಾನಿ ಮೋದಿ ಅವರ ಜಾತಿಯ ಬಗ್ಗೆ ಚರ್ಚೆ ನಡೆಯುತ್ತಿರುವುದು ತೀರಾ ದುರದೃಷ್ಟಕರ ಎಂದ ಅಮಿತ್ ಶಾ, ‘ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸುಳ್ಳು ಹೇಳುವುದನ್ನೇ ಚಟವಾಗಿಸಿಕೊಂಡಿದ್ದಾರೆ’ ಎಂದು ವಾಗ್ದಾಳಿ ನಡೆಸಿದರು.

‘ಗುಜರಾತ್‌ನಲ್ಲಿ ಕಾಂಗ್ರೆಸ್ 1994ರಲ್ಲಿ ಅಧಿಕಾರದಲ್ಲಿದ್ದಾಗ ಮೋದಿ ಅವರ ಜಾತಿಯನ್ನು ಇತರ ಹಿಂದುಳಿದ ವರ್ಗಗಳ (ಒಬಿಸಿ) ಪಟ್ಟಿಯಲ್ಲಿ ಸೇರಿಸಿತ್ತು. ಕೇಂದ್ರ ಸರ್ಕಾರವು 2000ನೇ ಇಸವಿಯಲ್ಲಿ ಒಬಿಸಿ ಪಟ್ಟಿಗೆ ಸೇರಿಸಿತ್ತು’ ಎಂದು ತಿಳಿಸಿದರು.

‘ಒಬಿಸಿ ಕುಟುಂಬದಲ್ಲಿ ಜನಿಸದ ಪ್ರಧಾನಿ ಮೋದಿ, ತಮ್ಮನ್ನು ತಾವು ಒಬಿಸಿ ಎಂದು ಗುರುತಿಸಿಕೊಂಡು ಜನರ ದಿಕ್ಕು ತಪ್ಪಿಸುತ್ತಿದ್ದಾರೆ’ ಎಂದು ರಾಹುಲ್ ಈಚೆಗೆ ಆರೋಪ ಮಾಡಿದ್ದರು.

ನಿಯಮಗಳು ಸಿದ್ಧ: ಸಿಎಎ ಜಾರಿಗೆ ಅಗತ್ಯವಿರುವ ನಿಯಮಗಳನ್ನು ರೂಪಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಪೌರತ್ವ ನೀಡುವ ಇಡೀ ಪ್ರಕ್ರಿಯೆ ಆನ್‌ಲೈನ್ ಮೂಲಕವೇ ನಡೆಯಲಿದೆ.

ಪೌರತ್ವ ಕೋರಿ ಅರ್ಜಿ ಸಲ್ಲಿಸುವವರು ತಾವು ಭಾರತಕ್ಕೆ ಬಂದ ವರ್ಷವನ್ನು ನಮೂದಿಸಬೇಕು. ಪ್ರಯಾಣಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ಸಲ್ಲಿಸಬೇಕಿಲ್ಲ ಎಂದು ನಿಯಮದಲ್ಲಿ ಹೇಳಲಾಗಿದೆ.

ಸೀಟುಹಂಚಿಕೆ; ಮೂಡದ ಒಮ್ಮತ

ಮುಂಬೈ (ಪಿಟಿಐ): ಲೋಕಸಭೆ ಚುನಾವಣೆಗಾಗಿ ಮಹಾರಾಷ್ಟ್ರದ ಮಹಾವಿಕಾಸ ಅಘಾಡಿ (ಎಂವಿಎ) ಮೈತ್ರಿಕೂಟ ನಡೆಸುತ್ತಿರುವ ಸೀಟುಹಂಚಿಕೆ ಮಾತುಕತೆಯಲ್ಲಿ ಯಾವುದೇ ಪ್ರಗತಿ ಕಂಡುಬಂದಿಲ್ಲ. ಮುಂಬೈ ಸೇರಿ ರಾಜ್ಯದ ಕೆಲ ಲೋಕಸಭಾ ಕ್ಷೇತ್ರಗಳಿಗಾಗಿ ಎಂವಿಎ ಮಿತ್ರಪಕ್ಷಗಳಾದ ಕಾಂಗ್ರೆಸ್ ಮತ್ತು ಯುಬಿಟಿ ಪಟ್ಟುಹಿಡಿದಿವೆ. ಹೀಗಾಗಿ ಮಾತುಕತೆ ಫಲಪ್ರದವಾಗಿಲ್ಲ ಎನ್ನಲಾಗಿದೆ.

ಮಹಾರಾಷ್ಟ್ರ ಕಾಂಗ್ರೆಸ್ ಉಸ್ತುವಾರಿ ರಮೇಶ್ ಚೆನ್ನಿಥಲಾ ಮತ್ತು ಪಕ್ಷದ ಇತರ ನಾಯಕರು ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರನ್ನು ಶನಿವಾರ ಭೇಟಿಯಾಗಿ ಮಾತುಕತೆ ನಡೆಸಿದರು. ಶಿವಸೇನಾ (ಯುಬಿಟಿ) ನಾಯಕರಾದ ಆದಿತ್ಯ ಠಾಕ್ರೆ ಮತ್ತು ಸಂಜಯ್ ರಾವುತ್ ಅವರೂ ಸಭೆಯಲ್ಲಿ ಹಾಜರಿದ್ದರು.

ಸಂಕ್ಷಿಪ್ತ ಸುದ್ದಿ

ಹಾಸ್ಟೆಲ್‌ಗೆ ಒತ್ತಾಯ ಆಯೋಗ ಎಚ್ಚರಿಕೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ವೈದ್ಯಕೀಯ ಆಯೋಗವು (ಎನ್‌ಎಂಸಿ) ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವೈದ್ಯಕೀಯ ಕಾಲೇಜುಗಳು ಮತ್ತು ಸಂಸ್ಥೆಗಳು ತಾವು ನೀಡುವ ಹಾಸ್ಟೆಲ್‌ಗಳಲ್ಲಿ ಉಳಿಯಲು ಒತ್ತಾಯಿಸುವುದು ಮತ್ತು ಹಾಸ್ಟೆಲ್ ಸೌಲಭ್ಯಕ್ಕೆ ಭಾರಿ ಮೊತ್ತದ ಶುಲ್ಕ ವಿಧಿಸುವುದರ ವಿರುದ್ಧ ಎಚ್ಚರಿಕೆ ನೀಡಿದೆ.

ವೈದ್ಯಕೀಯ ಕಾಲೇಜುಗಳು ಅಥವಾ ಸಂಸ್ಥೆಗಳು ತಾವು ನೀಡುವ ಹಾಸ್ಟೆಲ್‌ಗಳಲ್ಲಿ ಉಳಿಯಲು ಒತ್ತಾಯಿಸುತ್ತಿರುವ ಮತ್ತು ಹಾಸ್ಟೆಲ್ ಸೌಲಭ್ಯದ ಹೆಸರಿನಲ್ಲಿ ಭಾರಿ ಮೊತ್ತ ವಿಧಿಸುತ್ತಿರುವ ಬಗ್ಗೆ ಸ್ನಾತಕೋತ್ತರ ವಿದ್ಯಾರ್ಥಿಗಳಿಂದ ಹಲವಾರು ದೂರುಗಳು ಬಂದಿವೆ. ಈ ನಿರ್ದೇಶನ ಪಾಲಿಸದ ವೈದ್ಯಕೀಯ ಕಾಲೇಜುಗಳು ದಂಡ, ಸೀಟು ಕಡಿತ ಮತ್ತು ಪ್ರವೇಶ ಸ್ಥಗಿತದಂತಹ ಕಠಿಣ ಕ್ರಮಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದೆ.

ಫೆಬ್ರುವರಿ 8ರಂದು ಹೊರಡಿಸಲಾದ ಸುತ್ತೋಲೆಯಲ್ಲಿ, ಆಯೋಗವು ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ನಿಯಂತ್ರಣ (ಪಿಜಿಎಂಇಆರ್) 2023ರ ನಿಯಮಗಳನ್ನು ಉಲ್ಲೇಖಿಸಿ, ‘ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕಾಲೇಜು ಸೂಕ್ತ ವಸತಿ ಸೌಕರ್ಯಗಳನ್ನು ಒದಗಿಸುವುದು ಕಡ್ಡಾಯ. ಆದರೆ, ಪಿ.ಜಿ ವಿದ್ಯಾರ್ಥಿಗಳು ಹಾಸ್ಟೆಲ್‌ನಲ್ಲಿ ಇರುವುದನ್ನು ಕಡ್ಡಾಯಗೊಳಿಸಿಲ್ಲ’ ಎಂದು ಎನ್‌ಎಂಸಿ ಹೇಳಿದೆ.

ನಿಖಿಲ್ ಕಾರಿನ ಮೇಲೆ ದಾಳಿ: ಬಿಜೆಪಿ ಕಾರ್ಯಕರ್ತರ ಮೇಲೆ ಪ್ರಕರಣ ದಾಖಲು

ಪುಣೆ (ಪಿಟಿಐ): ಪತ್ರಕರ್ತ ನಿಖಿಲ್ ವಾಗ್ಳೆ ಕಾರಿನ ಮೇಲೆ ದಾಳಿ ನಡೆಸಿದ ಬಿಜೆಪಿಯ ಕೆಲವು ಕಾರ್ಯಕರ್ತರ ಮೇಲೆ ಪುಣೆ ಪೊಲೀಸರು ಶನಿವಾರ ಪ್ರಕರಣ ದಾಖಲಿಸಿದ್ದಾರೆ.

ಮಹಿಳೆಯೊಬ್ಬರು ನೀಡಿದ ದೂರು ಆಧರಿಸಿ, ಪಾರ್ವತಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಿಜೆಪಿಯ ಕೆಲವು ಕಾರ್ಯಕರ್ತರು ವಾಗ್ಳೆ ಅವರ ಕಾರಿನ ಮೇಲೆ ಕಲ್ಲು ತೂರಾಟ ನಡೆಸಿ, ಕಾರಿನಲ್ಲಿದ್ದವರನ್ನು ಗಾಯಗೊಳಿಸಿದರು. ಆಗ ದೂರುದಾರರು ಮತ್ತು ಕೆಲವರು ವಾಗ್ಳೆ ಅವರ ಕಾರನ್ನು ರಕ್ಷಿಸಿದರು ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

ಹಾಗೆಯೇ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ (ಸಿಆರ್‌ಪಿಸಿ) ಸೆಕ್ಷನ್ 144 ಅನ್ನು ಉಲ್ಲಂಘಿಸಿದ ಆರೋಪದ ಮೇಲೆ ನಿಖಿಲ್ ವಾಗ್ಳೆ ಮತ್ತು ಬಿಜೆಪಿ, ಶಿವಸೇನೆ (ಯುಬಿಟಿ) ಮತ್ತು ಕಾಂಗ್ರೆಸ್‌ನ ನಗರ ಘಟಕಗಳ ಅಧ್ಯಕ್ಷರ ವಿರುದ್ಧವೂ ಪ್ರಕರಣ ದಾಖಲಿಸಲಾಗಿದೆ.

‘ಪೊಲೀಸರ ಅನುಮತಿಯಿಲ್ಲದೆ ಕಾರ್ಯಕ್ರಮ ನಡೆಸಿದ್ದರಿಂದ ಇವರ ಮೇಲೆ ಪ್ರಕರಣ ದಾಖಲಿಸಲಾಗಿದೆ’ ಎಂದು ಉಪ ಪೊಲೀಸ್ ಆಯುಕ್ತ ಸಂಭಾಜಿ ಕದಂ ತಿಳಿಸಿದ್ದಾರೆ.

ಇದಕ್ಕೂ ಮೊದಲು ಪ್ರಧಾನಿ ಮತ್ತು ಅಡ್ವಾಣಿ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ ಆರೋಪದ ಮೇಲೆ ವಾಗ್ಳೆ ವಿರುದ್ಧ ಪ್ರಕರಣ ದಾಖಲಾಗಿತ್ತು.

ಮಿಥುನ್ ಚಕ್ರವರ್ತಿ ಆಸ್ಪತ್ರೆಗೆ ದಾಖಲು

ಕೋಲ್ಕತ್ತ (ಪಿಟಿಐ): ನಟ ಮಿಥುನ್ ಚಕ್ರವರ್ತಿಗೆ ಶನಿವಾರ ಎದೆನೋವು ಕಾಣಿಸಿಕೊಂಡಿದ್ದರಿಂದ ಕೋಲ್ಕತ್ತದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.



ಮಿಥುನ್

73 ವರ್ಷದ ಹಿರಿಯ ನಟ ಬೆಳಿಗ್ಗೆ ಆಸ್ಪತ್ರೆಗೆ ದಾಖಲಾದರು. ಅವರಿಗೆ ಎಂಆರ್‌ಐ ಸೇರಿದಂತೆ ಮತ್ತಿತರ ಪರೀಕ್ಷೆಗಳನ್ನು ನಡೆಸಲಾಗಿದೆ ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

ಲೋಹಿಯಾ ವಿಚಾರ ವೇದಿಕೆಯಿಂದ ವಿತರಣೆ

ಶ್ರವಣದೋಷ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್

ಪ್ರಜಾವಾಣಿ ವಾರ್ತೆ

ಮೈಸೂರು: ಶ್ರವಣದೋಷದ ನಡುವೆಯೂ ಶಿಕ್ಷಣದಲ್ಲಿ ಉತ್ತಮ ಸಾಧನೆ ತೋರುತ್ತಿರುವ 20 ವಿದ್ಯಾರ್ಥಿಗಳಿಗೆ ಮಂಡ್ಯದ ಲೋಹಿಯಾ ವಿಚಾರ ವೇದಿಕೆಯ ಬಿ.ಎಸ್. ಶಿವಣ್ಣ ಅವರು ಲ್ಯಾಪ್‌ಟಾಪ್‌ಗಳನ್ನು ನೀಡಿ ಉತ್ತೇಜಿಸಿದರು. ಕೆಲವು ವಿದ್ಯಾರ್ಥಿಗಳು ಎಷ್ಟೋ ದಿನದ ಕನಸೆಂಬಂತೆ ಲ್ಯಾಪ್‌ಟಾಪ್‌ನೊಂದಿಗೆ ಸಂಭ್ರಮಿಸಿದರು.

ಇಲ್ಲಿನ ಬೋಗಾದಿಯ ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್ (ಪಿಎಡಿಸಿ) ಸಂಸ್ಥೆಯಲ್ಲಿ ವೇದಿಕೆಯಿಂದ ಶನಿವಾರ ಕಾರ್ಯಕ್ರಮ ನಡೆಯಿತು. ಈ ಸಂಸ್ಥೆಯಲ್ಲಿ ತರಬೇತಿ ಪಡೆದು, ವಿವಿಧ ಕಾಲೇಜುಗಳಲ್ಲಿ ತಾಂತ್ರಿಕ ಶಿಕ್ಷಣ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ನೆರವು ಪಡೆದರು.

‘ಕಾಕ್ಲಿಯರ್ ಇಂಪ್ಲಾಂಟ್ ಮಾಡಿರುವ ನನ್ನ ಮಗ ಪುನೀತ್‌ಗೆ ಶಕ್ತಿ ಮೀರಿ ಖರ್ಚು ಮಾಡುತ್ತಿದ್ದೇವೆ. ಅವನನ್ನು ಎಲ್ಲರಂತೆ ಮಾಡುವ ಪ್ರಯತ್ನದಲ್ಲಿಯೇ ನಮ್ಮ ಆರ್ಥಿಕ ಶಕ್ತಿ ವ್ಯಯವಾಗುತ್ತಿದೆ. ಆತನ ಓದಿಗಾಗಿ ಲ್ಯಾಪ್‌ಟಾಪ್ ಖರೀದಿಸುವ ಸಾಮರ್ಥ್ಯ ಇರಲಿಲ್ಲ. ಶಿವಣ್ಣ ಅವರು ನೆರವಾಗಿರುವುದಕ್ಕೆ ಧನ್ಯವಾದ ಸಲ್ಲಿಸುತ್ತೇನೆ’ ಎಂದು ಬೆಂಗಳೂರಿನ ಪೋಷಕಿ ಮಮತಾ ಕಣ್ಣೀರಾದರು.

ಲ್ಯಾಪ್‌ಟಾಪ್ ವಿತರಿಸಿ ಮಾತನಾಡಿದ ಶಿವಣ್ಣ, ‘ದೇಶದಲ್ಲಿ ಡಿಜಿಟಲ್ ಇಂಡಿಯಾ ಬಗ್ಗೆ ಮಾತನಾಡಲಾಗುತ್ತದೆ. ಆದರೆ, ಬಡ ಮತ್ತು ಅಶಕ್ತ ಮಕ್ಕಳಿಗೆ ಯೋಜನೆಗೆ ಪೂರಕವಾದ ಸಾಧನಗಳನ್ನು ನೀಡದಿದ್ದರೆ ಡಿಜಿಟಲ್ ಕಲಿಕೆ ಸಾಧ್ಯವೇ? ಆದ್ದರಿಂದ ನಮ್ಮ ಸಂಸ್ಥೆಯಿಂದ 350ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಅಗತ್ಯವುಳ್ಳವರಿಗೆ ಲ್ಯಾಪ್‌ಟಾಪ್ ನೀಡಲಾಗಿದೆ. ಒಟ್ಟು ಒಂದು ಸಾವಿರ ಮಂದಿಗೆ ಕೊಡಿಸುವ ಗುರಿ ಇದೆ’ ಎಂದು ತಿಳಿಸಿದರು.

‘ಈ ಕೆಲಸವನ್ನು ಸರ್ಕಾರಗಳು ಮಾಡಬೇಕು. ವಿದ್ಯಾರ್ಥಿಗಳ ಶೈಕ್ಷಣಿಕ ಸಾಲ ಮನ್ನಾ ಮಾಡಬೇಕು. ಉಚಿತ ಶಿಕ್ಷಣ ಹಾಗೂ ಪ್ರಸ್ತುತ ವ್ಯವಸ್ಥೆಗೆ ಅಗತ್ಯ ತಾಂತ್ರಿಕ ಗ್ಯಾಜೆಟ್‌ಗಳನ್ನು ನೀಡಬೇಕು. ತಾಂತ್ರಿಕ ಸೌಲಭ್ಯ ನೀಡಿ, ವಿಶೇಷ ಉದ್ಯೋಗ ಮೇಳ ನಡೆಸಬೇಕು. ಅದನ್ನು ಬಿಟ್ಟು, ಶ್ರೀರಾಮ ಮಂದಿರ, ನಾಯಕರ ಪ್ರತಿಮೆಗಳ ನಿರ್ಮಾಣ, ಚುನಾವಣೆಗಾಗಿ ಭಾರತರತ್ನ ಕೊಡುವುದರಿಂದ ಇಂತಹ ವಿದ್ಯಾರ್ಥಿಗಳು ಎದುರಿಸುತ್ತಿರುವ ಅಸಮಾನತೆ ಹೋಗುವುದಿಲ್ಲ’ ಎಂದರು.

‘ಪಿಎಡಿಸಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡುವಂತೆ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಗುವುದು’ ಎಂದು ಶಿವಣ್ಣ ತಿಳಿಸಿದರು.

ಅನುದಾನ ನೀಡಿ: ‘ಶ್ರವಣದೋಷವುಳ್ಳ ಮಕ್ಕಳ ತಾಯಂದಿರನ್ನು ತರಬೇತಿಗೆ ಸರ್ಕಾರ ಆರಂಭಿಸಿರುವ ಯೋಜನೆಯ ವ್ಯಾಪ್ತಿಗೆ ನಮ್ಮ ಸಂಸ್ಥೆಯನ್ನು ಸೇರಿಸಿ ಅನುದಾನ ನೀಡಬೇಕು. ಈ ತಾಯಂದಿರಿಗೆ ಕನಿಷ್ಠ 6 ವರ್ಷಗಳವರೆಗೆ ಪ್ರೋತ್ಸಾಹಧನ ನೀಡಬೇಕು’ ಎಂದು ಪಿಎಡಿಸಿ ಕಾರ್ಯಕಾರಿ ಸಮಿತಿ ಸದಸ್ಯೆ ರತ್ನಾ ಶೆಟ್ಟಿ ಸರ್ಕಾರವನ್ನು ಒತ್ತಾಯಿಸಿದರು.

ಮುಖ್ಯಾಂಶಗಳು

- 20 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್
- ಸಂತಸದಲ್ಲಿ ವಿದ್ಯಾರ್ಥಿಗಳು
- ಅನುದಾನಕ್ಕೆ ಸಂಸ್ಥೆ ಬೇಡಿಕೆ

ಕಂಪ್ಯೂಟರ್ ಸೈನ್ಸ್ ಓದುತ್ತಿರುವುದರಿಂದ ಲ್ಯಾಪ್‌ಟಾಪ್ ಅಗತ್ಯವಿತ್ತು. ಈಗ ದೊರೆತಿದ್ದರಿಂದ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲಿದೆ

ಎಂ.ಚೈತ್ರಾ, ಡಿಪ್ಲೊಮಾ, ಜೆಎಸ್‌ಎಸ್ ಪಾಲಿಟೆಕ್ನಿಕ್, ಮೈಸೂರು

ಮೈಸೂರಿನ ಬೋಗಾದಿಯ ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್ (ಪಿಎಡಿಸಿ) ಸಂಸ್ಥೆಯ ಹಳೆಯ ವಿದ್ಯಾರ್ಥಿಗಳಿಗೆ ಲೋಹಿಯಾ ವಿಚಾರ ವೇದಿಕೆಯ ಅಧ್ಯಕ್ಷ ಬಿ.ಎಸ್.ಶಿವಣ್ಣ ಅವರು ಶನಿವಾರ ಲ್ಯಾಪ್‌ಟಾಪ್ ವಿತರಿಸಿದರು. ಸಂಸ್ಥೆಯ ಕಾರ್ಯದರ್ಶಿ ಭಾಸ್ಕರ್ ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರಾದ ದಿನಕರ್ ಶೆಟ್ಟಿ, ಎಂ.ಮಲ್ಲಿಕಾರ್ಜುನ, ರತ್ನಾ ಶೆಟ್ಟಿ, ವೇದಿಕೆಯ ಪ್ರಮುಖರಾದ ರಘು, ರಮೇಶ್ ಪಾಲ್ಗೊಂಡಿದ್ದರು

‘ಬೇಲಿ ಹಾಕಲು ನಾನೇ ಹೇಳಿದ್ದೆ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಮಠದ ಸುತ್ತ ನಿಮ್ಮ ಸಾಮರ್ಥ್ಯ ಇರುವಷ್ಟು ಜಾಗಕ್ಕೆ ಬೇಲಿ ಹಾಕಿಕೊಳ್ಳಿ. ಜಿಲ್ಲಾಧಿಕಾರಿ, ತಹಶೀಲ್ದಾರ್ ಸೇರಿ ಯಾರೊಬ್ಬರೂ ಬರುವುದಿಲ್ಲ ಎಂಬುದಾಗಿ ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದಾಗ ಬಹಿರಂಗ ಸಭೆಯಲ್ಲಿ ಹೇಳಿದ್ದೆ’ ಎಂದು ಮಾಜಿ ಸಚಿವ ಎಚ್.ಆಂಜನೇಯ ನೆನಪಿಸಿಕೊಂಡರು.

ಆಂಜನೇಯ

ನಗರದ ಹೊಳಲ್ಕೆರೆ ರಸ್ತೆಯಲ್ಲಿರುವ ಗೊಲ್ಲಗಿರಿಯ ಮಠದ ಆವರಣದಲ್ಲಿ ಶ್ರೀಕೃಷ್ಣ ಯಾದವಾನಂದ ಸ್ವಾಮೀಜಿ ಅವರಿಗೆ ಶನಿವಾರ ಹಮ್ಮಿಕೊಂಡಿದ್ದ ಗುರುವಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

‘ಸರ್ಕಾರ ಮತ್ತು ಮಠ ಬೇರೆಯಲ್ಲ. ಸರ್ಕಾರ ಮಾಡಲಾಗದ ಕಾರ್ಯಗಳನ್ನು ಮಠಗಳು ಮಾಡುತ್ತಿವೆ. ಸಮಾಜ ಕಟ್ಟುವ, ಶಿಕ್ಷಣ ನೀಡುವ ಹಾಗೂ ಸದ್ಭಾವನೆಯ ಸಮಾಜ ನಿರ್ಮಾಣ ಕಾರ್ಯವನ್ನು ಮಠಗಳು ಮಾಡುತ್ತಿವೆ. ಈ ವಿಶಾಲ ಜಾಗಕ್ಕೆ ಬೇಲಿ ಹಾಕಿಕೊಳ್ಳಿ ಎಂದು ಹೇಳಿದ್ದೆ ಅಲ್ಲವೇ’ ಎಂದು ವೇದಿಕೆಯಲ್ಲಿದ್ದ ಶ್ರೀಕೃಷ್ಣ ಯಾದವಾನಂದ ಸ್ವಾಮೀಜಿ ಅವರಿಗೆ ನೆನಪಿಸಿದರು.

ಏಕಾಂಗಿಯಾಗಿ ಸ್ಪರ್ಧಿಸಲಿರುವ ಎಎಪಿ: ಅರವಿಂದ್ ಕೇಜ್ರಿವಾಲ್

'ಪಂಜಾಬ್‌ನಲ್ಲಿ ಮೈತ್ರಿ ಇಲ್ಲ'

ನವದೆಹಲಿ (ಪಿಟಿಐ): ಪಂಜಾಬ್‌ನಲ್ಲಿ ಕಾಂಗ್ರೆಸ್‌ನೊಂದಿಗೆ ಮೈತ್ರಿ ಇಲ್ಲ ಎನ್ನುವ ಬಗ್ಗೆ ಅಂತಿಮ ಸೂಚನೆ ನೀಡಿರುವ ಎಎಪಿ ಮುಖ್ಯಸ್ಥ ಹಾಗೂ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ರಾಜ್ಯದ 13 ಕ್ಷೇತ್ರಗಳಿಗೆ ಮತ್ತು ಚಂಡೀಗಢದ ಒಂದು ಕ್ಷೇತ್ರಕ್ಕೆ ಇನ್ನು ಹದಿನೈದು ದಿನಗಳಲ್ಲಿ ಅಭ್ಯರ್ಥಿಗಳನ್ನು ಘೋಷಿಸಲಿದ್ದೇವೆ ಎಂದು ಶನಿವಾರ ಹೇಳಿದ್ದಾರೆ.

ಪಂಜಾಬ್‌ನಲ್ಲಿ ಎಎಪಿ ಮತ್ತು ಕಾಂಗ್ರೆಸ್‌ನ ರಾಜ್ಯ ಘಟಕಗಳು ಮೈತ್ರಿಗೆ ವಿರೋಧ ವ್ಯಕ್ತಪಡಿಸಿದ್ದವು. ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್, ರಾಜ್ಯದಲ್ಲಿ ಎಎಪಿ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಲಿದೆ ಎಂದು ಕಳೆದು ತಿಂಗಳು ಘೋಷಿಸಿದ್ದರು.

ಅರವಿಂದ ಕೇಜ್ರಿವಾಲ್

ಆದರೆ, ಚಂಡೀಗಢದ ಮೇಯರ್ ಚುನಾವಣೆಯಲ್ಲಿ ಎರಡೂ ಪಕ್ಷಗಳು ಒಟ್ಟಿಗೆ ಸ್ಪರ್ಧಿಸಿದ್ದವು. ಆದಾದ ಕೆಲವೇ ದಿನಗಳಲ್ಲಿ ಕೇಜ್ರಿವಾಲ್ ಅಚ್ಚರಿಯ ಘೋಷಣೆ ಮಾಡಿದ್ದಾರೆ. ಅಲ್ಲಿನ ಏಕೈಕ ಕ್ಷೇತ್ರವನ್ನು ತನಗೆ ಬಿಟ್ಟುಕೊಡುವಂತೆ ಎಎಪಿ ಕೇಳಿತ್ತು. ಆದರೆ, ಅದಕ್ಕೆ ಕಾಂಗ್ರೆಸ್ ಒಪ್ಪಿರಲಿಲ್ಲ ಎನ್ನಲಾಗಿದೆ.

ಪಂಜಾಬ್‌ನ ಖನ್ನಾದಲ್ಲಿ ನಡೆದ ಸರ್ಕಾರದ ಆಹಾರ ಭದ್ರತಾ ಕಾಯ್ದೆಯಡಿ ಮನೆ ಬಾಗಿಲಿಗೆ ಪಡಿತರ ತಲುಪಿಸುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಎರಡು ವರ್ಷಗಳ ಹಿಂದೆ ಪಂಜಾಬ್‌ನಲ್ಲಿ ಚಾರಿತ್ರಿಕ ಜಯ ಸಾಧಿಸಲು ಕಾರಣವಾದಂತೆ ಈ ಬಾರಿಯೂ ಎಎಪಿಗೆ ಬೆಂಬಲಿಸಬೇಕು' ಎಂದು ಕೋರಿದರು.

ಮುಖ್ಯಾಂಶಗಳು

- ದೆಹಲಿಯಲ್ಲಿ ಮೈತ್ರಿಯ ಬಗ್ಗೆ ಮಾತುಕತೆ ಪ್ರಗತಿಯಲ್ಲಿ
- ಮಂಗಳವಾರ ಎಎಪಿಯ ರಾಜಕೀಯ ವ್ಯವಹಾರಗಳ ಸಮಿತಿ (ಪಿಎಸಿ) ಸಭೆ

'75 ವರ್ಷಗಳಲ್ಲಿ ಕಾಂಗ್ರೆಸ್ ಅನೇಕ ವರ್ಷ ಆಳ್ವಿಕೆ ನಡೆಸಿತು. ಅದರಲ್ಲಿ ಕಾಂಗ್ರೆಸ್ ಮಾಡಿದ ಒಂದು ಉತ್ತಮ ಕೆಲಸ ಹೇಳಿ ಎಂದರೆ, ನಿಮಗೆ ನೆನಪಿಸಿಕೊಳ್ಳಲು ಆಗುವುದಿಲ್ಲ. ಅಕಾಲಿ ದಳ ಅನೇಕ ವರ್ಷಗಳ ಕಾಲ ಆಳ್ವಿಕೆ ನಡೆಸಿತು. ಅದರ ಅವಧಿಯ ಒಂದು ಉತ್ತಮ ಕಾರ್ಯ ಹೇಳಿ ಎಂದರೆ, ನಿಮಗೆ ನೆನಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ' ಎಂದು ಕೇಜ್ರಿವಾಲ್ 'ಇಂಡಿಯಾ' ಮೈತ್ರಿಕೂಟವನ್ನು ಟೀಕಿಸಿದರು.

ದೆಹಲಿಯಲ್ಲಿ ಮೈತ್ರಿಯ ಬಗ್ಗೆ ಮಾತುಕತೆ ಪ್ರಗತಿಯಲ್ಲಿದ್ದು, ಅಸ್ಸಾಂನಲ್ಲಿ ಮೂವರು ಅಭ್ಯರ್ಥಿಗಳನ್ನು ಎಎಪಿ ಈಗಾಗಲೇ ಘೋಷಿಸಿದೆ. ಆಪ್‌ನ ರಾಜಕೀಯ ವ್ಯವಹಾರಗಳ ಸಮಿತಿ (ಪಿಎಸಿ) ಮಂಗಳವಾರ ಸಭೆ ಸೇರಲಿದ್ದು, ಗೋವಾ, ಗುಜರಾತ್, ಹರಿಯಾಣದ ಲೋಕಸಭಾ ಅಭ್ಯರ್ಥಿಗಳ ಬಗ್ಗೆ ತೀರ್ಮಾನಿಸಲಿದೆ. ಅದು ಈ ರಾಜ್ಯಗಳಲ್ಲಿ ಎಎಪಿ ಕಾಂಗ್ರೆಸ್ ಜತೆ ಮೈತ್ರಿ ಮಾಡಿಕೊಳ್ಳುವುದಿಲ್ಲ ಎನ್ನುವುದರ ಸೂಚನೆಯಾಗಿದೆ.

ಮೋದಿ ಭೇಟಿ: ಲಕ್ಷದ್ವೀಪದತ್ತ ಪ್ರವಾಸಿಗರ ಚಿತ್ತ

ಬಂಗಾರಂ/ಕವಾರತ್ತಿ (ಲಕ್ಷದ್ವೀಪ) (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿ ಬಳಿಕ ಲಕ್ಷದ್ವೀಪವು ಪ್ರಮುಖ ಪ್ರವಾಸೋದ್ಯಮ ತಾಣವಾಗಿ ಮಾರ್ಪಟ್ಟಿದೆ.

ಬಂಗಾರಂ ದ್ವೀಪ ಮಾತ್ರವಲ್ಲದೆ, ಸಮೀಪದ ಥಿನ್ನಕರ ದ್ವೀಪವೂ ಪ್ರವಾಸಿಗರ ಗಮನ ಸೆಳೆದಿದೆ. ಮಾಲ್ದೀವ್ಸ್ ಜೊತೆಗಿನ ರಾಜತಾಂತ್ರಿಕ ಬಿಕ್ಕಟ್ಟು ಸಹ ಲಕ್ಷದ್ವೀಪದ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಿದೆ. ಆದರೆ, ಅಲ್ಲಿ ಮೂಲಸೌಕರ್ಯಗಳ ಕೊರತೆ ಇದೆ. ಸದ್ಯ ಲಕ್ಷದ್ವೀಪ ಸಮೂಹದ ಅಗತ್ತಿ ದ್ವೀಪಕ್ಕೆ ಅಲಯನ್ಸ್ ವಿಮಾನಯಾನ ಸಂಸ್ಥೆಯ ಒಂದು ವಿಮಾನ ಮಾತ್ರ ನಿತ್ಯ ಸಂಚರಿಸುತ್ತದೆ. ಬುಧವಾರ ಮತ್ತು ಭಾನುವಾರ ಮಾತ್ರ ಎರಡು ಬಾರಿ ಸಂಚರಿಸುತ್ತದೆ. ಇದರ ಹೊರತಾಗಿ ಕೊಚ್ಚಿ ಮತ್ತು ಕವರತ್ತಿ ನಡುವೆ ವಾರದಲ್ಲಿ ಹಡಗು ಮಾತ್ರ ಸಂಚರಿಸುತ್ತದೆ.

ಹಲ್ದ್ವಾನಿಯ ಬನ್‌ಭೂಲ್‌ಪುರ ಪ್ರದೇಶದಲ್ಲಿ ಶನಿವಾರ ಅಂಗಡಿಗಳು ಬಾಗಿಲು ಮುಚ್ಚಿದ್ದವು –ಪಿಟಿಐ ಚಿತ್ರ

ಹಲ್ದ್ವಾನಿ: ಕೆಲವೆಡೆ ಕರ್ಫ್ಯೂ ತೆರವು

ಹಲ್ದ್ವಾನಿ (ಪಿಟಿಐ): ಅತಿಕ್ರಮವಾಗಿ ನಿರ್ಮಿಸಲಾಗಿದ್ದ ಮದರಸಾ ಮತ್ತು ಮಸೀದಿಯನ್ನು ತೆರವುಗೊಳಿಸಿದ ವಿಚಾರಕ್ಕೆ ಸಂಬಂಧಿಸಿ ಹಿಂಸಾಚಾರ ಭುಗಿಲೆದ್ದ ಉತ್ತರಾಖಂಡದ ಬನ್‌ಭೂಲ್‌ಪುರ ಪ್ರದೇಶವನ್ನು ಹೊರತುಪಡಿಸಿ ಉಳಿದೆಡೆ ಶನಿವಾರ ಕರ್ಫ್ಯೂ ತೆರವುಗೊಳಿಸಲಾಗಿತ್ತು.

ಹಿಂಸಾಚಾರದ ಕುರಿತು ಮ್ಯಾಜಿಸ್ಟ್ರೇಟ್ ತನಿಖೆ ನಡೆಸಿ, 15 ದಿವಸಗಳೊಳಗೆ ಸರ್ಕಾರಕ್ಕೆ ವರದಿ ಸಲ್ಲಿಸಲು ಆದೇಶಿಸಲಾಗಿದೆ ಎಂದು ಮುಖ್ಯ ಕಾರ್ಯದರ್ಶಿ ರಾಧಾ ರಾತುರಿ ಅವರು ತಿಳಿಸಿದರು.

ನೈನಿತಾಲ್–ಬರೇಲಿ ಮಾರ್ಗದಲ್ಲಿ ವಾಹನ ಸಂಚಾರ ಪುನರಾರಂಭಗೊಂಡಿತ್ತು ಮತ್ತು ಅಂಗಡಿಗಳು ತೆರೆದಿದ್ದವು ಎಂದು ಮೂಲಗಳು ಹೇಳಿವೆ.

ಕರ್ಫ್ಯೂ ವಿಧಿಸಿರುವ ಪ್ರದೇಶಗಳಲ್ಲಿ ಆಸ್ಪತ್ರೆಗಳು ಮತ್ತು ಮೆಡಿಕಲ್‌ಗಳು ಮಾತ್ರ ತೆರೆದಿದ್ದವು. ಗಲಭೆ ನಡೆದಿದ್ದ ಪ್ರದೇಶದಲ್ಲಿ ಪೊಲೀಸರು ಗಸ್ತು ಕಾರ್ಯ ನಡೆಸಿದ್ದರು ಎಂದು ವಿವರಿಸಿವೆ.

ಗುರುವಾರ ನಡೆದಿದ್ದ ಹಿಂಸಾಚಾರದಲ್ಲಿ ಶಾಮೀಲಾಗಿದ್ದ ಆರೋಪದಲ್ಲಿ ಇದುವರೆಗೆ ಐವರನ್ನು ಬಂಧಿಸಲಾಗಿದೆ ಮತ್ತು ಮೂರು ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಎಫ್‌ಐಆರ್‌ನಲ್ಲಿ ಒಟ್ಟು 16 ಮಂದಿಯ ಹೆಸರು ಉಲ್ಲೇಖಿಸಲಾಗಿದೆ ಎಂದು ಹೇಳಿದರು. ಸಾಮಾಜಿಕ ಮಾಧ್ಯಮಗಳಲ್ಲಿ ವದಂತಿ ಹರಡುವುದನ್ನು ತಡೆಯುವ ಸಲುವಾಗಿ ಇಂಟರ್‌ನೆಟ್ ಸೇವೆಯನ್ನು ಸ್ಥಗಿತಗೊಳಿಸಲಾಗಿದೆ ಎಂದಿದ್ದಾರೆ. ಹಿಂಸಾಚಾರದಲ್ಲಿ ಆರು ಮಂದಿ ಮೃತಪಟ್ಟಿದ್ದರು.

ಹೈಕೋರ್ಟ್‌ಗೆ ವಾಂಖೆಡೆ ಅರ್ಜಿ

ಮುಂಬೈ (ಪಿಟಿಐ): ಮಾದಕವಸ್ತು ನಿಯಂತ್ರಣ ದಳದ (ಎನ್‌ಸಿಬಿ) ಮುಂಬೈ ವಲಯದ ಮಾಜಿ ನಿರ್ದೇಶಕ ಸಮೀರ್ ವಾಂಖೆಡೆ ಅವರು ತಮ್ಮ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ದಾಖಲಿಸಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣವನ್ನು ಪ್ರಶ್ನಿಸಿ ಬಾಂಬೆ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಮಾದಕ ದ್ರವ್ಯ ವಿರೋಧಿ ಸಂಸ್ಥೆಯ ಹಿರಿಯ ಅಧಿಕಾರಿ ವಿರುದ್ಧ ತಾನು ಸಲ್ಲಿಸಿದ್ದ ದೂರಿಗೆ ಇದು 'ಪ್ರತೀಕಾರ'ದ ಕ್ರಮವಾಗಿದೆ. ಇ.ಡಿ.ಯು ತಮ್ಮ ವಿರುದ್ಧ 'ದುರುದ್ದೇಶದಿಂದ ಸೇಡು ತೀರಿಸಿಕೊಳ್ಳುತ್ತಿದೆ' ಎಂದು ಆರೋಪಿಸಿದ್ದಾರೆ. ಸಿಬಿಐ ಹಾಗೂ ಇ.ಡಿ ಪ್ರಕರಣದ ವಿರುದ್ಧದ ಎರಡು ಅರ್ಜಿಗಳು ವಿಭಾಗೀಯ ಪೀಠದ ಮುಂದೆ ಫೆ. 15ರಂದು ವಿಚಾರಣೆಗೆ ಬರುವ ಸಾಧ್ಯತೆಯಿದೆ.

ಜೆಡಿಯು ಶಾಸಕರಿಗೆ ವಿಪ್ ಜಾರಿ

ಫೆ.12ರ ವಿಶ್ವಾಸಮತ ಯಾಚನೆ ಪ್ರಕ್ರಿಯೆಗೆ ಗೈರಾದರೆ ಕ್ರಮ

ಪಟ್ನಾ (ಪಿಟಿಐ): ಬಿಹಾರ ವಿಧಾನ ಸಭೆಯಲ್ಲಿ ಸೋಮವಾರ ನಡೆಯಲಿರುವ ವಿಶ್ವಾಸಮತ ಯಾಚನೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಪಕ್ಷದ ಎಲ್ಲಾ ಶಾಸಕರಿಗೆ ವಿಪ್ ಜಾರಿ ಮಾಡಲಾಗಿದೆ ಎಂದು ಜೆಡಿಯು ಮುಖ್ಯ ಸಚೇತಕ ಶ್ರವಣ್ ಕುಮಾರ್ ಶನಿವಾರ ತಿಳಿಸಿದರು.

ತಮ್ಮ ನಿವಾಸದಲ್ಲಿ ಪಕ್ಷದ ಶಾಸಕರಿಗೆ ಹಮ್ಮಿಕೊಂಡಿದ್ದ ಭೋಜನಕೂಟದ ಬಳಿಕ ಮಾತನಾಡಿದ ಅವರು, ವಿಪ್ ಉಲ್ಲಂಘಿಸುವ ಶಾಸಕರು ತಮ್ಮ ಸದಸ್ಯತ್ವವನ್ನು ಕಳೆದುಕೊಳ್ಳಲಿದ್ದಾರೆ ಎಂದೂ ಹೇಳಿದರು.

'ಸದನದಲ್ಲಿ ವಿಶ್ವಾಸಮತ ಯಾಚನೆ ಮಾಡುವಾಗ ಹಾಜರಿದ್ದು, ಎನ್‌ಡಿಎ ಮೈತ್ರಿಕೂಟ ಸರ್ಕಾರದ ಪರವಾಗಿ ಮತ ಚಲಾಯಿಸಬೇಕು ಎಂದು ವಿಪ್‌ನಲ್ಲಿ ಸೂಚಿಸಲಾಗಿದೆ' ಎಂದು ಅವರು ವಿವರಿಸಿದರು.

ಭೋಜನಕೂಟದಲ್ಲಿ ಕೆಲವೇ ಶಾಸಕರು ಪಾಲ್ಗೊಂಡಿದ್ದನ್ನು ಗಮನಿಸಿ ಮುಖ್ಯಮಂತ್ರಿ ಹಾಗೂ ಜೆಡಿಯು ಅಧ್ಯಕ್ಷ ನಿತೀಶ್ ಕುಮಾರ್ ಅವರು ಅಸಮಾಧಾನ ವ್ಯಕ್ತಪಡಿಸಿ, ಶೀಘ್ರ ನಿರ್ಗಮಿಸಿದ್ದಾರೆ ಎಂಬುದು ಕೇವಲ ವದಂತಿ ಎಂದು ಶ್ರವಣ್ ಕುಮಾರ್ ಹೇಳಿದರು.

ನಿತೀಶ್ ಅವರು ಬೇರೆ ಕಾರ್ಯಕ್ರಮಕ್ಕೆ ತೆರಳಬೇಕಿದ್ದ ಕಾರಣ ಭೋಜನಕೂಟದಿಂದ ಶೀಘ್ರ ನಿರ್ಗಮಿಸಿದರು. ಪಕ್ಷದ ಕೆಲವು ಶಾಸಕರು ಅನಾರೋಗ್ಯದ ಕಾರಣ ಪಾಲ್ಗೊಂಡಿಲ್ಲ ಎಂದಿದ್ದಾರೆ.

'ಮಹಾಘಟಬಂಧನ'ದ ಅಂಗವಾಗಿರುವ ಸಿಪಿಐ(ಎಂಎಲ್) ಮುಖಂಡ ಮಹಬೂಬ್ ಆಲಂ ಮತ್ತು ಮಾಜಿ ಮುಖ್ಯಮಂತ್ರಿ ಜಿತನ್ ರಾಮ್ ಮಾಂಜಿ ಅವರನ್ನು ಭೇಟಿಯಾಗಿರುವುದಾಗಿಯೂ ಅವರು ತಿಳಿಸಿದರು.

'ಎನ್‌ಡಿಎ ಮೈತ್ರಿಕೂಟವು ತನ್ನ ಶಾಸಕರಿಗೆ ಅವರ ಆತ್ಮಸಾಕ್ಷಿಗೆ ಅನುಗುಣವಾಗಿ ಮತ ಚಲಾಯಿಸಲು ಅನುಮತಿ ನೀಡಿದರೆ ಸರ್ಕಾರವು ಪತನವಾಗಲಿದೆ' ಎಂದು ಆರ್‌ಜೆಡಿ ವಕ್ತಾರ ಅಖ್ತರುಲ್ ಇಮಾನ್ ಶಾಹಿನ್ ಹೇಳಿದರು.

ಎನ್‌ಐಎ ಶೋಧ: 15 ಜನರ ಬಂಧನ

ಚೆನ್ನೈ (ಪಿಟಿಐ): ಕೊಯಮತ್ತೂರಿನಲ್ಲಿ ಐಎಸ್ ಪ್ರೇರಿತ ಕಾರ್ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಶನಿವಾರ ತಮಿಳುನಾಡಿನ 27 ಸ್ಥಳಗಳಲ್ಲಿ ಶೋಧ ನಡೆಸಿದ್ದು, 15 ಜನರನ್ನು ಬಂಧಿಸಿದೆ.

ಚೆನ್ನೈ, ತಿರುಚಿರಾಪಳ್ಳಿ, ಮಧುರೈ, ತಿರುನೆಲ್ವೇಲಿ ಮತ್ತು ಕೊಯಮತ್ತೂರು ಜಿಲ್ಲೆಯ ವಿವಿಧೆಡೆ ಐಎಸ್‌ನೊಂದಿಗೆ ಸಂಪರ್ಕ ಹೊಂದಿರುವ ಶಂಕಿತರ ನೆಲೆಗಳ ಮೇಲೆ ದಾಳಿ ನಡೆದಿದೆ ಎಂದು ಮೂಲಗಳು ತಿಳಿಸಿವೆ. ಬಂಧಿತರಲ್ಲಿ ಒಬ್ಬನನ್ನು ಕೊಯಮತ್ತೂರು ನಿವಾಸಿ ತಹನಾಸೀರ್ ಎಂದು ಗುರುತಿಸಲಾಗಿದೆ.'ಕಚ್ಚಾಬಾಂಬ್ ಇದ್ದ ವಾಹನವನ್ನು ಜಮೇಶಾ ಚಲಾಯಿಸಿದ್ದ. ಈತನೊಂದಿಗೆ ತಹನಾಸೀರ್ ಮತ್ತು ತೌಫಿಕ್ ನಿಕಟ ಸಂಬಂಧ ಹೊಂದಿದ್ದರು' ಎಂದು ತನಿಖಾ ಸಂಸ್ಥೆ ತಿಳಿಸಿದೆ.

ಮಂಗಳೂರು ಮಹಾನಗರಪಾಲಿಕೆ

ಮಂಮಪಾ/ಇಇ/2023–24 /ಇ.1 ದಿನಾಂಕ: 08.02.2024

ಟೆಂಡರ್ ಪ್ರಕಟಣೆ E-PROCUREMENT OF KARNATAKA

ಮಂಗಳೂರು ಮಹಾನಗಪಾಲಿಕೆ ವ್ಯಾಪ್ತಿಯಲ್ಲಿ ಈ ಕೆಳಗೆ ಸೂಚಿಸಿರುವ ಇಂಡೆಂಟ್‌ಗಳ ಕಾಮಗಾರಿಗಳನ್ನು ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ನಿಧಿಯಲ್ಲಿ DMA/2023-24/WORK INDENT NO. 4719, 14678, 14599 ಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 23.02.2024 ಮತ್ತು DMA/2023-24/WORK INDENT NO. 14637 ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 16.02.2024 ಅಪರಾಹ್ನ 4.00 ಗಂಟೆ. ಹೆಚ್ಚಿನ ವಿವರವನ್ನು ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರಪಾಲಿಕೆ, ಮಂಗಳೂರು

DIPR/MNG/KSMCA/1289/23-24 dt: 10.02.2024

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ದಾವಣಗೆರೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ದಾವಣಗೆರೆ ಜಿಲ್ಲೆ, ಎಸ್.ಎಸ್.ಹೈಟೆಕ್ ಆಸ್ಪತ್ರೆ ಹತ್ತಿರ, ಶ್ರೀರಾಮನಗರ ರಸ್ತೆ, ಎನ್.ಸಿ.ಸಿ ಕಛೇರಿ ಪಕ್ಕ ದಾವಣಗೆರೆ–577005 ದೂರವಾಣಿ : 08192 237833 ಫ್ಯಾಕ್ಸ್ : 08192 230919 e mail : dhodavangere@gmail.com

ಸಂಖ್ಯೆ:ಜಿಆದಾ/ಟೆಂಡರ್/ಸೋಲಾರ್/01/2023–24 ದಿನಾಂಕ:08/02/2024

ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

2023–24ನೇ ಸಾಲಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ದಾವಣಗೆರೆ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ದಾವಣಗೆರೆ ಇಲ್ಲಿನ ಅಧೀನ ಆರೋಗ್ಯ ಸಂಸ್ಥೆಗಳಿಗೆ ಅವಶ್ಯಕತೆ ಇರುವ HYBRID SOLAR POWER PLANT SYSTEMS ಗಳನ್ನು ಖರೀದಿ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999–2000ರ ಪ್ರಕಾರ ಇ–ಪ್ರಕ್ಯೂರ್‌ಮೆಂಟ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.

(1) TENDER REFERENCE NO:DHODVG/TENDER/ SOLAR /01/2023-24, DATE:07-02-2024 (2) DATE AND TIME OF ACCESSING TENDER DOCUMENT 08-02-2024 (3) Amount put to tender Rs. 282.71 Lakhs (4) EMD amount. Amount Rs.4,24,065=00 (5) LAST DATE AND TIME FOR RECEIPT OF TENDER 15-02-2024, 05:30 PM (6) TIME AND DATE OF OPENING OF TECHNICAL BID 17-02-2024, 11:00 AM (7) DEMONSTRATION TO BE MADE ON SHALL BE INTIMATED IN DUE COURSE (8) TIME AND DATE OF OPENING OF FINANCIAL BID 19-02-2024, 11:00 AM (9) ADDRESS FOR COMMUNICATION District Health and Family Welfare Office, Sri Ramanagar road, Near NCC Camp, Davanagere-577005

ವಾಸಾಇ/ಡಿವಿಜಿ/585/ ಕೆಎಸ್‌ಎಂಸಿಎ/2023–24

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳು, ದಾವಣಗೆರೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ, ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ಸಂ:ಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/4701 ಭದ್ರಾ/ಟೆಂಡರ್ ಪ್ರಕಟಣೆ ಸಂಖ್ಯೆ: 09/2023–24/ ದಿ: 08.02.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಇ–ಪ್ರಕ್ಯೂರ್‌ಮೆಂಟ್ ವೇದಿಕೆಯಡಿಯಲ್ಲಿ 4701 ಭದ್ರಾ ಲೆಕ್ಕ ಶೀರ್ಷಿಕೆಯಡಿಯಲ್ಲಿ 01 ಸಂಖ್ಯೆ ಕಾಮಗಾರಿಗಳಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.

1. ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು: 08.02.2024 ರಿಂದ 19.02.2024 ರವರೆಗೆ 17.30 ಗಂಟೆಗೆ 2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 20.02.2024 3. ಆರ್ಥಿಕ ಬಿಡ್ ತೆರೆಯುವ ದಿನಾಂಕ: After obtaining approval of technical bid from competent authority, the financial bid will be opened 4. ಕಾಲಾವಧಿ: 06 ತಿಂಗಳು (ಮಳೆಗಾಲ ಸಹಿತ)5. ಟೆಂಡರಿಗಿಟ್ಟ ಮೊತ್ತ: ರೂ.94.52 ಲಕ್ಷಗಳು 6. ಇ.ಎಂ.ಡಿ ಮೊತ್ತ: ರೂ.1,90,000/–

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್:–08282–271063

ಸಹಿ/– ಕಾರ್ಯಪಾಲಕ ಇಂಜಿನಿಯರ್, ಕನೀನಿನಿ., ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/73/02/23–24/1240

TNPL TAMILNADU NEWSPRINT AND PAPERS LIMITED

Kagithapuram - 639 136. Karur Dist. Tamil Nadu.

Ph.: 04324-277001 (10 Lines). E-Mail: purchase.recycle@tnpl.co.in

NOTICE INVITING TENDER

Tender No.	Material Description	Date of publishing Tender document in TNPL/NIC website	Due date
232413 007064	Procurement of 2000 MT ± 5% Office Waste Paper (White Records) in Bale form from Karnataka for TNPL Unit - I at Kagithapuram.	10.02.2024	24.02.2024
232413 007065	Procurement of 2000 MT ± 5% Office Waste Paper (White Records) in Bale form from Karnataka for TNPL Unit - I at Kagithapuram.	05.04.2024	18.04.2024

Corrigendum if any will be issued in TNPL Website & NIC Portal only. Detailed Terms & conditions are available in tender document at our websites: www.tnpl.com / https://tntenders.gov.in/nicgep/app

DIPR/840/Tender/2024 TNPL - Maker of bagasse based eco-friendly Paper

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

ಸಂ:ಕಾ.ಸಾ.ಚಿ/ಪಿ.ಬಿ–1/ಅಲ್ಪಾವಧಿ ಟೆಂಡರ್ ಪ್ರಕಟಣೆ–ಐ.ಎಫ್.ಟಿ–12/2023–24/ ದಿನಾಂಕ: 08.02.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್–2000 ನಿಯಮದಂತೆ, ಹಾಗೂ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ– 4 ರ ನಿಬಂಧನೆಗಳಿಗೊಳಪಟ್ಟಂತೆ 05 ಕಾಮಗಾರಿಗಳಿಗೆ (ಕನಿಷ್ಠ ರೂ. 150.00 ಲಕ್ಷ ರೂ.ಗಳು ಹಾಗೂ ಗರಿಷ್ಠ ರೂ. 500.00 ಲಕ್ಷ ರೂ.ಗಳು) ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಫೋರ್ಟಲ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ 1ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ.

ಸದರಿ ಟೆಂಡರ್ ಪ್ರಕ್ರಿಯೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದೆ. ದಿನಾಂಕ:14.02.2024 ರಿಂದ ಇ–ಫೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 23.02.2024 ಸಾಯಂಕಾಲ 5.30 ರವರೆಗೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 26.02.2024 ರ ಸಾಯಂಕಾಲ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ: 27.02.2024 ಸಾಯಂಕಾಲ 04–30 ಗಂಟೆಯ ನಂತರ (ಸಾಧ್ಯವಾದಲಿ), ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ, ದಿನಾಂಕ: 28.02.2024 ಸಾಯಂಕಾಲ 04–30 ಗಂಟೆಯ ನಂತರ (ಸಾಧ್ಯವಾದಲ್ಲಿ) ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತವೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ (08194–231811) ಹಾಗೂ ಕೆ.ಪಿ.ಪಿ.ಪಿ ಪೋರ್ಟಲ್ ಸಹಾಯಕ ದೂರವಾಣಿ ಸಂಖ್ಯೆ: +91–8046010000+91–8068948777 ರಿಂದ ಪಡೆಯಬಹುದು.

DIPR/CTA/KSMCA/ 566/2023-24

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರವರ ಕಛೇರಿ, ಕನನೀಸ ಮತ್ತು ಒಚ ಮಂಡಳಿ, ಜಲಭವನ, ನಂ.ಪಿ–4, 10ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, 3ನೇ ಮಹಡಿ ಸರಸ್ವತಿ ಪುರಂ, ಮೈಸೂರು– 570 009.

ದೂ: 0821–2545894, Email:kwbcemys2014@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪೋರ್ಟಲ್ ಮೂಲಕ ಮಾತ್ರ)

IFT ಸಂಖ್ಯೆ:1433 ದಿನಾಂಕ: 06.02.2024

ಅಮೃತ್–2.0 ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರಿ ಪಟ್ಟಣ ಹಾಗೂ ಮೈಸೂರು ಜಿಲ್ಲೆಯ ಸರಗೂರು ಪಟ್ಟಣದ ನೀರು ಸರಬರಾಜು ಯೋಜನೆಯ ಅಭಿವೃದ್ಧಿ ಕಾಮಗಾರಿ ಮತ್ತು 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ, ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಕಾಳಿಸಿದ್ದನಹುಂಡಿ ಗ್ರಾಮದಲ್ಲಿ 5.00 ಲ.ಲೀ ಸಾಮರ್ಥ್ಯದ ಆರ್.ಸಿ.ಸಿ ಮೇಲ್ಮಟ್ಟದ ಜಲ ಸಂಗ್ರಹಣಾಗಾರ ನಿರ್ಮಾಣ, ಶ್ರೀರಾಂಪುರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಗೊರೂರು ಗ್ರಾಮದಲ್ಲಿ 5 ಲ.ಲೀ ಸಾಮರ್ಥ್ಯದ ಆರ್.ಸಿ.ಸಿ ಮೇಲ್ಮಟ್ಟದ ಜಲ ಸಂಗ್ರಹಣಾಗಾರ ನಿರ್ಮಾಣ, ಹಾಗು ಹೂಟಗಳ್ಳಿ ನಗರಸಭೆ ವ್ಯಾಪ್ತಿಯ ಬೆಳವಾಡಿ ಬಳಿ 10 ಲ.ಲೀ ಸಾಮರ್ಥ್ಯದ ಆರ್.ಸಿ.ಸಿ ಮೇಲ್ಮಟ್ಟದ ಜಲ ಸಂಗ್ರಹಣಾಗಾರ ನಿರ್ಮಾಣ ಕಾಮಗಾರಿಗಳನ್ನು ಡಿಸೈನ್, ಬಿಲ್ಡ್, ಆಪರೇಟ್ & ಟ್ರಾನ್ಸ್ ಫರ್ (DBOT) ಮಾದರಿಯಲ್ಲಿ ಇಂಡೆಂಟ್ ನಂ: KUWSDB/2023-24/WS/WORK_INDENT146 ಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣ ಪೋರ್ಟಲ್‌ನಲ್ಲಿ ಟೆಂಡರ್ ಅನ್ನು ಆಹ್ವಾನಿಸಲಾಗಿರುತ್ತದೆ. ಟೆಂಡರ್ ಮೊತ್ತ ರೂ.8215.00 ಲಕ್ಷಗಳು. ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ಸಂಪರ್ಕಿಸುವುದು.

ಸಹಿ/–ಮುಖ್ಯ ಅಭಿಯಂತರರು, ಕ.ನ.ನೀ.ಸ ಮತ್ತು ಒ.ಚ ಮಂಡಳಿ, ಮೈಸೂರು

ವಾಸಾಸಂಇ/ಉನಿ–ಮೈ/ಕೆಎಸ್‌ಎಂಸಿ&ಎ/1048/2023–24

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಕೇಂದ್ರ ಕಛೇರಿ, ಯಾಂತ್ರಿಕ ಇಲಾಖೆ, ಕೆ.ಎಚ್.ರಸ್ತೆ, ಶಾಂತಿನಗರ, ಬೆಂಗಳೂರು – 560027 ದೂರವಾಣಿ ಸಂಖ್ಯೆ : 080–22537519

ಟೆಂಡರ್ ಸಂಖ್ಯೆ: BMTC/2023-24/SE0217/CALL-2 ದಿನಾಂಕ: 10.02.2024

ಅಲ್ಪಾವಧಿ ಟೆಂಡರ್ ಆಹ್ವಾನ ಸೂಚನಾ ಪತ್ರ

(ಇ–ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ)

1) 120 ಸಂಖ್ಯೆಯ, 900 ಮಿ.ಮಿ. ಫ್ಲೋರ್ ಎತ್ತರದ, 9 ಮೀಟರ್ ಉದ್ದದ ಹವಾನಿಯಂತ್ರಣ ರಹಿತ ವಿದ್ಯುತ್ ಚಾಲಿತ ನಗರ ಸಾರಿಗೆ ಮಾದರಿ ಬಸ್ಸುಗಳ ಖರೀದಿ, ಕಾರ್ಯಾಚರಣೆ ಹಾಗೂ ನಿರ್ವಹಣೆಯನ್ನು ಗ್ರಾಸ್ ಕಾಸ್ಟ್ ಕಾಂಟ್ರಾಕ್ಟ್ (ಜಿ.ಸಿ.ಸಿ) ಮಾದರಿಯಲ್ಲಿ ನಿರ್ವಹಿಸಲು ಸೇವಾದಾರರನ್ನು ಆಯ್ಕೆ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮೇಲ್ಕಂಡ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

(2) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 19/02/2024 ಸಮಯ 14:30 ಗಂಟೆಯವರೆಗೆ.

ಮುಂದುವರೆದು, ಟೆಂಡರ್‌ನ ವೇಳಾಪಟ್ಟಿ, ಕಾರ್ಯವ್ಯಾಪ್ತಿ ಹಾಗೂ ಇತರೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ, ಸೇರ್ಪಡೆ/ತಿದ್ದುಪಡಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಅಪ್ಲೋಡ್ ಮಾಡಲಾಗುವುದು/ಪ್ರಕಟಿಸಲಾಗುವುದು.

ಸೂಚನೆ: ಆಸಕ್ತಿಯುಳ್ಳ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿಯಾಗಿರಬೇಕು. ಆಸಕ್ತಿಯುಳ್ಳ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ https://kppp.karnataka.gov.in ಗೆ ಲಾಗ್ ಇನ್ ಮಾಡಿ ವಿವರಗಳನ್ನು ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಇ–ಮೇಲ್: eprocurementhelpdesk@gmail.com ಅಥವಾ ದೂರವಾಣಿ ಸಂಖ್ಯೆ: 080–46010000, 080–68948777ಕ್ಕೆ ಕರೆ ಮಾಡಬಹುದು.

ಆಸಕ್ತಿಯುಳ್ಳ ಬಿಡ್ಡುದಾರರು ಬಿಡ್ ಸಲ್ಲಿಕೆಯ ತರಬೇತಿಯನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಸೆಲ್‌ನ್ನು ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿ ಅಗತ್ಯವಿದ್ದಲ್ಲಿ eprocurementhelpdesk@gmail.com ಗೆ ಮೇಲ್ ಮಾಡಿ ಪಡೆಯಬಹುದಾಗಿರುತ್ತದೆ.

ಸಹಿ/– ಮುಖ್ಯ ಯಾಂತ್ರಿಕ ಅಭಿಯಂತರರು (ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ)

ವಾ.ಸಾ.ಸಂ.ಇ/ವಾಪ್ರ/3518/ಆಕಾರ್/2023–24

ಕರ್ನಾಟಕ ಸರ್ಕಾರ

ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು.

DISTRICT URBAN DEVELOPMENT CELL, OFFICE OF THE DEPUTY COMMISSIONER, MYSURU DISTRICT, MYSURU.

ದೂ: 0821–2424070, E. mail : dudc_mys@yahoo.co.in

ಸಂ: ಮುನಿಸಿ(4) ಅಮೃತ ನಗರೋತ್ಥಾನ(ಮುನಿಸಿಪಾಲಿಟಿ) ಹಂತ–4/ ಕೆ.ಆರ್.ನಗರ/ಸಿ.ಆರ್–34/2022–23 ದಿನಾಂಕ: 07–02–2024

ಮರು ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೆ.ಟಿ.ಪಿ.ಪಿ.ಕಾಯ್ದೆ 1999 ಮತ್ತು ನಿಯಮ 2000ರನ್ವಯ ಮಾನ್ಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮರು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು www.kppp.karnataka.gov.in ಮುಖಾಂತರ ಟೆಂಡರನ್ನು ಸಲ್ಲಿಸಬಹುದಾಗಿರುತ್ತದೆ.

ಕ್ರ ಸಂ : 01. ಕಾಮಗಾರಿ ಹೆಸರು ಇಂಡೆಂಟ್ ಸಂಖ್ಯೆ : ತಿ.ನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ ಕಟ್ಟಡ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು DMA/2023-24/OW/Work_Indent/12921/Call2. ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) : 1,07,08,618. ಇ.ಎಂ.ಡಿ. : 1,34,000

ಕ್ರ ಸಂ : 02. ಕಾಮಗಾರಿ ಹೆಸರು ಇಂಡೆಂಟ್ ಸಂಖ್ಯೆ : ತಿ.ನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ ರಸ್ತೆ, ಚರಂಡಿ, ಕಟ್ಟಡ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು (ಪ್ರೋತ್ಸಾಹಧನ) DMA/2023-24/OW/Work_Indent/13083/Call2. ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) : 84,53,336. ಇ.ಎಂ.ಡಿ. : 1,69,000

ಪೂರ್ವಭಾವಿ ಸಭೆ ದಿನಾಂಕ : 13.02.2024 ಮಧ್ಯಾಹ್ನ 3.00 ಗಂಟೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 21.02.2024 ಸಂಜೆ 5.15 ಗಂಟೆಯೊಳಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 22.02.2024 ಸಂಜೆ 5.30 ಗಂಟೆಗೆ. ಪ್ರಕಟಣೆಯಲ್ಲಿ ನಿಗಧಿಪಡಿಸಿರುವ ದಿನಾಂಕಗಳು ಬದಲಾವಣೆಯಾದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರವೇ ತಿಳಿಸಲಾಗುವುದು. ದಿನಪತ್ರಿಗಳಲ್ಲಿ ತಿಳಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾ ಕಛೇರಿಗಳ ಸಂಕೀರ್ಣ ಬನ್ನೂರು ರಸ್ತೆ ಕಛೇರಿಯ ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ

ಸಹಿ/–ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಮೈಸೂರು ಜಿಲ್ಲೆ, ಮೈಸೂರು.

ವಾಸಾಸಂಇ/ಉನಿ–ಮೈ/ಕೆಎಸ್‌ಎಂಸಿ&ಎ/1041/2023–24

ಕರ್ನಾಟಕ ಸರ್ಕಾರ

ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು.

DISTRICT URBAN DEVELOPMENT CELL, OFFICE OF THE DEPUTY COMMISSIONER, MYSURU DISTRICT, MYSURU.

ದೂ: 0821–2424070, E. mail : dudc_mys@yahoo.co.in

ಸಂ: ಮುನಿಸಿ(4)/ಲೋಕಸಭಾ ಚುನಾವಣೆ–2024/ಸಿ.ಆರ್–01/2023–24 ದಿನಾಂಕ: 06–02–2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೆ.ಟಿ.ಪಿ.ಪಿ.ಕಾಯ್ದೆ 1999 ಮತ್ತು ನಿಯಮ 2000ರನ್ವಯ ಲೋಕಸಭಾ ಚುನಾವಣೆ–2024ರ ಸಂಬಂಧ ಈ ಕೆಳಕಂಡ ಅವಶ್ಯಕ ಸಾಮಗ್ರಿಗಳನ್ನು ಖರೀದಿಸಲು/ವ್ಯವಸ್ಥೆಗಳನ್ನು ಕೈಗೊಳ್ಳಲು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಸರಬರಾಜುದಾರರು/ಏಜೆನ್ಸಿಗಳು www.kppp.karnataka.gov.in ಮುಖಾಂತರ ಟೆಂಡರನ್ನು ಸಲ್ಲಿಸಬಹುದಾಗಿರುತ್ತದೆ.

ಕ್ರ ಸಂ : 01. ಕಾಮಗಾರಿ ಹೆಸರು ಇಂಡೆಂಟ್ ಸಂಖ್ಯೆ : ಲಘು ವಾಹನಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಒದಗಿಸಲು (DMA/2023-24/SE2261). ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) : 50,00,000. ಇ.ಎಂ.ಡಿ. : 1,00,000 ಕ್ರ ಸಂ : 02. ಕಾಮಗಾರಿ ಹೆಸರು ಇಂಡೆಂಟ್ ಸಂಖ್ಯೆ : ಚುನಾವಣಾ ನಿರತ ಅಧಿಕಾರಿ/ಸಿಬ್ಬಂದಿಗಳಿಗೆ ಆಹಾರ ಸರಬರಾಜು ಮಾಡಲು (DMA/2023-24/IND1414). ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) : 15,00,000. ಇ.ಎಂ.ಡಿ : 37,500. ಕ್ರ ಸಂ : 03. ಕಾಮಗಾರಿ ಹೆಸರು ಇಂಡೆಂಟ್ ಸಂಖ್ಯೆ : ಕಛೇರಿ, ಮತಗಟ್ಟೆ ಹಾಗೂ ಇತರೆ ಚುನಾವಣಾಧಿಕಾರಿಗಳೊಂದಿಗೆ ಚುನಾವಣಾ ಕಾರ್ಯಕ್ಕೆ ವೀಡಿಯೋಗ್ರಫಿ ಕೆಲಸ (ಚಿತ್ರೀಕರಣ ಕ್ಯಾಮೆರಾ ಹಾಗೂ ಛಾಯಾಗ್ರಾಹಕರು ಸೇರಿದಂತೆ) (DMA/2023-24/SE2270). ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) : 1,00,00,000. ಇ.ಎಂ.ಡಿ : 2,00,000. ಕ್ರ ಸಂ : 04. ಕಾಮಗಾರಿ ಹೆಸರು ಇಂಡೆಂಟ್ ಸಂಖ್ಯೆ : ಚುನಾವಣೆಗೆ ಅವಶ್ಯವಿರುವ ಮುದ್ರಣ ಸಾಮಗ್ರಿಗಳನ್ನು ಒದಗಿಸುವುದು (DMA/2023-24/IND1411). ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) : 23,00,000. ಇ.ಎಂ.ಡಿ : 46,000. ಕ್ರ ಸಂ : 05. ಕಾಮಗಾರಿ ಹೆಸರು ಇಂಡೆಂಟ್ ಸಂಖ್ಯೆ : ಚೆಕ್‌ಪೋಸ್ಟ್‌ಗಳಲ್ಲಿ ಶಾಮಿಯಾನ, ಕುರ್ಚಿ, ಟೇಬಲ್ ಮತ್ತು ವಿದ್ಯುತ್ ದೀಪ ಇನ್ನಿತರೆ ಸಾಮಗ್ರಿಗಳನ್ನು ಬಾಡಿಗೆ ಆಧಾರದ ಮೇಲೆ ಒದಗಿಸುವುದು (DMA/2023-24/IND1410). ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) : 22,00,000. ಇ.ಎಂ.ಡಿ : 42,000. ಕ್ರ ಸಂ : 06. ಕಾಮಗಾರಿ ಹೆಸರು ಇಂಡೆಂಟ್ ಸಂಖ್ಯೆ : ಮತ ಏಣಿಕೆಗೆ ಬೇಕಾಗುವ ಸಾಮಗ್ರಿ ಮತ್ತು ಇತರೆ ಲೇಖನಾ ಸಾಮಗ್ರಿಗಳನ್ನು ಒದಗಿಸುವುದು (DMA/2023-24/IND1409) ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) : 5,00,000. ಇ.ಎಂ.ಡಿ : 12,500. ಕ್ರ ಸಂ : 07. ಕಾಮಗಾರಿ ಹೆಸರು ಇಂಡೆಂಟ್ ಸಂಖ್ಯೆ : ಚುನಾವಣೆಗೆ ಅವಶ್ಯವಿರುವ ಲೇಖನಾ ಸಾಮಗ್ರಿ ಮತ್ತು ಇನ್ನಿತರೆ ಸಾಮಗ್ರಿಗಳನ್ನು ಒದಗಿಸುವುದು (DMA/2023-24/IND1408). ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) : 43,75,000. ಇ.ಎಂ.ಡಿ : 87,500.

ಪೂರ್ವಭಾವಿ ಸಭೆ ದಿನಾಂಕ:– 09.02.2024 ಬೆಳಿಗ್ಗೆ 11.00ಗಂಟೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 14.02.2024 ಸಂಜೆ 5.00 ಗಂಟೆಯೊಳಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 15.02.2024 ಸಂಜೆ 5.15 ಗಂಟೆಗೆ. ಪ್ರಕಟಣೆಯಲ್ಲಿ ನಿಗಧಿಪಡಿಸಿರುವ ದಿನಾಂಕಗಳು ಬದಲಾವಣೆಯಾದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರವೇ ತಿಳಿಸಲಾಗುವುದು. ದಿನಪತ್ರಿಗಳಲ್ಲಿ ತಿಳಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾ ಕಛೇರಿಗಳ ಸಂಕೀರ್ಣ ಬನ್ನೂರು ರಸ್ತೆ ಕಛೇರಿಯ ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/–ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಮೈಸೂರು ಜಿಲ್ಲೆ, ಮೈಸೂರು.

ವಾಸಾಸಂಇ/ಉನಿ–ಮೈ/ಕೆಎಸ್‌ಎಂಸಿ&ಎ/1026/2023–24

ಕರ್ನಾಟಕ ಸರ್ಕಾರ

ನಗರಸಭೆ ಕಾರ್ಯಾಲಯ, ಯಾದಗಿರಿ

ಜಿ: ಯಾದಗಿರಿ. ಕರ್ನಾಟಕ ರಾಜ್ಯ.

ದೂರವಾಣಿ: 08443–256300

E-mail: itstaff_ulb_yadgiri@yahoo.com, Wensite: www.yadgir@yahoo.com

ಸಂ: ನಸಯಾ:ತಾಂತ್ರಿಕ ಶಾಖೆ:ಇ–ಟೆಂಡರ:2023–24 ದಿನಾಂಕ: 06–02–2024

–: ಇ–ಪ್ರಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ :–

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಯಾದಗಿರಿ ಜಿಲ್ಲೆಯ ಯಾದಗಿರಿ ನಗರಸಭೆಯ ಪೌರಾಯುಕ್ತರು ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000ರ ಇ–ಪ್ರಕ್ಯೂರಮೆಂಟ್ ಪದ್ಧತಿಯಲ್ಲಿ 2023–24ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿಯ ಹಾಗೂ ನಗರಸಭೆ ಅನುದಾನದಡಿಯಲ್ಲಿ ತೆಗೆದುಕೊಂಡಿರುವ ಕಾಮಗಾರಿ ಇಂಡೆಂಡ್ ನಂಬರ DMA/2023-24/SE2301 ಇ–ಪ್ರಕ್ಯೂರಮೆಂಟ್ ಪೋರ್ಟಲನಲ್ಲಿ ಟೆಂಡರ ಕರೆಯಲಾಗಿದ್ದು, ಇ–ಪ್ರಕ್ಯೂರಮೆಂಟ್ ಪೋರ್ಟಲನಲ್ಲಿ ಮ್ಯಾನ ಪವರ ಸಪ್ಲೈಯ ಸರ್ವಿಸ್ ಟೆಂಡರ Standard Tender Document ಗಳ ಅಡಿಯಲ್ಲಿ ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಇ–ಪ್ರಕ್ಯೂರಮೆಂಟ್‌ನಲ್ಲಿ http://eproc.karnataka.gov.in ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್ ಲೈನ್ ಮೂಲಕ ಟೆಂಡರಗಳನ್ನು ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್‌ಸೈಟ್ www.yadgircity.mrc.gov.in ರಲ್ಲಿ ನೋಡಬಹುದು ಹಾಗೂ ತಾಂತ್ರಿಕ ಅಧಿಕಾರಿಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

1) ಟೆಂಡರಗಳನ್ನು ಸಲ್ಲಿಸಲು ಪ್ರಾರಂಭ ದಿನಾಂಕ :08–02–2024 ರಂದು 10.30 ರಿಂದ
2) ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 21–02–2024 ರಂದು ಸಾಯಂಕಾಲ 5.30ರ ವರೆಗೆ.
3) ತಾಂತ್ರಿಕ ಬಿಡ್/ ಆರ್ಥಿಕ ಬಿಡ್ ತೆರೆಯುವ ದಿನಾಂಕ: 23–02–2024 ರಂದು ಬೆಳ್ಳಿಗ್ಗೆ 11.00 ಗಂಟೆಗೆ.

ಸಹಿ/– ಪೌರಾಯುಕ್ತರು ನಗರಸಭೆ ಯಾದಗಿರಿ

ವಾ.ಸಾ.ಸಂ.ಇ/ಯಾದಗಿರಿ/318/ಕೆ.ಎಸ್.ಎಂ.ಸಿ&ಎ/2023–24

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ/47/681/2023–24 ದಿನಾಂಕ : 09.02.2024

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆ ಐ ಡಿ ಬಿ ಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆಪಿಡಬ್ಲ್ಯುಡಿ ದರ್ಜೆ–1 (ಸಿವಿಲ್) ಪರಾವಾನಾಗಿ ಹೊಂದಿರುವ ಅರ್ಹ ಗುತ್ತಿಗರದಾರರಿಂದ, ಏಜೆನ್ಸಿಗಳು, ವೈಯಕ್ತಿಕ ಸಂಸ್ಥೆಗಳು, ಸಾರ್ವಜನಿಕ ವಲಯದ ಉದ್ಯಮಗಳು, ಕಂಪನಿಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕ್ಕೋಟೆ ಪದ್ಧತಿಯಡಿಯಲ್ಲಿ ಟರ್ನ್‌ಕೀ ಆಧಾರದ ಮೇಲೆ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: ಧಾರವಾಡ ಜಿಲ್ಲೆ ಮತ್ತು ತಾಲ್ಲೂಕಿನಲ್ಲಿ ಪ್ರಸ್ತಾಪಿತ ಕೈಗಾರಿಕಾ ನೋಡ್‌ಗೆ 45 ಎಂ ಲ್ ಡಿ ಬಾಹ್ಯ ನೀರು ಸರಬರಾಜು ಯೋಜನೆಯನ್ನು ವಿನ್ಯಾಸ, ನಿರ್ಮಾಣ, ಪರೀಕ್ಷೆ ಮತ್ತು ಕಾರ್ಯಾಚರಣೆ ಹಾಗೂ ಐದು ವರ್ಷದ ನಿರ್ವಹಣೆಯೊಂದಿಗೆ ಕಾಮಗಾರಿಯನ್ನು ಟರ್ನ್‌ಕೀ ಆಧಾರದ ಮೇಲೆ ಅನುಷ್ಠಾನಗೊಳಿಸುವುದು.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 19.02.2024 ಸಂಜೆ 4.30 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https ://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/3525/Zen/2023-24

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹163-440

ದ್ವಿತಳಿ (ಬಿ.ವಿ) ₹299-548

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ ₹585

12 ಮೊಟ್ಟೆಗೆ ₹78

ಮೈಸೂರು

100 ಮೊಟ್ಟೆಗೆ ₹587

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹161

ಆರ್‌ಎಸ್‌ಎಸ್-5 ₹156

ಗುಡ್ ಲಾಟ್ ₹139

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1460 (1470)
ಸೋಯಾ (ರಿಫೈನ್ಡ್)	₹895 (895)
ಸೂರ್ಯಕಾಂತಿ (ರಿಫೈನ್ಡ್)	₹910 (915)
ಪಾಮೋಲಿನ್	₹857 (860)

ಮುಂಬೈ ಧಾರಣೆ

ಶೇಂಗಾ

10-2-2024

ಜಾವಾ 70/80(ಹೊಸ)	11100-11000
ಜಾವಾ 80/90(ಹೊಸ)	10700-10600
ದಪ್ಪ ಮಧ್ಯಪ್ರದೇಶ(ಹೊಸ)	9900-9800
ದಪ್ಪ ಗುಜರಾತ್(ಹೊಸ)	10700-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1470 (1480)
ಒಂದು ವಾರದ ಡೆಲಿವರಿ	1465 (1475)
ಸೋಯಾ ಕಚ್ಚಾ	1450 (860)
ಪಾಮ್ ವಾರದ ಡೆಲಿವರಿ	855 (858)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹51,400 (51,350)

ಬೆಳ್ಳಿ ಕೆ.ಜಿ ₹66,000 (66,550)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಭೆ: 33,771 ಉದ್ಯೋಗ ಸೃಷ್ಟಿ ನಿರೀಕ್ಷೆ

₹6,407 ಕೋಟಿ ಹೂಡಿಕೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ 143ನೇ ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿಯ ಸಭೆ ನಡೆಯಿತು.

ಒಟ್ಟು ₹6,407.82 ಕೋಟಿ ಬಂಡವಾಳ ಹೂಡಿಕೆಯ 128 ಯೋಜನೆಗಳಿಗೆ ಸಭೆಯು ಅನುಮೋದನೆ ನೀಡಿದೆ. ಇದರಿಂದ 33,771 ಮಂದಿಗೆ ಉದ್ಯೋಗಾವಕಾಶ ಸಿಗಲಿದೆ ಎಂದು ನಿರೀಕ್ಷಿಸಲಾಗಿದೆ.

ರಾಜ್ಯದಾದ್ಯಂತ ಕೈಗಾರಿಕಾ ಬೆಳವಣಿಗೆಗೆ ಉತ್ತೇಜನ ನೀಡಲು ಸರ್ಕಾರ ನಿರ್ಧರಿಸಿದೆ. ಶಿಕ್ಷಣ- ಸಂಶೋಧನಾ ಕೇಂದ್ರ ಸ್ಥಾಪನೆ, ಉಗ್ರಾಣ, ಕೈಗಾರಿಕಾ ಶೆಡ್‌ಗಳ ನಿರ್ಮಾಣ, ವಾಹನ ಬಿಡಿಭಾಗ, ಪಿವಿಸಿ ಪೈಪ್ ತಯಾರಿಕೆಗೆ ಉತ್ತೇಜನ ನೀಡಲು ತೀರ್ಮಾನಿಸಿದೆ.

ಈ ನಿಟ್ಟಿನಲ್ಲಿ ಬೆಂಗಳೂರು ಗ್ರಾಮಾಂತರ, ಬೆಳಗಾವಿ, ರಾಮನಗರ ಮತ್ತು ಮೈಸೂರು ಜಿಲ್ಲೆಯಲ್ಲಿ ಬಂಡವಾಳ ಹೂಡಿಕೆಯ ವಿವಿಧ ಯೋಜನೆಗಳಿಗೆ ಒಪ್ಪಿಗೆ ನೀಡಲಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ₹485 ಕೋಟಿ ಬಂಡವಾಳದ ಯಾಂತ್ರೀಕೃತ ಎರಕ ಹೊಯ್ಯುವ ಘಟಕ ಸ್ಥಾಪಿಸಲಾಗುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ₹484.33 ಕೋಟಿ ಮೊತ್ತದ ವಿಜ್ಞಾನ, ತಂತ್ರಜ್ಞಾನ ಸಂಶೋಧನೆ ಹಾಗೂ ಕೌಶಲ ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಲಾಗುತ್ತದೆ. ಮೈಸೂರು ಜಿಲ್ಲೆಯಲ್ಲಿ ₹415 ಕೋಟಿ ಮೊತ್ತದ ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್‌ ಶಿಕ್ಷಣ ವಿಶ್ವವಿದ್ಯಾಲಯ ಸ್ಥಾಪಿಸಲು ತೀರ್ಮಾನಿಸಲಾಗಿದೆ.

ಸಭೆಯಲ್ಲಿ ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತೆ ಶಾಲಿನಿ ರಜನೀಶ್, ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಆಯುಕ್ತರಾದ ಗುಂಜನ್ ಕೃಷ್ಣ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹಾಗೂ ಕಾರ್ಯ ನಿರ್ವಾಹಕ ಸದಸ್ಯ ಡಾ.ಎನ್. ಮಹೇಶ್, ಕರ್ನಾಟಕ ಉದ್ಯೋಗ ಮಿತ್ರ ವ್ಯವಸ್ಥಾಪಕ ನಿರ್ದೇಶಕ ದೊಡ್ಡಬಸವರಾಜು ಹಾಜರಿದ್ದರು.

ಬೆಂಗಳೂರಿನಲ್ಲಿ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರ ಅಧ್ಯಕ್ಷತೆಯಲ್ಲಿ 143ನೇ ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆ ನಡೆಯಿತು. ಶಾಲಿನಿ ರಜನೀಶ್ ಸೇರಿದಂತೆ ಅಧಿಕಾರಿಗಳು ಹಾಜರಿದ್ದರು

ಬೃಹತ್, ಮಧ್ಯಮ ಯೋಜನೆಗೆ ಒತ್ತು

₹50 ಕೋಟಿಗೂ ಹೆಚ್ಚಿನ ಬಂಡವಾಳ ಹೂಡಿಕೆಯ 22 ಪ್ರಮುಖ ಬೃಹತ್ ಮತ್ತು ಮಧ್ಯಮ ಯೋಜನೆಗಳಿಗೂ ಸಭೆಯು ಅನುಮೋದನೆ ನೀಡಿದೆ. ಇವುಗಳಿಂದ ರಾಜ್ಯದಲ್ಲಿ ₹4,230.64 ಕೋಟಿ ಮೊತ್ತದ ಬಂಡವಾಳ ಹೂಡಿಕೆಯೊಂದಿಗೆ 24,846 ಜನರಿಗೆ ಉದ್ಯೋಗಾವಕಾಶ ಕಲ್ಪಿಸುವ ಗುರಿ ಹೊಂದಲಾಗಿದೆ.

₹15 ಕೋಟಿಯಿಂದ ₹50 ಕೋಟಿ ಒಳಗಿನ ಬಂಡವಾಳ ಹೂಡಿಕೆಯ 104 ಹೊಸ ಯೋಜನೆಗಳಿಗೆ ಅನುಮೋದನೆ ಸಿಕ್ಕಿದೆ. ಇವುಗಳಿಂದ ₹2,056.68 ಕೋಟಿ ಮೊತ್ತದ ಬಂಡವಾಳ ಹೂಡಿಕೆಯೊಂದಿಗೆ 8,425 ಜನರಿಗೆ ಉದ್ಯೋಗ ದೊರೆಯಲಿದೆ.

ಹೆಚ್ಚುವರಿ ಬಂಡವಾಳ ಹೂಡಿಕೆಯ ಎರಡು ಯೋಜನೆಗಳಿಗೂ ಅನುಮೋದನೆ ದೊರೆತಿದೆ. ಇದರಿಂದ ₹120.50 ಕೋಟಿ ಬಂಡವಾಳ ಹೂಡಿಕೆ ಆಗಲಿದ್ದು, 500 ಜನರಿಗೆ ಉದ್ಯೋಗ ದೊರೆಯಲಿದೆ.

ನಿಫ್ಟಿ ಲಾಭ ಏರಿಕೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ಷೇರು ಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ, 2023–24ನೇ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಒಟ್ಟು ₹1,975 ಕೋಟಿ ನಿವ್ವಳ ಲಾಭ ಗಳಿಸಿದೆ. ಕಳೆದ ಹಣಕಾಸು ವರ್ಷಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 8ರಷ್ಟು ಹೆಚ್ಚಳವಾಗಿದೆ.

ಕಾರ್ಯಾಚರಣೆ ವರಮಾನವು ₹3,517 ಕೋಟಿಗೆ ಏರಿಕೆಯಾಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ವರಮಾನದಲ್ಲಿ ಶೇ25ರಷ್ಟು ಹೆಚ್ಚಳವಾಗಿದೆ.

2023–24ನೇ ಹಣಕಾಸು ವರ್ಷದ ಮೊದಲ ಒಂಬತ್ತು ತಿಂಗಳ ಅವಧಿಯಲ್ಲಿ ವಾಯಿದಾ ವಹಿವಾಟಿನ ಮೇಲಿನ ಷೇರು ವಹಿವಾಟು ತೆರಿಗೆ (ಎಸ್‌ಟಿಟಿ) ರೂಪದಲ್ಲಿ ₹28,131 ಕೋಟಿಯನ್ನು ಸರ್ಕಾರದ ಖಜಾನೆಗೆ ನೀಡಿದೆ.

ನಿರುದ್ಯೋಗ ದರ ಶೇ 13.4ಕ್ಕೆ ಇಳಿಕೆ: ಸಚಿವೆ ನಿರ್ಮಲಾ

ನವದೆಹಲಿ (ಪಿಟಿಐ): 'ಕಳೆದ ಹತ್ತು ವರ್ಷಗಳಲ್ಲಿ ದೇಶದ ಆರ್ಥಿಕತೆಯನ್ನು ಸರಿಯಾದ ಹಳಿಗೆ ತರಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಹಲವು ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ' ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ರಾಜ್ಯಸಭೆಯಲ್ಲಿ ಶನಿವಾರ 'ಭಾರತದ ಆರ್ಥಿಕತೆ ಮೇಲಿನ ಶ್ವೇತಪತ್ರ' ಎಂಬ ವಿಷಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ದೇಶದಲ್ಲಿ 2017ರಲ್ಲಿ ಪದವೀಧರರ ನಿರುದ್ಯೋಗ ದರವು ಶೇ 17.3ರಷ್ಟಿತ್ತು. 2023ರಲ್ಲಿ ಇದು ಶೇ 13.4ಕ್ಕೆ ಇಳಿಕೆಯಾಗಿದೆ ಎಂದು ಹೇಳಿದರು.

ಬಿಜೆಪಿ ಸರ್ಕಾರದ ಸಾಧನೆಗಳನ್ನು ಹಾಳುಗೆಡುವ ಕಲೆಯು ಕಾಂಗ್ರೆಸ್‌ಗೆ ಕರಗತವಾಗಿದೆ. 2004ರಿಂದ 2014ರ ವರೆಗೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ ದೇಶದ ಆರ್ಥಿಕತೆಯನ್ನು ಕೆಟ್ಟದಾಗಿ ನಿರ್ವಹಿಸಲಾಗಿದೆ ಎಂದು ಹೇಳಿದರು.

ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರದ ಕೊನೆಯ ವರ್ಷದಲ್ಲಿ ಹಣದುಬ್ಬರವು ಶೇ 4ಕ್ಕಿಂತಲೂ ಕಡಿಮೆ ಇತ್ತು. ಕಾಂಗ್ರೆಸ್ ಸರ್ಕಾರದ 10 ವರ್ಷಗಳ ಅವಧಿಯಲ್ಲಿ ಅಗತ್ಯ ನಿಯಂತ್ರಣ ಕ್ರಮಕೈಗೊಳ್ಳದಿದ್ದರಿಂದ ಏರಿಕೆಯಾಯಿತು ಎಂದು ದೂರಿದರು.

ರಾಜ್ಯಸಭೆಯಲ್ಲಿ ಶನಿವಾರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಾತನಾಡಿದರು –ಪಿಟಿಐ ಚಿತ್ರ

ಭಾರತವು ತನ್ನ ಆರ್ಥಿಕತೆ ಬೆಳವಣಿಗೆಗೆ ವಿದೇಶಿ ಬಂಡವಾಳವನ್ನು ನೆಚ್ಚಿಕೊಂಡಿರುವ ರಾಷ್ಟ್ರವೆಂಬ ಹಣೆಪಟ್ಟಿ ಹೊಂದಿತ್ತು. ಈಗ ಅದನ್ನು ಕಳಚಿ ಹಾಕಿದ್ದು, ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆಯಾಗಿದೆ. ಕೆಲವೇ ವರ್ಷಗಳಲ್ಲಿ ಮೂರನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಲಿದೆ ಎಂದು ಹೇಳಿದರು.

ಮೋದಿ ಅವರೇ ಖುದ್ದಾಗಿ ಅಭಿವೃದ್ಧಿ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸುತ್ತಾರೆ ಎಂದರು.

ಇಪಿಎಫ್‌ಒ ಆದಾಯ ಶೇ 17.39 ಏರಿಕೆ

ನವದೆಹಲಿ (ಪಿಟಿಐ): ಕಳೆದ ವರ್ಷಕ್ಕೆ ಹೋಲಿಸಿದರೆ ನೌಕರರ ಭವಿಷ್ಯ ನಿಧಿ ಸಂಘಟನೆಯ (ಇಪಿಎಫ್‌ಒ) ಆದಾಯದಲ್ಲಿ ಶೇ 17.39ರಷ್ಟು ಏರಿಕೆಯಾಗಿದೆ.

ಒಟ್ಟು ಮೂಲಧನದಲ್ಲಿ ಶೇ 17.97ರಷ್ಟು ಹೆಚ್ಚಳವಾಗಿದೆ. ಇದು ಉತ್ತಮ ಆರ್ಥಿಕ ಸಾಧನೆಯಾಗಿದ್ದು, ಚಂದಾದಾರರಿಗೆ ಒಳ್ಳೆಯ ಲಾಭ ಕೂಡ ಲಭಿಸುತ್ತಿದೆ ಎಂದು ಇಪಿಎಫ್‌ಒ ಹೇಳಿದೆ.

2020-21ನೇ ಸಾಲಿನಡಿ ಶೇ 8.50ರಷ್ಟು ಬಡ್ಡಿದರ ನಿಗದಿಪಡಿಸಿದ್ದ ಸಂಘಟನೆಯು, 2021–22ನೇ ಸಾಲಿಗೆ ಶೇ 8.10ರಷ್ಟು ಬಡ್ಡಿದರ ಪ್ರಕಟಿಸಿತ್ತು. ಇದು ನಾಲ್ಕು ದಶಕದ ಕನಿಷ್ಠ ಮಟ್ಟವಾಗಿತ್ತು.

ಇಪಿಎಫ್‌ಒದಲ್ಲಿ ₹13 ಲಕ್ಷ ಕೋಟಿ ಮೂಲಧನ ಇದೆ. ಇದರಲ್ಲಿ 2023–24ನೇ ಸಾಲಿಗೆ ₹1.07 ಲಕ್ಷ ಕೋಟಿ ಮೊತ್ತವನ್ನು ನೌಕರರ ಭವಿಷ್ಯ ನಿಧಿ (ಇಪಿಎಫ್) ಠೇವಣಿಗಳಿಗೆ ಪಾವತಿಸಲು ಟ್ರಸ್ಟಿಗಳ ಕೇಂದ್ರೀಯ ಮಂಡಳಿ (ಸಿಬಿಟಿ) ಶಿಫಾರಸು ಮಾಡಿದೆ.

2022–23ರಲ್ಲಿ ₹11.02 ಲಕ್ಷ ಕೋಟಿ ಮೂಲಧನ ಇತ್ತು. ಇದರಲ್ಲಿ ಚಂದಾದಾರರ ಖಾತೆಗಳಿಗೆ ₹91,151.55 ಕೋಟಿ ಪಾವತಿಗೆ ಶಿಫಾರಸು ಮಾಡಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ದಾಖಲೆಯ ಮೊತ್ತ ಪಾವತಿಗೆ ಅನುಮೋದನೆ ನೀಡಿದೆ ಎಂದು ವಿವರಿಸಿದೆ.

ಮಾರುಕಟ್ಟೆಯಲ್ಲಿರುವ ಇತರೆ ಹೂಡಿಕೆ ಮಾರ್ಗಗಳಲ್ಲಿ ಲಭಿಸುವ ಬಡ್ಡಿದರಕ್ಕೆ ಹೋಲಿಸಿದರೆ ಇಪಿಎಫ್‌ಒ-ನಲ್ಲಿ ಬಡ್ಡಿದರ ಹೆಚ್ಚಿದೆ. ಇದರಿಂದ ಚಂದಾದಾರರಿಗೂ ಹೆಚ್ಚಿನ ಪ್ರಯೋಜನ ಸಿಗುತ್ತಿದೆ ಎಂದು ತಿಳಿಸಿದೆ.



18ಕ್ಕೆ ಕರ್ಣಾಟಕ ಬ್ಯಾಂಕ್ ಶತಮಾನೋತ್ಸವ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ಣಾಟಕ ಬ್ಯಾಂಕ್‌ನ ಶತಮಾನೋತ್ಸವ ಕಾರ್ಯಕ್ರಮವು ಇದೇ 18ರಂದು ಸಂಜೆ 4ಗಂಟೆಗೆ ಇಲ್ಲಿನ ಟಿಎಂಎ ಪೈ ಕನ್ವೆನ್ಶನ್ ಸೆಂಟರ್‌ನಲ್ಲಿ ನಡೆಯಲಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡು, 'ಹಣಕಾಸು ಸೇವೆಗಳು ಮತ್ತು ಭಾರತೀಯ ಆರ್ಥಿಕತೆಯಲ್ಲಿ ಅದರ ಪಾತ್ರ' ಕುರಿತು ಉಪನ್ಯಾಸ ನೀಡಲಿದ್ದಾರೆ.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಅಟಾರ್ನಿ ಜನರಲ್ ಆರ್. ವೆಂಕಟರಮಣಿ, ವಿಧಾನಸಭಾ ಅಧ್ಯಕ್ಷ ಯು.ಟಿ. ಖಾದರ್ ಅತಿಥಿಗಳಾಗಿ ಪಾಲ್ಗೊಳ್ಳುವರು.

ಬ್ಯಾಂಕಿನ ಎಂ.ಡಿ ಹಾಗೂ ಸಿಇಒ ಶ್ರೀಕೃಷ್ಣನ್ ಎಚ್., ಕಾರ್ಯ ನಿರ್ವಾಹಕ ನಿರ್ದೇಶಕ ಶೇಖರ್ ರಾವ್, ಚೇರ್ಮನ್ ಪಿ. ಪ್ರದೀಪ್ ಕುಮಾರ್ ಉಪಸ್ಥಿತರಿರುವರು. ನಂತರ ಗಾಯಕರಾದ ಶಂಕರ್ ಮಹಾದೇವನ್ ಮತ್ತು ವಿಜಯ್ ಪ್ರಕಾಶ್ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ.

ನಿವೃತ್ತರಿಗೆ ವೈದ್ಯಕೀಯ ಸೌಲಭ್ಯ

ಉಡುಪಿಯಲ್ಲಿ ಇಎಸ್‌ಐ ಆಸ್ಪತ್ರೆ: ಭೂಸ್ವಾಧೀನಕ್ಕೆ ಒಪ್ಪಿಗೆ

ನವದೆಹಲಿ (ಪಿಟಿಐ): ಆರೋಗ್ಯ ವಿಮೆಗೆ ಒಳಪಟ್ಟಿದ್ದ ನಿವೃತ್ತ ಉದ್ಯೋಗಿಗಳಿಗೂ ವೈದ್ಯಕೀಯ ಸೌಲಭ್ಯವನ್ನು ವಿಸ್ತರಿಸಲು ಕಾರ್ಮಿಕರ ರಾಜ್ಯ ವಿಮಾ ನಿಗಮವು (ಇಎಸ್‌ಐಸಿ) ನಿರ್ಧರಿಸಿದೆ.

ಕೇಂದ್ರ ಕಾರ್ಮಿಕ ಸಚಿವ ಭೂಪೇಂದರ್ ಯಾದವ್ ಅವರ ಅಧ್ಯಕ್ಷತೆಯಲ್ಲಿ ನಡೆದ ನಿಗಮದ ಸಭೆಯಲ್ಲಿ ಈ ಕುರಿತ ನಿಯಮಾವಳಿಗಳನ್ನು ಸಡಿಲಿಸಲು ನಿರ್ಣಯ ಅಂಗೀಕರಿಸಲಾಗಿದೆ ಎಂದು ಕೇಂದ್ರ ಕಾರ್ಮಿಕ ಸಚಿವಾಲಯವು ಶನಿವಾರ ತಿಳಿಸಿದೆ.

ಸಂಬಳ ಮಿತಿಯ ಹೆಚ್ಚಳದಿಂದಾಗಿ ಇಎಸ್‌ಐ ಆರೋಗ್ಯ ವಿಮೆಯಿಂದ ಹೊರಗುಳಿದಿದ್ದ ನಿವೃತ್ತರಿಗೆ ಈ ವೈದ್ಯಕೀಯ ಪ್ರಯೋಜನ ದೊರೆಯಲಿದೆ. ಆದರೆ, ಉದ್ಯೋಗಿಗಳು ನಿವೃತ್ತಿಗೂ ಅಥವಾ ಸ್ವಯಂ ನಿವೃತ್ತಿಗೂ ಮುಂಚೆ ವಿಮಾ ನೋಂದಣಿ ಮಾಡಿಸಿರಬೇಕಿದೆ ಎಂದು ತಿಳಿಸಿದೆ.

2012ರ ಏಪ್ರಿಲ್ 1ರ ನಂತರ ಕನಿಷ್ಠ ಐದು ವರ್ಷಗಳ ಕಾಲ ಆರೋಗ್ಯ ವಿಮೆ ಮಾಡಿಸಿ ಉದ್ಯೋಗದಲ್ಲಿ ಇದ್ದವರು ಅಥವಾ 2017ರ ಏಪ್ರಿಲ್ 1ರ ನಂತರ ಮಾಸಿಕ ₹30 ಸಾವಿರ ವೇತನದೊಂದಿಗೆ ನಿವೃತ್ತಿ, ಸ್ವಯಂ ನಿವೃತ್ತಿ ಪಡೆದ ಉದ್ಯೋಗಿಗಳಿಗೆ ಈ ಹೊಸ ಯೋಜನೆಯಡಿ ವೈದ್ಯಕೀಯ ಸೌಲಭ್ಯ ದೊರೆಯಲಿದೆ ಎಂದು ತಿಳಿಸಿದೆ.

ಇಎಸ್‌ಐ ಫಲಾನುಭವಿಗಳಿಗೆ ಹೆಚ್ಚಿನ ಆರೋಗ್ಯ ಸೌಕರ್ಯ ಕಲ್ಪಿಸಲು 2023ರಲ್ಲಿ ಅನುಷ್ಠಾನಗೊಳಿಸಿರುವ ಆಯುಷ್ ಹೊಸ ನೀತಿಯನ್ನು ನಿಗಮದ ಆಸ್ಪತ್ರೆಗಳಲ್ಲಿ ಅಳವಡಿಸಿಕೊಳ್ಳಲು ಸಭೆಯು ಅನುಮೋದನೆ ನೀಡಿದೆ ಎಂದು ಹೇಳಿದೆ.

ಉಡುಪಿಯಲ್ಲಿ ಇಎಸ್‌ಐ ಆಸ್ಪತ್ರೆ: ಇದೇ ವೇಳೆ ವೈದ್ಯಕೀಯ ಆರೈಕೆಯ ಮೂಲ ಸೌಕರ್ಯದ ಬಲವರ್ಧನೆಗೂ ಸಭೆ ಅನುಮೋದನೆ ನೀಡಿದೆ ಎಂದು ಸಚಿವಾಲಯವು ತಿಳಿಸಿದೆ.

ಕರ್ನಾಟಕದ ಉಡುಪಿ ಮತ್ತು ಕೇರಳದ ಇಡುಕ್ಕಿಯಲ್ಲಿ ತಲಾ 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಗಳನ್ನು ನಿರ್ಮಿಸಲು ನಿರ್ಧರಿಸಿದೆ. ಪಂಜಾಬ್‌ನ ಮಲೇರ್‌ಕೋಟ್ಲಾದಲ್ಲಿ 150 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ನಿರ್ಮಿಸಲಿದೆ. ಈ ಆಸ್ಪತ್ರೆಗಳ ನಿರ್ಮಾಣಕ್ಕೆ ಅಗತ್ಯವಿರುವ ಭೂಸ್ವಾಧೀನಕ್ಕೂ ಅನುಮೋದನೆ ನೀಡಿದೆ ಎಂದು ವಿವರಿಸಿದೆ.

ಟಿಕೆಟ್ ಬುಕ್ಕಿಂಗ್ ₹2.77 ಕೋಟಿ ವಂಚನೆ!

ಸಿಂಧನೂರು (ರಾಯಚೂರು ಜಿಲ್ಲೆ): ತಾಲ್ಲೂಕು ವ್ಯಾಪ್ತಿಯ ಉದ್ಬಾಳ (ಯು) ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಜಯಸುಧಾ ಅವರಿಗೆ ವಿಮಾನದ ಟಿಕೆಟ್ ಬುಕ್ಕಿಂಗ್ ಹೆಸರಿನಲ್ಲಿ ₹ 2.77 ಕೋಟಿ ವಂಚನೆ ಮಾಡಲಾಗಿದೆ.

ಕಳೆದ ವರ್ಷ ಸೆ. 3ರಂದು ಜಯಸುಧಾ ಅವರಿಗೆ ಅಪರಿಚಿತರೊಬ್ಬರು ಟೆಲಿಗ್ರಾಂ ಲಿಂಕ್ ಕಳುಹಿಸಿ ಕಿವಿ ಕಂಪನಿಯಲ್ಲಿ ಏರ್ ಟಿಕೆಟ್‌ಗಳನ್ನು ಬುಕ್ಕಿಂಗ್ ಮಾಡಿದರೆ ನಿತ್ಯ ₹1000– ₹3,600 ಲಾಭ ಮಾಡಬಹುದು ಎಂದಿದ್ದಾರೆ. ಇದನ್ನು ನಂಬಿದ ಶಿಕ್ಷಕಿ ಕಂಪನಿಯ ವೆಬ್ ಸೈಟ್‌ನಲ್ಲಿ 2.77 ಕೋಟಿ ನೀಡಿ ಟಿಕೆಟ್‌ಗಳನ್ನು ಬುಕಿಂಗ್ ಮಾಡಿದ್ದಾರೆ. 'ಆದರೆ ಕಂಪನಿಯವರು ಲಾಭಾಂಶ ನೀಡಿಲ್ಲ ಮತ್ತು ಹಾಕಿದ ಹಣವನ್ನೂ ಮರಳಿ ನೀಡದೆ ವಂಚಿಸಿದ್ದಾರೆ' ಎಂದು ದೂರಿನಲ್ಲಿ ತಿಳಿಸಲಾಗಿದೆ. ರಾಯಚೂರು ಜಿಲ್ಲಾ ಪೊಲೀಸ್ ಠಾಣೆಯ ಸೈಬರ್ ಅಪರಾಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿವಿಧ ಸಂಸ್ಥೆಗಳಿಗೆ ನೀಡಿದ್ದ 7,500 ಎಕರೆ ಜಮೀನಿನ ಗುತ್ತಿಗೆ ಮುಕ್ತಾಯ

'ಗುತ್ತಿಗೆ ಜಮೀನು ವಾಪಸ್‌ಗೆ ಕ್ರಮ'

ಪ್ರಜಾವಾಣಿ ವಾರ್ತೆ

ಮೈಸೂರು: 'ಕೊಡಗು, ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಗಳಲ್ಲಿ ವಿವಿಧ ಸಂಸ್ಥೆಗಳಿಗೆ ನೀಡಲಾಗಿದ್ದ 7,500 ಎಕರೆಗೂ ಹೆಚ್ಚು ಅರಣ್ಯ ಭೂಮಿಯ ಗುತ್ತಿಗೆ ಅವಧಿ ಮುಗಿದಿದ್ದು, ಶೀಘ್ರದಲ್ಲೇ ವಾಪಸ್ ಪಡೆಯಲಾಗುವುದು' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಇಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳ ಸಭೆ ನಡೆಸಿದ ನಂತರ ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಬ್ರಿಟಿಷರ ಕಾಲದಲ್ಲಿ ಅರಣ್ಯ ಭೂಮಿಯನ್ನು ದೊಡ್ಡ ಪ್ರಮಾಣದಲ್ಲಿ ಕಾಫಿ, ರಬ್ಬರ್ ಬೆಳೆಯಲು ಗುತ್ತಿಗೆ ಕೊಡಲಾಗಿತ್ತು. ಹೀಗೆ ಗುತ್ತಿಗೆ ನೀಡಲಾದ ಜಮೀನಿನಲ್ಲಿ ಶೇ 95ರಷ್ಟು ಭೂಮಿ ಈ ಮೂರು ಜಿಲ್ಲೆಗಳಲ್ಲಿಯೇ ಇದೆ. ಸಾಕಷ್ಟು ದೊಡ್ಡ ಕಂಪನಿಗಳು ಗುತ್ತಿಗೆ ಪಡೆದಿವೆ. ಇದನ್ನು ವಶಕ್ಕೆ ಪಡೆಯಲು ಹಿಂದೊಮ್ಮೆ ನೋಟಿಸ್ ನೀಡಿದ್ದೆವು. ಆಗ ಕಂಪನಿಗಳು 999 ವರ್ಷಕ್ಕೆ ಈ ಜಮೀನು ಪಡೆದಿದ್ದಾಗಿ ವಾದಿಸಿದ್ದವು. ಆದರೆ, ನ್ಯಾಯಾಲಯ ಆ ಅವಧಿಯನ್ನು 99 ವರ್ಷಕ್ಕೆ ಇಳಿಸಿತು. ಈಗ ಆ ಅವಧಿಯೂ ಮುಗಿದಿದ್ದು, ಜಮೀನು ವಶಕ್ಕೆ ಕ್ರಮ ಕೈಗೊಳ್ಳಲಾಗುವುದು' ಎಂದು ಮಾಹಿತಿ ನೀಡಿದರು.

'ಬಹುತೇಕ ಗುತ್ತಿಗೆದಾರರು ಇದನ್ನು ವಿರೋಧಿಸಿ ನ್ಯಾಯಾಲಯದ ಮೆಟ್ಟಿಲು ಏರಿದ್ದಾರೆ. ಅಂತಹ ಪ್ರಕರಣಗಳ ಇತ್ಯರ್ಥಕ್ಕೆಂದು ವಿಶೇಷ ವಕೀಲರನ್ನು ನೇಮಿಸಿಕೊಂಡಿದ್ದೇವೆ. ಇದಕ್ಕಾಗಿ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಸಮಿತಿಯನ್ನೂ ರಚಿಸಲಾಗಿದೆ. ಇನ್ನು ಆರು ತಿಂಗಳಲ್ಲಿ ಇಂತಹ ಪ್ರಕರಣಗಳನ್ನು ಬಗೆಹರಿಸಲಾಗುವುದು' ಎಂದರು.



ಲೋಕಸಭೆ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಸಂಬಂಧ ಫೆ. 14ರಂದು ಸಭೆ ನಡೆಯಲಿದೆ. ನಾನು ಸ್ಪರ್ಧಿಸುವ ಇಚ್ಛೆ ಹೊಂದಿಲ್ಲ.

ಈಶ್ವರ ಖಂಡ್ರೆ, ಅರಣ್ಯ ಸಚಿವ

'ರಾಜ್ಯದಲ್ಲಿ 2 ಲಕ್ಷ ಎಕರೆಗೂ ಅಧಿಕ ಅರಣ್ಯ ಭೂಮಿ ಒತ್ತುವರಿಯಾಗಿದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ 2 ಸಾವಿರ ಎಕರೆಗೂ ಹೆಚ್ಚು ಅರಣ್ಯ ಒತ್ತುವರಿ ತೆರವುಗೊಳಿಸಿದ್ದೇವೆ. 3 ಎಕರೆಗಿಂತ ಕಡಿಮೆ ಇರುವ ಸಣ್ಣ ಹಿಡುವಳಿದಾರರು ಹಾಗೂ ಮನೆ ನಿರ್ಮಿಸಿಕೊಂಡವರನ್ನು ಹೊರತುಪಡಿಸಿ ಉಳಿದೆಲ್ಲ ಭೂಮಿಯನ್ನು ತೆರವುಗೊಳಿಸಲಾಗುವುದು' ಎಂದರು.

ಜಂಟಿ ಸಮೀಕ್ಷೆ: 'ಕೆಲವು ಕಡೆಗಳಲ್ಲಿ ಒಂದೇ ಸರ್ವೆ ಸಂಖ್ಯೆಯಲ್ಲಿ ಅರಣ್ಯ, ಕಂದಾಯ ಹಾಗೂ ಖಾಸಗಿ ಸ್ವತ್ತು ಸೇರಿಕೊಂಡಿವೆ. ಅಂಥ ಜಮೀನುಗಳ ಗಡಿ ಗುರುತಿಸಿ, ನಿಖರವಾಗಿ ಯಾರಿಗೆ ಎಷ್ಟು ಜಮೀನು ಸೇರಿದೆ ಎಂದು ಅಳೆಯಲು ಜಂಟಿ ಸಮೀಕ್ಷೆಗೆ ಸೂಚಿಸಲಾಗಿದೆ' ಎಂದರು.

'ದಾಂದಲೆ ಮಾಡುವ ಪ್ರಾಣಿಗಳನ್ನು ಮಾತ್ರ ಹಿಡಿದು ಪುನರ್ವಸತಿ ಕೇಂದ್ರಗಳು ಹಾಗೂ ಶಿಬಿರಗಳಲ್ಲಿ ಬಿಡಲಾಗುತ್ತಿದೆ. ಪ್ರಾಣಿಗಳ ಸೆರೆ ಕಾರ್ಯಾಚರಣೆ ಸೂಕ್ಷ್ಮ ಕೆಲಸವಾಗಿದ್ದು, ಅದಕ್ಕೆ ವನ್ಯಜೀವಿ ತಜ್ಞರ ವಿರೋಧವೂ ಇದೆ' ಎಂದರು.

ರಾತ್ರಿ ಸಂಚಾರ ನಿರ್ಬಂಧ ಅಬಾಧಿತ

'ಬಂಡೀಪುರ ಅರಣ್ಯ ಪ್ರದೇಶ ವನ್ಯಜೀವಿಗಳ ಆವಾಸಸ್ಥಾನವಾಗಿದ್ದು, ಅವುಗಳ ಸಂಚಾರಕ್ಕೆ ತೊಂದರೆ ಆಗದಂತೆ ಕ್ರಮ ವಹಿಸಲಾಗುವುದು' ಎಂದು ಈಶ್ವರ ಖಂಡ್ರೆ ಹೇಳಿದರು.

'ಬಂಡೀಪುರ ಅರಣ್ಯದೊಳಗೆ ಇರುವ ರಸ್ತೆ ಮಾರ್ಗವಾಗಿ ಕೇರಳಕ್ಕೆ ತೆರಳಲು ಬೆಳಿಗ್ಗೆ 6ರಿಂದ ರಾತ್ರಿ 9ರವರೆಗೆ ಅವಕಾಶ ನೀಡಲಾಗಿದೆ. ರಾತ್ರಿ ಸಂಚಾರಕ್ಕೆ ಅವಕಾಶ ನಿರ್ಬಂಧಿಸಲಾಗಿದ್ದು, ಇದು ಮುಂದುವರಿಯುತ್ತದೆ. ಕೆಲವು ವಿಶೇಷ ಸಂದರ್ಭ ಅಂದರೆ ವೈದ್ಯಕೀಯ ತುರ್ತು ಇತ್ಯಾದಿ ಸಂದರ್ಭದಲ್ಲಿ ಪರಿಶೀಲಿಸಿ ವಾಹನ ಸಂಚಾರಕ್ಕೆ ಅವಕಾಶ ನೀಡಲಾಗಿದೆ' ಎಂದು ಪ್ರತಿಕ್ರಿಯಿಸಿದರು. 'ಬಂಡೀಪುರದಲ್ಲಿ ರೈಲು ಮಾರ್ಗ ಅಥವಾ ಮೇಲ್ಸೇತುವೆ ನಿರ್ಮಾಣಕ್ಕೆ ಸಮೀಕ್ಷೆ ಆಗಿಲ್ಲ' ಎಂದು ತಿಳಿಸಿದರು.

₹250 ಕೋಟಿಗೆ ಪ್ರಸ್ತಾವ

'ಕಾಡಂಚಿನಲ್ಲಿ ರೈಲ್ವೆ ಬ್ಯಾರಿಕೇಡ್‌ಗಳ ನಿರ್ಮಾಣಕ್ಕೆ ಈ ಬಜೆಟ್‌ನಲ್ಲಿ ₹250 ಕೋಟಿ ನೀಡುವಂತೆ ಮುಖ್ಯಮಂತ್ರಿಗೆ ಪ್ರಸ್ತಾವ ಸಲ್ಲಿಸಿದ್ದೇವೆ. ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೆ ಪ್ರತಿ ಕಿ.ಮೀ.ಗೆ ₹1.5 ಕೋಟಿ ಖರ್ಚಾಗಲಿದ್ದು, ಅನುಪಯುಕ್ತ ಹಳಿಗಳನ್ನು ನೀಡುವಂತೆ ರೈಲ್ವೆ ಇಲಾಖೆಗೆ ಹತ್ತು ಪತ್ರ ಬರೆದಿದ್ದರೂ ಪ್ರತಿಕ್ರಿಯೆ ಸಿಕ್ಕಿಲ್ಲ' ಎಂದು ಖಂಡ್ರೆ ಪ್ರತಿಕ್ರಿಯಿಸಿದರು.

'ದಸರಾ ಆನೆ ಅರ್ಜುನ ಸಾವಿನ ವರದಿಯು ಇಲಾಖೆಯ ಕೈ ಸೇರಿದ್ದು, ಸೋಮವಾರ (ಫೆ.12) ಈ ಕುರಿತು ಚರ್ಚೆ ನಡೆಸಿ ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

22ನೇ ವರ್ಷದ ಸವಿನೆನಪು

ನನ್ನ ಹೆಸರು ಗೌತಮ್
ನನ್ನ ತಂದೆ ತಾಯಿಯ
ಮಡಿಲಲ್ಲಿ ಬೆಳೆಯುವ
ನನ್ನನ್ನು ದೇವರ ಮಡಿಲಿಗೆ
ಕಳಿಸಿದರು. ದೇವರಲ್ಲೂ
ಮತ್ತು ನಿಮ್ಮಲ್ಲಿಯೂ
ಸದಾ ಮಗುವಾಗಿರುವೆ

ಇಂತಿ: ಪಿ.ವಿ. ವೆಂಕಟಸ್ವಾಮಿರೆಡ್ಡಿ, ಪಾವಲಮ್ಮ, ಚಂದನ್ ವಿ. ರೆಡ್ಡಿ, ಶ್ವೇತಾ, ಪಿ.ಸಿ. ಅಬ್ಬಯ್ಯ ರೆಡ್ಡಿ, ಸುಶೀಲಮ್ಮ.

ಗೌತಮ್ ಪಿ.ಪಣತೂರು

ಜನನ: 27-09-1993 ನಿಧನ:11-02-2002

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

www.homepages.deccanherald.com

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Mysore

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ (ರಿ)
ನಂ.28, ಕ್ರೆಸೆಂಟ್ ರಸ್ತೆ, ಬೆಂಗಳೂರು-560 001

ಮೈಸೂರು ನಿವೇಶನ ಮಾರಾಟ

ಆಸ್ತಿಯ ವಿವರ

ವಿಳಾಸ: ನಂ 44, ಜಯಲಕ್ಷ್ಮಿಪುರಂ, 3ನೇ ಬ್ಲಾಕ್, ಮೈಸೂರು
ಭೂಮಿಯ ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ 45.75 ಮೀಟರ್
ಉತ್ತರದಿಂದ ದಕ್ಷಿಣಕ್ಕೆ 30.00+34.50/2ಮೀಟರ್ ಅಳತೆಯ
ಒಟ್ಟು 1475.43 ಚದರ ಮೀಟರ್ (16340 ಚ.ಅಡಿ) ನಿವೇಶನ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಎನ್.ಎಂ. ಸುರೇಶ್ - ಅಧ್ಯಕ್ಷರು
(ಮೊ.98448 42555)
ಜಿ.ಕೆ.ಜಯಸಿಂಹ ಮುಸುರಿ - ಖಜಾಂಚಿ
(ಮೊ.99008 15008)
ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ
email : karnatakafilmhouse@yahoo.com
Phone : 080-22265370 / 71

Koppal

ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕು, ಹನುಮಸಾಗರ ಪಟ್ಟಣದಲ್ಲಿ, ರಾಜ್ಯಹೆದ್ದಾರಿ.59, ಕುಷ್ಟಗಿ ಮುಖ್ಯರಸ್ತೆಗೆ ಹೊಂದಿಕೊಂಡಿರುವ 6ಸೈಟ್ ಗಳು ಮಾರಾಟಕ್ಕಿವೆ. (ಒಟ್ಟು 8400 ಚದುರಅಡಿ) ಮಾಹಿತಿಗಾಗಿ ಸಂಪರ್ಕಿಸಿ: 9901594833, 8431173450.

J C Nagar

SALE 60X40, East facing, JP nagar 9th Phase 5th Block, BDA developed, 11k/ sqft 9632163333

Agricultural Land

South

PRIME LAND For Sale 3 Acres Adjacent to Main road at Gopanpally on Highway from Kodongal to Gulbarga Contact 09441070427

ಉದ್ಯೋಗಾವಕಾಶ

Drivers

ಕವಿ ಲಾಜಿಸ್ಟಿಕ್ಸ್ ಬೆಂಗಳೂರು ಲೋಕಲ್ ನಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ (Minimum 5 Years Experience) ನಂ. 4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9343775016/ 9886683188

General

ಬೆಂಗಳೂರಿನಲ್ಲಿ ಮನೆಯಲ್ಲೇ ಇದ್ದುಕೊಂಡು, ಅಡುಗೆ ಮತ್ತು ಮನೆ ಕೆಲಸ ಮಾಡಿಕೊಂಡು ಹೋಗಲೂ ಹೆಂಗಸರು ಬೇಕಾಗಿದ್ದಾರೆ. ಸಂಪರ್ಕಿಸಿ: 9740748470

ವಾಹನ

Four Wheelers Selling

Maruti

SALE. MARUTI Super carry refrigerator (reefer) vehicle. With South Korean make Dongin refrigeration unit fitted in brand new condition.. very low usage. Bangalore. Mobile: 9886972374/ 99802 83865

ಸೌಂದರ್ಯ-ಆರೋಗ್ಯ

Health Products

ಲೈಂಗಿಕ ಸಮಸ್ಯೆಗೆ ವಿಶ್ವದ ನಂಬರ್ 1 ಪರಿಹಾರ

ನಾವು ಕೊಡುವ ವಿಶ್ವದ ನಂಬರ್ 1 ಆಯುರ್ವೇದಿಕ್ ಔಷಧಿಯಿಂದ, ನಿಮ್ಮ ಶಿಶ್ನದ ಗಾತ್ರ, ಆಕಾರದಿಂದ ಆಕರ್ಷಿತಗೊಳಿಸಿ, ನಿಮ್ಮ ಸಂಗಾತಿಯನ್ನು ಸಂತೃಪ್ತಿಗೊಳಿಸಿ, ಯಾವುದೇ ಅಡ್ಡ ಪರಿಣಾಮ ಇಲ್ಲ. ಇದರ ಬಳಕೆಯಿಂದ ಲಕ್ಷಾಂತರ ಮಂದಿ ಗಂಡಸರು ಸಂತುಷ್ಟರಾಗಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಈ ಕೂಡಲೇ ಸಂಪರ್ಕಿಸಿ: 9136920476 9702130825

ಭವಿಷ್ಯ

Astrology

★॥ಶ್ರೀಅನ್ನಪೂರ್ಣೇಶ್ವರಿ॥★ ಜ್ಯೋತಿಷ್ಯಕೇಂದ್ರ" ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ, ಸಾಲಭಾದೆ ಇನ್ನೂಯಾವುದೇ ಸಮಸ್ಯೆಗಳಿಗೆ 11ಗಂಟೆಗಳಲ್ಲಿ ಶಾಶ್ವತ ಪರಿಹಾರ. "ರಾಘವೇಂದ್ರಭಟ್". 8050061378

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವೈವಾಹಿಕ

Matrimonial Bureaus

ಶ್ರೀ. ಶ್ರೀ. ಶಿವಶರಣ ಮಾದಾರ ಚನ್ನಯ್ಯ ಸ್ವಾಮಿ ಪ್ರಸನ್ನ

ವಧು–ವರರ ಅನ್ವೇಷಣೆ, ಮಾದಿಗ, ಮಾಚಿರ್, ಆದಿ ಜಾಂಭವ, ಸಮಗಾರ, ಮೊಗೇರ. ಕೇವಲ ಮೇಲ್ಕಂಡ ಜನಾಂಗದವರು ಮಾತ್ರ ನೋಂದಣಿ ಮಾಡಿಕೊಳಲು ವಿನಂತಿ ನೋಂದಣಿ ಶುಲ್ಕ: 5000/– (ಐದು ಸಾವಿರ ರೂಪಾಯಿ ಮಾತ್ರ) ಶುಲ್ಕ ಕಳುಹಿಸುವವರು ಡಿಡಿ ಅಥವಾ ಫೋನ್ ಪೇ ಮೂಲಕ ಮಾತ್ರ ವಿದ್ಯಾವಂತರು: ವಿದ್ಯಾಭ್ಯಾಸ ದಾಖಲೆಗಳನ್ನು, ಜೆರಾಕ್ಸ್ ಪ್ರತಿಗಳನ್ನು ಮಾತ್ರ ಕೊಡಬೇಕು. ಕಾರ್ಮಿಕರು ಕಾರ್ಮಿಕರ ಗುರುತಿನ ಪತ್ರ ಮತ್ತು ಪೋಷಕರ ಗುರುತಿನ ಪತ್ರಗಳು. ದಾಖಲೆಗಳನ್ನು ಸ್ಪೀಡ್ ಪೋಸ್ಟ್ ಮತ್ತು ಕೊರಿಯರ್ ಮುಖಾಂತರ ಮಾತ್ರ ಕಳಿಸಬೇಕು ವಿಳಾಸ: ವೈ.ಮುನಿಯಪ್ಪ, ಅಧ್ಯಕ್ಷರು, ಮಾದಿಗ ಜನಾಂಗದ ವರನ್ವೇಷನೆ ಸಮಿತಿ, ನಂ.83, ಯರೆಪ್ಪ ಹೌಸ್, ಪರಪ್ಪನ ಅಗ್ರಹಾರ, ಗಣೇಶ ದೇವಸ್ಥಾನದ ರಸ್ತೆ, ಎಲೆಕ್ಟ್ರಾನಿಕ್ ಸಿಟಿ ಪೋಸ್ಟ್, ಬೆಂಗಳೂರು–560100 ಮೋ: 9341943661

Grooms Wanted

Kannada

ವರ ಬೇಕಾಗಿದ್ದಾರೆ

ಸ್ನಾತಕೋತ್ತರ ಪದವೀಧರೆ ಸರ್ಕಾರಿ ಅಧಿಕಾರಿ ಹುದ್ದೆಯಲ್ಲಿರುವ 37 ವರ್ಷದ ವಿಚ್ಛೇದನ ಪಡೆದಿರುವ (ಒಂದು ಮಗು ಹೊಂದಿರುವ) ಮಹಿಳೆಗೆ, ಮೇಲ್ಜಾತಿಗೆ ಸೇರಿರುವ ಗೌರವಾನ್ವಿತ ಸರ್ಕಾರಿ ಹುದ್ದೆಯಲ್ಲಿರುವ ವಿಚ್ಛೇದಿತ/ವಿಧುರ, 37 ರಿಂದ 42 ವರ್ಷದ ವರ ಬೇಕಾಗಿದ್ದಾರೆ.

ಸಂಪರ್ಕಿಸಿ: 6361740802

Brides Wanted

Tamil

MUDLIYAR BOY BE,MS 27/5'5" working in Europe is looking for suitable girl from same community. 9448476176

ವೈಯಕ್ತಿಕ

Change of Name

I SHRUTI T.K. W/O:GIRISH SORTUR R/O: Kodiyal, Kumarapattana, District: Haveri My minor daughter's name is being changed from DHRITI to DHRITI SORTUR For all future purpose vide affidavit sworn before notary C.H.Kotegoudra on 30-01-2024

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 02.03.2024,12.04.2024 10ದಿನಗಳು ಅಖಂಡನೇಪಾಳ ರಾಷ್ಟ್ರ ಪ್ರವಾಸ (ಮುಕ್ತಿನಾಥ) 13.03.2024,13.04.2024 6ದಿನಗಳು ಭೂತಾನ್ ರಾಷ್ಟ್ರದ ತಿಂಪೂ,ಪಾರೋ,ಪುನಕಾ ಪೂಚಲಿಂಗ್.20.03.2024 12/20ದಿನಗಳು ಈಶಾನ್ಯ ಭಾರತದ (ಸೆವೆನ್‌ಸಿಸ್ಟರ್ಸ್) ಅಸ್ಸಾಂ.ಅರುಣಾಚಲ. ಮೇಘಾಲಯ.ಮಣಿಪುರ.ತ್ರಿಪುರ. ಮಿಝೋರಾಂ,ನಾಗಲ್ಯಾಂಡ್. 9743351212, 9206979202, 8792319181, 6366322639

ವಿಮಾನದಲ್ಲಿ ಕಾಶಿ ಅಯೋಧ್ಯ 20.03.2024, 7 ದಿನಗಳು. ಚಾರಧಾಮ್ ಯಾತ್ರೆ 23.05.2024 ಮತ್ತು 05.06.2024, 13ದಿನಗಳು. ಸಂಪರ್ಕಿಸಿ. ನಿಸರ್ಗ ಹಾಲಿಡೇಸ್ ಬೆಂಗಳೂರು. 9880241669, 9900664943

Holiday Package Tours

ಅಂಡಮಾನ್ 6 ದಿನಗಳು. ಗೋವಾ 3 ದಿನಗಳು. ಈಶಪಳನಿ ಮಾಸನಿಯಮ್ಮ 2 ದಿನಗಳು ದಾಂಡೇಲಿ 2 ದಿನಗಳ ಪ್ರವಾಸಗಳು 7829996723

ಪ್ರಜಾವಾಣಿ

To place your ad in Prajavani Classifieds

ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿರಿ:

9845114560 : 9731810277
9901641752 : 9886213331
080 - 45557163 / 164

ನವಾಜ್, ಪುತ್ರಿ ಗೆಲುವು ಪ್ರಶ್ನಿಸಿ ಅರ್ಜಿ

ಲಾಹೋರ್ (ಪಿಟಿಐ): ಲಾಹೋರ್ ಕ್ಷೇತ್ರಗಳಲ್ಲಿ ಪಿಎಂಎಲ್–ಎನ್ ಮುಖ್ಯಸ್ಥ ನವಾಜ್ ಷರೀಫ್ ಮತ್ತು ಅವರ ಪುತ್ರಿ ಮರಿಯಂ ನವಾಜ್ ಅವರು ಗೆಲುವು ಸಾಧಿಸಿದ್ದಾರೆಂದು ಘೋಷಿಸಿರುವುದನ್ನು ಪ್ರಶ್ನಿಸಿ ಶನಿವಾರ ಹೈಕೋರ್ಟ್ ಮೆಟ್ಟಿಲೇರಲಾಗಿದೆ.

ಕ್ಷೇತ್ರದ ಮತ ಎಣಿಕೆ ವೇಳೆ ಪ್ರಕ್ರಿಯೆಗಳನ್ನು ಪಾಲನೆ ಮಾಡಿಲ್ಲ ಎಂದು ಪಿಟಿಐ ಬೆಂಬಲಿತ ಅಭ್ಯರ್ಥಿಗಳು ಅರ್ಜಿಯಲ್ಲಿ ಆರೋಪಿಸಿದ್ದಾರೆ.

ಇಮ್ರಾನ್‌ಗೆ ಜಾಮೀನು

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ಸೇನೆಯ ಪ್ರಧಾನ ಕಚೇರಿ ಹಾಗೂ ವಸ್ತು ಸಂಗ್ರಹಾಲಯದ ಮೇಲೆ ಮೇ 9ರಂದು ನಡೆದಿದ್ದ ದಾಳಿಗೆ ಸಂಬಂಧಿಸಿದಂತೆ 12 ಪ್ರಕರಣಗಳಲ್ಲಿ ಬಂಧಿತರಾಗಿ ಜೈಲಿನಲ್ಲಿರುವ ಮಾಜಿ ಪ್ರಧಾನಿ ಇಮ್ರಾನ್ ಖಾನ್‌ಗೆ ಭಯೋತ್ಪಾದನಾ ನಿಗ್ರಹ ನ್ಯಾಯಾಲಯವು (ಎಟಿಸಿ) ಶನಿವಾರ ಜಾಮೀನು ಮಂಜೂರು ಮಾಡಿದೆ.

'ಈ ಪ್ರಕರಣದ ಆರೋಪಿಗಳೆಲ್ಲರೂ ಜಾಮೀನಿನ ಮೇಲೆ ಇದ್ದಾರೆ. ಇಮ್ರಾನ್ ಅವರನ್ನು ಬಂಧಿಸಲು ಯಾವುದೇ ಸಮರ್ಥನೆ ಇಲ್ಲ. 12 ಪ್ರಕರಣಗಳಿಗೆ ಸಂಬಂಧಿಸಿದಂತೆ ₹ 1 ಲಕ್ಷ ಮೊತ್ತದ ಭದ್ರತಾ ಠೇವಣಿ ಇರಿಸಿದ ನಂತರ ಖಾನ್ ಜಾಮೀನು ಪಡೆಯಬಹುದು' ಎಂದು ಎಟಿಸಿ ನ್ಯಾಯಾಧೀಶ ಮಲಿಕ್ ಎಜಾಜ್ ಆಸಿಫ್ ತೀರ್ಪಿನಲ್ಲಿ ತಿಳಿಸಿದ್ದಾರೆ.

ಇಮ್ರಾನ್ ಖಾನ್ ಅವರು ಬೇರೆ ಪ್ರಕರಣಗಳಲ್ಲಿ ಶಿಕ್ಷೆ ಅನುಭವಿಸುತ್ತಿರುವುದರಿಂದ, ಜಾಮೀನು ದೊರೆತರೂ ಜೈಲಿನಲ್ಲಿಯೇ ಇರಬೇಕಿದೆ.

ಪಾಕಿಸ್ತಾನ: ಯಾರಿಗೂ ಸಿಗದ ಬಹುಮತ • ಸರ್ಕಾರ ರಚನೆ: ಪಕ್ಷೇತರರಿಗೆ ಷರೀಫ್ ಆಹ್ವಾನ

'ಸಂಯುಕ್ತ ಸರ್ಕಾರ': ಸೇನೆ ಒಲವು

ಫಲಿತಾಂಶ ಪ್ರಕಟಿಸುವುದನ್ನು ವಿಳಂಬ ಮಾಡುವ ಮೂಲಕ ಮತ ಎಣಿಕೆಯಲ್ಲಿ ಹಸ್ತಕ್ಷೇಪಕ್ಕೆ ಅವಕಾಶ ಮಾಡಿಕೊಡಲಾಗುತ್ತಿದೆ ಎಂದು ಆರೋಪಿಸಿ ಪಾಕಿಸ್ತಾನ್ ತೆಹ್ರೀಕ್–ಎ–ಇನ್ಸಾಫ್ ಪಕ್ಷದ ಬೆಂಬಲಿಗರು ಕರಾಚಿಯಲ್ಲಿ ಶನಿವಾರ ಚುನಾವಣಾ ಆಯೋಗದ ಕಚೇರಿ ಎದುರು ಪ್ರತಿಭಟಿಸಿದರು —ಎಎಫ್‌ಪಿ ಚಿತ್ರ

ಇಸ್ಲಾಮಾಬಾದ್ (ಎಎಫ್‌ಪಿ): ಪಾಕಿಸ್ತಾನ ರಾಷ್ಟ್ರೀಯ ಅಸೆಂಬ್ಲಿಯ 255 ಸ್ಥಾನಗಳ ಚುನಾವಣಾ ಫಲಿತಾಂಶ ಪ್ರಕಟವಾಗಿದ್ದು, ಯಾವುದೇ ಪಕ್ಷಗಳಿಗೆ ಸ್ಪಷ್ಟ ಬಹುಮತ ಲಭ್ಯವಾಗದೆ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ. ಆದರೆ, ಸೆರೆವಾಸದಲ್ಲಿರುವ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಬೆಂಬಲಿಗರು ಮುನ್ನಡೆ ಸಾಧಿಸಿದ್ದಾರೆ. ಈ ಬೆನ್ನಲ್ಲೇ ಮೈತ್ರಿ ಸರ್ಕಾರ ರಚನೆ ಸಂಬಂಧ 'ಸಂಸದರ ಖರೀದಿ' ಸಾಧ್ಯತೆಯೂ ದಟ್ಟವಾಗಿದೆ.

ಇಂತಹ ಅನಿಶ್ಚಿತತೆ ಎದುರಾದ ಬೆನ್ನಲ್ಲೇ, 'ಸಂಯುಕ್ತ' ಸರ್ಕಾರ ರಚನೆಗೆ ಪಾಕಿಸ್ತಾನ ಸೇನೆಯ ಮುಖ್ಯಸ್ಥ ಜನರಲ್ ಸೈಯದ್ ಆಸಿಂ ಮುನೀರ್ ಶನಿವಾರ ಕರೆ ನೀಡಿದ್ದಾರೆ.

'ಪಾಕಿಸ್ತಾನದ ಜನರು ಸಂವಿಧಾನದ ಮೇಲೆ ವಿಶ್ವಾಸ ಇಟ್ಟಿದ್ದಾರೆ. ಅವರ ನಂಬಿಕೆಯನ್ನು ಉಳಿಸಿಕೊಳ್ಳಲು ರಾಜಕೀಯ ಪ್ರಬುದ್ಧತೆ ಮತ್ತು ಒಗ್ಗಟ್ಟು ತೋರಲು ಇದು ಸಕಾಲ. ಹೀಗಾಗಿ ಸ್ವ–ಹಿತಾಸಕ್ತಿ ಬಿಟ್ಟು ಯೋಚಿಸಿ' ಎಂದು ಎಲ್ಲ ಪಕ್ಷಗಳ ರಾಜಕೀಯ ನಾಯಕರಿಗೆ ಸಲಹೆ ನೀಡಿದ್ದಾರೆ.

ಸೇನೆ ಬೆಂಬಲಿತ ನವಾಜ್ ಷರೀಫ್ ಅವರು ಒಕ್ಕೂಟ ಸರ್ಕಾರ ರಚನೆಗೆ ಆಹ್ವಾನ ನೀಡಿದ ಬೆನ್ನಲ್ಲೇ ಈ ಹೇಳಿಕೆ ನೀಡಿದ್ದಾರೆ.

'ಪಾಕಿಸ್ತಾನದ ಜನರು ಮುಕ್ತವಾಗಿ ತಮ್ಮ ಹಕ್ಕು ಚಲಾಯಿಸುವ ಮೂಲಕ ಪ್ರಜಾಪ್ರಭುತ್ವ ಮತ್ತು ಕಾನೂನಿನ ರಕ್ಷಣೆಗೆ ಬಗ್ಗೆ ತಮಗಿರುವ ಬದ್ಧತೆಯನ್ನು ತೋರಿಸಿದ್ದಾರೆ. ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಳಗೊಂಡ 'ಸಂಯುಕ್ತ ಸರ್ಕಾರ'ವು ದೇಶದ ವೈವಿಧ್ಯಮಯ ರಾಜಕಾರಣ ಮತ್ತು ಬಹುತ್ವವನ್ನು ಅತ್ಯುತ್ತಮವಾಗಿ ಪ್ರತಿನಿಧಿಸಲಿದೆ' ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ದೇಶಕ್ಕೆ ಅವ್ಯವಸ್ಥಿತ, ಧ್ರುವೀಕೃತ ರಾಜಕಾರಣ ಮುಕ್ತ ವ್ಯವಸ್ಥೆ ಹಾಗೂ ಸ್ಥಿರ ಕೈಗಳ ಅಗತ್ಯವಿದೆ' ಎಂದು ಹೇಳಿಕೆ ಮೂಲಕ ತಿಳಿಸಿದ್ದಾರೆ.

ಫಲಿತಾಂಶ: ಚುನಾವಣಾ ಆಯೋಗ ನೀಡಿರುವ ಸದ್ಯದ ಮಾಹಿತಿ ಪ್ರಕಾರ, ಚುನಾವಣೆ ನಡೆದ 265 ಕ್ಷೇತ್ರಗಳ ಪೈಕಿ, ಮಾಜಿ ಪ್ರಧಾನಿ ಇಮ್ರಾನ್ ಖಾನ್ ಬೆಂಬಲಿತ ಪಕ್ಷೇತರ ಅಭ್ಯರ್ಥಿಗಳು 101 ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದಾರೆ. ಪಾಕಿಸ್ತಾನ್ ಮುಸ್ಲಿಂ ಲೀಗ್–ನವಾಜ್ (ಪಿಎಂಎಲ್–ಎನ್) 73, ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ (ಪಿಪಿಪಿ) 51 ಸ್ಥಾನಗಳಲ್ಲಿ ಗೆದ್ದಿದೆ. ಇತರ ಪಕ್ಷಗಳು ಉಳಿದ ಸ್ಥಾನಗಳಲ್ಲಿ ಜಯ ಸಾಧಿಸಿವೆ.

ಖಾನ್ ನೇತೃತ್ವದ ಪಾಕಿಸ್ತಾನ್ ತೆಹ್ರೀಕ್–ಎ–ಇನ್ಸಾಫ್ (ಪಿಟಿಐ) ಪಕ್ಷ ಹೊಂದಿದ್ದ 'ಕ್ರಿಕೆಟ್ ಬ್ಯಾಟ್' ಚಿಹ್ನೆಯನ್ನು ಚುನಾವಣಾ ಆಯೋಗವು ಹಿಂಪಡೆದಿದ್ದ ಕಾರಣ, ಪಿಟಿಐ ತನ್ನ ಅಭ್ಯರ್ಥಿಗಳನ್ನು ಪಕ್ಷೇತರರಾಗಿ ಕಣಕ್ಕೆ ಇಳಿಸಿತ್ತು.

ಈ ಮಧ್ಯೆ, ಚುನಾವಣೆಯಲ್ಲಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿರುವುದಾಗಿ ಸೇನಾ ಬೆಂಬಲಿತ ಪಿಎಂಎಲ್–ಎನ್ ಹೇಳಿಕೊಂಡಿದೆ. ಮಾಜಿ ಪ್ರಧಾನಿ ನವಾಜ್ ಷರೀಫ್ ಅವರು ಒಕ್ಕೂಟ ಸರ್ಕಾರ ರಚನೆಗಾಗಿ ಪಕ್ಷೇತರರು ಮತ್ತು ಪ್ರತಿಸ್ಪರ್ಧಿಗಳನ್ನು ಆಹ್ವಾನಿಸಿದ್ದಾರೆ. ಹಲವು ಪಕ್ಷಗಳ ನಾಯಕರು ಶುಕ್ರವಾರ ತಡರಾತ್ರಿ ಲಾಹೋರ್‌ನಲ್ಲಿರುವ ಪಿಎಂಎಲ್–ಎನ್ ಮುಖ್ಯ ಕಚೇರಿಗೆ ಮಾತುಕತೆಗೆ ತೆರಳಿದ್ದರು.

'ಸರ್ಕಾರ ರಚನೆಗೆ ಅಗತ್ಯವಿರುವ ಸಂಖ್ಯಾಬಲ ನಮ್ಮಲ್ಲಿ ಇಲ್ಲ. ನಮ್ಮೊಂದಿಗೆ ಕೈಜೋಡಿಸಲು ಇಚ್ಛಿಸುವ ಇತರೆ ಪಕ್ಷಗಳು ಮತ್ತು ಅಭ್ಯರ್ಥಿಗಳನ್ನು ಆಹ್ವಾನಿಸುತ್ತೇವೆ' ಎಂದು ಷರೀಫ್ ಶನಿವಾರವೂ ತಿಳಿಸಿದ್ದಾರೆ.

ಖಾನ್ ಮಾತು: ಎಐ ಆಧಾರಿತ ವಿಡಿಯೊ ಬಿಡುಗಡೆ

ಇಸ್ಲಾಮಾಬಾದ್ (ಪಿಟಿಐ): ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರು ಸಂದೇಶ ನೀಡಿರುವಂತೆ ತೋರುವ ವಿಡಿಯೊ ಮತ್ತು ಆಡಿಯೊವನ್ನು ಕೃತಕ ಬುದ್ಧಿಮತ್ತೆ ಬಳಸಿ ಸಿದ್ಧಪಡಿಸಲಾಗಿದೆ. ಈ ಸಂದೇಶವನ್ನು ಪಿಟಿಐ ಪಕ್ಷ ತನ್ನ ಅಧಿಕೃತ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದೆ.

'ಸಾರ್ವತ್ರಿಕ ಚುನಾವಣೆಯಲ್ಲಿ ನಾವು ಗೆಲುವು ಸಾಧಿಸಿದ್ದೇವೆ' ಹಾಗೂ 'ನವಾಜ್ ಷರೀಫ್ ಅವರು ಒಬ್ಬ ಅಪ್ರಬುದ್ಧ ವ್ಯಕ್ತಿ' ಎಂಬುದಾಗಿ ಇಮ್ರಾನ್ ಖಾನ್ ಟೀಕಿಸಿರುವಂತೆ ಈ ಸಂದೇಶ ರೂಪಿಸಲಾಗಿದೆ.

ಪಿಎಂಎಲ್–ಎನ್ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ ಎಂಬುದಾಗಿ ಷರೀಫ್ ಅವರು ಹೇಳಿಕೆ ನೀಡಿರುವುದಕ್ಕೆ ಇಮ್ರಾನ್ ಖಾನ್ ಆಕ್ಷೇಪ ವ್ಯಕ್ತಪಡಿಸಿ, ನೀಡಿರುವ ಹೇಳಿಕೆಯನ್ನು ಸಂದೇಶ ಒಳಗೊಂಡಿದೆ.

ಅಮೆರಿಕ: ಹಲ್ಲೆಗೆ ಒಳಗಾಗಿದ್ದ ಭಾರತದ ಟೆಕ್ಕಿ ಸಾವು

ವಾಷಿಂಗ್ಟನ್ (ಪಿಟಿಐ): ತೀವ್ರವಾಗಿ ಹಲ್ಲೆಗೊಳಗಾಗಿ ಗಾಯಗೊಂಡಿದ್ದ ಭಾರತೀಯ ಮೂಲದ ಟೆಕ್ಕಿ ವಿವೇಕ್ ತನೇಜಾ ಅವರು ಸಾವನ್ನಪ್ಪಿದ್ದಾರೆ.

'ಫೆ. 2 ರಂದು ಇಲ್ಲಿನ ರೆಸ್ಟೋರೆಂಟ್‌ವೊಂದರ ಬಳಿ ವಿವೇಕ್ ಮೇಲೆ ಹಲ್ಲೆ ನಡೆದಿದ್ದು, ಗಂಭೀರವಾಗಿ ಗಾಯಗೊಂಡು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ವಿವೇಕ್ ಅವರು ಫೆ. 7 ರಂದು ಸಾವನ್ನಪ್ಪಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ವಿವೇಕ್ ಅವರು ಅಮೆರಿಕ ಸರ್ಕಾರಕ್ಕೆ ತಂತ್ರಜ್ಞಾನ ಆಧಾರಿತ ಸೇವೆಗಳನ್ನು ಒದಗಿಸುವ ಡೈನಮೊ ಟೆಕ್ನಾಲಜೀಸ್‌ನ ಸಹಸಂಸ್ಥಾಪಕ ಮತ್ತು ಅಧ್ಯಕ್ಷರಾಗಿದ್ದರು.

ಇತ್ತೀಚಿನ ತಿಂಗಳಲ್ಲಿ ವಿವೇಕ್ ಸೇರಿದಂತೆ ಭಾರತೀಯ ಮೂಲದ ಏಳು ಜನ ಅಮೆರಿಕದಲ್ಲಿ ಹಲ್ಲೆ ಅಥವಾ ದಾಳಿಗೊಳಗಾಗಿ ಸಾವನ್ನಪ್ಪಿದ್ದಾರೆ.

ಉಕ್ರೇನ್: ಡ್ರೋನ್ ದಾಳಿ– 7 ಸಾವು

ಕೀವ್ (ಎಪಿ): ಉಕ್ರೇನ್‌ನ ಎರಡನೇ ಅತಿದೊಡ್ಡ ನಗರವಾದ ಹಾರ್ಕಿವ್ ಮೇಲೆ ರಷ್ಯಾ ಡ್ರೋನ್ ದಾಳಿ ನಡೆಸಿದ್ದು, ಮೂವರು ಮಕ್ಕಳು ಸೇರಿದಂತೆ ಕನಿಷ್ಠ 7 ಜನರು ಮೃತಪಟ್ಟಿದ್ದಾರೆ ಎಂದು ಹಾರ್ಕಿವ್‌ನ ಗವರ್ನರ್ ಒಲೆಹ್ ಸಿನಿಹುಬೊವ್ ಶನಿವಾರ ತಿಳಿಸಿದ್ದಾರೆ.

ನಗರದ ನೆಮಿಶ್ಲಿಯನ್ ಜನವಸತಿ ಪ್ರದೇಶದ ಮೇಲೆ ಇರಾನ್ ನಿರ್ಮಿತ ಶಾಹಿದ್ ಡ್ರೋನ್ ಅಪ್ಪಳಿಸಿತು. ಇದರಿಂದ 15 ಮನೆಗಳು ಸುಟ್ಟು ಹೋಗಿವೆ ಎಂದು ಹೇಳಿದ್ದಾರೆ.

'50ಕ್ಕೂ ಹೆಚ್ಚು ಜನರನ್ನು ಸ್ಥಳಾಂತರಿಸಲಾಗಿದೆ' ಎಂದು ಆಂತರಿಕ ಸಚಿವ ಇಹೋರ್ ಕ್ಲೈಮೆಂಕೊ ತಿಳಿಸಿದ್ದಾರೆ.

'ಈಶಾನ್ಯ ಹಾರ್ಕಿವ್ ಹಾಗೂ ದಕ್ಷಿಣ ಪ್ರಾಂತ್ಯದ ಒಡೆಸಾವನ್ನು ಗುರಿಯಾಗಿಸಿಕೊಂಡು ರಷ್ಯಾ ರಾತ್ರೋರಾತ್ರಿ ಇರಾನ್ ನಿರ್ಮಿತ 31 ಶಾಹಿದ್ ಡ್ರೋನ್‌ಗಳನ್ನು ಉಡಾಯಿಸಿತು. ಇವುಗಳ ಪೈಕಿ 23 ಡ್ರೋನ್‌ಗಳನ್ನು ನಾಶಪಡಿಸಲಾಗಿದೆ' ಎಂದು ಉಕ್ರೇನ್ ವಾಯುಪಡೆ ಪ್ರಕಟಣೆಯಲ್ಲಿ ತಿಳಿಸಿದೆ.

ಇಸ್ರೇಲ್ ದಾಳಿ: 31 ಸಾವು

ರಫಾ (ಗಾಜಾ ಪಟ್ಟಿ, ಎಪಿ): ರಫಾ ನಗರದ ಮೇಲೆ ಶನಿವಾರ ನಸುಕಿನಲ್ಲಿ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ 31 ಪ್ಯಾಲೆಸ್ಟೀನಿಯನ್ನರು ಮೃತಪಟ್ಟಿದ್ದಾರೆ.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ದಾಳಿಗೆ ಮುನ್ನ ದಕ್ಷಿಣ ಗಾಜಾ ನಗರದಿಂದ ನಾಗರಿಕರನ್ನು ಸ್ಥಳಾಂತರಿಸುವಂತೆ ಸೇನೆಗೆ ಸೂಚಿಸಿದ್ದರು. ನಂತರ ವೈಮಾನಿಕ ದಾಳಿ ನಡೆದಿದೆ.

ನೆತನ್ಯಾಹು ಅವರು ದಾಳಿಯ ಬಗ್ಗೆ ಹೇಳಿಕೆ ನೀಡಿದ್ದರಿಂದ ದಕ್ಷಿಣ ಗಾಜಾದಲ್ಲಿ ಭೀತಿ ಆವರಿಸಿತ್ತು. ಗಾಜಾದ 23 ಲಕ್ಷ ಜನರಲ್ಲಿ ಅರ್ಧಕ್ಕೂ ಹೆಚ್ಚು ಮಂದಿ ಈಗ ರಫಾ ನಗರದಲ್ಲಿದ್ದಾರೆ.

ಇಸ್ರೇಲ್ ಪದೇ ಪದೇ ಸ್ಥಳಾಂತರದ ಆದೇಶ, ಸೂಚನೆ ನೀಡುತ್ತಿದ್ದು, ಇದರಿಂದ ಬಹುತೇಕರಿಗೆ ಎಲ್ಲಿಗೆ ಹೋಗಬೇಕು ಎಂಬುದೇ ತಿಳಿಯದಾಗಿದೆ ಎಂದು ಮೂಲಗಳು ಹೇಳಿವೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (KSOU)

ಮುಕ್ತಗಂಗೋತ್ರಿ, ಮೈಸೂರು – 570006, ಕರ್ನಾಟಕ.

ಕಚೇರಿ ದೂರವಾಣಿ ಸಂಖ್ಯೆ: 0821-2500981, 2519941 / 43 / 48 / 52, ಸಹಾಯವಾಣಿ: 88003 35638 / 86905 44544.

ಇ–ಮೇಲ್: techsupport@ksouportal.com, ಅಂತರ್ಜಾಲ : www.ksoumysuru.ac.in

ACCREDITED WITH GRADE A+ NAAC — KARNATAKA STATE OPEN UNIVERSITY

ಅಧಿಸೂಚನೆ ಸಂಖ್ಯೆ : ಕರಾಮುವಿ/ಪ್ರವಿ/ಎಡಿಎಂ–1/119/2023–24 ದಿನಾಂಕ: 20–01–2024

ನಿಮ್ಮ ಮನೆಯೇ 'ನಿರಂತರ' ಪಾಠ ಶಾಲೆ ಯು.ಜಿ.ಸಿ. ಮಾನ್ಯತೆ ಹೊಂದಿದ ಶಿಕ್ಷಣಕ್ರಮಗಳ ಅಧ್ಯಯನ ಅವಕಾಶವನ್ನು ಕ.ರಾ.ಮು.ವಿ. ಮೂಲಕ ಪಡೆಯಿರಿ

2023–24 ರ ಜನವರಿ ಆವೃತ್ತಿಗೆ ಪ್ರಥಮ ವರ್ಷದ ಒಡಿಎಲ್ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸ್ನಾತಕ (ಯುಜಿ) ಶಿಕ್ಷಣ ಕಾರ್ಯಕ್ರಮಗಳು

- ಬಿ.ಎ. • ಬಿ.ಕಾಂ.
- ಬಿ.ಎಲ್‌ಐ.ಎಸ್‌ಸಿ.
- ಬಿ.ಬಿ.ಎ.
- ಬಿ.ಎಸ್.ಡಬ್ಲ್ಯೂ
- ಬಿ.ಇಡಿ.
- ಬಿ.ಎಸ್‌ಸಿ (ಸಂಯೋಜನೆಗಳು)
(• PCM • PMCs • BcBZ • CBZ • BcBMi • BcMiFs • CBMi • CZEs • BcZEs • BcMiEs • BcBEs • CBEs • CMiEs)
[• P-Physics • C-Chemistry • M-Mathematics • Cs-Computer Science • B-Botany • Mi-Microbiology • Bc-Biochemistry • Z-Zoology • Es-Environmental Science • Fs-Food Science & Nutrition]
- ಬಿ.ಎಸ್‌ಸಿ – ಇನ್‌ಫರ್‌ಮೇಷನ್ ಟೆಕ್ನಾಲಜಿ (ಬಿ.ಎಸ್‌ಸಿ–ಐಟಿ)
- ಬಿ.ಸಿ.ಎ. – ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ಸ್

ಸ್ನಾತಕೋತ್ತರ (ಪಿಜಿ) ಶಿಕ್ಷಣ ಕಾರ್ಯಕ್ರಮಗಳು:

- ಎಂ.ಎ.
• ಕನ್ನಡ • ಇಂಗ್ಲಿಷ್ • ಸಂಸ್ಕೃತ • ಉರ್ದು • ಹಿಂದಿ • ತೆಲುಗು • ಶಿಕ್ಷಣ • ಇತಿಹಾಸ • ರಾಜ್ಯಶಾಸ್ತ್ರ • ಅರ್ಥಶಾಸ್ತ್ರ • ಸಾರ್ವಜನಿಕ ಆಡಳಿತ • ಸಮಾಜಶಾಸ್ತ್ರ • ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ • ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ
- ಎಂ.ಎಸ್.ಡಬ್ಲ್ಯೂ
- ಎಂ.ಬಿ.ಎ. – ಆನ್‌ಲೈನ್ ಪ್ರವೇಶ ಪರೀಕ್ಷೆಮೂಲಕ
ಸ್ಪೆಷಲೈಜೇಷನ್: • ಫೈನಾನ್ಸ್ • ಮಾರ್ಕೆಟಿಂಗ್ • ಹೆಚ್‌ಆರ್ • ಆಪರೇಷನ್ಸ್ • ಟೂರಿಸಂ • ಕಾರ್ಪೊರೇಟ್ ಲಾ • ಇನ್‌ಫರ್‌ಮೇಷನ್ ಟೆಕ್ನಾಲಜಿ • ಆಸ್ಪತ್ರೆ ಮತ್ತು ಆರೋಗ್ಯ ಕಾಳಜಿ ನಿರ್ವಹಣೆ.
- ಎಂ.ಕಾಂ.
ಡ್ಯುಯೆಲ್ ಸ್ಪೆಷಲೈಜೇಷನ್: • ಅಕೌಂಟಿಂಗ್ ಮತ್ತು ಫೈನಾನ್ಸ್/ಹೆಚ್‌ಆರ್‌ಎಂ • ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ ಮತ್ತು ಹೆಚ್‌ಆರ್‌ಎಂ/ಫೈನಾನ್ಸ್
- ಎಂ.ಸಿ.ಎ.
- ಎಂ.ಎಲ್‌ಐ.ಎಸ್‌ಸಿ.
- ಎಂ.ಎಸ್‌ಸಿ.
• ಭೌತಶಾಸ್ತ್ರ • ರಸಾಯನ ಶಾಸ್ತ್ರ • ಗಣಿತ ಶಾಸ್ತ್ರ • ಬಯೋಕೆಮಿಸ್ಟ್ರಿ • ಬಯೋಟೆಕ್ನಾಲಜಿ • ಕ್ಲಿನಿಕಲ್ ನ್ಯೂಟ್ರಿಷನ್ & ಡಯಟೆಟಿಕ್ಸ್ • ಪರಿಸರ ವಿಜ್ಞಾನ • ಭೂಗೋಳ ಶಾಸ್ತ್ರ • ಮೈಕ್ರೋ ಬಯಾಲಜಿ • ಮನಃಶಾಸ್ತ್ರ • ಸಸ್ಯಶಾಸ್ತ್ರ • ಪ್ರಾಣಿಶಾಸ್ತ್ರ • ಫುಡ್ & ನ್ಯೂಟ್ರಿಷನ್ ಸೈನ್ಸ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಸೈನ್ಸ್ • ಡಾಟಾ ಸೈನ್ಸ್

ಪಿಜಿ ಸರ್ಟಿಫಿಕೇಟ್ ಕಾರ್ಯಕ್ರಮಗಳು–(ಪದವಿ ಆಧಾರಿತ) (ಒಂದು ವರ್ಷ)

• ಇಂಗ್ಲಿಷ್ • ಕಮ್ಯುನಿಕೇಟಿವ್ ಇಂಗ್ಲಿಷ್ • ಪತ್ರಿಕೋದ್ಯಮ & ಸಮೂಹ ಸಂವಹನ • ಕುವೆಂಪು ಸಾಹಿತ್ಯ • ಹಣಕಾಸು ನಿರ್ವಹಣೆ • ಮಾನವ ಸಂಪನ್ಮೂಲ ನಿರ್ವಹಣೆ • ಬಿಸಿನೆಸ್ ಲಾ • ಬಿಸಿನೆಸ್ ಅಡ್ಮಿನಿಸ್ಟ್ರೇಷನ್ • ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ • ಅಂಬೇಡ್ಕರ್ ಅಧ್ಯಯನಗಳು • ನ್ಯೂಟ್ರಿಷನ್ & ಡಯಟೆಟಿಕ್ಸ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಅಪ್ಲಿಕೇಷನ್ಸ್.

ಡಿಪ್ಲೋಮ ಶಿಕ್ಷಣ ಕಾರ್ಯಕ್ರಮಗಳು–(10+2 ಆಧಾರಿತ) (ಒಂದು ವರ್ಷ)

• ಕನ್ನಡ • ಪತ್ರಿಕೋದ್ಯಮ • ನ್ಯೂಟ್ರಿಷನ್ & ಹೆಲ್ತ್ ಎಜುಕೇಷನ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಅಪ್ಲಿಕೇಷನ್ಸ್ • ಅರ್ಲಿ ಚೈಲ್ಡ್‌ಹುಡ್ ಕೇರ್ ಅಂಡ್ ಎಜುಕೇಷನ್ • ಭಾಷಾಂತರ ಅಧ್ಯಯನ

ಸರ್ಟಿಫಿಕೇಟ್ ಶಿಕ್ಷಣ ಕಾರ್ಯಕ್ರಮಗಳು (ಆರು ತಿಂಗಳು)

• ಪಂಚಾಯತ್ ರಾಜ್ • ನ್ಯೂಟ್ರಿಷನ್ & ಫುಡ್ • ಮಾಹಿತಿ ಸಂವಹನ ತಂತ್ರಜ್ಞಾನ (ಐಸಿಟಿ) • ಭಾಷಾಂತರ ಅಧ್ಯಯನ

ONLINE PROGRAMS • B.A. • B.Com
• M.A. ♦ Kannada ♦ Hindi ♦ Sanskrit ♦ Economics ♦ English
• M.Com • M.B.A. • M.Sc Mathematics

ಉನ್ನತ ಶಿಕ್ಷಣ ಎಲ್ಲರಿಗೂ, ಎಲ್ಲೆಡೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು NAAC A+ ಮಾನ್ಯತೆ ಪಡೆದಿದೆ, UGC-DEB ಪತ್ರ ಸಂಖ್ಯೆ. F.No.39-2/2023 (DEB-1) ದಿನಾಂಕ: 17–08–2023, F.No.30-30/2023 (DEBIII) ದಿನಾಂಕ: 11–09–2023, ಮತ್ತು ಕರ್ನಾಟಕ ರಾಜ್ಯದಲ್ಲಿ ಅಧಿಕಾರ ಹೊಂದಿರುವ ಏಕೈಕ ಸಾರ್ವಜನಿಕ ವಿಶ್ವವಿದ್ಯಾಲಯವಾಗಿದ್ದು, ಉನ್ನತ ಶಿಕ್ಷಣ ಕಾರ್ಯಕ್ರಮಗಳನ್ನು ದೂರ ಶಿಕ್ಷಣ (ಒ.ಡಿ.ಎಲ್) ಪದ್ಧತಿಯಲ್ಲಿ. AICTE ಮೂಲಕ ಅನುಮೋದಿಸಿದೆ ಎಂಬಿಎ/ಎಂಸಿಎ/ಎಂಎಸ್‌ಸಿ ಡೇಟಾ ಸೈನ್ಸ್ ಪ್ರೋಗ್ರಾಂಗಳು ಅಧಿಸೂಚನೆ ಸಂಖ್ಯೆ: F.No.: ದಕ್ಷಿಣ: ಪಶ್ಚಿಮ/2023–24/ 1–43337817229, ದಿನಾಂಕ: 10.06.2023, ಅಡಿಯಲ್ಲಿ ಒದಗಿಸುತ್ತಿದೆ.

ವಿಶ್ವವಿದ್ಯಾನಿಲಯವು ಕೆಳಕಂಡ ವಿಶೇಷತೆಗಳನ್ನು ಹೊಂದಿರುತ್ತದೆ :

- ವಿಶಾಲ ಅತ್ಯಾಧುನಿಕ ಹಾಗೂ ಹಸಿರುಮಯ ಕ್ಯಾಂಪಸ್
- ಆಧುನಿಕ ಐಸಿಟಿ ತಂತ್ರಜ್ಞಾನ ಬೆಂಬಲಿತ ಬೋಧನಾ ಸೌಲಭ್ಯಗಳು
- ಅನುಭವಿ ಹಾಗೂ ನುರಿತ ಬೋಧನಾ ಸಿಬ್ಬಂದಿ
- ಸುಸಜ್ಜಿತ ಪ್ರಯೋಗಾಲಯಗಳು
- ಸುಸಜ್ಜಿತ ಗ್ರಂಥಾಲಯ ಹಾಗೂ ಇಂಟರ್ನೆಟ್ ಸೌಲಭ್ಯಗಳು
- ಪ್ರಾದೇಶಿಕ ಕೇಂದ್ರಗಳು ಹಾಗೂ ಕಲಿಕಾರ್ಥಿ ಸಹಾಯ (ಲರ್ನರ್ ಸಪೋರ್ಟ್ ಸೆಂಟರ್) ಕೇಂದ್ರಗಳನ್ನೊಳಗೊಂಡ ಸೇವಾ ವ್ಯವಸ್ಥೆ
- ಗುಣಮಟ್ಟದ ಸ್ವಯಂ ಕಲಿಕಾ ಸಾಮಗ್ರಿಗಳು (ಎಸ್.ಎಲ್.ಎಮ್)
- ವೃತ್ತಿ ಸಂಬಂಧಿತ ಸಲಹೆ ಹಾಗೂ ನೇಮಕಾತಿಯಲ್ಲಿ ನೆರವು

ಪ್ರವೇಶಾತಿ (ಎನ್‌ರೋಲ್ಮೆಂಟ್) ಮಾಹಿತಿ ಹಾಗೂ ವಿಧಾನ

1. ಅರ್ಹತೆಯ ಮಾನದಂಡ ಹಾಗೂ ಶುಲ್ಕದ ವಿವರಗಳನ್ನು ವಿವರಣಾ ಪುಸ್ತಕ (ಪ್ರಾಸ್ಪೆಕ್ಟಸ್) ದಲ್ಲಿ ನಮೂದಿಸಲಾಗಿದೆ. ಅಭ್ಯರ್ಥಿಗಳು ಸಂಬಂಧಿತ ಕಾರ್ಯಕ್ರಮಗಳ ಪ್ರಾಸ್ಪೆಕ್ಟಸ್‌ನ್ನು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು / ಡೌನ್‌ಲೋಡ್ ಮಾಡಿಕೊಳ್ಳಬಹುದು. ಅಭ್ಯರ್ಥಿಗಳು, **ಮೈಸೂರಿನಲ್ಲಿರುವ ಕರಾಮುವಿಯ ಕೇಂದ್ರ ಕಚೇರಿಯಲ್ಲಿ ನೇರವಾಗಿ / ಆನ್‌ಲೈನ್ ಮುಖಾಂತರ, ಅಥವಾ ತಮ್ಮ ಆಯ್ಕೆಯ ಸಮೀಪದ ಪ್ರಾದೇಶಿಕ ಕೇಂದ್ರಗಳಲ್ಲಿ ಮಾತ್ರವೇ ಖುದ್ದಾಗಿ ಪ್ರವೇಶಾತಿಯನ್ನು ಪಡೆಯುವುದು.** ಆನ್‌ಲೈನ್ ಪ್ರವೇಶ ಅರ್ಜಿ ಫಾರಂನ್ನು ಭರ್ತಿ ಮಾಡಲು **KSOU Online Admission Portal** ಗೆ ಭೇಟಿ ನೀಡಿ. ಪ್ರವೇಶಾತಿ ಹಾಗೂ ಇನ್ನಿತರ ಮಾಹಿತಿಗಾಗಿ ಅರ್ಜಿದಾರರು ಕರಾಮುವಿಯ ಅಧಿಕೃತ ವೆಬ್‌ಸೈಟ್: **www.ksoumysuru.ac.in** ನ್ನು ವೀಕ್ಷಿಸುವುದು. ಪ್ರವೇಶಪೂರ್ವ ಸಮಾಲೋಚನೆಗೆ ಮಾತ್ರ ಅರ್ಜಿದಾರರು ತಮ್ಮ ವ್ಯಾಪ್ತಿಯಲ್ಲಿ ಬರುವ ಕರಾಮುವಿಯ ಯಾವುದೇ ಕಲಿಕಾರ್ಥಿ ಸಹಾಯ ಕೇಂದ್ರವನ್ನು ಸಂಪರ್ಕಿಸಬಹುದು.
   - ಪ್ರವೇಶ ಶುಲ್ಕವನ್ನು ಆನ್‌ಲೈನ್ ವಿಧಾನದ ಮೂಲಕ ಮಾತ್ರ ಪಾವತಿಸತಕ್ಕದ್ದು.
   - ಅಭ್ಯರ್ಥಿಗಳು ಗುರುತಿನ ಚೀಟಿಗಳು ಹಾಗೂ ಲಭ್ಯ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಮೈಸೂರಿನಲ್ಲಿರುವ ಕರಾಮುವಿಯ ಆಡಳಿತ ಕಛೇರಿಯಿಂದ ಅಥವಾ ತಮ್ಮ ಆಯ್ಕೆಯ ಪ್ರಾದೇಶಿಕ ಕೇಂದ್ರದಿಂದ ಪಡೆಯಬಹುದು.
2. ಪ.ಜಾ./ಪ.ಪ. ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ನಿಗದಿತ ಶುಲ್ಕವನ್ನು ಪಾವತಿಸಿ ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕ ಮರುಭರಿಕೆ ಮಾಡಿಕೊಳ್ಳುವ ಷರತ್ತಿಗೆ ಒಳಪಟ್ಟು ಶುಲ್ಕ ವಿನಾಯಿತಿ ಯೋಜನೆಯಡಿ ಪ್ರವೇಶಾತಿ ಪಡೆಯಬಹುದಾಗಿದೆ. ಪ್ರವೇಶಾತಿಯು ವಿ.ವಿ.ಯ ಸ್ಕಾಲರ್‌ಷಿಪ್ ಘಟಕವು ವಿಧಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
3. ಓಬಿಸಿ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಪೂರ್ಣ ಶುಲ್ಕವನ್ನು ಪಾವತಿಸಿ ಪ್ರವೇಶಾತಿ ಪಡೆದು, ನಂತರ ಸ್ಟೇಟ್ ಸ್ಕಾಲರ್‌ಷಿಪ್ ಪೋರ್ಟಲ್ (SSP) ಮುಖಾಂತರ ಸಮಾಜ ಕಲ್ಯಾಣ ಇಲಾಖೆಯಿಂದ ಶುಲ್ಕವನ್ನು ಮರುಭರಿಕೆ ಮಾಡಿಕೊಳ್ಳಬಹುದು.
   - ಬಿಪಿಎಲ್ ಕಾರ್ಡ್ ಹೊಂದಿರುವ ಮಹಿಳಾ ವಿದ್ಯಾರ್ಥಿಗಳು ಬೋಧನಾ ಶುಲ್ಕದಲ್ಲಿ ಶೇಕಡ 15%ರಷ್ಟು ರಿಯಾಯಿತಿಯನ್ನು ಪಡೆಯಬಹುದು.
   - ಮಿಲಿಟರಿ ಸೇವೆಯಲ್ಲಿರುವ / ಮಾಜಿ ಸೈನಿಕ ವಿದ್ಯಾರ್ಥಿಗಳು ಬೋಧನಾ ಶುಲ್ಕದಲ್ಲಿ ಶೇಕಡ 15%ರಷ್ಟು ರಿಯಾಯಿತಿಯನ್ನು ಪಡೆಯಬಹುದು.
   - ತೃತೀಯ ಲಿಂಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ ಇರುತ್ತದೆ.
   - ಕೋವಿಡ್–19 ಖಾಯಿಲೆಯಿಂದ ಮೃತಪಟ್ಟ ತಂದೆ / ತಾಯಿಯ ಮಕ್ಕಳಿಗೆ ಸಂಬಂಧಪಟ್ಟ ಇಲಾಖೆಯಿಂದ ಅಗತ್ಯ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಷರತ್ತಿಗೊಳಪಟ್ಟು ಪೂರ್ಣ ಶುಲ್ಕ ವಿನಾಯಿತಿ ಇರುತ್ತದೆ.
   - ಸರ್ಕಾರವು ಅಗಿಂದ್ದಾಗ್ಗೆ ನಿಗದಿಪಡಿಸಿರುವ ಹಾಗೂ ಚಾಲ್ತಿಯಲ್ಲಿರುವ ಆದೇಶಗಳನ್ವಯ ದೃಷ್ಟಿ ದೋಷವುಳ್ಳ ಅಭ್ಯರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ ಇರುತ್ತದೆ (ಬಿ.ಎಡ್. ಮತ್ತು ಎಂ.ಬಿ.ಎ. ಹೊರತುಪಡಿಸಿ).
   - **ಆಟೋ/ಕ್ಯಾಬ್ ಚಾಲಕರು ಮತ್ತು ಅವರ ಪತ್ನಿ/ಮಕ್ಕಳಿಗೆ ಯುಜಿ ಮತ್ತು ಪಿಜಿ ಪದವಿ ಶಿಕ್ಷಣ ಕ್ರಮಗಳಿಗೆ ಬೋಧನಾ ಶುಲ್ಕದಲ್ಲಿ ಶೇಕಡ 25% ರಷ್ಟು ರಿಯಾಯಿತಿ ಇರುತ್ತದೆ.**
   - **ಕೆಎಸ್‌ಆರ್‌ಟಿಸಿ/ಬಿಎಂಟಿಸಿ/ಎನ್‌ಡಬ್ಲ್ಯೂಕೆಆರ್‌ಟಿಸಿ/ಕೆಕೆಆರ್‌ಟಿಸಿಯಲ್ಲಿನ ನೌಕರರುಗಳಿಗೆ ಯುಜಿ ಮತ್ತು ಪಿಜಿ ಪದವಿ ಶಿಕ್ಷಣ ಕ್ರಮಗಳಿಗೆ ಬೋಧನಾ ಶುಲ್ಕದಲ್ಲಿ ಶೇಕಡ 25% ರಷ್ಟು ರಿಯಾಯಿತಿ ಇರುತ್ತದೆ.**
4. ಅಧಿಕೃತ ಕಲಿಕಾರ್ಥಿ ಸಹಾಯ ಕೇಂದ್ರಗಳ ವಿವರಗಳು ವಿವಿಯ ಅಂತರ್‌ಜಾಲದಲ್ಲಿ ಲಭ್ಯವಿದ್ದು ಸಮಾಲೋಚನೆಗೆ ಸಂಪರ್ಕಿಸಬಹುದಾಗಿದೆ
   - ಐಟಿಐ ವಿದ್ಯಾರ್ಹತೆ ಹೊಂದಿರುವವರಿಗೆ ಅಪ್ರೆಂಟಿಸ್‌ಶಿಪ್ ಹಾಗೂ ಸ್ಟೈಫೆಂಡ್ ಅವಕಾಶಗಳಿರುತ್ತವೆ.

ಕರಾಮುವಿ ಪ್ರಾದೇಶಿಕ ಕೇಂದ್ರಗಳು

1. **ಮೈಸೂರು (ಕೇಂದ್ರ ಕಚೇರಿ) :** ಪ್ರವೇಶಾತಿ ವಿಭಾಗ, ಕರಾಮುವಿ, ಮುಕ್ತಗಂಗೋತ್ರಿ, ಮೈಸೂರು–570 006, ದೂ (ಕ): 0821–2500981, ಮೊಬೈಲ್: 77950 77377/99012 23043/ 9964 274173/96114 18726/98440 10407.
2. **ಬೆಂಗಳೂರು–1 ಪ್ರಾದೇಶಿಕ ಕೇಂದ್ರ :** ಸ್ಯಾಟಲೈಟ್ ಬಸ್ ನಿಲ್ದಾಣ ಕಟ್ಟಡ, 1ನೇ ಮಹಡಿ, ಮೈಸೂರು ರಸ್ತೆ, ಬಾಪೂಜಿನಗರ, ಬೆಂಗಳೂರು–560 026. ದೂ: 080–26603664, ಮೊಬೈಲ್: 9844965515/ 9844126625.
3. **ಬೆಂಗಳೂರು–2 ಪ್ರಾದೇಶಿಕ ಕೇಂದ್ರ :** ಕರಾಮುವಿ ಮಹಿಳಾ ಪ್ರಾದೇಶಿಕ ಕೇಂದ್ರ, ಸರ್ಕಾರಿ ಬಾಲಕಿಯರ ಪಿ.ಯು. ಕಾಲೇಜ್, 4ನೇ ಮೇನ್, 13ನೇ ಕ್ರಾಸ್, ಬೆಸ್ಕಾಂ ಕಚೇರಿ ಹತ್ತಿರ, ಮಲ್ಲೇಶ್ವರಂ, ಬೆಂಗಳೂರು–560 003. ದೂ: 080–23448811, ಮೊಬೈಲ್ : 97411 97921.
4. **ಬೆಂಗಳೂರು–3 ಪ್ರಾದೇಶಿಕ ಕೇಂದ್ರ :** ಆದಿತ್ಯ ಶಿಕ್ಷಣ ಸಂಸ್ಥೆ, ನಂ.12, ಕೋಗಿಲು ಮುಖ್ಯ ರಸ್ತೆ, ಅನ್ನಪೂರ್ಣೇಶ್ವರಿ ದೇವಸ್ಥಾನದ ಹಿಂಭಾಗ, ಮಾರುತಿನಗರ, ಯಲಹಂಕ, ಬೆಂಗಳೂರು–560 064, ಮೊಬೈಲ್: 98805 26439/90195 26439.
5. **ಬೆಂಗಳೂರು–4 ಪ್ರಾದೇಶಿಕ ಕೇಂದ್ರ:** ನಂ.121, 2ನೇ ಮಹಡಿ, ಮಡಿವಾಳ, ಮಡಿವಾಳ ಸಂಚಾರಿ ಪೊಲೀಸ್ ಸ್ಟೇಷನ್ ಹಿಂಭಾಗ, ಹ್ಯಾಪಿಯೆಸ್ಟ್ ಮೈಂಡ್ ಹತ್ತಿರ, ಹೊಸೂರು ಮುಖ್ಯ ರಸ್ತೆ, ಬೆಂಗಳೂರು–560 068. ಮೊಬೈಲ್ : 8618821417/98445 56968.
6. **ಬೆಂಗಳೂರು–5 ಪ್ರಾದೇಶಿಕ ಕೇಂದ್ರ:** ಸರಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್. ಪುರಂ, ಬೆಂಗಳೂರು–560 036. ಮೊಬೈಲ್: 87227 88788.
7. **ಬೆಂಗಳೂರು–6 ಪ್ರಾದೇಶಿಕ ಕೇಂದ್ರ:** ಶ್ರೀ ಲಕ್ಷ್ಮೀ ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸ್, ನಂ.4 ಮತ್ತು 5, ಶ್ರೀ ಗಂಧಕಾವಲ್, ಮಾಗಡಿ ಮುಖ್ಯ ರಸ್ತೆ, ಸುಂಕದಕಟ್ಟೆ, ಬೆಂಗಳೂರು–560 091. ಮೊಬೈಲ್: 94486 68880.
8. **ಬೆಳಗಾಂ ಪ್ರಾದೇಶಿಕ ಕೇಂದ್ರ :** ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಶಿಕ್ಷಣ ಮಹಾವಿದ್ಯಾಲಯ ಆವರಣ, ನೆಹರು ನಗರ, ಬೆಳಗಾಂ–590 010. ಮೊಬೈಲ್: 96634 51169.
9. **ಬಳ್ಳಾರಿ ಪ್ರಾದೇಶಿಕ ಕೇಂದ್ರ :** ಪ್ರಾದೇಶಿಕ ವಿಜ್ಞಾನ ಕೇಂದ್ರದ ಹಿಂಭಾಗ, ಜಿಲ್ಲಾ ಕ್ರೀಡಾಂಗಣದ ಹತ್ತಿರ, ನಲ್ಲಚೆರವು ಪ್ರದೇಶ, ಬಳ್ಳಾರಿ–583 102. ಮೊಬೈಲ್: 9035143912/7892597159.
10. **ಚಾಮರಾಜನಗರ ಪ್ರಾದೇಶಿಕ ಕೇಂದ್ರ :** ಕೆ.ಹೆಚ್.ಬಿ. ಕಾಲೋನಿ, ರಾಮಸಮುದ್ರ ಲೇಔಟ್, ಇಮ್ಮಾನುಯೆಲ್ ಕ್ರಿಶ್ಚಿಯನ್ ಸ್ಕೂಲ್ ಹತ್ತಿರ, ಚಾಮರಾಜನಗರ–571342, ಮೊಬೈಲ್: 90085 40090.
11. **ಚಿಕ್ಕಮಗಳೂರು ಪ್ರಾದೇಶಿಕ ಕೇಂದ್ರ :** ಸಾಯಿಮಂದಿರ ರಸ್ತೆ, ಮಧುವನ ಬಡಾವಣೆ, ಚಿಕ್ಕಮಗಳೂರು–577 102, ಮೊಬೈಲ್: 80887 16236.
12. **ದಾವಣಗೆರೆ ಪ್ರಾದೇಶಿಕ ಕೇಂದ್ರ :** ಜೆ. ಹೆಚ್. ಪಟೇಲ್ ಬಡಾವಣೆ, ಶಾಮನೂರು ಹಿಂಭಾಗ, ನಾಗನೂರು ರಸ್ತೆ, ದಾವಣಗೆರೆ–577 004, ಮೊಬೈಲ್: 99864 58055.
13. **ಧಾರವಾಡ ಪ್ರಾದೇಶಿಕ ಕೇಂದ್ರ :** ಕರ್ನಾಟಕ ಯುನಿವರ್ಸಿಟಿ ಪಬ್ಲಿಕ್ ಸ್ಕೂಲ್ ಕ್ಯಾಂಪಸ್, ಕೆ.ಸಿ.ಡಿ. ರಸ್ತೆ, ಎಲ್.ಐ.ಸಿ. ಕಚೇರಿ ಎದುರು, ಧಾರವಾಡ–580008. ದೂ: 0836–2441199, ಮೊಬೈಲ್: 99168 94944.
14. **ಹಾಸನ ಪ್ರಾದೇಶಿಕ ಕೇಂದ್ರ :** ಎಸ್. ಎಂ. ಕೃಷ್ಣ ನಗರ, ಅರಸೀಕೆರೆ ರಸ್ತೆ, ದೊಡ್ಡಪುರ ಅಂಚೆ, ಕೇಂದ್ರೀಯ ವಿದ್ಯಾಲಯದ ಹತ್ತಿರ, ಬಿ. ಟಿ. ಕೊಪ್ಪಲು, ಹಾಸನ–573 118, ಮೊಬೈಲ್: 81978 18807/ 94826 03060.
15. **ಕಲಬುರ್ಗಿ ಪ್ರಾದೇಶಿಕ ಕೇಂದ್ರ :** ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿಶ್ವವಿದ್ಯಾನಿಲಯ ಆವರಣ, ಕಲ್ಬುರ್ಗಿ–585 106, ಮೊಬೈಲ್: 99167 83555.
16. **ಕಾರವಾರ ಪ್ರಾದೇಶಿಕ ಕೇಂದ್ರ :** ಯು.ಎಸ್.ಕೆ.ವಿ ಹಳೆ ಕಟ್ಟಡ, ಮೊದಲನೇ ಮಹಡಿ, ಸವಿತ ಸರ್ಕಲ್ ಮುಖ್ಯ ರಸ್ತೆ, ಕಾರವಾರ–581 301, ಮೊಬೈಲ್: 99006 67916.
17. **ಕೋಲಾರ ಪ್ರಾದೇಶಿಕ ಕೇಂದ್ರ :** ಎಸ್. ಪಿ. ಕಚೇರಿ ಹಿಂಭಾಗ, ಆರ್. ಎಲ್. ಜಾಲಪ್ಪ ಆಸ್ಪತ್ರೆ ಸಮೀಪ, ಕೋಲಾರ–563 101, ಮೊಬೈಲ್: 89702 23247.
18. **ಮಂಡ್ಯ ಪ್ರಾದೇಶಿಕ ಕೇಂದ್ರ :** # ಸಿ.ಎಸ್–11(ಎ), 'ಇ' ಬ್ಲಾಕ್, ವಿವೇಕಾನಂದ ನಗರ ಲೇಔಟ್, ಹೊಳಲು, ಮೇಲುಕೋಟೆ ರಸ್ತೆ, ಮಂಡ್ಯ–571 401. ಮೊಬೈಲ್: 97419 90284.
19. **ಮಂಗಳೂರು ಪ್ರಾದೇಶಿಕ ಕೇಂದ್ರ :** ಒಕ್ಕಲಿಗರ ಯಾನೆ ಗೌಡರ ಸೇವಾ ಸಂಘ, 3ನೇ ಮಹಡಿ, ಶಿರಡಿ ಸಾಯಿಬಾಬಾ ಮಂದಿರದ ಹತ್ತಿರ, ಉಡುಪಿ ಮುಖ್ಯ ರಸ್ತೆ, ಅಶೋಕನಗರ ಅಂಚೆ, ಲೇಡಿಹಿಲ್, ಮಂಗಳೂರು–575 006, ಮೊಬೈಲ್: 99450 58950 / 99721 96692.
20. **ರಾಮನಗರ ಪ್ರಾದೇಶಿಕ ಕೇಂದ್ರ :** ಶಾಂತಿನಿಕೇತನ್ ಗ್ರೂಪ್ ಆಫ್ ಇನ್ಸ್‌ಟಿಟ್ಯೂಷನ್ಸ್, ಬಿ. ಎಂ. ರಸ್ತೆ, ವಿವೇಕಾನಂದ ನಗರ, ರಾಮನಗರ–562 159, ಮೊಬೈಲ್: 99644 95936.
21. **ಶಿವಮೊಗ್ಗ ಪ್ರಾದೇಶಿಕ ಕೇಂದ್ರ :** ಅಲ್ಕೊಳ ಸರ್ಕಲ್, ಎಲ್.ಐ.ಸಿ. ಕಚೇರಿ ಹತ್ತಿರ, ಸಾಗರ ರಸ್ತೆ, ಶಿವಮೊಗ್ಗ–577 201, ದೂ: 08182–250367, ಮೊಬೈಲ್: 91644 67131.
22. **ತುಮಕೂರು ಪ್ರಾದೇಶಿಕ ಕೇಂದ್ರ :** ಸಿಎ–07, ಟೂಡಾ ಲೇಔಟ್, ರಾಜೀವ್‌ಗಾಂಧಿ ನಗರ, ಮೆಳೆಕೋಟೆ, ಗಂಗಸಂದ್ರ ಮುಖ್ಯ ರಸ್ತೆ, ತುಮಕೂರು–572 105, ದೂ: 0816–2955580, ಮೊಬೈಲ್: 98445 06629.
23. **ಉಡುಪಿ ಪ್ರಾದೇಶಿಕ ಕೇಂದ್ರ :** ಜಿಲ್ಲಾ ಪಂಚಾಯತ್ ಕಚೇರಿ ಹಳೇ ಕಟ್ಟಡ, 2ನೇ ಮಹಡಿ, ಬನ್ನಂಜೆ, ಉಡುಪಿ–576 101, ದೂ: 0820–2522247, ಮೊಬೈಲ್: 99725 26647.
24. **ಬೀದರ್ ಪ್ರಾದೇಶಿಕ ಕೇಂದ್ರ :** ಸರ್ಕಾರಿ ಪ್ರ.ದ. ಕಾಲೇಜು, ನೌಬಾದ್, ಬೀದರ್–585 402, ದೂ: 08482–232020, ಮೊಬೈಲ್: 99866 96487.
25. **ಬಾಗಲಕೋಟೆ ಪ್ರಾದೇಶಿಕ ಕೇಂದ್ರ :** ಬಸವೇಶ್ವರ ಕಲಾ ಕಾಲೇಜು, ಬಿ.ವಿ.ಎಸ್. ಕ್ಯಾಂಪಸ್, ಬಾಗಲಕೋಟೆ, ಮೊಬೈಲ್: 70222 22241 / 88610 40975.
26. **ಮಡಿಕೇರಿ ಪ್ರಾದೇಶಿಕ ಕೇಂದ್ರ:** ಜೂನಿಯರ್ ಕಾಲೇಜು ಕ್ಯಾಂಪಸ್, ಫೀಲ್ಡ್ ಮಾರ್ಷಲ್ ಕಾರ್ಯಪ್ಪ, ಇಂಡೋರ್ ಸ್ಟೇಡಿಯಂ, ಮಡಿಕೇರಿ–571 201, ಕೊಡಗು ಜಿಲ್ಲೆ, ಮೊಬೈಲ್: 80733 42310 / 91419 38803.
27. **ಕೊಳ್ಳೇಗಾಲ ಪ್ರಾದೇಶಿಕ ಕೇಂದ್ರ:** ಹರಿಚರಣ್ ಆರ್ಕೇಡ್, 2ನೇ ಮಹಡಿ, ಸೌತ್ ಎಕ್ಸ್‌ಟೆಕ್ಷನ್, ಮಹದೇಶ್ವರ ಕಲ್ಯಾಣ ಮಂಟಪದ ಎದುರು, ಕೊಳ್ಳೇಗಾಲ–571 440. ಮೊಬೈಲ್: 98807 40048.
28. **ಚಿತ್ರದುರ್ಗ ಪ್ರಾದೇಶಿಕ ಕೇಂದ್ರ:** ಡಾನ್ ಬಾಸ್ಕೋ ಪದವಿ ಕಾಲೇಜು ಆವರಣ, ಬಿಸಿಎಂ ಹಾಸ್ಟೆಲ್ ಹತ್ತಿರ, ಶನಿಮಹಾತ್ಮ ದೇವಸ್ಥಾನ ರಸ್ತೆ, ಚಳ್ಳಕೆರೆ ರಸ್ತೆ, ಚಿತ್ರದುರ್ಗ–577501. ಮೊಬೈಲ್: 74066 12788.
29. **ಹಾವೇರಿ ಪ್ರಾದೇಶಿಕ ಕೇಂದ್ರ:** ಶ್ರೀ ಶಿವಲಿಂಗೇಶ್ವರ ವಿದ್ಯಾಪೀಠ, ಹುಕ್ಕೇರಿಮಠ, ಹಾವೇರಿ–581110. ಮೊಬೈಲ್: 97432 76734.
30. **ಚಿಕ್ಕಬಳ್ಳಾಪುರ ಪ್ರಾದೇಶಿಕ ಕೇಂದ್ರ:** ಸರ್ಕಾರಿ ಪ್ರಥಮ ದರ್ಜೆ (ಪುರಸಭೆ) ಕಾಲೇಜು, ಎಂ. ಜಿ. ರಸ್ತೆ, ಚಿಕ್ಕಬಳ್ಳಾಪುರ–562101. ಮೊಬೈಲ್: 91643 00299.
31. **ರಾಯಚೂರು ಪ್ರಾದೇಶಿಕ ಕೇಂದ್ರ:** ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಿಜಲಿಂಗಪ್ಪ ಕಾಲೋನಿ, ವಾಲ್ಮೀಕಿ ಸರ್ಕಲ್ ಹತ್ತಿರ, ಲಿಂಗಸೂರು ರಸ್ತೆ, ರಾಯಚೂರು–584101. ಮೊಬೈಲ್: 96866 19555.
32. **ಯಾದಗಿರಿ ಪ್ರಾದೇಶಿಕ ಕೇಂದ್ರ: ಸರ್ಕಾರಿ ಪದವಿ ಕಾಲೇಜು,** ಚಿತ್ತಾಪುರ ರಸ್ತೆ, ಯಾದಗಿರಿ–585202 ಮೊಬೈಲ್: 98800 61361.
33. **ಬಿಜಾಪುರ ಪ್ರಾದೇಶಿಕ ಕೇಂದ್ರ :** ವಿಎಸ್‌ಜಿ, ಕಲಾ ಮತ್ತು ವಾಣಿಜ್ಯ ಕಾಲೇಜು ಆವರಣ, ನಂ.680/ಇ, ಆಕಾಶವಾಣಿ ಕೇಂದ್ರದ ಎದುರು, ರಿಂಗ್ ರಸ್ತೆ, ವಿಜಯಪುರ–586 103. ಮೊಬೈಲ್: 80509 43144.
34. **ಕೊಪ್ಪಳ ಪ್ರಾದೇಶಿಕ ಕೇಂದ್ರ :** ನಗರಾಭಿವೃದ್ಧಿ ಪ್ರಾಧಿಕಾರ ಕಾರ್ಯಾಲಯ, 1ನೇ ಮಹಡಿ, ಕೊಪ್ಪಳ–583 238, ಮೊಬೈಲ್: 90085 88675.
35. **ಗದಗ ಪ್ರಾದೇಶಿಕ ಕೇಂದ್ರ :** ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ರೈತ ಭವನ, ಜನರಲ್ ಕಾರ್ಯಪ್ಪ ಸರ್ಕಲ್, ಗದಗ–582 101. ಮೊಬೈಲ್: 86189 29376.
36. **ವಿಜಯನಗರ (ಹೊಸಪೇಟೆ) ಪ್ರಾದೇಶಿಕ ಕೇಂದ್ರ :** ಕನ್ನಡ ವಿಶ್ವವಿದ್ಯಾನಿಲಯ, ವಿದ್ಯಾರಣ್ಯ, ಹಂಪಿ, ವಿಜಯನಗರ ಜಿಲ್ಲೆ–583 276, ಮೊಬೈಲ್: 9035143912/7892597159.

ಪ್ರವೇಶಾತಿಯ ಪ್ರಾರಂಭದ ದಿನಾಂಕ: 09.01.2024

ಬಿ.ಇಡಿ. ಶಿಕ್ಷಣ ಕ್ರಮಕ್ಕೆ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: 03.03.2024

ಬಿ.ಇಡಿ. ಸಾಮಾನ್ಯ ಪ್ರವೇಶ ಪರೀಕ್ಷೆಯ ದಿನಾಂಕ: 10.03.2024

ಪ್ರವೇಶಾತಿಯ ಅಂತಿಮ ದಿನಾಂಕ (ಇತರೆ ಶಿಕ್ಷಣ ಕ್ರಮಗಳಿಗೆ) : 31.03.2024

ತರಗತಿ ಹಾಗೂ ಪರೀಕ್ಷೆಗಳನ್ನು ಪ್ರಾದೇಶಿಕ ಕೇಂದ್ರ / ಕಲಿಕೆ ಸಹಾಯ ಕೇಂದ್ರಗಳಲ್ಲಿ ನಡೆಸಲಾಗುವುದು.

ಸಹಿ/–, ಕುಲಸಚಿವರು

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 11 ಫೆಬ್ರುವರಿ 2024

ಯಕ್ಷ ಮಂತ್ರ ಮಾಂಗಲ್ಯ.. 11

ಸರೋದ್ ಲೋಕದ ಸುರ ಆಶೀಷ್ ಖಾನ್ 12

ಅಚ್ಚರಿಗಳ ಪುಟ್ಟ ದೇಶ ಲಿಕ್‌ಟನ್‌ಸ್ಟೈನ್ 13

ಪ್ರೀತಿಗೊಂದು ಎಲ್ಲೆ ಎಲ್ಲಿದೆ...

ಚುಕ್ಕಿ ನಂಜುಂಡಸ್ವಾಮಿ ಅವರ ತಂದೆ ರೈತ ನಾಯಕ ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರು ಜಾತಿ ಬಿಟ್ಟು ಮದುವೆ ಆದವರು. ಮೈಸೂರಿನ ಅನನ್ಯ ಮುದ್ದುಕೃಷ್ಣ ಅವರ ತಂದೆ ಕೆ.ಮುದ್ದುಕೃಷ್ಣ ಸಹ ಜಾತಿ ಧಿಕ್ಕರಿಸಿ ವಿವಾಹವಾದವರು. ಇವರೆಲ್ಲ ತಮ್ಮ ಮಕ್ಕಳು ಕೂಡ ತಮ್ಮಂತೆಯೇ ಆರೋಗ್ಯಕರವಾಗಿ ಯೋಚಿಸುವುದು, ಬದುಕುವುದನ್ನು ಕಲಿಸಿಕೊಟ್ಟವರು. ಅವರ ನೆರಳಿನಲ್ಲೇ ಬೆಳೆದವರು ಸಂಗಾತಿ ಆಯ್ಕೆಯಲ್ಲಿ ಸಹಜವಾಗಿಯೇ ಮುಕ್ತವಾಗಿದ್ದರು. ಶಿವಮೊಗ್ಗ ಜಿಲ್ಲೆ ಸಾಗರ ಸಮೀಪದ ಪುರಪ್ಪೇಮನೆಯ ಕೃತಿ ಆರ್. ಬಾಲ್ಯದಿಂದಲೂ ಭಿನ್ನವಾಗಿಯೇ ಯೋಚಿಸುತ್ತಾ ಬೆಳೆದವರು, ಬದುಕುತ್ತಿರುವವರು. ಅವರದು ಸಮಭಾವ.

ಒಲಿದ ಮನಸ್ಸುಗಳು ದೇಶ, ಭಾಷೆ, ಜಾತಿ, ಧರ್ಮ ಇತ್ಯಾದಿ ಸಂಕೋಲೆಗಳಿಂದ ಬಿಡುಗಡೆಗೊಂಡು ಒಂದಾಗುತ್ತವೆ. ಎಲ್ಲ ರೀತಿಯ ಗಡಿಗಳನ್ನು ಅಳಿಸಿ ಹಾಕಿದ್ದು ಮುಕ್ತ ಆಲೋಚನೆ, ಕನಸು ಮತ್ತು ತೆರೆದ ಮನಸ್ಸು. ಇಂತಹ ಮೂವರು ಪ್ರೇಮ ವಿವಾಹಿತರ ವಿಭಿನ್ನ ಪುಟ್ಟ ಪುಟ್ಟ ಕಥನಗಳು...

ಕಲೆ: ಯೋಗಾನಂದ್ ಎಲ್.

ಕಿಚನ್‌ನಲ್ಲಿ ಅರಳಿದ ಪ್ರೀತಿ!

ಅನನ್ಯ ಮುದ್ದುಕೃಷ್ಣ

ಕಳೆದ 30–40 ವರ್ಷಗಳಿಂದ ದೊಡ್ಡದಾಗಿ ಹಬ್ಬಿರುವ ಜಾಗತೀಕರಣವು ವಿಶ್ವದ ಮೂಲೆ ಮೂಲೆಯಲ್ಲಿರುವ ಯುವಕರ ಆಲೋಚನೆ, ವರ್ತನೆ, ಬಯಕೆಗಳನ್ನು ಒಂದೇ ರೀತಿ ಮಾಡಿಬಿಟ್ಟಿದೆ. ಜಾಗತೀಕರಣದಿಂದ ನನಗೆ ಲಭ್ಯವಾದ ಅನುಭವಗಳ ಆಧಾರದ ಮೇಲೆ ಹೇಳುವುದಾದರೆ ವಿದೇಶಿ ಸಿನಿಮಾ, ಹಾಡು, ಅಡುಗೆ, ಉಡುಪು ಇವೆಲ್ಲ ಕೂಡಿ ಬಾಳಸಂಗಾತಿಯನ್ನು ಕೊಟ್ಟುಬಿಟ್ಟವು!

ಇದು ಹೇಗೆ ಎನ್ನುವುದನ್ನು ಸ್ವಲ್ಪ ಬಿಡಿಸಿ ಹೇಳುತ್ತೇನೆ. ನಾನು ಎಂಜಿನಿಯರಿಂಗ್‌ನಲ್ಲಿ ಉನ್ನತ ವ್ಯಾಸಂಗಕ್ಕಾಗಿ ಮೈಸೂರಿನಿಂದ ಸ್ವೀಡನ್ ದೇಶದ ಸ್ಟಾಕ್ಹೋಮ್ ನಗರಕ್ಕೆ ಹೋದೆ. ಅಲ್ಲಿ ಹಾಸ್ಟೆಲ್‌ನಲ್ಲಿ ಉಳಿದುಕೊಂಡಿದ್ದೆ. ಇಟಲಿಯ ಬಿಯಾಂಕಾ ವೈದ್ಯಕೀಯ ಶಿಕ್ಷಣಕ್ಕಾಗಿ ಬಂದಿದ್ದು, ಅವಳು ಕೂಡ ನನ್ನ ಹಾಸ್ಟೆಲ್‌ನಲ್ಲಿದ್ದಳು. ಹಾಸ್ಟೆಲ್‌ನಲ್ಲಿ ನಾವು ಅಡುಗೆ ಮಾಡಿಕೊಳ್ಳಬೇಕಿತ್ತು. ಒಂದೊಂದು ಫ್ಲೋರ್‌ಗೆ ಒಂದೊಂದು ಕಿಚನ್ ಇರುತಿತ್ತು. ಅಲ್ಲಿ ನಾವಿಬ್ಬರು ಭೇಟಿಯಾದೆವು.

ಅನನ್ಯ ಮುದ್ದುಕೃಷ್ಣ, ಬಿಯಾಂಕಾ

ನಾವಿಬ್ಬರೂ ಮೊದ ಮೊದಲು ವಿದ್ಯಾರ್ಥಿ ಜೀವನದ ಸುಖ–ದುಃಖಗಳನ್ನು ಹಂಚಿಕೊಂಡೆವು. ನಮ್ಮಿಬ್ಬರ ವಿದ್ಯಾಭ್ಯಾಸದ ವಿಚಾರಗಳು ಒಂದೇ ಎನಿಸಿತು. ನಂತರ ಚಿಕ್ಕವನಾಗಿದ್ದಾಗ ನೋಡಿದ ಸಿನಿಮಾಗಳ ಬಗ್ಗೆ ವಿಶೇಷವಾಗಿ ಮೆಲ್ ಬ್ರೂಕ್ಸ್ ಹಾಗೂ ಮಿಸ್ಟರ್ ಬೀನ್ ಸಿನಿಮಾಗಳ ಬಗ್ಗೆ ಹೇಳಿದೆ. ಆಕೆಗೂ ಈ ಸಿನಿಮಾಗಳು ಬಲು ಇಷ್ಟವೆಂದು ಗೊತ್ತಾಯಿತು. ಮತ್ತೊಮ್ಮೆ ಕಿಚನ್‌ನಲ್ಲಿ ಭೇಟಿಯಾದಾಗ ನಮಗೆ ಪ್ರಿಯವಾದ ಜಗತ್ತಿನ ಬಗೆ ಬಗೆ ಅಡುಗೆಯ ಬಗ್ಗೆ ಮಾತನಾಡಿದೆವು. ಬಿಯಾಂಕಾ ಕೂಡ ನನ್ನ ಹಾಗೆಯೇ Foodie ಎಂದು ಗೊತ್ತಾಯಿತು. ಅವಳಿಗೆ ಭಾರತದ ಅಡುಗೆ ಬಹಳ ಇಷ್ಟ, ಆದರೆ ಕರ್ನಾಟಕದ ಯಾವ ಅಡುಗೆಯ ರುಚಿಯನ್ನೂ ಇಲ್ಲಿಯವರೆಗೂ ನೋಡಿರಲಿಲ್ಲ. ನಾನು ಅವಳಿಗೆ ಬಿಸಿಬೇಳೆ ಬಾತ್ ಮಾಡಿಕೊಟ್ಟೆ. ಅವಳಿಗೆ ತುಂಬಾ ಇಷ್ಟ ಆಗಿ ಹೋಯ್ತು. ನನಗೆ ಅನಿಸುತ್ತೆ, ಅವಳು ನನ್ನ ಬಿಸಿಬೇಳೆ ಬಾತ್‌ಗೇ ಬಿದ್ದೋದ್ದು ಅಂಥ! ಹೀಗೆ ಜಾಗತೀಕರಣ ತೆರೆದ ನಮ್ಮ ಮನಸ್ಸುಗಳು ಸ್ವೀಡನ್ನಿನ ಹಾಸ್ಟೆಲ್ ಕಿಚನ್‌ನಲ್ಲಿ ಒಂದಾದವು. 11ನೇ ಪುಟಕ್ಕೆ...

‘ಪ್ರೀತಿ ದೇಹಕ್ಕೆ ಉಸಿರಿದ್ದ ಹಾಗೆ’

ಕೃತಿ ಆರ್.

ಪ್ರೀತಿ ಬಗ್ಗೆ ಸಾವಿರಾರು ವರ್ಷಗಳಿಂದ ಎಲ್ಲರೂ ಬರಿತಾನೆ ಇದಾರೆ, ಅದು ದೇಹಕ್ಕೆ ಉಸಿರಿದ್ದ ಹಾಗೆ ಅಂತ ನನಗೆ ಇವತ್ತು ಅನ್ನಿಸ್ತಾ ಇದೆ. ದಿನಾ ಬೇರೆ ಬೇರೆ ತರ ಅನುಭವಕ್ಕೆ ಬರ್ತಾ ಇರತ್ತೆ. ಪ್ರೀತಿ, ಜಾಸ್ತಿ ಕಾಲ ಬದುಕಬೇಕಂದ್ರೆ ಅದನ್ನ ಕಾಪಿಡಬೇಕು, ಅದಕ್ಕಾಗಿ ಕೆಲಸ ಮಾಡಬೇಕು. ಅದರರ್ಥ ಕ್ಷಣಿಕವಾದ ಪ್ರೀತಿ ಸುಳ್ಳು ಅಂತೇನೂ ಅಲ್ಲ. ಎಲ್ಲರ ಜೀವನದಲ್ಲಿ ಅದಕ್ಕೂ ಒಂದು ಜಾಗ ಇರತ್ತೆ. ಆದರೆ ಇನ್ನೊಬ್ಬರೊಟ್ಟಿಗೆ ಬದುಕಬೇಕಂದ್ರೆ ಸಮಾನಆಸಕ್ತಿಗಳು, ಪರಸ್ಪರ ಗೌರವನೂ ಇರಬೇಕಾಗತ್ತೆ.

ನಾನು ಹಾಗೂ ಟಾಡ್ ಲಾರಿಚ್ ಜೊತೆಗಿರ್ತಾ ಸುಮಾರು 25-26 ವರ್ಷ ಆಯ್ತು. ಅವನು ಅಮೆರಿಕದವನು. ನಮಗೀಗ ಹದಿನೇಳು ವರ್ಷದ ಮಗನಿದ್ದಾನೆ. ಆತನ ಹೆಸರು ಹಮೀರ್ ಮುಗಿಲು. ನಮಗೆ ಅಂತರ ರಾಷ್ಟ್ರೀಯ, ಅಂತರ ಧರ್ಮ ಅಂತೆಲ್ಲ ಆಗಲೂ ಅನ್ನಿಸಿರಲಿಲ್ಲ, ಈಗಲೂ ಇಲ್ಲ. ಹೊರಗಡೆಯವರಿಗೆ ಬೇರೆ ಕಾಣುತ್ತಿರಬೇಕು! ಬೇರೆ ದೇಶದಲ್ಲಿ ಮನುಷ್ಯರಿಗೆ ಕೋಡಿರತ್ತೆ ಅಥವಾ ಮನುಷ್ಯರು ಮರದಿಂದ ಹುಟ್ತಾರೆ ಅನ್ನೊ ಕಲ್ಪನೆಗಳೆಲ್ಲ ಇರಬಹುದೇನೊ. In fact ನಾವು ಹಳ್ಳಿಲಿರೊದ್ರಿಂದ ಈ ತರದ ಕುತೂಹಲಿಗಳು ಮೊದಮೊದಲಿಗೆ ಸಿಗ್ತಾ ಇದ್ರು. ಅಂದ್ರೆ ಹಳ್ಳಿಯವರಿಗೆ ಏನು ಗೊತ್ತಿರಲ್ಲ ಅಂತಲ್ಲ. ಎಲ್ಲರೂ ಪರಿಚಯದವರೇ ಆಗಿರ್ತಾರೆ, ಪೂರ್ವಗ್ರಹಿಕೆಗಳನ್ನ ತೋರಿಸೊ ಅಷ್ಟು ಒಡನಾಟ ಇರತ್ತೆ ಅಂತ ಅಷ್ಟೆ.

ಹಮೀರ್ ಮುಗಿಲು, ಕೃತಿ ಆರ್., ಟಾಡ್ ಲಾರಿಚ್

ಬೇರೆ ದೇಶದವರಾದ್ದರಿಂದ cultural difference ಇರುತ್ತಲ್ಲ, ಅದನ್ನ ಹೇಗೆ ನಿಭಾಯಿಸಿದಿರಿ ಅನ್ನೊದು ಎಲ್ಲರೂ ಕೇಳೊ ಪ್ರಶ್ನೆ. ನಿಜ ಹೇಳ್ಬೇಕಂದ್ರೆ ನನ್ನದೇ ಜಾತಿಯವರನ್ನ ಮಾಡ್ಕೊಂಡಿದ್ರೆ ತುಂಬಾ cultural difference ಆಗ್ತಿತ್ತು. ಜೀವನ, ಸಮಾಜ, ಸಂಸಾರದ ಬಗ್ಗೆ ನಮ್ಮ ದೃಷ್ಟಿಕೋನಗಳು ಒಂದೇ ರೀತಿಯಾಗಿದ್ದರಿಂದಲೇ ನಾವು ಬೇಗ ಗೆಳೆಯರಾಗಿದ್ದು.

ಸ್ವಭಾವದಲ್ಲಿ ವ್ಯತ್ಯಾಸಗಳು ಇದ್ದೇ ಇರತ್ತೆ. ಒಬ್ಬರು ಬೇಗ ಏಳೊರು, ಇನ್ನೊಬ್ಬರು ರಾತ್ರಿ ಕೆಲಸ ಮಾಡೊರು ಈ ರೀತಿಯದು. ನನ್ನ ಸಂಗಾತಿ ಮನೆ ಗುಮ್ಮ. ಹತ್ತಿರದ ಟೌನ್‌ಗೆ ಹೋದರೂ ಸ್ವಲ್ಪ ಹೊತ್ತಿಗೆ, ಗಲಾಟೆ ಗೌಜು ಸಹಿಸ್ಕೊಳೊಕಾಗಲ್ಲ, ಮನೆಗೆ ಹೋಗೋಣ ಅಂತಾನೆ. ಯಾವುದೇ ಸಂಬಂಧವಾದರೂ ‘ಆದರ್ಶ’, ‘ಗಟ್ಟಿ’ ಅಂತ ಕರೆಸ್ಕೊಳೊದು ಮುಜುಗರದ ವಿಷಯ. ವರ್ಷಗಟ್ಟಲೇ ಜೊತೆಗಿದ್ದು ಇದ್ದು ನಾವು ಮನೆಲಿರೊ furniture ತರ ಆಗಿಬಿಟ್ಟದ್ರೂ ಸಂಬಂಧ ಗಟ್ಟಿಯಾಗಿದೆ ಅಂತನೇ ಹೇಳೊದು.

11ನೇ ಪುಟಕ್ಕೆ...

‘ನಮ್ಮದು ಗಡಿ ಮೀರಿದ ಪ್ರೀತಿ’

ಚುಕ್ಕಿ ನಂಜುಂಡಸ್ವಾಮಿ

‘ಗಡಿಗಳಿಲ್ಲದ ಜಗತ್ತನ್ನು ಕಟ್ಟಬೇಕು’ ಎಂಬುದು ಡಾ.ರಾಮಮನೋಹರ ಲೋಹಿಯಾ ಅವರ ವಾದವಾಗಿತ್ತು. ನನ್ನ ತಂದೆ ಪ್ರೊ. ಎಂ.ಡಿ.ನಂಜುಂಡಸ್ವಾಮಿಯವರು ‘ದೇಶಗಳ ನಡುವೆ ಸಂಚಾರಕ್ಕೆ ಪಾಸ್‌ಪೋರ್ಟ್ ಯಾಕೆ ಬೇಕು’ ಎಂದು ಕೇಳುತ್ತಿದ್ದರು. ‘ಗಡಿಗಳಿರಬಾರದು, ಬೆಸೆಯುವ ಸೇತುವೆಗಳು ಮಾತ್ರ ಇರಬೇಕು’ ಎಂಬುದು ನನ್ನ ದೃಢ ನಿಲುವು.

ನನ್ನ ಮತ್ತು ಪತಿ ಲೂಕಾ ನಡುವಿನದ್ದು ಜಾತಿ, ಧರ್ಮ, ಸಂಸ್ಕೃತಿ, ಗಡಿ ಮೀರಿದ ಪ್ರೀತಿ, ಸ್ನೇಹ. ನಾನು ರೈತ ಚಳವಳಿಯಲ್ಲಿ ತಂದೆಯವರ ಜೊತೆ ಓಡಾಡಿದವಳು. ಲೂಕಾ, ಇಟಲಿಯಲ್ಲಿ ನಗರ ಪ್ರದೇಶಗಳ ಬಡವರು, ನಿರಾಶ್ರಿತರ ಹಕ್ಕುಗಳಿಗಾಗಿ ಹೋರಾಟ ನಡೆಸಿದವರು. ತಂದೆಯವರೇ ಅವರನ್ನು ನನಗೆ ಪರಿಚಯಿಸಿದ್ದರು.

2004ರಲ್ಲಿ ಇಟಲಿಯಲ್ಲಿ ಸಮ್ಮೇಳನವೊಂದರಲ್ಲಿ ಭಾಗವಹಿಸಲು ಹೋಗಿದ್ದೆ. ಭಾರತಕ್ಕೆ ವಾಪಸ್ ಆಗಲು ಹೊರಟ ನನಗೆ ವಿಮಾನ ತಪ್ಪಿ ಹೋಯಿತು. ಹೋಟೆಲ್‌ಗಳಲ್ಲಿ ಉಳಿಯುವಷ್ಟು ಹಣ ಇರಲಿಲ್ಲ. ಲೂಕಾ ಅವರಿಗೆ ಕರೆ ಮಾಡಿದಾಗ ಉಳಿದುಕೊಳ್ಳಲು ವ್ಯವಸ್ಥೆ ಮಾಡಿದ್ದರು. ಅದೇ ಸಮಯದಲ್ಲಿ ಅಮೆರಿಕ ಅಧ್ಯಕ್ಷ ಜಾರ್ಜ್ ಡಬ್ಲ್ಯು ಬುಷ್ ಅಲ್ಲಿಗೆ ಭೇಟಿ ನೀಡುತ್ತಿದ್ದರು. ಲೂಕಾ ಮತ್ತವರ ತಂಡದವರು ಬುಷ್ ವಿರುದ್ಧ ಹೋರಾಟ ರೂಪಿಸುತ್ತಿದ್ದರು. ಅದಕ್ಕೆ ನನ್ನನ್ನೂ ಕರೆದುಕೊಂಡು ಹೋಗಿದ್ದರು. ಆಗ ಇಬ್ಬರ ನಡುವೆ ಹೆಚ್ಚು ಮಾತುಕತೆ, ಸ್ನೇಹ ಆಯಿತು.

ನಾನು ಮುಕ್ತ ವಾತಾವರಣದಲ್ಲಿ ಬೆಳೆದವಳು. ತಂದೆ, ತಾಯಿ ಇಬ್ಬರೂ ಪೂರ್ಣ ಸ್ವಾತಂತ್ರ್ಯ ನೀಡಿದ್ದರು. ನಾನು ಕ್ರಾಂತಿಕಾರಿ ನಿಲುವುಗಳನ್ನು ಹೊಂದಿದ್ದೆ. ಬದುಕಿನಲ್ಲಿ ಗೆಳೆಯನಂತಿರುವ ಸಂಗಾತಿಯನ್ನು ಬಯಸಿದ್ದೆ. ದೇಶದ ಪುರುಷರ ಬಗ್ಗೆ ನನಗೆ ಭಯ ಇತ್ತು. ನನ್ನ ಮೇಲೆ ಹಕ್ಕು ಸಾಧಿಸುವ ವ್ಯಕ್ತಿಯನ್ನು ಮದುವೆಯಾದರೆ ‘ನನ್ನತನ’ ಕಳೆದುಕೊಳ್ಳುತ್ತೇನೆ ಎಂಬ ಚಿಂತೆ ಕಾಡುತ್ತಿತ್ತು. ಹಾಗಾಗಿ, ಮದುವೆಯ ಬಗ್ಗೆ ಸಣ್ಣ ಅಂಜಿಕೆ ಇತ್ತು. ಆ ವೇಳೆಗಾಗಲೇ ನಾನು ಮತ್ತು ಲೂಕಾ ಪರಸ್ಪರ ಅರ್ಥ ಮಾಡಿಕೊಂಡಿದ್ದೆವು. ನಮ್ಮ ಹೋರಾಟದ ನಿಲುವುಗಳು ಸ್ನೇಹವನ್ನು ಗಟ್ಟಿಗೊಳಿಸಿದ್ದವು. ನನಗೆ ಇಲ್ಲಿ ಅಮೃತಭೂಮಿ, ರೈತ ಸಂಘದ ಜವಾಬ್ದಾರಿಗಳಿದ್ದವು. ಹಾಗಾಗಿ, ಇಟಲಿಗೆ ಹೋಗುವುದಕ್ಕೆ ಸಾಧ್ಯವಿರಲಿಲ್ಲ. ಆದರೆ, ಅವರೇ ಇಲ್ಲಿಗೆ ಬರಲು ನಿರ್ಧರಿಸಿದರು. 2007ರಲ್ಲಿ ಮದುವೆ ಆಯಿತು.

ಮದುವೆಯಾಗುವ ಹೊತ್ತಿಗೆ ತಂದೆ, ತಾಯಿ ಇಬ್ಬರೂ ನಮ್ಮೊಂದಿಗೆ ದೈಹಿಕವಾಗಿ ಇರಲಿಲ್ಲ. ಕುಟುಂಬದ ಯಾರಿಂದಲೂ ವಿರೋಧವೂ ಬರಲಿಲ್ಲ. ನನ್ನ ಮತ್ತು ಲೂಕಾ ಜೀವನಶೈಲಿ, ಆಹಾರ ಸಂಸ್ಕೃತಿ ಎಲ್ಲವೂ ಭಿನ್ನ. ಹಾಗಿದ್ದರೂ ನಮ್ಮ ನಡುವೆ ಸಾಂಸ್ಕೃತಿಕ ಸಂಘರ್ಷ ಎಂಬುದು ಬರಲೇ ಇಲ್ಲ.

2010ರಲ್ಲಿ ಮಗ ‘ತೆನೆ’ ಹುಟ್ಟಿದ. ಪ್ರಾಥಮಿಕ ಹಂತದವರೆಗೂ ಮಾತೃಭಾಷೆಯಲ್ಲಿ ಶಿಕ್ಷಣ ಕೊಡಿಸಬೇಕು ಎಂಬುದು ನಮ್ಮ ನಿರ್ಧಾರವಾಗಿತ್ತು. ಚಾಮರಾಜನಗರದ ದೀನಬಂಧು ಶಾಲೆಗೆ ಸೇರಿಸಿದ್ದೆವು. ಈಗ 8ನೇ ತರಗತಿಗೆ ಮೈಸೂರಿನಲ್ಲಿ ಇಂಗ್ಲಿಷ್ ಮಾಧ್ಯಮ ಶಾಲೆಗೆ ಹೋಗುತ್ತಿದ್ದಾನೆ. ನಮ್ಮ ‘ಗಡಿ ಮೀರಿದ ಪ್ರೀತಿ’ಯಿಂದ ಮಗನಿಗೂ ಸಮಸ್ಯೆಯಾಗಿಲ್ಲ. ಲೂಕಾ ಮಗನಿಗೆ ಇಟಾಲಿಯನ್ ಭಾಷೆ ಕಲಿಸಿದ್ದಾರೆ. ಇಲ್ಲಿನ ಕನ್ನಡ, ಹಿಂದಿ, ಇಂಗ್ಲಿಷ್ ಕಲಿತಿದ್ದಾನೆ. ಸ್ವಲ್ಪ ಸ್ವಲ್ಪ ಮರಾಠಿಯೂ ಮಾತನಾಡುತ್ತಾನೆ.

ನಮ್ಮ ಪ್ರೀತಿ, ಮದುವೆಗೆ ಯಾವ ಅಡ್ಡಿ –ಆತಂಕವೂ ಬರಲಿಲ್ಲ. ನಾವು ನಮ್ಮ ನಿಲುವಿಗೆ ಬದ್ಧರಾಗಿದ್ದುದು ಮತ್ತು ಮನೆಯಲ್ಲಿ ಅಂತಹ ವಾತಾವರಣ ಇದ್ದುದು ಅದಕ್ಕೆ ಕಾರಣ. ಆದರೆ, ನಮ್ಮ ಸಮಾಜ ಈಗಲೂ ಅಂತರ್ಜಾತಿ, ಅಂತರಧರ್ಮೀಯ ಮದುವೆಯನ್ನು ಮುಕ್ತವಾಗಿ ಸ್ವೀಕರಿಸುತ್ತಿಲ್ಲ. ಮರ್ಯಾದೆಗೇಡು ಹತ್ಯೆಗಳು, ಸಮಾಜದ ವಿರೋಧ, ಸಾಮಾಜಿಕ ಬಹಿಷ್ಕಾರದಂತಹ ಪ್ರಕರಣಗಳು ನಡೆಯುತ್ತಲೇ ಇವೆ. ಜಾತಿ, ಧರ್ಮ ಮೀರಿ ಮದುವೆಯಾಗಲು ಹೊರಟವರು ತಮ್ಮ ನಿರ್ಧಾರದ ಬಗ್ಗೆ ನಂಬಿಕೆ ಇಟ್ಟಿರಬೇಕು ಎಂಬುದು ಒಂದು ವಿಚಾರವಾದರೆ, ಇಂತಹ ಜೋಡಿಗಳನ್ನು ರಕ್ಷಿಸಲು ಸಾಂಸ್ಥಿಕವಾದ ವ್ಯವಸ್ಥೆಯ ಅಗತ್ಯವೂ ಇದೆ.

ತೆನೆ, ಚುಕ್ಕಿ ನಂಜುಂಡಸ್ವಾಮಿ, ಲೂಕಾ

ನಿರೂಪಣೆ: ಸೂರ್ಯನಾರಾಯಣ ವಿ.

ಕೈಗಳಿಲ್ಲದಿದ್ದರೂ ಕುಗ್ಗದ ಕ್ರಿಕೆಟಿಗ ಆಮಿರ್

ಜಮ್ಮು–ಕಾಶ್ಮೀರದ ಪ್ಯಾರಾ ಕ್ರಿಕೆಟಿಗ ಆಮಿರ್ ಹುಸೇನ್ ಲೋನ್ ಅವರು ಅಪಘಾತವೊಂದರಲ್ಲಿ ಎರಡೂ ಕೈಗಳನ್ನು ಕಳೆದುಕೊಂಡರು. ಜೀವನದಲ್ಲಿ ಎದುರಾದ ಕಷ್ಟಗಳೆಲ್ಲವನ್ನೂ ದಿಟ್ಟತನದಿಂದ ಎದುರಿಸಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಆಡಿದ ಇವರು ಇದೀಗ ಉದ್ಯಮಿ ಗೌತಮ್ ಅದಾನಿ ಸೇರಿದಂತೆ ಹಲವು ಖ್ಯಾತನಾಮರ ಗಮನ ಸೆಳೆದಿದ್ದಾರೆ. ಆಮಿರ್ ಅವರ ಜೀವನಗಾಥೆಯ ಬಯೋಪಿಕ್ ಕೂಡ ತೆರೆಗೆ ಬರಲು ಸಿದ್ಧವಾಗಿದೆ. ಅವರ ಜೀವನದ ಕಥೆಯನ್ನು ಅವರಿಂದಲೇ ಕೇಳೋಣ ಬನ್ನಿ

ಗಿರೀಶ ದೊಡ್ಡಮನಿ

ನಾನು ಕ್ರಿಕೆಟ್ ಆಟಗಾರನಾಗುತ್ತೇನೆ ಎಂದು ಯಾವತ್ತೂ ಅಂದುಕೊಂಡಿರಲಿಲ್ಲ. ಎರಡು ಕೈಗಳೇ ಇಲ್ಲದ ನಾನು ಆಡುವುದು ದೂರದ ಮಾತು ಎಂದು ಹೇಳಿದವರೇ ಹೆಚ್ಚು. ಆದರೆ ಇವತ್ತು ನಾನು ಜಮ್ಮು–ಕಾಶ್ಮೀರ ಪ್ಯಾರಾ ಕ್ರಿಕೆಟ್ ತಂಡದ ನಾಯಕ. ಭುಜ ಮತ್ತು ಕುತ್ತಿಗೆಯ ನಡುವೆ ಬ್ಯಾಟ್ ಹಿಡಿದು ಆಡುವ ಮತ್ತು ಕಾಲಿನಿಂದ ಬೌಲಿಂಗ್ ಮಾಡುವ ನನ್ನ ಆಟಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ಅಪಾರ ಸಂಖ್ಯೆಯ ಜನರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸಚಿನ್ ತೆಂಡೂಲ್ಕರ್, ಯುವರಾಜ್ ಸಿಂಗ್, ಹರಭಜನ್ ಸಿಂಗ್, ಆಶಿಶ್ ನೆಹ್ರಾ, ವಿರಾಟ್ ಕೊಹ್ಲಿ ಮತ್ತು ಅಜಯ್ ಜಡೇಜ ಅವರಂತಹ ಖ್ಯಾತನಾಮ ಕ್ರಿಕೆಟಿಗರೂ ನನ್ನ ಆಟ ನೋಡಿ ಬೆರಗಾಗಿದ್ದಾರೆ. ಇತ್ತೀಚೆಗಷ್ಟೇ ಉದ್ಯಮಿ ಗೌತಮ್ ಅದಾನಿಯವರೂ ‘ಎಕ್ಸ್’ ಮೂಲಕ ನೆರವಿನ ಹಸ್ತ ಚಾಚುವುದಾಗಿ ಭರವಸೆ ನೀಡಿದ್ದಾರೆ. ಇದೆಲ್ಲದರಿಂದ ಅರಿವಾಗಿದ್ದಿಷ್ಟೇ. ಸಾಧಿಸುವ ಛಲ ಮತ್ತು ಬದ್ಧತೆಗಳಿದ್ದರೆ ಯಾವುದೂ ಅಸಾಧ್ಯವಲ್ಲ. ಅಂಗವೈಕಲ್ಯ ಏನೇ ಇದ್ದರೂ ಜಯಿಸಿಬಿಡಬಹುದು. ದೃಢ ಮನಸ್ಸು ಇದ್ದಲ್ಲಿ ದೇವರ ದಯೆಯೂ ಇರುತ್ತದೆ. ಮರದಿಂದ ಆಕ್ರೋಟ್ ಬೀಳಿಸುವುದನ್ನು ಕಲಿತೆ, ಬಾತುಕೋಳಿ ಈಜುವುದನ್ನು ನೋಡಿ ನಾನೂ ಈಜಿದೆ. ಚಹಾ ಮಾಡುವುದನ್ನು, ಬಟ್ಟೆ ಹಾಕಿಕೊಳ್ಳುವುದನ್ನು ಹಟಹಿಡಿದು ಕಲಿತೆ.

ಆದರೆ, ನಾನು ಕ್ರಿಕೆಟಿಗನಾಗಬೇಕೆಂದು ಅನಿಸಿದ್ದು 11–12 ವರ್ಷದವನಿದ್ದಾಗ. ಅದೊಂದು ದಿನ ಪಕ್ಕದ ಮನೆಯಲ್ಲಿ ಟಿ.ವಿಯಲ್ಲಿ ಪ್ರಸಾರವಾಗುತ್ತಿದ್ದ ಕ್ರಿಕೆಟ್ ಪಂದ್ಯ ನೋಡಲು ಹೋಗಿದ್ದೆ. ಆದರೆ ಆ ಮನೆಯವರು ಟಿ.ವಿ ಆಫ್ ಮಾಡಿ ‘ಮ್ಯಾಚ್ ಮುಗೀತು ಮನೆಗ್ಹೋಗು’ ಎಂದು ಹೊರಹಾಕಿದರು. ನಾನು ಹೊಸ್ತಿಲು ದಾಟಿ ಬಂದ ತಕ್ಷಣವೇ ಆನ್ ಮಾಡಿದರು. ಸದ್ದು ಕೇಳಿತು. ಬಹಳ ಬೇಸರವಾಯಿತು. ಆದರೆ ಅವರ ಮನೆಯ ಕಿಟಕಿ ಮೂಲಕ ಇಣುಕಿದೆ. ಟಿ.ವಿ ಪರದೆಯಲ್ಲಿ ಸಚಿನ್ ತೆಂಡೂಲ್ಕರ್ ಬ್ಯಾಟಿಂಗ್ ಕಾಣಿಸತೊಡಗಿತು. ತುದಿಗಾಲಿನಲ್ಲಿ ನಿಂತು ನೋಡಿದೆ. ನನಗೂ ಸಚಿನ್ ಅವರಂತೆ ಬ್ಯಾಟಿಂಗ್ ಮಾಡುವ ಆಸೆ ಚಿಗುರಿತು. ಮನದೊಳಗೇ ಹೆಮ್ಮರವಾಗಿ ಬೆಳೆಯತೊಡಗಿತು.

ಮನೆಗೆ ಬಂದವನೇ, ಅಜ್ಜಿಗೆ ಕ್ರಿಕೆಟ್ ಆಡಲು ಬಾ ಎಂದು ಕರೆದೆ. ನಗುತ್ತ ಚೆಂಡು ಹಾಕಿದರು. ಬ್ಯಾಟ್ ತೆಗೆದುಕೊಂಡು ಆಡಲು ಪ್ರಯತ್ನಿಸಿದೆ. ಹೇಗೆ ಆಡುವುದೆಂದೇ ಗೊತ್ತಾಗಲಿಲ್ಲ. ದಿನವೂ ಅಭ್ಯಾಸಕ್ಕಿಳಿದೆ. ಕಾಲಿನಿಂದ ಚೆಂಡು ಒಗೆಯುವುದನ್ನು ರೂಢಿಸಿಕೊಂಡೆ. ಹೊರಗೆ ಆಡಲು ಅವಕಾಶವಿರಲಿಲ್ಲ. ಬೇರೆ ಹುಡುಗರು ನನ್ನ ಸಮೀಪಕ್ಕೂ ಬರುತ್ತಿರಲಿಲ್ಲ ಮತ್ತು ನಿಂದಿಸುತ್ತಿದ್ದರು. ನನ್ನ ಆಸಕ್ತಿ ನೋಡಿದ್ದ ಶಿಕ್ಷಕರೊಬ್ಬರು, ಒಂಬತ್ತನೇ ತರಗತಿಯಲ್ಲಿದ್ದಾಗ ಶೂ, ಬಟ್ಟೆ ಕೊಡಿಸುವುದಾಗಿ ಹೇಳಿದರು. ಆದರೆ ಸ್ವಾಭಿಮಾನಿ ಅಪ್ಪ ನಿರಾಕರಿಸಿದರು. ‘ನೀನು ಅಪಘಾತಕ್ಕೊಳಗಾಗಿ ಕೈಗಳನ್ನು ಕಳೆದುಕೊಂಡಾಗ ನೂರು ರೂಪಾಯಿ ಸಹಾಯ ಮಾಡಿದ್ದವರೊಬ್ಬರು ಈಗಲೂ ಹಂಗಿಸುತ್ತಾರೆ. ಮತ್ತೆಲ್ಲೂ ನೆರವು ಬೇಡ’ ಎಂದು ಅಪ್ಪ ಖಡಾಖಂಡಿತವಾಗಿ ಹೇಳಿದ್ದರು.

ಹೌದು. ನನ್ನನ್ನು ಶಾಶ್ವತ ಅಂಗವಿಕಲನನ್ನಾಗಿ ಮಾಡಿದ ಆ ಕರಾಳದಿನವನ್ನು ಮರೆಯುವುದಾದರೂ ಹೇಗೆ? ನಾನು ಎಂಟನೇ ವರ್ಷದವನಿದ್ದೆ. ಅಪ್ಪ ಮತ್ತು ಅಣ್ಣ ಕಟ್ಟಿಗೆಯ ಪೆಟ್ಟಿಗೆಗಳನ್ನು ತಯಾರಿಸುವ ಸಾ ಮಿಲ್ ಇಟ್ಟುಕೊಂಡಿದ್ದರು.

12ನೇ ಪುಟಕ್ಕೆ...

ಆಮಿರ್ ಹುಸೇನ್ ಲೋನ್ ಬೌಲಿಂಗ್
–ಪಿಟಿಐ ಚಿತ್ರ

ಗುರಿ ಇರುವ ಗುರುವಿಗೆ ಪದ್ಮಶ್ರೀ

ಮನಸಾ ನಾಗಭೂಷಣಂ

ಎಂ.ಕೆ.ಶ್ರೀಧರ್ (ಮಾಕಮ್ ಕೃಷ್ಣಮೂರ್ತಿ ಶ್ರೀಧರ್) ಅವರಿಗೆ ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಸಾಧನೆಗಾಗಿ ಪದ್ಮಶ್ರೀ ಪ್ರಶಸ್ತಿ ಸಂದಿದೆ. ಭಾರತದ ಬಹುತೇಕ ವಿಶ್ವವಿದ್ಯಾಲಯ ಅಥವಾ ಕಾಲೇಜುಗಳಲ್ಲಿ ಇವರ ಪರಿಚಯವಿದೆ. ಇವರು 2020ರಲ್ಲಿ ಅಂಗೀಕರಿಸಲಾದ ರಾಷ್ಟ್ರೀಯ ಶಿಕ್ಷಣ ನೀತಿಯ ರೂವಾರಿ. ಶಿಕ್ಷಣ ಕ್ಷೇತ್ರದಲ್ಲಿ ಇವರದು ದೊಡ್ಡ ಹೆಸರು. ಪ್ರತಿಯೊಬ್ಬರ ಜೀವನದ ಬಗ್ಗೆ ಕಾಳಜಿ, ಅವರ ಬಗ್ಗೆ ಮೆಚ್ಚುಗೆ ಮತ್ತು ಭರವಸೆಯ ನುಡಿಗಳು ಎಲ್ಲರಲ್ಲೂ ಒಂದು ರೀತಿ ಸ್ಫೂರ್ತಿ ತುಂಬುತ್ತದೆ. ಕುಲಪತಿಗಳಿಂದ ಹಿಡಿದು ಶಿಕ್ಷಕ ವರ್ಗ, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಮನವನ್ನು ಆಯಸ್ಕಾಂತದಂತೆ ಸೆಳೆಯುವ ಶಕ್ತಿ ಇವರದು. ಪ್ರತಿ ವ್ಯಕ್ತಿಯ ಜೊತೆ ಒಂದು ರೀತಿಯ ಭಾವನಾತ್ಮಕ ಸಂಬಂಧವನ್ನು ಬೆಳೆಸಿಕೊಂಡು ಅವರ ಜೊತೆ ಮತ್ತೆ ಒಡನಾಡುವ ವಿರಳ ವ್ಯಕ್ತಿತ್ವ. ಗಾಲಿ ಕುರ್ಚಿಯೇ ಇವರ ಓಡಾಟದ ಸಾಧನವಾದರೂ ಇವರಲ್ಲಿ ಸದಾ ಚಿಮ್ಮುವ ಉತ್ಸಾಹ, ನಿರಂತರ ಚಟುವಟಿಕೆ, ಹೊಸತನ್ನು ಹುಟ್ಟುಹಾಕುವ ಮನೋಭಾವ ಎಲ್ಲರ ನಡವಳಿಕೆಯ ಮೇಲೆ ಪ್ರಭಾವ ಬೀರುತ್ತದೆ.

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಅಳವಡಿಸಿದ ಅನೇಕ ಅಂಶಗಳು ಶ್ರೀಧರ್ ಅವರು ತಮ್ಮ ನಿತ್ಯ ತರಗತಿಗಳಲ್ಲಿ ಮಾಡಿದ ಪ್ರಯೋಗಗಳು. ಉದಾಹರಣೆಗೆ ಅನುಭವಾತ್ಮಕ ಶಿಕ್ಷಣ. ಶ್ರೀಧರ್ ಯಾವತ್ತೂ ವಿದ್ಯಾರ್ಥಿಗಳಿಗೆ ಕೇವಲ ಪಠ್ಯಪುಸ್ತಕದ ಪ್ರವಚನ ನೀಡಿದವರಲ್ಲ. ‘ನೋಡಿ ತಿಳಿ ಮಾಡಿ ಕಲಿ’ ಎಂಬ ಸೂತ್ರವನ್ನು ಅನೇಕ ವರ್ಷಗಳಿಂದ ಅನುಸರಿಸಿದವರು.

ಅವರ ಕಲಿಕೆಯ ವಿಧಾನದಲ್ಲಿ ವಿದ್ಯಾರ್ಥಿಗಳು ಪ್ರಸ್ತುತ ಸಮಸ್ಯೆಗಳನ್ನು ಆಯ್ಕೆ ಮಾಡಿ, ಸಂಬಂಧಿತ ಕ್ಷೇತ್ರದಲ್ಲಿ ಕೆಲಸ ಮಾಡಿ, ಅದಕ್ಕೆ ಸೂಕ್ತ ಪರಿಹಾರ ಸೂಚಿಸಬೇಕಿತ್ತು. ಪರಿಹಾರದಲ್ಲಿ ಹೊಸತನ, ಕಾರ್ಯಗತಗೊಳಿಸಲು ಮಾಡಬೇಕಾದ ಪ್ರಯತ್ನ, ಒದಗಬಹುದಾದ ಸವಾಲು ಮತ್ತು ಆ ನಿಟ್ಟಿನಲ್ಲಿ ಹಾಕಬೇಕಾದ ಮುಂದಿನ ಹೆಜ್ಜೆಗಳನ್ನು ಆಲೋಚಿಸುವಂತೆ ವಿದ್ಯಾರ್ಥಿಗಳನ್ನು ಅವರು ಪ್ರೇರೇಪಿಸುತ್ತಿದ್ದರು. ವಿದ್ಯಾರ್ಥಿಗಳು ಯಾವ ಯೋಜನೆಯನ್ನು ತೆಗೆದುಕೊಂಡರೂ ಅದನ್ನು ಪೂರ್ಣಗೊಳಿಸಲು ಬೇಕಾದ ಎಲ್ಲಾ ಸಲಹೆಗಳನ್ನು ನೀಡುತ್ತಿದ್ದರು. ಇದಕ್ಕೆ ಬೇಕಾದ ಸಮಯವನ್ನು ಕೊಟ್ಟು ವೈಯಕ್ತಿಕವಾಗಿ ಮಾರ್ಗದರ್ಶನ ಮಾಡುತ್ತಿದ್ದರು.

ಪ್ರಶ್ನೆ ಕೇಳುವುದು, ಅನುಭವ ಹಂಚಿಕೊಳ್ಳುವುದು, ವಿಷಯವನ್ನು ಚರ್ಚಿಸುವುದು, ತರ್ಕ ಮಂಡಿಸುವುದು, ಆಟಗಳು–ಹೀಗೆ ಹಲವಾರು ರೀತಿಯ ಕಲಿಕಾ ಕ್ರಮವನ್ನು ತರಗತಿಗಳಲ್ಲಿ ಪ್ರಯೋಗಿಸುತ್ತಿದ್ದರು. ವಿದ್ಯಾರ್ಥಿಗಳಲ್ಲಿ ಆಲೋಚನಾ ಶಕ್ತಿ ಮತ್ತು ಕಲ್ಪನಾಶಕ್ತಿ ಹೆಚ್ಚಿಸುವ ಪ್ರಯೋಗಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿದ್ದರು. ಸಾವಿರಾರು ವಿದ್ಯಾರ್ಥಿಗಳು ಅವರ ಜೊತೆ ಇಂತಹ ಅನುಭವಾತ್ಮಕ ಕಲಿಕೆಯಲ್ಲಿ ಪಾಲ್ಗೊಂಡು ಯಶಸ್ಸು ಕಂಡಿದ್ದಾರೆ.

13ನೇ ಪುಟಕ್ಕೆ...

ಯಕ್ಷ ಮಂತ್ರ ಮಾಂಗಲ್ಯ...

ಶತಮಾನಗಳ ಇತಿಹಾಸವಿರುವ ಯಕ್ಷಗಾನ ಕ್ಷೇತ್ರದಲ್ಲಿ ಈಗಾಗಲೇ ಅಪಾರವಾದ ಸಮೃದ್ಧ ಕನ್ನಡ ಸಾಹಿತ್ಯ ಲೋಕವೊಂದು ಸೃಷ್ಟಿಯಾಗಿದೆ. ಇದಕ್ಕೆ ಹೊಸ ಸೇರ್ಪಡೆ ಮಂತ್ರಮಾಂಗಲ್ಯ ವಿವಾಹಕ್ಕೆ ನಿಗದಿಪಡಿಸಿರುವ 21 ಪ್ರತಿಜ್ಞಾ ವಿಧಿಗಳು 9 ರೀತಿಯಲ್ಲಿ ರಾಗ, ತಾಳ, ಛಂದಸ್ಸುಗಳ ಸಹಿತವಾಗಿ ಯಕ್ಷಗಾನ ಹಾಡುಗಳ ರೂಪ ತಳೆದಿವೆ.



ಯಕ್ಷ ಮಂತ್ರ ಮಾಂಗಲ್ಯಕ್ಕೆ ಮುನ್ನ ತಮ್ಮನ್ನು ವೇದಿಕೆಗೆ ಕರೆತಂದ ಯಕ್ಷಗಾನಾಭ್ಯಾಸಿಗಳತ್ತ ನೋಡುತ್ತಿರುವ ವಧು-ವರ.

ಅವಿನಾಶ್ ಬಿ.

ಇದೆ ಮಂತ್ರ ಮಾಂಗಲ್ಯವಿದೆ ಮಂತ್ರ ಮಾಂಗಲ್ಯ|
ಇದೆ ಪ್ರತಿಜ್ಞೆಯು ನಿಮಗೆ ಕೇಳಿ ವಧುವರರೇ|
ಮುದದೊಳು ಕುವೆಂಪು ರಚಿಸಿದ ಮಂತ್ರ ಮಾಂಗಲ್ಯ|
ವಿಧಿಯಂತೆ ಮದುವೆಯಾಗುವಿರಿ ನೀವಿಂದು||
ಸದೆದೆಲ್ಲ ಮನಸಿನಾಧ್ಯಾತ್ಮದಾ ಸಂಕೋಲೆ|
ಯದ ಕಳೆದು ಮುಕ್ತರಾದಿರಿ ತಿಳಿಯಿರಿಂದು

ಕೆಂಪಾದ ಸೂರ್ಯನು ಪಡುಗಡಲಲ್ಲಿ ಇಳಿಯುವ ಹೊತ್ತು. ಕರಾವಳಿಯಲ್ಲಂತೂ ಚೆಂಡೆ ಮದ್ದಳೆಯ ಸದ್ದು ಕೇಳುವ ಋತುವಿದು. ಉಡುಪಿ ಜಿಲ್ಲೆಯ ಚೇರ್ಕಾಡಿ ಗ್ರಾಮದ ನೂಜಿನಬೈಲು ಎಂಬ ಹಳ್ಳಿ. ಭಾಗವತರು ಮೇಲಿನ ಈ ಹಾಡನ್ನು ಚೆಂಡೆ ಮದ್ದಳೆಯ ನಿನಾದದೊಂದಿಗೆ ಝಾವಂತು ಝಂಪೆ ಮಟ್ಟನಲ್ಲಿ ಹಾಡುತ್ತಿದ್ದರೆ, ಇದನ್ನು ಕೇಳಿ ಸುತ್ತಮುತ್ತಲಿನ ಜನ ಓಡೋಡಿ ಬಂದು, ರಂಗಸ್ಥಳದೆದುರು ಮುಂದಿನ ಸೀಟನಲ್ಲೇ ಕೂತು ಕಾಯುತ್ತಾರೆ. ಇಲ್ಲಿ ಇವತ್ತೊಂದು 'ಆಟ'ವಿದೆ ಎಂಬ ಕಾತರ ಅವರದು. ಗದ್ದೆ, ಅದರ ಮಧ್ಯೆ ಯಕ್ಷಗಾನ ಬಯಲಾಟಕ್ಕೆ ಎಂದಿನಂತೆ ಹಾಕುವ ನಾಲ್ಕು ಕಂಬಗಳ ರಂಗಸ್ಥಳವೂ ಇತ್ತು. ಆದರೆ, ಆ ದಿನ ಅವರು ಕಾದದ್ದೇ ಬಂತು. ರಂಗಸ್ಥಳದಲ್ಲಿ ವೇಷಗಳೇನೂ ಕಾಣಿಸುತ್ತಿಲ್ಲ. ಸಿಂಗಾರಗೊಂಡಿರುವ ಗಂಡು-ಹೆಣ್ಣು ಮಧ್ಯೆ ಕೂತಿದ್ದಾರೆ, ಅಕ್ಕ ಪಕ್ಕದಲ್ಲಿ ಹಿರಿಯರಿಬ್ಬರು ಕೂತಿದ್ದಾರೆ. ಹಿಂಭಾಗದಲ್ಲಿ ಯಕ್ಷಗಾನದ ಹಿಮ್ಮೇಳದವರು. ಅರೆ, 'ಇದು ಯಕ್ಷಗಾನ ಅಲ್ಲ ಮಾರ್ರೇ' ಎಂಬ ಉದ್ಗಾರ ಯಕ್ಷಗಾನ ನೋಡಲೆಂದು ಬಂದವರ ಬಾಯಿಂದ.

ಜನವರಿ 26ರ ಗಣರಾಜ್ಯೋತ್ಸವ ದಿನದಂದು ನಿರ್ಮಾಣಗೊಂಡಿದ್ದ ಈ ರಂಗಸ್ಥಳದ ವಿಶೇಷತೆ ಎಂದರೆ ಅದು ಯಕ್ಷಗಾನ ಅಲ್ಲ; ಅಲ್ಲಿ ನಡೆದದ್ದು ಯಕ್ಷ ಮಂತ್ರ ಮಾಂಗಲ್ಯ. ಮೂಲತಃ ಕರಾವಳಿಯವರೇ ಆಗಿದ್ದುಕೊಂಡು ಬೆಂಗಳೂರಿನಲ್ಲಿ ನೆಲಸಿರುವ ಪ್ರಸಾದ್ ಚೇರ್ಕಾಡಿ ಮತ್ತು ಕೀರ್ತನಾ ಉದ್ಯಾವರ ಈಗ ಜನುಮದ ಅನುಬಂಧವನ್ನು ಬೆಸೆಯಲು ಆಯ್ಕೆ ಮಾಡಿಕೊಂಡಿದ್ದು ಈ ಯಕ್ಷ ಮಂತ್ರ ಮಾಂಗಲ್ಯ ವಿಧಾನವನ್ನು. ಪ್ರಸಾದ್ ಚೇರ್ಕಾಡಿ ಅವರು ಸ್ಕ್ರಿಪ್ಟ್ ರೈಟರ್ ಆಗಿ, ಚಲನಚಿತ್ರ, ಕಿರುತೆರೆ ನಟನಾಗಿ, ಯಕ್ಷಗಾನ ಕಲಾವಿದನಾಗಿ ಮತ್ತು ಗುರುವಾಗಿ ಹೆಸರು ಮಾಡುತ್ತಿದ್ದರೆ,

> **ಕುವೆಂಪು ಸಾಹಿತ್ಯದ ಓದಿನ ವೇಳೆ ಈ ಸರಳ ಮದುವೆಯು ವಿಶೇಷ ಗಮನ ಸೆಳೆದಿತ್ತು. ನಮ್ಮಿಬ್ಬರ ಮನಸ್ಸುಗಳೂ ಒಂದೇ ರೀತಿ ಯೋಚಿಸಿದವು. ಆರಂಭದಲ್ಲಿ ಬಂಧುಗಳಿಂದ ಅಪಸ್ವರ ಬಂದಿದ್ದರೂ, ಮದುವೆಯ ವೇಳೆಗೆ ಅವೆಲ್ಲವೂ ಪರಿಹಾರ ಕಂಡಿದ್ದವು**
> **ಪ್ರಸಾದ್ ಚೇರ್ಕಾಡಿ** (ವರ)

> **ಸಂಪ್ರದಾಯ, ಆಚರಣೆ ಮುಂತಾದವುಗಳ ಬಗೆಗೆ ನನಗೆ ನನ್ನದೇ ಆದ ನಿಲುವುಗಳಿವೆ. ಆಡಂಬರಕ್ಕೆ ವಿರೋಧ ಇದ್ದೇ ಇದೆ. ಇಬ್ಬರೂ ಯಕ್ಷಗಾನ ಹಾಗೂ ಇತರ ಕಲೆಗಳ ಆರಾಧಕರು. ಸ್ವಂತ ದುಡಿಮೆಯಿಂದಲೇ ಮದುವೆಯಾಗಬೇಕೆಂಬುದು ನನ್ನ ಆಸೆ ಈಡೇರಿದೆ**
> **ಕೀರ್ತನಾ ಉದ್ಯಾವರ** (ವಧು)

ಕೀರ್ತನಾ ಅವರು ಯಕ್ಷಗಾನ, ಭರತನಾಟ್ಯ, ಯೋಗ ಗುರುವಾಗಿ ತೊಡಗಿಸಿಕೊಂಡಿರುವ ಬಹುಮುಖೀ ಪ್ರತಿಭೆ. ಇಬ್ಬರೂ ಬಾಲ್ಯದಿಂದಲೇ ಕುವೆಂಪು ಸಾಹಿತ್ಯದಿಂದ ಪ್ರಭಾವಿತರಾದವರು ಮತ್ತು ಅವರಿಬ್ಬರನ್ನೂ ಬೆಸೆದದ್ದು ಯಕ್ಷಗಾನವೇ.

ಮಂತ್ರ ಮಾಂಗಲ್ಯ

ಜೀವನದ ಅತ್ಯಂತ ಪವಿತ್ರ ಬಂಧಕ್ಕೆ ಸಾಕ್ಷಿಯಾಗುವ ಕಾರ್ಯವೊಂದನ್ನು ದುಂದು ವೆಚ್ಚ ಮಾಡದೆ, ಅತ್ಯಂತ ಸರಳವಾಗಿ ಮತ್ತು ಖಾಸಗಿಯಾಗಿ ಆಚರಿಸುವುದಕ್ಕಾಗಿ ರಾಷ್ಟ್ರಕವಿ ಕುವೆಂಪು ರೂಪಿಸಿದ ಸೂತ್ರವೇ ಮಂತ್ರ ಮಾಂಗಲ್ಯ ಎಂಬ ವಿವಾಹ ವ್ಯವಸ್ಥೆ. ಈ ಮಾದರಿಯ ವಿವಾಹದಲ್ಲಿ, ಸಾಂಪ್ರದಾಯಿಕ ವಿವಾಹ ವಿಧಿಗಳಿರುವುದಿಲ್ಲ. ಹೆಚ್ಚೆಂದರೆ ಒಂದು ತಾಳಿ ಕಟ್ಟಿಸಿಕೊಳ್ಳುವ ಪ್ರಕ್ರಿಯೆ, ಇದರ ಹೊರತಾಗಿ, ಗಂಡು-ಹೆಣ್ಣು ತಮ್ಮ ನಡುವೆ ಯಾವುದೇ ಭೇದವಿಲ್ಲ ಎನ್ನುತ್ತಾ, ಗರಿಷ್ಠ 200ಕ್ಕಿಂತ ಕಡಿಮೆ ಸಂಖ್ಯೆಯ ಬಂಧು-ಬಾಂಧವರ ನಡುವೆ ಮನೆಯಲ್ಲೇ ಸರಳವಾಗಿ ವಿವಾಹವಾಗುವುದು. ಇದಕ್ಕೆ 21 ಪ್ರತಿಜ್ಞಾ ವಿಧಿಗಳಿರುತ್ತವೆ, ಅವುಗಳನ್ನು ಸ್ವೀಕರಿಸಿ, ಬಳಿಕ ವಿವಾಹ ರಿಜಿಸ್ಟರ್ ಮಾಡಿಸಿಕೊಳ್ಳುವುದು.

ಅದರ ಮಾರ್ಪಡಿತ ರೂಪವು ಯಕ್ಷ ಮಂತ್ರ ಮಾಂಗಲ್ಯ ಹೆಸರಿನಲ್ಲೀಗ ನಡೆದಿದೆ. ಈ ಮೂಲಕ 1966ರಲ್ಲಿ ಕುವೆಂಪು ಪುತ್ರ ಪೂರ್ಣಚಂದ್ರ ತೇಜಸ್ವಿ-ರಾಜೇಶ್ವರಿ ಅವರ ವಿವಾಹದಿಂದಾರಂಭಿಸಿ, ತೀರಾ ಇತ್ತೀಚೆಗೆ ನಟಿ ಪೂಜಾ ಗಾಂಧಿ, ಚಾಮರಾಜ ನಗರ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಮುಂತಾದವರ ಸಾಲಿನಲ್ಲಿ ಈ ನೂತನ ವಧು ವರರೂ ತಮ್ಮ ವೈವಾಹಿಕ ಬದುಕಿಗೆ ಕಾಲಿಟ್ಟರು.

ಇದು ಯಕ್ಷ ಮಂತ್ರ ಮಾಂಗಲ್ಯ

ಶತಮಾನಗಳ ಇತಿಹಾಸವಿರುವ ಯಕ್ಷಗಾನ ಕ್ಷೇತ್ರದಲ್ಲಿ ಈಗಾಗಲೇ ಅಪಾರವಾದ ಸಮೃದ್ಧ ಕನ್ನಡ ಸಾಹಿತ್ಯ ಲೋಕವೊಂದು ಸೃಷ್ಟಿಯಾಗಿದೆ. ಇದಕ್ಕೆ ಹೊಸ ಸೇರ್ಪಡೆ ಎಂದರೆ ಮಂತ್ರಮಾಂಗಲ್ಯ ವಿವಾಹಕ್ಕೆ ನಿಗದಿಪಡಿಸಿರುವ 21 ಪ್ರತಿಜ್ಞಾ ವಿಧಿಗಳು 9 ರೀತಿಯಲ್ಲಿ ರಾಗ, ತಾಳ, ಛಂದಸ್ಸುಗಳ ಸಹಿತವಾಗಿ ಯಕ್ಷಗಾನ ಹಾಡುಗಳ ರೂಪ ತಳೆದಿವೆ. ಈ ಮಂತ್ರಮಾಂಗಲ್ಯದ ಪ್ರತಿಜ್ಞೆಗಳನ್ನೇ ಪದ್ಯರೂಪಕ್ಕೆ ಪರಿವರ್ತಿಸಿ, ಮಟ್ಟು ನಿರ್ಣಯಿಸಿ ಸಾಹಿತ್ಯ ಬರೆದವರು ಛಾಂದಸ ಕವಿ ಗಣೇಶ್ ಕೊಲೆಕಾಡಿ. ತೀರಾ ಅನಾರೋಗ್ಯದಲ್ಲಿದ್ದರೂ ತಮ್ಮ ಶಿಷ್ಯರಿಬ್ಬರ ಮೇಲಿನ ಪ್ರೀತಿಯಿಂದ ಈ ಮಂತ್ರ ಮಾಂಗಲ್ಯದ ಹಾಡುಗಳನ್ನು ರಚಿಸಿ ಕೊಟ್ಟಿದ್ದಾರೆ. ಇದನ್ನು ಮದುವೆಯ ರಂಗಸ್ಥಳದಲ್ಲಿ ಹಾಡಿ ತೋರಿಸಿದವರು ಪ್ರಸಾದ್ ಚೇರ್ಕಾಡಿ ಅವರ ಯಕ್ಷಗಾನ - ರಂಗ ತರಬೇತಿ ಶಾಲೆಯಾದ 'ಕಥೆಗಾರರು' ಸಮೂಹದ ವಿದ್ಯಾರ್ಥಿಗಳು.

ಹಾಡುಗಾರಿಕೆ, ಚೆಂಡೆ-ಮದ್ದಳೆಯ ಬಿಡಿತ-ಮುಕ್ತಾಯಗಳ ಬಳಿಕ, ಬಂದಿದ್ದ ಗಣ್ಯರು, ಒಂದೊಂದು ಹಾಡಿನಲ್ಲಿ ಅಡಕವಾಗಿರುವ ಮಂತ್ರ ಮಾಂಗಲ್ಯದ ಪ್ರತಿಜ್ಞಾಗುಚ್ಛವನ್ನು ವಿವರಿಸಿ, ವಧು-ವರರಿಗೆ ಬೋಧಿಸಿದರು. ಒಂದು ರೀತಿಯಲ್ಲಿ ಯಕ್ಷಗಾನದ ಮತ್ತೊಂದು ರೂಪವಾಗಿರುವ ತಾಳಮದ್ದಳೆಯಂತೆಯೇ ಇದು ಭಾಸವಾಯಿತು. ಯಕ್ಷ ಮಂತ್ರ ಮಾಂಗಲ್ಯ ಆರಂಭಕ್ಕೆ ಮುನ್ನ, ಯಕ್ಷಗಾನದ ಚೌಕಿಯಲ್ಲಿ ಸಾಂಪ್ರದಾಯಿಕವಾಗಿ 'ಗಜಮುಖದವಗೆ ಗಣಪಗೆ' ಎಂಬ ಯಕ್ಷಗಾನದ ಸ್ತುತಿ ಪದ್ಯದ ಬಳಿಕ, ಯಕ್ಷಗಾನದ ವಿದ್ಯಾರ್ಥಿಗಳೆಲ್ಲರೂ ಮದುಮಕ್ಕಳನ್ನು 'ಧಿಮಿತಕಿಟ ತದ್ದಿಮಿತ ದಿಂಧತ್ತೈ' ಪರಂಪರೆಯ ನಡೆಯ 'ದಿಬ್ಬಣದ' ಮೂಲಕ ಚೆಂಡೆ-ಮದ್ದಳೆ ನುಡಿತದೊಂದಿಗೆ ವಿವಾಹ ನಡೆಯುವ ರಂಗಸ್ಥಳಕ್ಕೆ ಕರೆತಂದರು. ಬಾಲಗೋಪಾಲ ಹಾಗೂ ಡೌರು ವೇಷಧಾರಿಗಳು ಜೊತೆಯಾಗಿದ್ದರು. ಇದಕ್ಕೆ 'ಮುಕ್ತಾಯ' ನುಡಿಸಿದ ಬಳಿಕ, ಪ್ರಸಾದ್-ಕೀರ್ತನಾ ಕಲ್ಯಾಣ!

ಇಡೀ ಕಾರ್ಯಕ್ರಮವನ್ನು ರಂಗಕರ್ಮಿ ನಾಗೇಶ್ ಉದ್ಯಾವರ ನಿರ್ವಹಿಸಿದರೆ, ಅವರೊಂದಿಗೆ ಯಕ್ಷಗಾನ ಗುರು ಕರ್ಗಲ್ಲು ವಿಶ್ವೇಶ್ವರ ಭಟ್, ಆಳ್ವಾಸ್ ಪ್ರತಿಷ್ಠಾನದ ಎಂ. ಮೋಹನ್ ಆಳ್ವ, ಕಲಾವಿದ ಪೇತ್ರಿ ಮಾಧವ ನಾಯ್ಕ್, ರಂಗ ಕಲಾವಿದೆ ಶರಣ್ಯಾ ರಾಂಪ್ರಕಾಶ್, ರಾಜ್ಯದ ಮೊದಲ ಲಿಂಗತ್ವ ಅಲ್ಪಸಂಖ್ಯಾತ ರಿಕ್ಷಾ ಚಾಲಕಿ ಕಾವೇರಿ ಮೇರಿ ಡಿಸೋಜ, ಸ್ಥಳೀಯ ಹಿರಿಯಜ್ಜಿ ವಿಮಲಾ ದೊಡ್ಡಯ್ಯ, ಕೀರ್ತನಾರ ಹೆತ್ತವರಾದ ಸುನಂದಾ ಮತ್ತು ಕುಶಲ, ಪ್ರಸಾದರ ತಾಯಿ ಸುಶೀಲಾ - ಇವರೆಲ್ಲರೂ ಹಾಡುಗಳಿಗೆ ಅರ್ಥ ಹೇಳುವ ರೀತಿಯಲ್ಲಿ ಪ್ರತಿಜ್ಞಾ ವಿಧಿಗಳನ್ನು ಬೋಧಿಸಿದರು.

ಮದುವೆ ಎಂದರೆ ಬಜೆಟ್ ಎಷ್ಟು ಎಂಬಲ್ಲಿಂದ, ಪ್ರೀ ವೆಡ್ಡಿಂಗ್ ಶೂಟ್, ಪೋಸ್ಟ್ ವೆಡ್ಡಿಂಗ್ ಶೂಟ್, ಪ್ರೀ ವೆಡ್ಡಿಂಗ್ ಪ್ರವಾಸ, ಹನಿಮೂನ್‌ಗೆ ವಿದೇಶ ಪ್ರವಾಸ - ಇವೆಲ್ಲ ಅನಿವಾರ್ಯ ಎಂಬಷ್ಟರ ಮಟ್ಟಿಗೆ ಸಾಮಾಜಿಕ ಬದಲಾವಣೆ ಆಗಿಬಿಟ್ಟಿದೆ. ಉಳ್ಳವರಿಗಿದು ಅಂತಸ್ತು ತೋರಿಸುವ ಹಂಬಲ. ಇಂಥ ಸಂದರ್ಭದಲ್ಲಿ ಸ್ವತಃ ಪ್ರಧಾನಿಯವರೇ ಈ ದೇಶದಲ್ಲೇ ಮದುವೆಯಾಗಿ ಅಂತ ಕರೆ ನೀಡುವವರೆಗೂ ವೈವಾಹಿಕ ಉದ್ಯಮವು ಬೃಹತ್ತಾಗಿ ಬೆಳೆದುಬಿಟ್ಟಿದೆ. ಮನೆಯಲ್ಲೇ ಮದುವೆಯಾಗುವುದೇ? ಎಂಬ ಪ್ರಶ್ನೆ ಕೇಳುವವರೇ ಇರುವವರ ನಡುವೆ ಯುವ ಜನಾಂಗವು ಅದ್ದೂರಿತನ ಪ್ರದರ್ಶಿಸದಿರುವ ಮತ್ತು ಬದುಕಿಗೆ ಅನಿವಾರ್ಯವಾಗಿರುವ ನೀತಿ ಸೂತ್ರಗಳೊಂದಿಗೆ ಸರಳ ವಿವಾಹದತ್ತ ಆಕರ್ಷಿತರಾಗುತ್ತಿರುವುದು ಈ ಕಾಲದ ಬದಲಾವಣೆ.

ಮುನ್ನೋಟ 11-02-2024 ರಿಂದ -17-02-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ನಿಮ್ಮ ಕೆಲವು ನಿಲುವುಗಳಿಂದ ನಿಮಗೆ ಅಪಖ್ಯಾತಿ ಬರುವ ಸಾಧ್ಯತೆ ಇದೆ. ಧನ ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಚಟುವಟಿಕೆಗಳಿಂದ ವೃತ್ತಿಯಲ್ಲಿ ಕೆಲವು ಅನುಕೂಲ ಮತ್ತು ಅನಾನುಕೂಲಗಳನ್ನು ನೀವೇ ಸೃಷ್ಟಿಮಾಡಿಕೊಳ್ಳುವಿರಿ. ನಿಮ್ಮ ಸ್ಥಿರಾಸ್ತಿಯ ವಿಷಯದಲ್ಲಿ ತಣ್ಣಗಿದ್ದ ತಗಾದೆಗಳು ಜಾಸ್ತಿ ಆಗುತ್ತವೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಶ್ರದ್ಧೆಯು ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ವೈಯಕ್ತಿಕ ವರ್ಚಸ್ಸು ಕಡಿಮೆಯಾಗಬಹುದು. ನಿಮ್ಮ ನಡವಳಿಕೆ ಬಹಳ ಚುರುಕಾಗಿದ್ದು ಸಂಪಾದನೆಯತ್ತ ಕೇಂದ್ರೀಕೃತವಾಗಿರುತ್ತದೆ. ಹಿರಿಯರು ಸಂಸಾರದಲ್ಲಿ ಶಾಂತಿ ನೆಲೆಸುವಂತೆ ಮಾಡುವರು. ವಿದ್ಯಾರ್ಥಿಗಳಿಗೆ ಯಶಸ್ಸು ಸ್ವಲ್ಪಕಡಿಮೆ ಇರುತ್ತದೆ. ಸ್ತ್ರೀಯರಿಗೆ ಕೊಟ್ಟ ಹಣ ವಾಪಾಸ್ ಬರುವ ಸಾಧ್ಯತೆ ಕಡಿಮೆ. ಕೃಷಿಯಿಂದ ಹೆಚ್ಚು ಆದಾಯ ಬರುವ ಸಾಧ್ಯತೆ ಇದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ನಿಮಗೆ ಅರಿವಿಲ್ಲದೆ ನಿಮ್ಮ ಮಾತು ಕಠಿಣವಾಗಬಹುದು, ಹೆಚ್ಚು ಎಚ್ಚರ ವಹಿಸಿ. ಕ್ರೀಡಾಪಟುಗಳಿಗೆ ಎಲ್ಲಾ ರೀತಿಯ ಸೌಕರ್ಯ ದೊರೆಯಬಹುದು. ಸ್ವಂತ ಜಮೀನನ್ನು ಅಭಿವೃದ್ಧಿ ಮಾಡುವ ಯೋಗವಿದೆ. ಸರ್ಕಾರಿ ಜಮೀನು ವಶ ಮಾಡಿಕೊಂಡಿರುವವರಿಗೆ ಈಗ ಕಾನೂನು ತಕರಾರುಗಳು ಎದುರಾಗುವ ಸಾಧ್ಯತೆಗಳಿವೆ. ಸಂಗಾತಿಯಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಧನಸಹಾಯ ಸಿಗಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಮೈಯಲ್ಲಿ ಹಾಗೂ ಮನಸ್ಸಿನಲ್ಲಿ ಸ್ವಲ್ಪ ಆಲಸಿತನ ಇರುತ್ತದೆ. ಕೃಷಿಕರಿಗೆ ತಾವು ಪಟ್ಟ ಶ್ರಮಕ್ಕೆ ಉತ್ತಮ ಬೆಲೆ ಬರುತ್ತದೆ. ಕ್ರೀಡಾ ವಿದ್ಯಾರ್ಥಿಗಳಿಗೆ ಕಲಿಯಲು ಉತ್ತಮ ಶಾಲಾ ವ್ಯವಸ್ಥೆ, ಉತ್ತಮ ಗುರುಗಳು ದೊರಕುವರು. ಆಭರಣ ತಯಾರಕರಿಗೆ ಸ್ವಲ್ಪಮಟ್ಟಿಗೆ ಬೇಡಿಕೆ ಕಡಿಮೆಯಾಗಬಹುದು. ಸಂಗಾತಿ ಕಡೆಯವರ ವ್ಯವಹಾರಗಳಲ್ಲಿ ನಿಮಗೆ ಪಾಲು ದೊರೆಯುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ನಿಮ್ಮ ವ್ಯಕ್ತಿತ್ವದ ಬಗ್ಗೆ ನಿಮಗೆ ಹೆಚ್ಚು ನಂಬಿಕೆ ಇರಲಿ. ಇದು ಕೆಲಸ ಕಾರ್ಯಗಳ ಮೇಲೆ ಪರಿಣಾಮ ಬೀರುತ್ತದೆ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆ ಹೆಚ್ಚು ಹಣ ಸಂಪಾದನೆ ಮಾಡುವ ಕಡೆಗೆ ಇರುತ್ತದೆ. ಸ್ತ್ರೀಯರಿಂದ ನಿಮಗೆ ಹೆಚ್ಚು ಅನುಕೂಲವಾಗುತ್ತದೆ. ಕೃಷಿಯಿಂದ ಬರುವ ಆದಾಯ ಸ್ವಲ್ಪಮಟ್ಟಿಗೆ ಕಡಿಮೆಯಾಗಬಹುದು. ವಿದ್ಯಾರ್ಥಿಗಳಿಗೆ ಹೆಚ್ಚು ಯಶಸ್ಸು ಇರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಕೆಲಸ ಕಾರ್ಯಗಳಲ್ಲಿ ನಿರಾಸಕ್ತಿ ಮೂಡುತ್ತದೆ. ಹಣದ ಒಳಹರಿವು ಮಧ್ಯಮ ಗತಿಯಲ್ಲಿರುತ್ತದೆ. ನಟನೆ ಮಾಡುವವರಿಗೆ ಹೆಚ್ಚು ಅವಕಾಶಗಳು ದೊರೆಯುತ್ತವೆ. ಬಂಧುಗಳ ನಡುವೆ ಹಳಸಿದ್ದ ಸಂಬಂಧಗಳನ್ನು ಸುಧಾರಿಸಲು ಯತ್ನ ಮಾಡುವಿರಿ. ಭೂಮಿ ವ್ಯಾಪಾರವನ್ನು ಮಾಡುವವರಿಗೆ ಉತ್ತಮ ಸಂಪಾದನೆ ಇರುತ್ತದೆ. ಮಾನಸಿಕ ರೋಗಿಗಳು ಹೆಚ್ಚು ಎಚ್ಚರದಿಂದಿರ ಬೇಕು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ನಿಮ್ಮ ವೈಯಕ್ತಿಕ ಗೌರವವನ್ನು ಬಹಳ ಅಪೇಕ್ಷೆ ಪಡುವಿರಿ. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಬಹಳ ಚುರುಕಾಗಿ ಮಾತನಾಡಿ ಎಲ್ಲರ ಗಮನ ಸೆಳೆಯುವಿರಿ. ನಿಮ್ಮ ಆಸ್ತಿಯ ದಾಖಲೆಗಳಲ್ಲಿ ಇದ್ದ ಗೊಂದಲಗಳು ಈಗ ಸರಿಯಾಗುತ್ತವೆ. ಮಕ್ಕಳಿಂದ ಅಗೌರವ ಸಿಗುವ ಸಾಧ್ಯತೆ ಇದೆ. ಸಂಗಾತಿ ಕಡೆಯವರಿಂದ ನಿಮಗೆ ನಿರೀಕ್ಷಿತ ಸಹಾಯ ದೊರೆಯುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಧನ ಆದಾಯವು ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ. ಸೈನಿಕರಿಗೆ ಮೇಲ್ದರ್ಜೆಯ ಹುದ್ದೆಗೆ ಬಡ್ತಿ ದೊರೆಯುವ ಸಂದರ್ಭವಿದೆ. ಸಾಂಪ್ರದಾಯಿಕ ಕೃಷಿಯನ್ನು ಮಾಡುವವರಿಗೆ ಹೆಚ್ಚು ಬೆಲೆ ಬರುತ್ತದೆ. ವೆಚ್ಚದ ಮೇಲೆ ನಿಗಾ ಇಡದಿದ್ದಲ್ಲಿ ಆರ್ಥಿಕ ಪರಿಸ್ಥಿತಿ ವ್ಯತ್ಯಾಸವಾಗಬಹುದು. ತಾಯಿಯ ಜೊತೆ ಸ್ವಲ್ಪ ಮಾತುಗಳಾದರೂ, ಅವರು ನಿಮಗೆ ಸಹಕಾರ ನೀಡುವರು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಸ್ತ್ರೀಯರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ಸರ್ಕಾರಿ ಸಂಸ್ಥೆಗಳಿಂದ ಬರಬೇಕಾಗಿದ್ದ ಬಾಕಿ ಹಣಗಳು ಈಗ ಬರುತ್ತವೆ. ಕೃಷಿಯಿಂದ ಆದಾಯ ಹೆಚ್ಚುತ್ತದೆ. ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಹೆಚ್ಚು ವ್ಯವಹಾರ ನಡೆಯುತ್ತದೆ. ಬಹಳ ಸೂಕ್ಷ್ಮವಾಗಿ ನಿಮ್ಮ ವೈರಿಗಳ ಸದ್ದು ಅಡಗಿಸುವಿರಿ. ನವೀನರೀತಿಯ ಕೃಷಿಕರಿಗೆ ಬೇಕಾದ ಸೌಲಭ್ಯಗಳು ದೊರೆಯುತ್ತವೆ. ವೃತ್ತಿಯಲ್ಲಿ ಯಾವುದೇ ಏರಿಳಿತವಿರುವುದಿಲ್ಲ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಸರ್ಕಾರಿ ಹಿರಿಯ ಅಧಿಕಾರಿಗಳಿಗೆ ಹೆಚ್ಚಿನ ಜವಾಬ್ದಾರಿ ದೊರೆಯುವ ಸಾಧ್ಯತೆ ಇದೆ. ಕೆಲವು ಕ್ರೀಡಾಪಟುಗಳಿಗೆ ಕ್ರೀಡಾಸಂಸ್ಥೆಗಳ ಮುಖ್ಯಸ್ಥರಾಗುವ ಯೋಗವಿದೆ. ಧನ ಆದಾಯದಲ್ಲಿ ಸ್ವಲ್ಪ ಏರಿಕೆಯನ್ನು ಕಾಣಬಹುದು. ಆಸ್ತಿ ಕೊಳ್ಳುವಿಕೆ ವಿಚಾರದಲ್ಲಿ ಈಗ ಮುಂದುವರಿಯಬಹುದು. ವಿದ್ಯಾರ್ಥಿಗಳಿಗೆ ಸಾಮಾನ್ಯ ಮಟ್ಟದ ಫಲಿತಾಂಶ ಇರುತ್ತದೆ. ತೀವ್ರ ನರ ದೌರ್ಬಲ್ಯ ಇರುವವರು ಹೆಚ್ಚು ಎಚ್ಚರಿಕೆ ವಹಿಸಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಮನಸ್ಸು ದ್ವಂದ್ವದಿಂದ ಕೂಡಿದ್ದರೂ ಸ್ಥಿತಪ್ರಜ್ಞರಾಗಿರುವುದು ಒಳ್ಳೆಯದು. ವಿದೇಶಿ ಹಣ ಬದಲಾವಣೆ ಮಾಡುವವರಿಗೆ ಹೆಚ್ಚಿನ ಲಾಭ ಇರುತ್ತದೆ. ಉತ್ತಮ ಕೆಲಸಗಳಿಗೆ ಹಿರಿಯರ ಸಹಕಾರ ದೊರೆಯುತ್ತದೆ. ನವೀನ ರೀತಿಯ ಹಣ್ಣು ತರಕಾರಿಗಳನ್ನು ಬೆಳೆಯುವವರಿಗೆ ಮಾರುಕಟ್ಟೆ ವಿಸ್ತರಿಸುತ್ತದೆ. ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶ ಇರುತ್ತದೆ. ಯುವಕರಲ್ಲಿ ಧರ್ಮಶ್ರದ್ಧೆ ಕಡಿಮೆಯಾಗಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ನಿಮ್ಮ ತಳುಕಿನ ಮಾತಿಗೆ ಕೆಲವು ಜನ ಬೆರಗಾಗುವರು. ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ಭಾಷಣಕಾರರಿಗೆ ಉತ್ತಮ ವೇದಿಕೆ ದೊರೆಯುತ್ತದೆ. ವೃತ್ತಿಯಲ್ಲಿ ನಿಮ್ಮ ಅಭಿವೃದ್ಧಿಗಾಗಿ ಹಿರಿಯ ಅಧಿಕಾರಿಗಳನ್ನು ಬಹಳ ಓಲೈಸುವಿರಿ. ಸೋದರಿಯರ ಸಹಕಾರ ದೊರೆಯುತ್ತದೆ. ಆಸ್ತಿ ವ್ಯವಹಾರ ಮಾಡುವವರಿಗೆ ಹೆಚ್ಚು ಆದಾಯವಿರುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಕಡಿಮೆ ಯಶಸ್ಸು ಇರುತ್ತದೆ.

ಲೋಕ ಕಾರುಣ್ಯದ ತಾತ್ವಿಕ ಎಚ್ಚರ

ಕಲ್ಯಾಣದ ಬಾಗಿಲು

ಡಿ.ಎಸ್.ಚೌಗಲೆ

ರಂಗಭೂಮಿ

ಒಂದು ರಂಗಪಠ್ಯಕ್ಕೆ ಕತೆಯೇ ಇರಬೇಕೆಂದೇನಿಲ್ಲ. ಒಂದು ಮೂಲ ಆಶಯದ ರೂಪಗಳು ಸಹ ಕತೆಯಾಗಬಲ್ಲವು. ನಾಟಕಕಾರ ದೃಶ್ಯಾಭಿವ್ಯಕ್ತಿಯ ಮೂಲಕ ಪ್ರಧಾನವಾಗಿ ತಾನೇನನ್ನು ಹೇಳಲು ಬಯಸಿದ್ದಾನೆಯೋ ಅದನ್ನು ನಾಟ್ಯ, ರೂಪಕ, ಪ್ರತಿಮೆ, ಸಂಕೇತಗಳ ನೆರವು ಪಡೆದು ದೃಶ್ಯ ರೂಪಗಳನ್ನು ಸೃಜಿಸಿ ಹೇಳುವುದು ಮುಖ್ಯ. ಹಾಗೂ ಅವುಗಳನ್ನು ರೂಪಗಳಾಚೆ ಕ್ರಮದಲ್ಲಿ ಕಟ್ಟಿಕೊಡಲೂ ಸಾಧ್ಯವಿದೆ ಎಂಬುದನ್ನು 'ಕಲ್ಯಾಣದ ಬಾಗಿಲು' ನಾಟಕವು ಈ ಮಾತನ್ನು ಸಾಬೀತು ಪಡಿಸುತ್ತದೆ.

ಶರಣರ ಕತೆಗಳನ್ನೇ ಕೇಳಬೇಕೇಂದಾಗ ಅದಕ್ಕೆ ಅದರದೇ ಪಠ್ಯಗಳಿವೆ. ಆ ಬಗೆಯಲ್ಲಿ ಬಂದಂಥ ನಾಟಕಗಳೂ ಇವೆ. ಆದರೆ ನಟರಾಜ ಬೂದಾಳು ಅವರು ಕಲ್ಯಾಣವೆಂಬುದು ಚರಿತ್ರೆಯಲ್ಲಿರುವುದು ಅಷ್ಟೇ ಅಲ್ಲ; ಭೂತ, ವರ್ತಮಾನ ಮತ್ತು ಭವಿಷ್ಯದಲ್ಲೂ ಮನುಜ ಕುಲಕ್ಕೆ ಅಗತ್ಯವಾದ ತೆರದ ಬಾಗಿಲವು ಎಂಬುದನ್ನು ಹೇಳಲು ಯತ್ನಿಸಿರುವರು. ಪ್ರಸ್ತುತ 'ಕಲ್ಯಾಣದ ಬಾಗಿಲು' ನಾಟಕವು ಸಮಾಜೋ ಧಾರ್ಮಿಕ, ಸಮಾಜೋ ರಾಜಕೀಯ ಎಳೆಗಳನ್ನು ತನ್ನ ಮೈತುಂಬ ದಟ್ಟವಾಗಿ ಹಬ್ಬಿಸಿಕೊಂಡು ಸಾದರೀಕರಣಗೊಂಡಿದೆ. ಈ ನಾಟಕದ ಪ್ರಯೋಗವು ಈಚೆಗೆ ಬೆಳಗಾವಿಯ ಬಿಮ್ಸ್ ರಂಗಮಂದಿರದಲ್ಲಿ ನಡೆಯಿತು.

ಕನ್ನಡ ನೆಲಕ್ಕೆ ಈ ಭುವಿಯ ಪರಂಪರೆಯಲ್ಲಿ ಮಾನವ ಧಾರೆಯ ಒಂದು ತಾತ್ವಿಕತೆ ದಕ್ಕಿದೆ. ಹೀಗಾಗಿ ಕಾಲದ ಓಘಗಳಲ್ಲಿ ನಡೆದ ಮಾನವ ದ್ವೇಷಿ ಕ್ರಿಯೆಗಳು ಇಲ್ಲಿ ನಿಷ್ಫಲಗೊಳ್ಳುತ್ತಲೇ ಬಂದಿವೆ. ಅದಕ್ಕೆ ಕಾರಣ ಇಲ್ಲಿ ನೆಲೆಯೂರಿದ ಬೌದ್ಧ, ಜೈನ, ನಾಥ, ಸಿದ್ಧ, ಸೂಫಿ, ಶರಣರ ವಚನ, ಮರಾಠಿ ಸಂತರ ಅಭಂಗಗಳು, ತತ್ವಪದಗಳ ಧಾರೆಗಳು. ಇವು ನಮ್ಮ ನೆಲದ ಮೇಲೆ ಆಗಾಗ ಎರಗುವ, ಘಟಿಸುವ, ಎದುರಾಗುವ ಸಾಮಾಜಿಕ, ಸಾಂಸ್ಕೃತಿಕ ಬಿಕ್ಕಟ್ಟುಗಳನ್ನು ಬಗೆಹರಿಸಿವೆ. ಮತ್ತು ಆ ಮೌಲ್ಯಗಳನ್ನು ಎತ್ತಿ ಹಿಡಿದಿವೆ.

ಇದರಲ್ಲಿ ಕಲ್ಯಾಣವು ಒಂದು. ಕಲ್ಯಾಣವು ಸಮ ಸಮಾಜದ ಕನಸನ್ನು ನನಸಾಗಿಸಲು ಹೊರಟ ಶರಣ ಕ್ರಾಂತಿಯ ದಿವ್ಯ ಮದ್ದಾಗಿದೆ. 'ಕಲ್ಯಾಣದ ಬಾಗಿಲು' ನಾಟಕವು ಅಭಿವ್ಯಕ್ತಿಸುವುದು ಸಹ ಇದನ್ನೇ! ಸಾರ್ವಕಾಲಿಕ ನೆಲೆಯಲ್ಲಿಯ ಮೌಲ್ಯವಾದ ಲೋಕಕಾರುಣ್ಯ, ಬಹುತ್ವ ಹಾಗೂ ಜಾತ್ಯಾತೀತ ತಾತ್ವಿಕ ನಡೆಯ ದರ್ಶನವನ್ನೇ ಈ ನಾಟಕ ನೀಡಿದೆ.

ಸಿ.ಬಸವಲಿಂಗಯ್ಯನವರು ಶೈಲೀಕೃತ ನಾಟಕಗಳಲ್ಲಿ ನಿಷ್ಣಾತರು. 'ಒಡಲಾಳ' ಮತ್ತು 'ಮಹಾಮಾಯಿ' ತಮ್ಮ ವಿಲಕ್ಷಣ ವ್ಯಾಖ್ಯಾನದ ಮುದ್ರೆ ಒತ್ತಿದ ಅವರ ಮಹತ್ವದ ಪ್ರಯೋಗಗಳು. ನಟ ಕೇಂದ್ರಿತ ವಾಸ್ತವವಾದಿ ನಾಟಕದಲ್ಲಿ ಅವರು ಯಶಸ್ವಿಯಾಗಿದ್ದು ಕೇವಲ 'ಗಾಂಧಿ ವರ್ಸಸ್ ಗಾಂಧಿ' ಮತ್ತು 'ಮಲೆಗಳಲ್ಲಿ ಮದುಮಗಳು' ಪ್ರಯೋಗಗಳಲ್ಲಿ. ಹೆಚ್ಚಾಗಿ ಶೈಲೀಕೃತವುಗಳನ್ನೇ ನೆಚ್ಚಿದ ನಿರ್ದೇಶಕ ಬಸವಲಿಂಗಯ್ಯನವರು. ಆದರೆ ಅವರ 'ಕಲ್ಯಾಣದ ಬಾಗಿಲು' ನಾಟಕ ಮಾತ್ರ ಭಿನ್ನಸ್ತರದಲ್ಲಿ ನಿಲ್ಲುತ್ತದೆ. ಇಲ್ಲಿ ಹಳೆಯ ಮತ್ತು ಹೊಸ ಶೈಲೀಕೃತ ತಂತ್ರಗಳನ್ನು ಸಮಾವಿಷ್ಟಗೊಳಿಸಿ ಕಟ್ಟಿಕೊಟ್ಟಿದ್ದಾರೆ. ಅದು ಪ್ರೇಕ್ಷಕನಿಗೆ ಅಪ್ಯಾಯವೆನಿಸಿ ಅನುಭವಿಸಲು ನೆರವಾಗುತ್ತದೆ. ಹಾಗೂ ನೋಡುಗನ ಪ್ರತಿಕ್ರಿಯೆಗೆ ಒಳಪಡುವಷ್ಟು ಸಶಕ್ತವೆನಿಸುತ್ತದೆ.

ಕಲ್ಯಾಣದ ಬಾಗಿಲು ನಾಟಕದ ದೃಶ್ಯ

ಕಳೆದ ಹಲವು ವರ್ಷಗಳ ಹಿಂದೆ ವೀಕ್ಷಿಸಿದ ಎರಡು ಆಧುನಿಕೋತ್ತರ ಸಮಾಜೋ ರಾಜಕೀಯ ಮರಾಠಿ ನಾಟಕಗಳ ಪ್ರಸ್ತುತೀಕರಣವನ್ನು ನೆನಪಿಗೆ ತರುವ ಈ ನಾಟಕ ಅವುಗಳಿಕ್ಕಿಂತ ವಿಶಿಷ್ಟವೆನಿಸಿತು. ನಟರಾಜ ಬೂದಾಳು ಹೇಳ ಹೊರಟಿರುವ ನಾಟ್ಯಾಶಯದ ವ್ಯಾಖ್ಯಾನವನ್ನು ಬಸವಲಿಂಗಯ್ಯ ಮುರಿದು ಕಟ್ಟಿರುವರು. ಆ ಕಲೆ ಅವರಿಗೆ ಸಿದ್ಧಿಸಿದೆ. ಹಾಗೆಯೇ ಬಿಟ್ವೀನ್ ದಿ ಲೈನ್ ಗ್ರಹಿಸಿ ತಮ್ಮ ನಿರ್ದೇಶಕನ ವ್ಯಾಖ್ಯಾನವನ್ನು ಶೈಲೀಕೃತ ಅಭಿನಯದ ಎರಡು ಮಾದರಿಗಳಲ್ಲಿ ನೀಡಿದ್ದಾರೆ.

ತತ್ವಪದಕಾರರು ಹಾಡು ಹೇಳುತ್ತ ನಾಟಕದ ಕತೆಯನ್ನು ಕೊಂಡೊಯ್ಯುತ್ತಾರೆ. ಕಾಡಲ್ಲಿ ನಾಡಲ್ಲಿ ತಪಗೈದು ಜಾಗರಗೊಳ್ಳುವುದರಲ್ಲಿ ಯಾವ ಅರ್ಥವಿಲ್ಲ. ಅಂತರಂಗದ ಶೋಧವು ಎಲ್ಲರಿಗೂ ಎಲ್ಲಾದರೂ ಸಾಧ್ಯ. ಬುದ್ಧನಿಂದ ಹಿಡಿದು ಬಸವಣ್ಣ ಮತ್ತು ಶರಣರು, ಅವರ ಚಳವಳಿ, ಗಾಂಧಿ, ಅಂಬೇಡಕರ ಮುಂತಾದವರು ಆ ಹುಡುಕಾಟ ನಡೆಸಿರುವರು. ಇದನ್ನು ರಂಗದ ಮೇಲೆ ಬಂದು ಅವರು ಅರುಹುವ ತತ್ವಸಾರವನ್ನು ನಾಟಕವು ಮಾತನಾಡುತ್ತದೆ. ಇದೊಂದು ತಾರ್ಕಿಕ ನಾಟಕ. ಆಚಾರ ಹೇಳುವವರು ಬದನೆಕಾಯಿ ತಿಂದಂತೆ-ಇಲ್ಲಿ ತತ್ವ ಸಿದ್ಧಾಂತಗಳನ್ನು ಪುಟಪಟಿಸುವವರು ಬಹುಸಂಖ್ಯಾತರು. ಆಚರಣೆಗೆ ತರುವವರು ವಿರಳ. ಅಂಥ ನಡಾವಳಿಗಳಿಂದ ಜಡತ್ವ ತುಂಬಿದವರಿಗೆ ನಾಟಕ ತನ್ನನ್ನು ತಾನು ಶೋಧಿಸಲು ಪ್ರೇರೇಪಿಸುತ್ತದೆ.

ಕೋಮುವಾದ ಮತ್ತು ಧರ್ಮಗಳು ಆಫೀಮು ತರಹ ಸಾಮಾನ್ಯಗೊಳ್ಳುತ್ತಿವೆ. ಧರ್ಮೋಪದೇಶ ಮಾಡುವ ಸ್ವಾಮೀಜಿ, ಸನ್ಯಾಸಿಗಳೆಲ್ಲ ಕತ್ತಿ ಗುರಾಣಿ, ಬಂದೂಕುಗಳ ಧ್ಯಾನ ಮಾಡಲು ಶುರುವು ಹಚ್ಚಿಕೊಂಡಿದ್ದಾರೆ. ಈ ಬಗೆಯ ಅನೇಕ ಸಂಭಾಷಣೆಗಳು ಚಿಂತನೆಗೆ ಹಚ್ಚುತ್ತವೆ. ಸತಿ ಪತಿಗಳು ಪರಸ್ಪರ ಸೇವೆಯ ಮೂಲಕ ಒಂದಾದೊಡೆ ಅದು ಪರಮಾತ್ಮನನ್ನು ಕಾಣುವ ಅಧ್ಯಾತ್ಮದ ಅನುಸಂಧಾನವು. ಕಾಯಕ ಜೀವಿಗಳು ಧ್ಯಾನದಂತೆ ತಮ್ಮ ಕಾಯಕವನ್ನು ನಿರ್ವಹಿಸಿದರೆ ಅನುಭವ ಮತ್ತು ಅನುಭಾವ ಎರಡನ್ನೂ ಗಳಿಸಲು ಸಾಧ್ಯ.

'ಮಾಡೋರ ಕಸುಬಿನ್ಯಾಗೆ, ಸಿಗೋ ಫಲದಾಗೆ ಬುದ್ಧತ್ವವಿದೆ.' ಇದು ಬದುಕಿನ ಪಾಡು ಹಾಡಿನಲ್ಲಿದೆ. ತತ್ವಪದಗಳ ಗಾಯಕಿ ನಾಟಕವನ್ನು ಚೆಲುವುಗೊಳಿಸಿದೆ. ಒಂದು ಸಂಗೀತ ನಾಟಕದ ಅನುಭವ ದಕ್ಕುತ್ತದೆ. ಕೆಲವೊಮ್ಮೆ ಆಧುನಿಕ ಸಂಗೀತ ಹಾಡು ಕುಣಿತವು ನವ ಶೈಲೀಕೃತದಲ್ಲಿ ದೃಶ್ಯವನ್ನು ಅಂದಗೊಳಿಸಿದೆ. ಬುದ್ಧ, ಬಸವ, ಅಲ್ಲಮ, ಗಾಂಧಿ ಮತ್ತು ಅಂಬೇಡಕರರಷ್ಟೆ ಅಲ್ಲ ನಮ್ಮ ಸಂವಿಧಾನದ ಮಹತ್ವವನ್ನು ನಾಟಕ ಬಿಂಬಿಸುತ್ತದೆ. ಆ ತಿಳಿವು ಇಂದಿನ ತುರ್ತು ಸಹ ಆಗಿದೆ. ನಾಟಕಕಾರ ಮತ್ತು ನಿರ್ದೇಶಕರು ವರ್ತಮಾನದಲ್ಲಿ ಗಾಂಧಿ ಮತ್ತು ಅಂಬೇಡಕರರನ್ನು ತಂದಿದ್ದು ಇಂದಿನ ಇಂಡಿಯಾಗೆ ಈ ಎರಡು ಚಿಂತನೆಗಳ ಮಹಾನದಿಗಳ ಅಗತ್ಯತೆಯನ್ನು ಸಾರುತ್ತದೆ.

ಹನ್ನೆರಡನೆಯ ಶತಮಾನದಿಂದ ಇಪ್ಪತ್ತನೆಯ ಶತಮಾನದವರೆಗೂ ಮನುಷ್ಯ ಶೋಧವನ್ನು ನಡೆಸುವ ನಾಟಕದ ಪ್ರಯೋಗವು ನಟರ ಸಹಜ ಅಭಿನಯ ಮೂಲಕ ಪ್ರೇಕ್ಷರನ್ನು ತಲುಪುವಲ್ಲಿ ಗೆದ್ದಿತು. ನೇಪಥ್ಯದಲ್ಲಿ ಮಧ್ಯದ ಹೆಬ್ಬಾಗಿಲಿಗೆ ಕಲ್ಯಾಣದ ಲಾಂಛನವಿದೆ. ಅದರ ಕೆಳಗೆಯೆ ಮನುಷ್ಯ ವ್ಯವಹಾರಗಳು ಜರುಗುವವು.

ಆಯಗಾರ ಬದುಕು ಇದು ಸಹಬಾಳ್ವೆ. ಕಮ್ಮಾರ, ಮೋಚಿ, ಮಡಿವಾಳ ಮುಂತಾದ ಬಹುತ್ವದ ಬದುಕು ಸಾಮರಸ್ಯದ್ದೆ ಅಲ್ಲವೇ! ಪ್ರಶ್ನೆ ಕೇಳುವ ಕನ್ನಡಿ ಆಂತರಿಕ ಶೋಧಕ್ಕೆ ಮದ್ದಾಗಿದೆ. ಅದೊಂದು ಬಹುರೂಪಕದಲ್ಲಿ ನಿಲ್ಲುತ್ತದೆ.

ಅಂತ್ಯದಲ್ಲಿ ಕಲ್ಯಾಣದ ಲಾಂಛನ ಕಳೆದು ವರ್ತಮಾನದಲ್ಲಿ ಬಸವ ಕುದುರೆ ಸವಾರಿಯ ಪ್ರತಿಮೆಯಾಗಿ ಸ್ಥಾವರಗೊಳ್ಳುತ್ತಾನೆ. ಚಲನತ್ವಕ್ಕೆ ಮಂಟೆದಲ್ಲಮ ಆಗಮಿಸಬೇಕಾಗುತ್ತದೆ. ಆ ಮಂಟೇದಲ್ಲಮನನ್ನು ಹುಡುಕಾಟ ನಡೆಸುತ್ತಿದ್ದ ಬಸವ ಪ್ರಮುಖ ಶರಣರು ಸಮ್ಮಿಲನಗೊಂಡು ಬಯಲು ಬಯಲಾಗಿ ಸಾಗುವಲ್ಲಿ ನಾಟಕ ಅಂತ್ಯಗೊಳ್ಳುತ್ತದೆ. ಈ ನಾಟಕದ ವಸ್ತು ಮತ್ತು ಪಾತ್ರಗಳು ಕಾಲ್ಪನಿಕತೆಯ ರೂಪಗಳು ಸರಿ, ವಾಸ್ತವದ ಅನುಭವವೂ ಹೌದು!

ಕಿಚನ್‌ನಲ್ಲಿ...

10ನೇ ಪುಟದಿಂದ...

ದೇಶ, ಭಾಷೆ, ಜಾತಿ, ಧರ್ಮ, ಆಚರಣೆ ಇತ್ಯಾದಿ ಸಂಕೋಲೆಗಳಿಂದ ಬಿಡುಗಡೆಗೊಳಿಸುವುದು ಪ್ರೀತಿಯೊಂದೇ ಎಂಬುದು ನನ್ನ ಅನುಭವ. ಆದರೆ, ಇಲ್ಲಿಯೂ ಕೂಡ ನವ ಜೋಡಿಗಳಿಗೆ ಕೆಲವೊಂದು ವ್ಯತ್ಯಾಸಗಳು ಕಾಣಿಸುತ್ತವೆ. ಅವುಗಳನ್ನು ಕೊಂದು ಹಾಕಬೇಕು. ಪರಸ್ಪರ ಅರ್ಥ ಮಾಡಿಕೊಳ್ಳುವ ಮೂಲಕ, ಹೊಂದಾಣಿಕೆ ಬೆಳೆಸಿಕೊಂಡು ಸಂಬಂಧವನ್ನು ಕಾಪಾಡಿಕೊಳ್ಳಬೇಕು. ದಿನಗಳು, ವರ್ಷಗಳು ಕಳೆದಂತೆ ವ್ಯತ್ಯಾಸಗಳು ಮಾಯವಾಗುತ್ತವೆ. ಅಲ್ಲಿಯವರೆಗೆ ತಾಳ್ಮೆ ಹಾಗೂ ನಂಬಿಕೆಯೇ ಮುಖ್ಯ.

ನನ್ನ ಮತ್ತು ಬಿಯಾಂಕಾ ನಡುವೆ ಕಲ್ಚರಲ್ ತಿಕ್ಕಾಟ ಆಗಲೇ ಇಲ್ಲ. ನಮಗೆ ನಮ್ಮ ಇತಿಮಿತಿಗಳು ಗೊತ್ತಿದ್ದವು. ನಮ್ಮದು ಒಂದು ರೀತಿಯ best-of ಕಲ್ಚರ್. ಉಪಯೋಗಕ್ಕೆ ಬಾರದ ಸಾಂಸ್ಕೃತಿಕ ಅಂಶಗಳನ್ನು ಮೂಲೆಗೆ ಎಸೆದು ಪ್ರಯೋಜನಕ್ಕೆ ಬರುವ ಅಂಶಗಳನ್ನು ಅಳವಡಿಸಿಕೊಂಡು ಜೀವನ ನಡೆಸುತ್ತಿದ್ದೇವೆ. ಉದಾಹರಣೆಗೆ-ಸ್ವೀಡನ್ ದೇಶದ ಸಂಯಮ (lagom), ಭಾರತದ ಅತಿಥಿ ಉಪಚಾರ, ಇಟಲಿಯ ಹಾಸ್ಯಪ್ರಜ್ಞೆಯನ್ನು ನಾವು ಅಳವಡಿಸಿಕೊಂಡಿದ್ದೇವೆ. ಹೀಗೆ ಇದ್ದಾಗ ಯಾರ ಸಂಸ್ಕೃತಿಯೂ ಮೇಲು-ಕೀಳು ಎನ್ನುವ ಪ್ರಶ್ನೆ ಬರುವುದಿಲ್ಲ.

ನನ್ನ ಅಪ್ಪ, ಅಮ್ಮ ಕಲಿಸಿದ್ದು, ನನಗೆ ಇಷ್ಟವಾದ ಸಂಗಾತಿಯನ್ನು ಆರಿಸಿಕೊಳ್ಳಲು ಪ್ರೇರಣೆ ಆಯಿತು. 'ನಿನ್ನ ಜೀವನವನ್ನು ನೀನೆ ಕಟ್ಟಿಕೊಳ್ಳಬೇಕು, ನಿನಗೆ ಹೆಣ್ಣು ಹುಡುಕುವ ವಿಷಯದಲ್ಲಿ ನಾವು ತಲೆ ಹಾಕುವುದಿಲ್ಲ, ಸಹಾಯ ಮಾಡಲ್ಲ, ನಿನ್ನ ಆಯ್ಕೆಗೆ ನಮ್ಮ ಸಮ್ಮತಿ ಇದ್ದೇ ಇರುತ್ತದೆ' ಎಂದು ಹೇಳಿದ್ದರು. ಏಕೆಂದರೆ ಅಪ್ಪ, ಅಮ್ಮ ಜಾತಿ ಧಿಕ್ಕರಿಸಿ ಮದುವೆ ಆದವರು. ಅವರ ನೆರಳಲ್ಲೇ ಬೆಳೆದ ನಾನು, ನನ್ನ ತಮ್ಮ ಮುಕ್ತವಾಗಿ ಸಂಗಾತಿಯನ್ನು ಆಯ್ಕೆ ಮಾಡಿಕೊಂಡೆವು.

ನಿರೂಪಣೆ: ಸುದೇಶ ದೊಡ್ಡಪಾಳ್ಯ

'ಪ್ರೀತಿ ದೇಹಕ್ಕೆ...

10ನೇ ಪುಟದಿಂದ...

ಅವನ/ಅವಳ ಬಗ್ಗೆ ಎಲ್ಲಾ ಗೊತ್ತಿದೆ ಅಂತ ಅಂದ್ಕೊಳ್ಳದೆ ಓಪನ್ ಆಗಿ ಇದ್ರೆ ಜೀವನ ಸ್ವಾರಸ್ಯವಾಗಿರತ್ತೆ. ಇಲ್ಲ ಅಂದ್ರೆ ದಿನಾ ಬೆಳಿಗ್ಗೆಯಾಗತ್ತೆ ರಾತ್ರಿಯಾಗತ್ತೆ ಅಷ್ಟೆ.

ಒಂದು ವಿಷಯ ನಮ್ಮಿಬ್ಬರಿಗೂ ಅನುಭವಕ್ಕೆ ಬಂದಿದೆ. ಹಳ್ಳಿ ಖಾಲಿಯಾಗ್ತಿದೆ, ಮಕ್ಕಳೆಲ್ಲ ಬೆಂಗಳೂರಿಗೆ ಸೇರ್ತಿದಾರೆ ಅಂತ ಎಲ್ಲರೂ ಇಲ್ಲಿ ಮಾತಾಡ್ತಾರೆ. ಅಂದರೆ ಮಗ ವಾಪಾಸು ಬರ್ಲಿ, ಅಂತಿರತ್ತೆ. ಮಗಳೇ ವಾಪಾಸು ಬಂದ್ರೆ ಗಂಡಾಳ್ವಿಕೆ ಸಮಾಜಕ್ಕೆ ಸ್ವಲ್ಪ ಇರಿಸು ಮುರುಸು. ಅದನ್ನ ಹಲವಾರು ರೀತಿ ತೋರಿಸ್ತಾರೆ. ನನ್ನ ಮನೆಯವರಿಗೆ ಏನೂ ಸಮಸ್ಯೆ ಇಲ್ಲ, 24 ವರ್ಷದ ಹಿಂದೇನೆ ನಮ್ಮ ಊರಿನಲ್ಲಿ ನಡೆಯೊ ರೀತಿನೆ, ಮನೆ ಅಂಗಳಕ್ಕೇ ಚಪ್ಪರ ಹಾಕಿ ಮದುವೆ, ನೆಂಟರಿಷ್ಟರಿಗೆ ಊಟ ಎಲ್ಲಾ ಹಾಕಿದಾರೆ. ಒಟ್ನೂ ಸಮಾಜದ ಬಗ್ಗೆ ಹೇಳ್ತಾ ಇರೊದು ನಾನು. ತುಂಬಾ ತಿಳಿದವರು ಅನ್ಕೊಂಡವರ ಪ್ರತಿಕ್ರಿಯೆಗಳು ಕೂಡ ನಮಗೆ ಆಶ್ಚರ್ಯ ಹುಟ್ಟಿಸೊ ರೀತಿಯದ್ದಾಗಿತ್ತು. ಅದನ್ನ ನಾವಿಬ್ಬರೂ ಸ್ವಲ್ಪ ತಮಾಷೆಯಾಗಿ ತಗೊಂಡು ಜೀವನ ಸಹ್ಯ ಮಾಡ್ಕೊಂಡ್ವಿ. ನಾವು ಒಬ್ಬರಿಗೊಬ್ಬರು ತುಂಬಾ comfortable ಆಗಿರೊದ್ರಿಂದ ಮಾತ್ರ ಇದನ್ನ handle ಮಾಡೊಕಾಯ್ತು. ನಮ್ಮ ದೌರ್ಬಲ್ಯದ ಬಗ್ಗೆನೂ judgement ಇಲ್ಲದೆ ಮಾತಾಡ್ಕೊಳೊಕೆ ಜಾಗ ಇರೊ ಸಂಬಂಧನೇ ಗಟ್ಟಿಯಾದ ಸಂಬಂಧ ಅಂತ ಈಗ ಅನ್ನಿಸ್ತಾ ಇದೆ.

ಪದಬಂಧ 2828



ಮೇಲಿನಿಂದ ಕೆಳಕ್ಕೆ
1. ಕರ, ಸುಂಕ ಹೀಗೆ ನಾನಾ ಸ್ವರೂಪದ ತಲೆ ಭಾರ ಹೊತ್ತ ಪ್ರಜೆ 5
2. ನಿರುದ್ಯೋಗಿಗಳು ಹುಡುಕಿಕೊಳ್ಳಬೇಕಾದ ಕಾರ್ಯ 3
3. ಕಾಡು ಮಲ್ಲಿಗೆ ಅರಳುವ ಅಡವಿ 3
4. ಎಲ್ಲಾ ಶಕ್ತಿಯ ಸಮೂಹ 5
6. ಸ್ಫೂರ್ತಿಯಿಂದ ಕಾವೇರಿದ ನದಿಯ ನೀರಿನ ಅಭಿಲಾಷೆ 7
8. ಸರಿಗೆ ವಿರುದ್ಧ 2
9. ಹೇ! ಇವಳು ಚಿನ್ನದಂತಹ ಹುಡುಗಿ 2
11. ಸೂರ್ಯನಿಂದ ಹುಟ್ಟಿದವ 3
12. ಪುತ್ರನಿಗೊಂದು ಪರ್ಯಾಯ 3
14. ಮಾವಿನೆಲೆ ಚಿಗುರಿ, ಕೋಗಿಲೆ ಹಾಡಿದಾಗ ಆರಂಭವಾಗುವ ಸುಂದರ ತಿಂಗಳು 5
15. ಮಸ್ತಿಷ್ಕಕ್ಕೆ ಮೀಸಲಾದ ಬುದ್ಧಿ 2
17. ಮಾಡಿದ ತಪ್ಪನ್ನು ಮನ್ನಿಸುವ ಗುಣ 2
18. ಕಟ್ಟಡದ ನಿರ್ಮಾಣಕ್ಕೆ ಸಾಗರೋತ್ಪನ್ನದ ಘೋಷ 5
21. ಗುದ್ದಲಿಯಿಂದ ಅಗೆದಾಗ ಮಣ್ಣು ಎತ್ತುವುದಕ್ಕೆ ಇದು ಅಗತ್ಯ 3
22. ಹೊಸದೆನಿಸುವ ಒಂಭತ್ತು ಸಂಖ್ಯೆ 3

ಎಡದಿಂದ ಬಲಕ್ಕೆ
1. ಹೀಯಾಳಿಸುವಿಕೆ ಹೀಗೆ ಇರುತ್ತದೆ 4
3. ರಘುವಂಶ, ಮೇಘದೂತಗಳ ಕರ್ತೃ 4
5. ಹೆಚ್ಚು ಕಡಿಮೆಯಿಲ್ಲದೆ ಒಂದೇ ಸಮಯಕ್ಕೆ ಸೇರಿದವರು 5
7. ಸುಲಿದಾಗ ಫಳ ಫಳ ಹೊಳೆಯುವ ದಂತಪಂಕ್ತಿಯಂತೆ ಜೋಡಿಸಿದ ಬೀಜದ ಹಣ್ಣು 3
9. 'ಎಲ್ಲೈ' ಎಂದು ಸಂಬೋಧಿಸಿಕೊಳ್ಳುವ ಗಜವದನ 3
10. ಹಿಂದುಮುಂದಾಗಿ ಹರಿದ ದ್ರವ ಹಾರವಾಗಿದೆ 2
12. ವೋಟಿನ ಹಿಂದೆ ಅಡಗಿರುವ ಕತ್ತಲು 2
13. ಅರಸ ಮರ್ಯಾದೆಯಿಂದ ಶೋಭಿಸಿದ್ದಾನೆ 5
15. ಹಿಂದು ಮುಂದಾಗಿ ಕೂಡಿದರೆ ಮಜಲಿನ ಸಂತೋಷ 2
16. ಹಿಂದುಮುಂದಾಗಿ ಕ್ಷಯವಾಗುವ ಕಿನ್ನರ ಕಿಂಪುರುಷರ ಸೋದರ 2
19. ಸಂಗ ಜೀವಿ ಬಯಸುವ ಬಾಳ ಜೊತೆಗಾತಿ 3
20. ಮತ್ತೆ ಮತ್ತೆ ಮನಸ್ಸಿಗೆ ತಂದು ಸ್ಮರಿಸು 3
21. ಮಾಡಿದ ಅಥವಾ ಮಾಡುವ ಕೆಲಸಕ್ಕೆ ಸಿಗುವ ನೆರವಿನ ಹಣ 5
23. ನಡವಳಿಕೆಯಲ್ಲಿ ಸೌಜನ್ಯ, ಮೃದು, ಒಳ್ಳೆಯತನ 4
24. ಗಜದ ಕೂಸು- ಮೆತ್ತನೆಯ ನಡಿಗೆಗೆ ಗತ್ತಿನ ಹೆಸರು 4

ಪದಬಂಧ ಉತ್ತರ -2827

ಮೇಲಿಂದ ಕೆಳಕ್ಕೆ

1.ಅಪಪ್ರಚಾರ 2.ತೆಲುಗು 3.ಸರಣಿ 4.ದಿನಭವಿಷ್ಯ 6.ಪರಾಕು 8. ರಾಮಾಯಣದರ್ಶನಂ 9.ಆದರ 12.ಲಕಾರ 13.ವರ್ತಕ 15.ಜಾತಿಗಣತಿ 16.ಮಡಿಕೆ 18.ನಿವಾಸ 19.ರಜತಪೀಠ 21.ಆಕಾರ 22.ದವಿಕೋ

ಎಡದಿಂದ ಬಲಕ್ಕೆ

1.ಅಪೌಷ್ಟಿಕತೆ 3.ಸರಯೂನದಿ 5.ಪ್ರತಾಪ 7.ಗುರಾಣಿ 9.ಆರಂಭ 11.ರಘುಕುಲ 13.ವರಶಿಷ್ಯ 14.ಕಾರಣಕರ್ತ 15. ಜಾಲಿಮರ 17. ಕನಿಕರ 21.ಆನಂದ 23.ಸಹಿತ 24.ತಿಮಿರಹರ 25. ಕೋಗಿಲೆಕಂಠ

ಸರೋದ್ ಲೋಕದ ಸುರ ಆಶೀಷ್ ಖಾನ್

ರಶ್ಮಿ ಎಸ್

ಮಾತುಕತೆ

ಆಶೀಷ್ ಖಾನ್

ಜೀವ ಇಲ್ಲದೆ ಜೀವನ ಅರ್ಥ ಮಾಡ್ಕೊಬಹುದಾ? ಮೂಲ ವಾದ್ಯಗಳಿಲ್ಲದೆ ಸಂಗೀತವನ್ನೂ ಅರ್ಥ ಮಾಡಿಕೊಳ್ಳೋದು ಕಷ್ಟ. ಹೀಗೆ ತಮ್ಮ ಮಾತನ್ನು ಆರಂಭಿಸಿದವರು ಸರೋದ್ ವಾದಕರಾದ 83ರ ಹರೆಯದ ಆಶೀಷ್ ಖಾನ್. ಗಾಂಧಿ ಚಿತ್ರಕ್ಕೆ ಹಿನ್ನೆಲೆ ಸಂಗೀತ ನೀಡಿದ ಖ್ಯಾತಿಯೊಂದಿಗೆ ಮೈಹರ್ ಘರಾನಾದ ಆಶೀಷ್ ಖಾನ್, ಪಾಶ್ಚಿಮಾತ್ಯ ಸಂಗೀತ ಮತ್ತು ಪೌರ್ವಾತ್ಯ ಸಂಗೀತದ ಸಂಗಮ ಮಾಡುವಲ್ಲಿ ಘನ ಪಾತ್ರ ವಹಿಸಿದವರು. ಈಚೆಗೆ ಸಿತಾರ್ ನವಾಜ್ ಉಸ್ತಾದ್ ಬಾಲೆಖಾನ್ ಪ್ರಶಸ್ತಿ ಪಡೆಯಲು ಬೆಂಗಳೂರಿಗೆ ಬಂದಾತ ಸಂಗೀತ, ಜೀವನ ಮತ್ತು ಜಗತ್ತು ಮೂರರ ಕುರಿತೂ 'ಪ್ರಜಾವಾಣಿ'ಯೊಂದಿಗೆ ಮಾತನಾಡಿದರು.

ಪಶ್ಚಿಮ ದೇಶಗಳು ನಮ್ಮ ಸಂಗೀತವನ್ನು ಹಾಳುಗೆಡಹಿದರು ಎಂಬುದೊಂದು ಆರೋಪ. ಅಲ್ಲಿ ಆರ್ಕೆಸ್ಟ್ರಾಗಳಲ್ಲಿ ಈಗಲೂ ಪಿಯಾನೊ ನುಡಿಸಲು ದೊಡ್ಡ ಪಿಯಾನೊವನ್ನೇ ತರುತ್ತಾರೆ. ಕೀಬೋರ್ಡ್ ನುಡಿಸುವುದಿಲ್ಲ. ಡ್ರಮ್‌ನ ಕೆಲಸವನ್ನೂ ಡ್ರಮ್ ವಾದ್ಯವೇ ಮಾಡುತ್ತದೆ. ಮೂಲ ಸಂಗೀತವೆಂದರೆ ಅದು. ಮನುಷ್ಯನ ಸ್ಪರ್ಶದಿಂದ ಬರುವಂಥದ್ದು. ಉಸಿರಿನಿಂದ ಬರುವಂಥದ್ದು. ನಿಮ್ಮೊಳಗಿನ ರಾಗಗಳೇ, ಸಂಗೀತದ ರಾಗಗಳಾಗಿಯೂ ನುಡಿಯುವಂಥದ್ದು. ಭಾರತದಲ್ಲಿ ಕೀಬೋರ್ಡಿನ ಹಾವಳಿ ನೋಡಿದಾಗ, ತಾನ್‌ಪುರಾ ಬದಲು ಶ್ರುತಿ ಪೆಟ್ಟಿಗೆ ನೋಡಿದಾಗ ಖೇದವೆನಿಸುತ್ತದೆ. ಮೊದಲು ಸಂಗೀತ ಸರಳಗೊಳಿಸಿತು ಎಂದೆನಿಸುವುದು ಸಹಜ. ಆದರೆ ಆತ್ಮವೇ ಇಲ್ಲದ ಆನಂದವನ್ನು ಹೇಗೆ ಅನುಭವಿಸುವುದು? ಪ್ರತಿ ವಾದ್ಯವೂ ಬಿಡಿಬಿಡಿಯಾಗಿ ನುಡಿಸಬೇಕು, ಆಲಿಸಬೇಕು. ಅವೆಲ್ಲ ಇಡಿಯಾಗಿ ರಾಗವಾಗಿ, ನಾದವಾಗಿ ಹರಿಯಬೇಕು. ಅವು ನಮ್ಮೊಳಗೆ ಇಳಿಯಬೇಕು. ಆರ್ಕೆಸ್ಟ್ರಾ ಅಥವಾ ವಾದ್ಯವೃಂದ ಅಂದ್ರೆ ಅದೇನೆ.

ಪ್ರತಿ ವಾದ್ಯವೂ ನಮ್ಮ ದೇಹದ ಒಂದೊಂದು ಅಂಗದೊಂದಿಗೆ, ನಮ್ಮ ಮನಸಿನ ಒಂದೊಂದು ಭಾವ ಅಥವಾ ರಾಗದೊಂದಿಗೆ ತಳಕು ಹಾಕಿಕೊಂಡಿದೆ. ಸುಖಾನುಭವ ದೊರೆಯುವುದು ಇಂಥ ಕೇಳ್ವಿಕೆಯಿಂದ. ಆದರೆ ಸುಖಾನುಭೂತಿ ಅಥವಾ ಆನಂದ ದೊರೆಯುವುದು ಇಡಿಯಾಗಿ ಅವೆಲ್ಲ ಒಗ್ಗೂಡಿ ನಮ್ಮನ್ನು ಆವರಿಸಿಕೊಂಡಾಗ. ಸಂಗೀತದ ಶಕ್ತಿ ಇದೇನೆ.

ಯಾರನ್ನ ಕುಸುರ್‌ವಾರ್ ಅಂತೀರಿ? ಯಾರೂ ಬೇಕಸೂರರು ಅಲ್ಲ (ಯಾರನ್ನ ಅಪರಾಧಿಗಳು ಅಂತೀರಿ? ಆದರೆ ನಿರಪರಾಧಿಗಳೂ ಯಾರಿಲ್ಲ) ಇದೊಂದು ಜಮಾನಾ. ಈ ಯುಗಧರ್ಮ ಹೀಗಿದೆ. ಹಲವಾರು ಜನರ ಬದಲಿಗೆ ಕಂಪ್ಯೂಟರ್ ಪ್ರೊಗ್ರಾಂಗಳನ್ನು, ಕೀಬೋರ್ಡುಗಳನ್ನು ಬಳಸಲಾಗುತ್ತಿದೆ.

ಆದರೆ ನನಗೆ ಭರವಸೆ ಇದೆ. ಮತ್ತೆ ಎಲ್ಲರೂ ನಮ್ಮ ಪರಂಪರಾಗತ ಜ್ಞಾನಕ್ಕೆ ಹಿಂದಿರುಗುತ್ತಾರೆ. ಅಲ್ಲಿಯವರೆಗೂ ಆ ಜ್ಞಾನವನ್ನು ಉಳಿಸಿಕೊಳ್ಳುವ ಕೆಲವು ಮನಸುಗಳು, ಜೀವಗಳು ಭಾರತದಲ್ಲಿ ಇನ್ನೂ ಬದುಕಿವೆ.

ನಾನು ಪಶ್ಚಿಮಕ್ಕೆ ಹೋದಾಗ ನನ್ನ ಸಂಗೀತದ ಹೆಗ್ಗಳಿಕೆ ನನ್ನೊಟ್ಟಿಗೆ ಇತ್ತು. ಸಂಗೀತದ ಚೈತನ್ಯ ಮತ್ತು ಸಾಮರ್ಥ್ಯ ಎರಡೂ ಅಗಾಧವಾದವು. ನಾನು ಮತ್ತು ಉಸ್ತಾದ್ ಜಾಕಿರ್ ಹುಸೇನ್ ಶಾಂತಿ ಬ್ಯಾಂಡ್ ಮಾಡಿದಾಗ ಈ ಮಾತಿಗೆ ಮತ್ತಷ್ಟು ಪುರಾವೆ ದೊರೆಯಿತು.

ಸಂಗೀತ ವಿಶ್ವಶಾಂತಿಯ ಭಾಷೆ. ನಾನಿಲ್ಲಿ ಬಂದಿದ್ದು ಕೇವಲ ಪ್ರಶಸ್ತಿಯ ಸನ್ಮಾನ ಸ್ವೀಕರಿಸಲು ಅಲ್ಲ. ಬಾಲೆಖಾನ್ ಅವರ ನೆನಪನ್ನು ನನ್ನೊಟ್ಟಿಗೆ ಕರೆದೊಯ್ಯಲು. 24–25 ವರ್ಷಗಳಾಗಿರಬೇಕು ನಾನು ಇಲ್ಲಿಗೆ ಬಂದು. ಬೆಂಗಳೂರಿಗೆ ಬಂದು ಯಾವ ಕಾಲವಾಯಿತೋ ನೆನಪೂ ಇಲ್ಲ. ಬೆಂಗಳೂರಿನ ನಕ್ಷೆ ಬದಲಾಗಿದೆ. ಮೊದಲೆಲ್ಲ ಹಸಿರು ಇರುತ್ತಿತ್ತು. ಈಗ ಕಟ್ಟಡಗಳು ಕಾಣ್ತಿವೆ. ಬದಲಾಗದೇ ಇರೋದು ಸಂಗೀತಾಸಕ್ತರು ಮತ್ತು ಅವರ ಅಭಿರುಚಿ..

ಅಚ್ಛಾ.. ಈಗ ನೀ ಹೇಳು, ನಿನಗೆ ಹೇಗನಿಸಿತು ಇಂದಿನ ಕಛೇರಿ? ಮೂರು ವರ್ಷಗಳ ನಂತರ ವೇದಿಕೆ ಏರಿದ್ದು. ಬಾಲೆಖಾನರಿಗೆ ಗೌರವ ಸಲ್ಲಿಸಲೆಂದೇ ಇಂದು ಪ್ರಸ್ತುತಪಡಿಸಿದೆ. ಮೊದಮೊದಲು ಅದ್ಯಾಕೋ ತಂತಿ ಬಿಗಿದಂತೆ ಅನಿಸುತ್ತಿತ್ತು. ಕೇಳುಗಳಾಗಿ ಹೇಳು, ವಯಸ್ಸಾಯಿತು ಆಶೀಷ್ ಖಾನ್‌ಗೆ ಅಂತನಿಸಿತೆ?

'ಇಲ್ಲ. ನನಗೆ ಈ ಕಛೇರಿ ಕಭಿ ದವಾ ಲಗಾ, ತೊ ಕಭಿ ದುವಾ ಲಗಾ' (ಈ ಕಛೇರಿ ನನಗೆ ಕೆಲವೊಮ್ಮೆ ಔಷಧಿಯಂತೆಯೂ, ಕೆಲವೊಮ್ಮೆ ಪ್ರಾರ್ಥನೆಯಂತೆಯೂ ಅನಿಸಿತು) ಜೋರಾಗಿ ನಕ್ಕರು.. ಮತ್ತೆ ಮಾತಿಗಿಳಿದರು.

ಸಂಗೀತ ನಮ್ಮನ್ನು ಶಾಂತಗೊಳಿಸುತ್ತದೆ. ನಮ್ಮನ್ನು ಬ್ರಹ್ಮಾಂಡದ ಜೊತೆಗೆ ಬೆಸೆಯುತ್ತದೆ. ಕೆಲವೊಮ್ಮೆ ನನ್ನ ಸರೋದ್, ನನ್ನ ಸಂಗೀತ ನನ್ನನ್ನು ಆಪೋಷನ ತೆಗೆದುಕೊಂಡಂತೆ ಅನಿಸುತ್ತದೆ. ನಾನು ಕಳೆದೇ ಹೋಗುತ್ತೇನೆ, ಅಥವಾ ಆ ಸಂಗೀತ ಆ ನಾದವೇ ನಾನಾಗುತ್ತೇನೆ. ಆ ತಾದಾತ್ಮವೇ ಆತ್ಮಾನಂದ.

ನೀವು ಸರೋದ್ ಹಗುರಗೊಳಿಸಿದ್ರಿ ಅಂತಾರಲ್ಲ... ಹೌದಾ.. ಹಂಗೆ ನೆನಪಿಸಿಕೊಳ್ತಾರಾ?

ನಿಜ. ಮೊದಲಿನ ಸರೋದ್‌ತುಂಬಾ ಭಾರವಾಗಿರುತ್ತಿದ್ದವು. ಅವುಗಳ ಭಾರವನ್ನು ಕಡಿಮೆಗೊಳಿಸುವಂತೆ ವಿನ್ಯಾಸಗೊಳಿಸಿದೆ. ಒಂದಷ್ಟು ಕೇಜಿಗಳ ಭಾರ ಕಡಿಮೆ ಆಯ್ತು. ಆಗ ಕಲಾವಿದರಿಗೆ ಅನುಕೂಲ ಆಯ್ತಲ್ಲ. ನೋಡಲು ಚಂದ ಕಾಣುತ್ತದೆ. ರೂಢಿಗತವಾಗಿ ಬೃಹತ್ ಬುರುಡೆಯ ಬದಲು ಅದನ್ನು ಕಡಿಮೆಗೊಳಿಸಿದೆ. ಬದಲಾವಣೆ ಯಾವತ್ತಿಗೂ ಸುಧಾರಣೆಯ ಪರವಾಗಿರಬೇಕು.

ಮಾತಾಡುವಾಗಲೆಲ್ಲ ಅವರ ಜಟೆಗಳು ಗಮನಸೆಳೆಯುತ್ತಲೇ ಇದ್ದವು. ತಡೆಯದೆ, ಈ ಜಟೆಗಳನ್ನು ಯಾಕೆ ಬೆಳೆಸಿದ್ರಿ?

ಇವನ್ನ.. ಇವನ್ನು ನಾನು ಬೆಳೆಸಲಿಲ್ಲ. ಅವು ಹುಟ್ಟಿದವು. ಬೆಳೆದವು. ಒಂದಿನ ಮಲಗಿ ಎದ್ದಾಗ ಒಂದು ಕಡೆ ಇಂಥ ಜಟೆ ನೋಡಿದೆ. ಅದ್ಯಾಕೋ ಕತ್ತರಿಸುವ ಮನಸಾಗಲಿಲ್ಲ. ಅದೊಂದು ಬಗೆಯ ದೈವೀಕ ಬೆಳವಣಿಗೆ ಎನಿಸಿತು. ಬೆಳೆಸಿದೆ. ಕೆಲದಿನಗಳಲ್ಲಿ ಇನ್ನೊಂದು ಕಡೆಯೂ ಕಾಣಿಸಿಕೊಂಡಿತು. ಇದೀಗ ಎರಡು ದಶಕಗಳ ಮೇಲಾಯಿತು. ಪಾದ ದಾಟಿ ಬೆಳೆದಿವೆ. ಅದಕ್ಕೇ ಹೀಗೆ ಎರಡು ಮೂರು ಮುಡಿಪಾಗಿ ಕಟ್ಟಿಕೊಳ್ಳುತ್ತೇನೆ.

ಆಶೀಷ್ ಖಾನ್ ಭಾರತವನ್ನು ಹೇಗೆ ನೆನಪಿಸಿಕೊಳ್ಳುತ್ತಾರೆ?

ಭಾರತವನ್ನು ನೆನಪಿಸಿಕೊಳ್ಳುವುದಲ್ಲ, ಭಾರತವನ್ನು ಅನುಭವಿಸುವುದು. ನಮ್ಮ ಪ್ರಾರ್ಥನೆಯಲ್ಲಿ, ಶ್ರದ್ಧೆಯಲ್ಲಿ, ಭಾಷೆ, ಆಹಾರ, ಬದುಕು, ಪರಂಪರೆ ಸಂಗೀತ, ನಾದೋಪಾಸನೆ, ಎಲ್ಲಕ್ಕೂ ಮಿಗಿಲಾಗಿ ಸಮರ್ಪಣೆ. ಹೀಗೆ ಪದಗಳನ್ನು ಹೇಳುವುದಲ್ಲ.. ಅವುಗಳಲ್ಲಿ ಭಾರತವನ್ನು ಕಾಣುತ್ತೇನೆ.

ಭಾರತ ನಿಮ್ಮನ್ನು ಹೇಗೆ ನೆನಪಿಸಿಕೊಳ್ಳಬೇಕು..

ಅದನ್ನು ನಾನೇನು ಹೇಳುವುದು.. ನಾನೊಬ್ಬ ಸಂಗೀತದ ಸೇವಕ. ಮೈಹರ್ ಘರಾನೆಯ ಸೇವಕ. ಇದನ್ನು ಹೊರತು ಪಡಿಸಿದರೆ ಏನೇನೂ ಹೇಳಲು ತೋಚುತ್ತಿಲ್ಲ...

ಕೋವಿಡ್ ಕಾಲ ಕಳೆಯಿತು. ಇನ್ನು ಆಗಾಗ ಸಿಗುವ ದುವಾ ಮಾಡಣ. ವಯಸ್ಸಿನ ಕಾರಣದಿಂದ ನನ್ನ ಹೆಣ್ಣುಮಕ್ಕಳು ಪ್ರವಾಸ ಸಾಕೆನ್ನುತ್ತಾರೆ. ಕೋವಿಡ್ ಸಮಯದಲ್ಲಿ ಮಧುಮೇಹದಿಂದಾಗಿ ಕಾಲು ಕತ್ತರಿಸುವಂಥ ಪ್ರಸಂಗ ಎದುರಾಯಿತು. ಹೆಣ್ಣುಮಕ್ಕಳಿಬ್ಬರೂ ತಾಯಿಯಂತೆ ಕಾಳಜಿ ಮಾಡಿದರು. ನಮ್ಮ ನೋವನ್ನು ನಾವೇ ಅನುಭವಿಸಬೇಕಲ್ಲ. ಆ ನೋವು ತಡೆಯಲಾಗದೇ ಅಳುತ್ತಿದ್ದೆ. ನನ್ನ ಆಕ್ರಂದನ ನನಗೇ ಅಸಹನೀಯವೆನಿಸುತ್ತಿತ್ತು. ದೇಹವನ್ನು ದೇಗುಲದಂತೆ ಗೌರವದಿಂದ ಕಾಣಬೇಕು. ಸ್ವಪ್ರೀತಿ ಬಲು ಮುಖ್ಯ. ಶ್ರದ್ಧೆಯಿಂದ ನಮ್ಮನ್ನು ನಾವೇ ಆರೈಕೆ ಮಾಡಿಕೊಳ್ಳಬೇಕು ಎಂಬ ಪಾಠ ಆ ಸಂದರ್ಭದಲ್ಲಿ ಕಲಿತೆ. ನೀವು ಎಲ್ಲ ಕಣ್ತುಂಬ ನಿದ್ದೆ ಮಾಡಿ, ಹೊಟ್ಟೆಯಲ್ಲಿ ಒಂಚೂರು ಜಾಗ ಇರುವಾಗಲೇ ಊಟ ಸಾಕು ಮಾಡಿ. ಮತ್ತೆ ನಿಮ್ಮ ನೆಲದ, ನೀವು ಬೆಳೆಯುವ ಆಹಾರವನ್ನೇ ಊಟ ಮಾಡಿ. ಅಸ್ವಸ್ಥರೆನಿಸಿದರೆ, ದಣಿವಾದರೆ ಸಂಗೀತವನ್ನು ಕೇಳಿ. ಆನಂದಿಸಿ. ಇದಕ್ಕಿಂತ ಬೇರೆ ಚಿಕಿತ್ಸೆ ಯಾವುದೂ ಇಲ್ಲ.

ಈ ಸಲ ಆರೋಗ್ಯದ ಕಾರಣದಿಂದ ಸಣ್ಣ ಕಛೇರಿ ನೀಡಿದೆ. ಮುಂದಿನ ಸಲ ಬರುವಾಗ ಗಟ್ಟಿಯಾಗಿ ಬರುವೆ. ಬೆಂಗಳೂರಿನ ಕೇಳುಗರಿಗೆ ರಸದೌತಣ ನೀಡುವೆ. ಹಾಗೆ ಆಗಲಿ ಎಂದು ಪ್ರಾರ್ಥಿಸಿ, ಬಯಸಿ ಎನ್ನುತ್ತ ಖುಷ್ ರಹೊ, ಆಬಾದ್ ರಹೊ (ಖುಷಿಯಾಗಿರು, ಸಮೃದ್ಧಿಯಾಗಿರು) ಎಂದು ಹರಸುತ್ತ ಮಾತು ಮುಗಿಸಿದರು.

ತಾನ್ ಸೇನನ ವಂಶಸ್ಥರು

ಸಂಗೀತಗಾರರಾದ ಅಲಿ ಅಕ್ಬರ್ ಖಾನ್, ಜುಬೇದಾ ಬೇಗಂ ಅವರ ಮಗ ಆಶೀಷ್ ಖಾನ್ ದೇವಶರ್ಮಾ, 1939ರ ಡಿ. 5ರಂದು ಮೈಹರ್‌ನಲ್ಲಿ ಜನಿಸಿದರು. ಸರೋದ್ ಮಾಂತ್ರಿಕ ಅಲಾವುದ್ದೀನ್ ಖಾನ್ ಅವರ ಮೊಮ್ಮಗ. ಅಲಾವುದ್ದೀನ್ ಖಾನ್ ಅವರು ಸೇನಿಯಾ ಮೈಹರ್ ಘರಾನೆ ಸ್ಥಾಪಿಸಿದವರು. ತಾನಸೇನ್ ವಂಶಸ್ಥರು ಎಂದು ಹೇಳಲಾಗುತ್ತದೆ. ಅಲಾವುದ್ದೀನ್ ಖಾನ್ ಸ್ಥಾಪಿಸಿರುವ ತಾನಸೇನ್ ಸಂಗೀತ ಶಾಲೆ ಈಗಲೂ ಕಾರ್ಯನಿರ್ವಹಿಸುತ್ತಿದೆ. ಆಶೀಷ್ ಖಾನ್ ಹಿಂದೂಸ್ತಾನಿ ಮತ್ತು ಪಾಶ್ಚಿಮಾತ್ಯ ಸಂಗೀತ ಎರಡರಲ್ಲಿಯೂ ಖ್ಯಾತಿಗಳಿಸಿದವರು. ಕ್ಯಾಲಿಫೋರ್ನಿಯಾದಲ್ಲಿ ಹಿಂದೂಸ್ತಾನಿ ಸಂಗೀತ ವಿಭಾಗದಲ್ಲಿ ಪ್ರೊಫೆಸರ್ ಆಗಿದ್ದವರು. ಮೈಹರ್ ಘರಾನೆಯ ಆಶೀಶ್ ಖಾನ್, ಸಂಗೀತದಲ್ಲಿ ಸಾಕಷ್ಟು ಪ್ರಯೋಗಗಳನ್ನು ಕೈಗೊಂಡವರು. ಅವರ ಗೋಲ್ಡನ್ ಸ್ಟ್ರಿಂಗ್ಸ್ ಆಫ್ ಸರೋದ್ ಗ್ರ್ಯಾಮಿ ಪ್ರಶಸ್ತಿಗೆ ನಾಮಾಂಕಿತವಾಗಿತ್ತು. ಸದ್ಯ ನ್ಯೂಯಾರ್ಕ್‌ನಲ್ಲಿ ವಾಸವಾಗಿದ್ದಾರೆ.

ಸಾಫಲ್ಯ ವೈಫಲ್ಯಗಳ 'ಹಿಂದೂ' ನಡಿಗೆ

ಎಸ್. ಸೂರ್ಯಪ್ರಕಾಶ ಪಂಡಿತ್

ವಿಮರ್ಶೆ

'ನಾನು ಯಾಕೆ ಹಿಂದೂ?'. ಇದು ಲೇಖಕ ಮತ್ತು ರಾಜಕಾರಣಿ ಶಶಿ ತರೂರ್ ಅವರ 'ವೈ ಐಯಾಮ್ ಎ ಹಿಂದೂ' ಇಂಗ್ಲಿಷ್ ಕೃತಿಯ ಕನ್ನಡ ಅನುವಾದ; ಅನುವಾದಕರು ಕೆ. ಈ. ರಾಧಾಕೃಷ್ಣ. ಇಂಥ ಯಾವುದೇ ವೈಚಾರಿಕ ಕೃತಿಯ ಅನುವಾದದ ಬಗ್ಗೆ ವಿಶ್ಲೇಷಿಸುವಾಗ ಎದುರಾಗುವ ಮೊದಲ ಸಮಸ್ಯೆ ಎಂದರೆ: 'ಯಾವುದನ್ನು ನಾವು ವಿಮರ್ಶಿಸಬೇಕು? ಮೂಲಕೃತಿಯ ವಿಚಾರಸರಣಿಯನ್ನೋ ಅಥವಾ ಅನುವಾದದ ಸಾಫಲ್ಯ–ವೈಫಲ್ಯಗಳನ್ನೋ?' ಇಲ್ಲಿ ಎರಡನ್ನೂ ಯಥಾವಕಾಶ ಮಾಡಲಾಗಿದೆ.

ಈ ಕೃತಿಯ ಪ್ರಧಾನ ವಿಷಯ ಏನು? ನೆಹರೂ–ಗಾಂಧಿ ಪ್ರತಿಪಾದನೆಯ 'ಹಿಂದೂಧರ್ಮ'ಕ್ಕೂ ಆರ್.ಎಸ್.ಎಸ್.–ಬಿಜೆಪಿ ಪ್ರಣೀತ 'ಹಿಂದುತ್ವ'ಕ್ಕೂ ಇರುವ ವ್ಯತ್ಯಾಸವನ್ನು ತಿಳಿಸುವುದು. ಇದನ್ನು ಸಾಧಿಸಿ ತೋರಿಸುವುದಕ್ಕೆ ಲೇಖಕರು ತಮ್ಮ ಪುಸ್ತಕವನ್ನು ಮೂರು ಭಾಗಗಳನ್ನಾಗಿ ವಿಂಗಡಿಸಿಕೊಂಡಿದ್ದಾರೆ. ಮೊದಲ ಭಾಗವನ್ನು ಅವರು ಹಿಂದೂಧರ್ಮದ ಅನುಯಾಯಿಯಾದ ಒಬ್ಬ ಲೇಖಕನಾಗಿಯೇ ಬರೆದಿದ್ದಾರೆ. ಆದರೆ ಎರಡು ಮತ್ತು ಮೂರನೆಯ ಭಾಗಗಳನ್ನು ಬರೆಯುವ ಹೊತ್ತಿಗೆ ಅವರಲ್ಲಿರುವ ರಾಜಕಾರಣಿ ಕ್ರಿಯಾಶೀಲನಾಗಿದ್ದಾನೆ. ಮೊದಲಲ್ಲಿ ಹಿಂದೂಧರ್ಮದ ಒಳಗಿನವನಾಗಿ ನಡೆಸುವ ಮೀಮಾಂಸೆಗಳೆಲ್ಲವನ್ನೂ ಆನಂತರದಲ್ಲಿ ರಾಜಕೀಯ ನಿಲುವುಗಳಿಗೆ ಸರಿಹೊಂದಿಸುವಂಥ ಅವರ ಜಾಣ್ಮೆಯೇ ಈ ಕೃತಿಯನ್ನು ಸಂಕುಚಿತಗೊಳಿಸಿಬಿಡುತ್ತದೆ. ಹಿಂದೂಧರ್ಮದ ಮೇಲೆ ಇಸ್ಲಾಂನ ಆಕ್ರಮಣಗಳು, ಕ್ರಿಶ್ಚಿಯನ್ ಮತಾಂತರಗಳು ಮಾಡಿರುವ ಹಾನಿಯಂಥವನ್ನು ಒಳಗಿನವರಾಗಿ ನೆನಪಿಸಿಕೊಳ್ಳುತ್ತಾರೆ; ಆದರೆ ಈಗ ಅದನ್ನೆಲ್ಲವನ್ನೂ ಮರೆಯಬೇಕೆಂದು ಉಪದೇಶಿಸುತ್ತಾರೆ. ಏಕೆ ಮರೆಯಬೇಕು–ಎಂಬುದಕ್ಕೆ ಅವರು ಕೊಡುವ ಕಾರಣಗಳು ಮಾತ್ರ, ಅವರೇ ನಿರಾಕರಿಸಿರುವ, 'ಸೆಕ್ಯುಲರಿಸ್ಟ್' ಮಾದರಿಯವು! ತರೂರ್ ಅವರ ಕೃತಿಯಲ್ಲಿರುವ ಇಂಥ ಎಲ್ಲ ಸಮಸ್ಯೆಗಳನ್ನೂ ಪಟ್ಟಿ ಮಾಡಲು ಇಲ್ಲಿ ಸಾಧ್ಯವಿಲ್ಲವಷ್ಟೆ.

ಪ್ರಾಚೀನ ಹಿಂದೂಧರ್ಮದ ವೈಶಾಲ್ಯವನ್ನೂ ಔದಾರ್ಯವನ್ನೂ ವಿವೇಕವನ್ನೂ ಶಶಿ ತರೂರ್ ಅಲ್ಲಲ್ಲಿ ಚೆನ್ನಾಗಿ ವಿವರಿಸಿದ್ದಾರೆ. 'ಬೈಬಲ್, ಕುರಾನ್, ಬುದ್ಧನ ಸಂವಾದಗಳು ಪ್ರಶ್ನಾತೀತವಾದುದು ಎಂದು ನಂಬುವ ಆಯಾ ಮತಗಳಂತೆ ಸನಾತನಧರ್ಮವು ವೇದಗಳನ್ನು ಕೂಡ ಹಾಗೆ ಭಾವಿಸುವುದೂ ಇಲ್ಲ; ಯಾವುದೇ ಗ್ರಂಥವನ್ನೂ ಅದು ಅಕ್ಷರಶಃ ಸತ್ಯ ಎಂಬಂತೆ ಸ್ವೀಕರಿಸಬೇಕೆಂದು ಒತ್ತಾಯಿಸುವುದು ಇಲ್ಲ. ಇಲ್ಲಿ ಪರ–ವಿರೋಧ ಅಭಿಪ್ರಾಯಗಳು ಸಹಜ. ಮನುಸ್ಮೃತಿಯಂಥ ಗ್ರಂಥಗಳು ಎಲ್ಲ ಕಾಲಕ್ಕೂ ಸಲ್ಲುತ್ತಿತ್ತು ಎಂದೇನೂ ಅಲ್ಲ' ಎಂಬ ಅವರ ವಿಮರ್ಶೆ ಗಮನಾರ್ಹ.

ಆದರೆ 'ಹಿಂದುತ್ವ'ವನ್ನು ಟೀಕಿಸುವಾಗ ಅವರು ತಮ್ಮ ಇಂಥ ಮಾತುಗಳನ್ನೇ ಮರೆತುಬಿಡುತ್ತಾರೆ. ಆರ್.ಎಸ್.ಎಸ್.–ಬಿಜೆಪಿಗಳು ಹಿಂದೂಧರ್ಮವನ್ನು ತಪ್ಪಾಗಿ ವ್ಯಾಖ್ಯಾನಿಸಿ, ಅದನ್ನು ಅವು ತಮ್ಮ ರಾಜಕೀಯ ಹಿತಾಸಕ್ತಿಗಳಿಗೆ ಬಳಸಿಕೊಳ್ಳುತ್ತಿವೆ ಎಂಬ ಆತಂಕ ತರೂರ್ ಅವರದ್ದು. ಆದರೆ ಇಲ್ಲೆಲ್ಲ ಅವರ ತರ್ಕ ಏಕಮುಖವಾಗಿದೆ. ಹೀಗಾಗಿ ಅವರ ವಾದಗಳನ್ನು ಸುಲಭವಾಗಿ ತಿರಸ್ಕರಿಸಬಹುದು.

ಆರ್.ಎಸ್. ಎಸ್.–ಬಿಜೆಪಿಗಳನ್ನು ಟೀಕಿಸುವ ಉತ್ಸಾಹದಲ್ಲಿ ಅವರು ಹಿಂದೂಸಮಾಜದ ವೈಚಾರಿಕ ಕ್ಷಮತೆಯನ್ನೇ ಅಗ್ಗ ಮಾಡುತ್ತಿದ್ದಾರೆ ಎಂದೆನಿಸುತ್ತದೆ. ಉದಾಹರಣೆಗೆ, 'ಅಯೋಧ್ಯೆ ನಮಗೆ ಪವಿತ್ರವಾದುದು' ಎಂದು ಬಿಜೆಪಿಯವರು ಹೇಳಿದ ಬಳಿಕ ಹಿಂದೂಗಳಿಗೆ ಆ ವಿಷಯ ಗೊತ್ತಾದುದಲ್ಲ; ಅದು ಅವರ ಪರಂಪರೆಯಲ್ಲಿಯೇ ರಕ್ತಗತವಾಗಿದೆ. ತಮ್ಮ ಕೆಲಸವನ್ನು ಸಾಧಿಸಿಕೊಡಬಲ್ಲವರ ಬೆಂಬಲಕ್ಕಷ್ಟೆ ಸದ್ಯ ಹಿಂದೂಗಳು ನಿಂತಿದ್ದಾರೆ ಎಂದು ಕೂಡ ನಾವು ಈಗಿನ ಬೆಳವಣಿಗೆಗಳನ್ನು ಅರ್ಥೈಸಬಹುದಲ್ಲವೆ? ತಮ್ಮ ಧರ್ಮಕ್ಕೆ ಬಿಜೆಪಿಯಿಂದ ತೊಂದರೆ ಇದೆ – ಎಂದು ಅರಿವಾದರೆ ಹಿಂದೂಗಳು ಆರ್. ಎಸ್. ಎಸ್.,–ಬಿಜೆಪಿಗಳನ್ನು ತಿರಸ್ಕರಿಸಲಾರರೆ? ಒಂದು ಕಾಲದಲ್ಲಿ ಕಾಂಗ್ರೆಸ್ಸನ್ನು 'ಹಿಂದೂಗಳ ಪಕ್ಷ' ಎಂಬುದಾಗಿಯೇ ಗುರುತಿಸಲಾಗುತ್ತಿತ್ತಲ್ಲವೆ? ತರೂರ್ ಅವರ ಕೃತಿ ಹಿಂದೂಧರ್ಮವನ್ನು ವಿಕೃತಗೊಳಿಸುತ್ತಿರುವ ಬಿಜೆಪಿಯ ಬಗ್ಗೆ ಅರಿವನ್ನು ಮೂಡಿಸುವುದಕ್ಕಾಗಿಯೆ ಹೊರಟದೆ ಎಂದೇ ಭಾವಿಸೋಣ. ಆದರೆ ಇದಕ್ಕೆ ಅನಿವಾರ್ಯವಾಗಿರುವ ನಿಷ್ಪಕ್ಷಪಾತದ ವಿಶ್ಲೇಷಣೆ ಈ ಕೃತಿಯಲ್ಲಿ ಕಾಣದು. ಕಾಶ್ಮೀರವು ಇಸ್ಲಾಂಮಯ ಆದದ್ದನ್ನು ಹೇಳುತ್ತಾರೆ. ಆದರೆ ಈ ಮತಾಂತರ ಕ್ರಿಯೆ ಇಡೀ ದೇಶವನ್ನು ವ್ಯಾಪಿಸಲಿಲ್ಲ ಎಂದೂ ಹೇಳುತ್ತಾರೆ; ಆ ಸಂದರ್ಭದಲ್ಲಿ ಉತ್ತರದಿಂದ ವಲಸೆ ಬಂದ ಹಿಂದೂಗಳ ಸಂಕಟವನ್ನು ಉತ್ತರ–ದಕ್ಷಿಣಭಾರತದ ಧಾರ್ಮಿಕ ಆಚರಣೆಗಳ ಬೆಸುಗೆಯಲ್ಲಿ ತೇಲಿಸಿಬಿಡುತ್ತಾರೆ. ಬ್ರಿಟಿಷರು ಹೇಗೆ ಜಗನ್ನಾಥನ ರಥೋತ್ಸವವನ್ನು ತಪ್ಪಾಗಿ ಅರ್ಥೈಸಿದರು ಎನ್ನುತ್ತ, ಅದೇ ದಾರಿಯಲ್ಲಿಯೇ ಅವರೂ ಸಾಗಿ ಪುರುಷಸೂಕ್ತವನ್ನೇ ಜಾತಿವ್ಯವಸ್ಥೆಯ ಮೂಲವನ್ನಾಗಿ ಅರ್ಥೈಸುತ್ತಾರೆ. ಕೃತಿಯಲ್ಲಿ ಇಂಥ ಹಲವು ವೈರುದ್ಧ್ಯಗಳಿವೆ, ದಿಟ, ಆದರೆ ಸಾರ್ವಜನಿಕ ಜೀವನದಲ್ಲಿರುವವರಿಗೆ ವೈಚಾರಿಕ ಪ್ರಜ್ಞೆ ಇರಬೇಕು. ತರೂರ್ ಈ ಕೃತಿಯಲ್ಲಿ ಅವರ ಒಲವು–ನಿಲುವುಗಳನ್ನು ವಿಚಾರದ ಬಲದಿಂದ ಪ್ರಕಟಿಸಿದ್ದಾರೆ. ಆದುದರಿಂದ ಈ ಕೃತಿ ಸ್ವಾಗತಾರ್ಹವೇ ಹೌದು.

ತರೂರ್ ಅವರ ಇಂಗ್ಲಿಷ್‌ನ ಬಗ್ಗೆ ಪ್ರಶಂಸೆಯನ್ನು ಕೇಳುತ್ತಿರುತ್ತೇವೆ. ಆದರೆ ಅವರ ಕೃತಿಯ ಈ ಅನುವಾದಕ್ಕಂತೂ ಅಂಥ ದೊಡ್ಡ ಪ್ರಶಂಸೆ ಸಲ್ಲುವಂತಿಲ್ಲ. ರಾಧಾಕೃಷ್ಣ ಅವರ ಅನುವಾದ ಎಷ್ಟೋ ಭಾಗಗಳಲ್ಲಿ ಮೂಲಕೃತಿಗೆ ನಿಷ್ಠವಾಗಿಯೇ ಇಲ್ಲ; ಹಲವು ಸ್ಥಳಗಳಲ್ಲಿ ಅಪಾರ್ಥಕ್ಕೂ ಎಡೆಮಾಡಿಕೊಟ್ಟಿದೆ. ಕೆಲವೊಂದು ಭಾಗಗಳು ಚೆನ್ನಾಗಿವೆ; ದಿಟ. ಆದರೆ ಕೆಲವೊಂದು ವಾಕ್ಯಗಳು ಗೊಂದಲಮಯವಾಗಿವೆ. ಮೂಲದಲ್ಲಿ ಇರದ 'ಮನೋರೋಗ'ವನ್ನು ಅನುವಾದಕರು ಒಂದೆಡೆ ಹುಟ್ಟಿಸಿದ್ದಾರೆ; ಇನ್ನೊಂದು ಕಡೆ 'ಆತ್ಮ'ವನ್ನೇ 'ಅಧರ್ಮ' ಮಾಡಿಬಿಟ್ಟಿದ್ದಾರೆ! 'ಆರ್ಟ್ ಆಫ್ ಲಿವಿಂಗ್' ಸಂಸ್ಥೆಯನ್ನು 'ಬಾಳುವ ಕಲೆ'ಯಾಗಿಸಿದ್ದಾರೆ. 'ನಿರ್ವಾಣಷಟ್ಕ'ದ ಪದ್ಯಗಳನ್ನು ಕೇನೋಪನಿಷತ್ತಿನ ಭಾಗಗಳಂತೆ ಕಾಣಿಸಲಾಗಿದೆ. ಇಂಥವು ಎಷ್ಟೋ ಇವೆ. ಕೆಲವು ಪದಗಳಂತೂ ಕನ್ನಡಕ್ಕೆ ಹೊಂದುವಂತಿಲ್ಲ. ಪರಿವಿಡಿಯ ಪುಟದಲ್ಲಿ ಅಧ್ಯಾಯಗಳಿಗೆ ಪುಟಸಂಖ್ಯೆಗಳೇ ಇಲ್ಲ. ಇಸ್ವಿಗಳಿಗೆ ಹಲವೆಡೆ ಅಲ್ಪವಿರಾಮವನ್ನು ಬಳಸಲಾಗಿದೆ (ಹೀಗೆ: 1,947)! ಒಟ್ಟಿನಲ್ಲಿ, ಮೂಲಕೃತಿಯ ವೈಚಾರಿಕತೆಯಲ್ಲಿ ಒಪ್ಪುವಂಥದ್ದೂ ಒಪ್ಪಲಾಗದಂಥದ್ದೂ ಇವೆಯಷ್ಟೆ. ಅಂತೆಯೇ, ಈ ಕೃತಿಯ ಅನುವಾದದಲ್ಲೂ ಸಾಫಲ್ಯ–ವೈಫಲ್ಯಗಳು ಬೆರೆತುಕೊಂಡಿವೆ.



ಪು: 404
₹550

ನಾನು ಯಾಕೆ ಹಿಂದೂ?
ಇಂಗ್ಲಿಷ್ ಮೂಲ: ಶಶಿ ತರೂರ್
ಕನ್ನಡ ಅನುವಾದ: ಕೆ. ಈ. ರಾಧಾಕೃಷ್ಣ
ಪ್ರ: ಮನೋಹರ ಗ್ರಂಥಮಾಲಾ, ಧಾರವಾಡ
ಸಂ: 0836-2441823

...ಕುಗ್ಗದ ಕ್ರಿಕೆಟಿಗ ಆಮಿರ್

10ನೇ ಪುಟದಿಂದ...

ಅದೊಂದು ಭಾನುವಾರ ಮಧ್ಯಾಹ್ನ ಆಟವಾಡಿಕೊಂಡಿದ್ದ ನನ್ನನ್ನು ಅಮ್ಮ ಕರೆದರು. ಅಣ್ಣನಿಗೆ ಊಟದ ಡಬ್ಬಿ ಕೊಟ್ಟು ಬಾ ಎಂದರು. ಮಿಲ್‌ನಲ್ಲಿ ಡಬ್ಬಿ ಕೊಡುವ ಸಂದರ್ಭದಲ್ಲಿ ಅಲ್ಲಿದ್ದ ಕಟ್ಟಿಗೆ ಕತ್ತರಿಸುವ ಯಂತ್ರಕ್ಕೆ ನಾನು ಧರಿಸಿದ್ದ ಜಾಕೆಟ್ ಸಿಲುಕಿತು. ಕೆಲವೇ ಕ್ಷಣಗಳಲ್ಲಿ ನನ್ನ ಎರಡೂ ಕೈಗಳು ದೇಹದಿಂದ ಬೇರ್ಪಟ್ಟವು. ರಕ್ತದ ಮಡುವಿನಲ್ಲಿ ಬಿದ್ದಿದ್ದಷ್ಟೇ ನೆನಪು. ನಂತರ ಹಲವಾರು ದಿನಗಳ ಚಿಕಿತ್ಸೆಯಲ್ಲಿ ಜೀವ ಉಳಿಯಿತು. ಆದರೆ ನನ್ನನ್ನು ಬದುಕಿಸಲು ಅಪ್ಪ ತಮ್ಮ ಮಿಲ್, ಜಮೀನು ಎಲ್ಲವನ್ನೂ ಮಾರಿಕೊಂಡಿದ್ದರು. ಕುಟುಂಬವು ಬಡತನದ ಬೇಗೆಯಲ್ಲಿ ಮುಳುಗಿತ್ತು.

ಪಟ್ಟ ಕಷ್ಟಗಳು, ಎದುರಿಸಿದ ಸವಾಲುಗಳು ಹಲವಾರು. 'ವಿಷ ಹಾಕಿ ಸಾಯಿಸಿಬಿಡಿ. ಈ ಹುಡುಗ ನಿಮಗೆ ಹೊರೆ' ಎಂದ ನೆರೆಹೊರೆಯವರ ಮಾತುಗಳನ್ನು ನನ್ನ ಕುಟುಂಬ ನಿರ್ಲಕ್ಷಿಸಿತು. ಅಜ್ಜಿಯಂತೂ ನನ್ನನ್ನು ಕಣ್ರೆಪ್ಪೆಗಳಂತೆ ಸಲುಹಿದರು. ಅವರೇನಾದರೂ ಇವತ್ತು ನನ್ನ ಸಾಧನೆಗಳನ್ನು ನೋಡಿದ್ದರೆ ಎಲ್ಲರಿಗಿಂತ ಹೆಚ್ಚು ಸಂತಸ ಪಡುತ್ತಿದ್ದರು. ಆದರೆ ಅವರು ತೀರಿಹೋಗಿ ಹದಿಮೂರು ವರ್ಷಗಳಾಗಿವೆ.

2013ರಲ್ಲಿ ಹನ್ನೊಂದನೆ ತರಗತಿ ಓದಲು ಸೇರಿದಾಗ ಅಲ್ಲಿ ಕ್ರಿಕೆಟ್ ಆಡುವವರನ್ನು ನೋಡುತ್ತಿದ್ದೆ. ಅವರು ನನಗೆ ಆಡಲು ಕರೆದರು. ಮೊದಲ ಬಾರಿಗೆ ಲೆದರ್ ಬಾಲ್‌ನಲ್ಲಿ ಆಡಲು ಪ್ರಯತ್ನಿಸಿದೆ. ಕಾಲಿನಲ್ಲಿ ಬೌಲಿಂಗ್ ಮಾಡುವುದನ್ನು ನೋಡಿದ ಜನರೆಲ್ಲರೂ ಖುಷಿಪಟ್ಟರು. ನಗರದಲ್ಲಿ ನಡೆಯುತ್ತಿರುವ ಪ್ಯಾರಾ ಕ್ರಿಕೆಟ್ ಶಿಬಿರಕ್ಕೆ ಸೇರುವಂತೆ ಸಲಹೆ ನೀಡಿದರು. ನನ್ನ ಶಿಕ್ಷಕರೊಬ್ಬರು ಕರೆದುಕೊಂಡು ಹೋಗಿ ಸೇರಿಸಿದರು.

ಅಲ್ಲಿ ಕ್ರಿಕೆಟ್ ತರಬೇತಿ ಸಿಕ್ಕಿತು. ಒಂದು ಪಂದ್ಯದಲ್ಲಿ 30 ರನ್ ಗಳಿಸಿದೆ. ಕುತ್ತಿಗೆ ಮತ್ತು ತೋಳುಗಳ ನಡುವೆ ಬ್ಯಾಟ್ ಹಿಡಿಯುವುದನ್ನು ರೂಢಿಸಿಕೊಂಡೆ. ದೆಹಲಿಯಲ್ಲಿ ನಡೆಯಲಿದ್ದ ರಾಷ್ಟ್ರೀಯ ಪ್ಯಾರಾ ಕ್ರಿಕೆಟ್‌ಗೆ ಆಯ್ಕೆ ಮಾಡಿದರು. ಅಷ್ಟೇ ಅಲ್ಲ; ಜಮ್ಮು–ಕಾಶ್ಮೀರ ತಂಡಕ್ಕೆ ನಾಯಕನನ್ನಾಗಿಯೂ ನೇಮಕ ಮಾಡಿದರು.

ದೆಹಲಿಯ ಪಂದ್ಯದಲ್ಲಿ ಕಾಲಿನಿಂದ ಬೌಲಿಂಗ್ ಮಾಡಿದ ಮೊದಲ ಎಸೆತದಲ್ಲಿಯೇ ವಿಕೆಟ್ ಗಳಿಸಿದೆ. ಬ್ಯಾಟಿಂಗ್‌ನಲ್ಲಿ 25 ರನ್ ಗಳಿಸಿದೆ. ಅಲ್ಲಿದ್ದ ಹಲವರು ತಮ್ಮ ಮೊಬೈಲ್‌ಗಳಲ್ಲಿ ನನ್ನ ಆಟವನ್ನು ಚಿತ್ರೀಕರಿಸಿಕೊಂಡು ಸೋಷಿಯಲ್ ಮಿಡಿಯಾದಲ್ಲಿ ಹಾಕಿದರು. ಪಂದ್ಯ ಮುಗಿದ ನಂತರ ಎದುರಾಳಿ ತಂಡದ ಆಟಗಾರರು ಸೇರಿ ತಮ್ಮ ಹೆಗಲ ಮೇಲೆ ನನ್ನನ್ನು ಹೊತ್ತು ಮೆರೆಸಿದರು. 'ಭಾರತ್ ಮಾತಾ ಕೀ ಜೈ..' ಎಂದು ಕೂಗಿದರು. ನಾನು ಗಳಗಳನೇ ಅತ್ತುಬಿಟ್ಟಿದ್ದೆ.

ಆಮಿರ್ ಹುಸೇನ್ ಲೋನ್ ಬ್ಯಾಟಿಂಗ್ –ಪಿಟಿಐ ಚಿತ್ರ

2014ರಲ್ಲಿ ಲಖನೌನಲ್ಲಿ ರಾಷ್ಟ್ರೀಯ ಟೂರ್ನಿಯಲ್ಲಿ ಆಡಿದೆ. 2016ರಲ್ಲಿ ಭಾರತ ತಂಡದ ಆಟಗಾರ ಆಶಿಶ್ ನೆಹ್ರಾ ಅವರು ಆಹ್ವಾನಿಸಿದರು. ಆ ವರ್ಷ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಪಂದ್ಯದಲ್ಲಿ ಭಾರತ ಮತ್ತು ವೆಸ್ಟ್ ಇಂಡೀಸ್ ಆಡಿದ್ದವು. ಆ ಪಂದ್ಯ ವೀಕ್ಷಣೆಗೆ ನಮ್ಮನ್ನು ಕರೆದಿದ್ದರು. ಸಚಿನ್ ತೆಂಡೂಲ್ಕರ್ ಅವರು ತಮ್ಮ ಹಸ್ತಾಕ್ಷರವಿದ್ದ ಜೆರ್ಸಿ ಕಳಿಸಿದರು. ಬಾಂಗ್ಲಾ, ಶ್ರೀಲಂಕಾ ಎದುರು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಡಿದೆ.

ಆದರೆ ಈ ನಡುವೆ ನೌಕರಿಗಾಗಿ ಮಾಡಿದ ಪ್ರಯತ್ನಗಳು ಕೈಗೂಡಲಿಲ್ಲ. ನಮ್ಮ ರಾಜ್ಯ ಸರ್ಕಾರ, ಬೇರೆ ಸಂಸ್ಥೆಗಳಲ್ಲಿ ಮಾಡಿದ ಪ್ರಯತ್ನಗಳು ಫಲ ನೀಡಿಲ್ಲ. ಮದುವೆ ಆಗಿದೆ. ಪತ್ನಿ ಮತ್ತು ಮಕ್ಕಳು ನನ್ನನ್ನು ನೋಡಿಕೊಳ್ಳುತ್ತಿದ್ದಾರೆ. ಅಪ್ಪ ದುಡಿಯುತ್ತಿದ್ದಾರೆ. ಈಗ ನನಗೆ 32 ವರ್ಷ. ಈಗಲೂ ಆಡುತ್ತಿದ್ದೇನೆ. ನನ್ನ ಜೀವನಗಾಥೆಯಾಧಾರಿತ ಚಲನಚಿತ್ರ ಕೂಡ ಸಿದ್ಧವಾಗುತ್ತಿದೆ. ಆರ್ಥಿಕ ಪರಿಸ್ಥಿತಿ ಇಂದಲ್ಲ ನಾಳೆ ಸುಧಾರಣೆಯಾಗಿ ಕುಟುಂಬಕ್ಕೆ ನಾನು ಆಸರೆಯಾಗುವ ಕನಸು ನನಸಾಗುವುದನ್ನು ಕಾಯುತ್ತಿದ್ದೇನೆ.

ಮೊದಲ ಓದು

ಮಲೆನಾಡನ್ನು ಮತ್ತೆ ತೆರೆದಿಡುವ ಕಥನ...

ಸಾಗರ, ಸಿದ್ದಾಪುರ, ಸೊರಬ, ಬನವಾಸಿಯ ಸುತ್ತಲಿನ ಬದುಕು, ಭಾಷೆ, ಆಚರಣೆಗಳನ್ನು ಕಣ್ಣಿಗೆ ಕಟ್ಟುವಂತೆ ಸೆರೆ ಹಿಡಿದಿರುವ ಕಾದಂಬರಿ 'ದುಪಡಿ'. ಈ ಕೃತಿಯ ಕಥೆ ನಡೆಯುವುದು ಸೊರಬ ತಾಲ್ಲೂಕಿಗೆ ಸೇರಿದ ಕ್ಯಾಸನೂರು ಸೀಮೆಯಲ್ಲಿ. ಬಾಲ್ಯ ವಿವಾಹಕ್ಕೆ ಒಳಗಾಗುವ ಕಥಾ ನಾಯಕಿ 'ಅಚ್ಚಿ'ಯ ಬದುಕಿನ ಪಯಣವೇ ಕಾದಂಬರಿಯ ಒಟ್ಟಾರೆ ಕಥೆ. ಆದರೆ ಆಕೆಯ ಬದುಕಿನುದ್ದಕ್ಕೂ ಬರುವ ಪಾತ್ರಗಳು, ಎದುರಿಸುವ ಸವಾಲುಗಳು, ಬದುಕಿನ ನದಿಯನ್ನು ದಾಟುವ ಪರಿಯ ಮೂಲಕ ಲೇಖಕಿ ಈ ಕೃತಿಯನ್ನು ಮಲೆನಾಡಿನ ಎಲ್ಲ ಹೆಣ್ಣುಮಕ್ಕಳ ಕಥೆಯನ್ನಾಗಿಸುತ್ತಾರೆ.

ಪೂರ್ತಿ ಕಾದಂಬರಿ ಹವಿಗನ್ನಡದಲ್ಲಿದೆ. ಸಾಗರ, ಸೊರಬ ಭಾಗದಲ್ಲಿ ಬಳಸುವ ಹವ್ಯಕ ಭಾಷೆಯನ್ನು ಇಲ್ಲಿ ಬಳಸಲಾಗಿದೆ. ಸ್ವತಂತ್ರ ಪೂರ್ವದಲ್ಲಿನ ಕಥೆಯೊಂದಿಗೆ ಇಂದು ಬಳಕೆಯಲ್ಲಿ ಇಲ್ಲದ ಅನೇಕ ಶಬ್ದಗಳನ್ನು ಇಲ್ಲಿ ಮತ್ತೆ ನೆನಪಿಸಿದ್ದಾರೆ. ಕಾದಂಬರಿ ಸುತ್ತಲೂ ಹೆಣೆದ ಪಾತ್ರಗಳು ಮತ್ತು ನಿರೂಪಣೆ ಆವತ್ತಿನ ಸಮಾಜವನ್ನು ಕಣ್ಣೆದುರಿಗೆ ತಂದು ನಿಲ್ಲಿಸುತ್ತದೆ. 'ಈ ಕಾದಂಬರಿಯಲ್ಲಿ ಬರುವ ಹವ್ಯಕರಷ್ಟೇ ಬಳಸುವ ವಿಶಿಷ್ಟ ಪದಗಳು ಹಾಗೂ ನುಡಿಗಟ್ಟುಗಳನ್ನು ಸಂಗ್ರಹಿಸಿದರೆ ಒಂದು ಪದಕೋಶವೇ ಆದೀತು! ಅಷ್ಟರಮಟ್ಟಿಗೆ ಕಾದಂಬರಿಯ ಭಾಷೆ ಅನನ್ಯವಾಗಿದೆ. ಹಾಗೆಯೇ ಸಂವಹನಕ್ಕೆ ಕಿಂಚಿತ್ತೂ ತೊಡಕಾಗದಂತೆ ಲೇಖಕಿ ಕಾದಂಬರಿಯನ್ನು ನಿರ್ವಹಿಸಿದ್ದಾರೆ' ಎಂದು ಗೀತಾ ವಸಂತ ಅವರು ಮುನ್ನುಡಿಯಲ್ಲಿ ಬರೆದಿದ್ದಾರೆ.

ಹದಿನೈದು ಅಧ್ಯಾಯಗಳಿದ್ದು ಬೇರೆ, ಬೇರೆ ಕಾಲಘಟ್ಟಗಳೊಂದಿಗೆ ಕಥೆಯಲ್ಲಿ ಬರುವ ಹೆಣ್ಣಿನ ಬದುಕಿನ ಮಜಲುಗಳು ಬದಲಾಗುತ್ತ ಹೋಗುತ್ತವೆ. ಇಲ್ಲಿ ಪ್ರಸ್ತಾಪವಾಗುವ ಅನೇಕ ಸನ್ನಿವೇಶಗಳು, ಘಟನೆಗಳು, ಪಾತ್ರಗಳು ನಮ್ಮ ಅಪ್ಪ, ತಾತನ ಕಾಲದ ಮಲೆನಾಡನ್ನು ಮತ್ತೊಮ್ಮೆ ನೆನಪಿಸುವುದರಲ್ಲಿ ಯಾವುದೇ ಸಂದೇಹವಿಲ್ಲ.

ಪು: 284
₹320

ದುಪಡಿ
ಲೇ: ಚಂದ್ರಮತಿ ಸೋಂದಾ
ಪ್ರ: ಜ್ಯೋತಿ ಪ್ರಕಾಶನ, ಮೈಸೂರು
ಸಂ: 9844212231

ಸಾಹಿತ್ಯ, ಸಂಗೀತ ಸಾಧಕರ ಪರಿಚಯ

ಸಾಹಿತ್ಯ, ಸಂಗೀತ, ರಂಗಭೂಮಿಯಲ್ಲಿ ಸಾಧನೆ ಮಾಡಿದ ಒಂದಷ್ಟು ಸಾಧಕರನ್ನು ಪರಿಚಯಿಸುವ ಕೃತಿ 'ಕಂಡು ಕೇಳಿದವರು'. ಕೃತಿಯ ಲೇಖಕರಾದ ಹೊರೆಯಾಲ ದೊರೆಸ್ವಾಮಿಯವರು ಸಾಂದರ್ಭಿಕವಾಗಿ ಬರೆದ ಕೆಲವೊಂದು ವ್ಯಕ್ತಿಚಿತ್ರಗಳೇ ಪುಸ್ತಕವಾಗಿದೆ. ಒಟ್ಟು ಇಪ್ಪತ್ತೈದು ಸಾಧಕರ ಕುರಿತಾಗಿ ಲೇಖನಗಳಿವೆ. ಇದಲ್ಲದೆ ಮೂರು ವಿಭಾಗಗಳಲ್ಲಿ ವಿವಾದಿತ ಕೃತಿಗಳ ಕುರಿತು ವಿವರಗಳಿವೆ.

ಕೃತಿಯ ಮೊದಲ ಲೇಖನ ಯು.ಆರ್. ಅನಂತಮೂರ್ತಿ ಅವರ ಕುರಿತು. ಅನಂತಮೂರ್ತಿ ಅವರ ವಿದ್ಯಾರ್ಥಿಯಾಗಿ, ಸಹೋದ್ಯೋಗಿಯಾಗಿ, ಒಡನಾಡಿಯಾಗಿರುವ ಲೇಖಕ ಅವರ ಕುರಿತಾಗಿ ಈ ಲೇಖನದಲ್ಲಿ ಭಿನ್ನ ನೋಟವನ್ನೇ ಕಟ್ಟಿಕೊಡುತ್ತಾರೆ. ಅನಂತಮೂರ್ತಿ ಅವರ ಬಗೆಗೆ ನೇರ ಮತ್ತು ನಿಷ್ಠುರವಾದ ಬರವಣಿಗೆ ಶೈಲಿ ಈ ಲೇಖನದಲ್ಲಿ ಕಾಣಿಸುತ್ತದೆ. 'ಅವಧೂತ ವ್ಯಕ್ತಿತ್ವದ ಎಲ್.ಬಸವರಾಜು' ಲೇಖನದಲ್ಲಿ ಬಸವರಾಜು ಅವರಲ್ಲಿದ್ದ ದ್ವಂದ್ವದ ಕುರಿತು ಬರೆಯುತ್ತಾರೆ.

ಎಂ.ಚಿದಾನಂದ ಮೂರ್ತಿ, ಬರಗೂರು ರಾಮಚಂದ್ರಪ್ಪ, ಆರ್.ಕೆ.ನಾರಾಯಣ್, ಲಂಕೇಶ್ ಮೊದಲಾದವರ ಕುರಿತು ಲೇಖನಗಳಿವೆ. ಬೆಳಕು ವಿನ್ಯಾಸಕಾರ ವಿ.ರಾಮಮೂರ್ತಿ ಅವರ ವ್ಯಕ್ತಿತ್ವದ ಕುರಿತಾಗಿನ ಬರಹವಿದೆ. ಯು.ಆರ್.ಅನಂತಮೂರ್ತಿ ಅವರ 'ಅವಸ್ಥೆ' ಕೃತಿ ಹುಟ್ಟು ಹಾಕಿದ ವಿವಾದ, ಅದಕ್ಕೆ ಕಾರಣಗಳನ್ನು ವಿಶ್ಲೇಷಿಸುವ ಲೇಖನವೊಂದಿದೆ. 'ವಸ್ತುನಿಷ್ಠವಾಗಿ ಬರೆಯುವುದು ನನ್ನ ಬಯಕೆ. ಅದನ್ನಿಲ್ಲಿ ಪಾಲಿಸಿದ್ದೇನೆ' ಎಂದು ಕೃತಿಯ ಪ್ರಾರಂಭದಲ್ಲಿಯೇ ಲೇಖಕ ಬರೆದುಕೊಂಡಿದ್ದಾರೆ. ಅದರಂತೆ ವ್ಯಕ್ತಿತ್ವವನ್ನು ಲೆಕ್ಕಿಸದೇ ದೊಡ್ಡ ವ್ಯಕ್ತಿಗಳ ಸಾಹಿತ್ಯ, ನಿಲುವುಗಳಲ್ಲಿನ ದೌರ್ಬಲ್ಯಗಳನ್ನು ನಿಷ್ಠುರವಾಗಿಯೇ ಹೇಳಿರುವುದು ಕೃತಿಯ ವಿಶೇಷತೆ. ಇಲ್ಲಿನ ಬರೆದ ಬಹುತೇಕ ವ್ಯಕ್ತಿಗಳಿಗೆ ಲೇಖಕ ಒಡನಾಡಿಯಾಗಿದ್ದರೂ ಎಂಬುದನ್ನೂ ಗಮನಿಸಬೇಕು.



ಪು: 204
₹230

ಕಂಡು ಕೇಳಿದವರು
ಲೇ: ಹೊರೆಯಾಲ ದೊರೆಸ್ವಾಮಿ
ಪ್ರ: ಸಮಾನತಾ ಪ್ರಕಾಶನ
ಸಂ:9482808474

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಹಗಲಿನಕ್ಷಿ

ಹಗಲನ್ನು ಬೆಳಗುವ ಸೂರ್ಯನನ್ನು ಪಗಲಕರ, ಪಗಲಬಲ್ಲಹ, ಹಗಲಚುಕ್ಕೆ, ಹಗಲಿನ ದೀಪ, ಪಗಲಾಣ್ಮ, ಪಗಲೆರೆಯ, ಹಗಲೊಡೆಯ ಎಂದು ಹಲವು ವಿಧವಾಗಿ ಕನ್ನಡ ಕವಿಗಳು ವರ್ಣಿಸಿದ್ದಾರೆ. ಸೂರ್ಯನು ಪೂರ್ವ ದಿಕ್ಕಿನಲ್ಲಿ ಕಣ್ಣು ತೆರೆಯುವುದರಿಂದ ಜಗತ್ತಿಗೆ ಬೆಳಕಾಗುವುದು. ಹಾಗಾಗಿ ಕುವೆಂಪು ಅವರು ರವಿಯನ್ನು ಹಗಲಿನ ಕಣ್ಣಾಗಿ ಕಂಡು 'ಹಗಲಿನಕ್ಷಿ' ಪದ ರಚಿಸಿ ಹೀಗೆ ಚಿತ್ರಿಸಿದ್ದಾರೆ :

ದಿಗುತಟದಲಿ ತೆರೆಯುತಿತ್ತು
ಹಗಲಿನಕ್ಷಿ.
(ಭಾದ್ರಪದದ ಸುಪ್ರಭಾತ - ಪಕ್ಷಿಕಾಶಿ)

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ

ಮೂಲ: ಮಣಿಕಾ ದೇವಿ
ಕನ್ನಡಕ್ಕೆ: ಡಿ.ಎನ್.ಶ್ರೀನಾಥ್ ಅವರ
ವೃದ್ಧ ಹೇಳಿದ

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ಲೋಕೇಶ ಬೆಕ್ಕಳಲೆ ಅವರ
ಎಲ್ಲಿಹನು ರಾಮ

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಅಚ್ಚರಿಗಳ ಪುಟ್ಟ ದೇಶ ಲಿಕ್‌ಟನ್‌ಸ್ಟೈನ್

ವಡೂಜ್ ನಗರವನ್ನು ಈ ಪುಟಾಣಿ ರೈಲಿನಲ್ಲೇ ಸುತ್ತು ಹಾಕಿ ಬರಬಹುದು...

ಪ್ರವಾಸ

ಪ್ರಪಂಚದ ಆರನೇ ಪುಟ್ಟ ದೇಶ ಲಿಕ್‌ಟನ್‌ಸ್ಟೈನ್ ಇದು ನಮ್ಮ ಮಲೆನಾಡಿನ ಪುಟ್ಟ ಪಟ್ಟಣದಂತೆ ಕಾಣಿಸುತ್ತದೆ. ಈ ಪುಟಾಣಿ ದೇಶವು ಹತ್ತು ಹಲವು ಅಚ್ಚರಿಗಳನ್ನು ತನ್ನ ಒಡಲಲ್ಲಿ ತುಂಬಿಕೊಂಡಿದೆ.



ಲಿಕ್‌ಟನ್‌ಸ್ಟೈನ್ ರಾಜಧಾನಿ ವಡೂಜ್ ನಗರದ ನೋಟ

ವಿ.ಶ್ರೀನಿವಾಸ

ಜಗತ್ತಿನ ಅತ್ಯಂತ ಚಿಕ್ಕ ದೇಶ ಯಾವುದು ಎಂದರೆ 'ವ್ಯಾಟಿಕನ್ ಸಿಟಿ' ಎಂದು ತಕ್ಷಣ ಹೇಳುತ್ತೇವೆ. ಆದರೆ ವ್ಯಾಟಿಕನ್ ಸಿಟಿಯನ್ನು ನೋಡಿದರೆ ಅದೊಂದು ಪ್ರತ್ಯೇಕ ದೇಶ ಎಂದು ಭಾವಿಸುವುದು ಕಷ್ಟವಾಗುತ್ತದೆ. ಏಕೆಂದರೆ ಅದು ರೋಮ್ ನಗರದ ಒಂದು ಬಡಾವಣೆಯಂತೆ ನಗರದೊಳಗೇ ಹೊಂದಿಕೊಂಡಿದೆ. ಇದು ಏನೇ ಆಗಲಿ, ರಾಜತಾಂತ್ರಿಕವಾಗಿ ಅದೊಂದು ಪ್ರತ್ಯೇಕ ದೇಶ.

ಹಾಗೆಯೇ ನಮ್ಮ ಯೂರೋಪ್ ಪ್ರವಾಸದಲ್ಲಿ ಪ್ರಪಂಚದ ಆರನೇ ಪುಟ್ಟ ದೇಶ, ಯುರೋಪ್‌ನ ನಾಲ್ಕನೇ ಚಿಕ್ಕ ದೇಶವಾದ ಲಿಕ್‌ಟನ್‌ಸ್ಟೈನ್ ನೋಡಲು ಹೋಗಿದ್ದೆವು. ಸುಮಾರು 160 ಚದರ ಕಿಲೋಮೀಟರ್ ಹಾಗೂ ಸುಮಾರು 38 ಸಾವಿರ ಜನಸಂಖ್ಯೆಯುಳ್ಳ ಪುಟ್ಟ ದೇಶವನ್ನು ಒಂದು ಗಂಟೆಯಲ್ಲಿಯೇ ಪೂರಾ ಸುತ್ತು ಹಾಕಬಹುದು. ಆಲ್ಪ್ಸ್ ಪರ್ವತ ಶ್ರೇಣಿಯಲ್ಲಿ ಆಸ್ಟ್ರಿಯಾ ಹಾಗೂ ಸ್ವಿಡ್ಜರ್ಲೆಂಡ್ ಎರಡು ದೇಶಗಳ ಮಡಿಲಲ್ಲಿರುವ ಈ ದೇಶ ಡಬಲ್ ಲ್ಯಾಂಡ್‌ಲಾಕ್ಡ್ ದೇಶ. ಅಂದರೆ, ಸಮುದ್ರತೀರಕ್ಕೆ ಹೋಗಲು ಎರಡು ದೇಶಗಳನ್ನು ದಾಟಿ ಹೋಗಬೇಕು. 17ನೇ ಶತಮಾನದಲ್ಲಿ ರೋಮನ್ ಸಾಮ್ರಾಜ್ಯದಿಂದ ಬೇರ್ಪಟ್ಟು ಪ್ರತ್ಯೇಕ ರಾಷ್ಟ್ರವಾಗಿ ಅಂದಿನಿಂದ 'ಪ್ರಿನ್ಸ್' ಆಡಳಿತಕ್ಕೊಳಪಟ್ಟಿದೆ. ಚುನಾಯಿತ ಹಾಗೂ ನಾಮನಿರ್ದೇಶಿತ ಜನಪ್ರತಿನಿಧಿಗಳಿರುವ ಪಾರ್ಲಿಮೆಂಟ್ ಇರುತ್ತಾದರೂ 'ಪ್ರಿನ್ಸ್' ಈ ದೇಶದ ಸರ್ವಾಧಿಕಾರಿಯಾಗಿರುತ್ತಾರೆ.

ವಡೂಜ್ ನಗರದಲ್ಲಿನ ಸೇಂಟ್ ಫ್ಲೋರಿನ್ ಚರ್ಚ್

ಪ್ರಸ್ತುತ ಹನ್ಸ್ ಆಡಮ್ 2 ಈ ದೇಶದ ಪ್ರಿನ್ಸ್ ಆಗಿದ್ದಾರೆ. ಜರ್ಮನ್ ಇಲ್ಲಿಯ ಮುಖ್ಯಭಾಷೆ. ಈ ಪುಟ್ಟ ದೇಶ ಬಹು ದೊಡ್ಡ ಅಚ್ಚರಿಯ ಸಂಗತಿಗಳನ್ನು ತುಂಬಿಕೊಂಡಿದೆ. 17ನೇ ಶತಮಾನದಲ್ಲಿ ಸ್ಥಾಪಿತವಾಗಿರುವ ಈ ದೇಶ ಇದುವರೆಗೂ ಯಾವ ಯುದ್ಧದಲ್ಲೂ ಭಾಗಿಯಾಗಿಲ್ಲ ಹಾಗೂ ಯುದ್ಧದಿಂದ ಬಾಧಿತವಾಗಿಲ್ಲ. ಏಕೆಂದರೆ ಈ ದೇಶದಲ್ಲಿ ಸೈನ್ಯ ಅಥವಾ ಮಿಲಿಟರಿಯೇ ಇಲ್ಲ! ಪೋಲೀಸರ ಸಂಖ್ಯೆಯೂ ಅತ್ಯಂತ ಕಡಿಮೆ ಇದ್ದು, ಅಪರಾಧ ಮುಕ್ತ ದೇಶವಾಗಿದೆ.

ತಲಾ ಜಿಡಿಪಿ ಪ್ರಕಾರ ಇದು ಪ್ರಪಂಚದಲ್ಲಿಯೇ ಅತ್ಯಂತ ಶ್ರೀಮಂತ ರಾಷ್ಟ್ರಗಳಲ್ಲೊಂದಾಗಿದೆ. ಜನಸಂಖ್ಯೆಗಿಂತ ಇಲ್ಲಿ ನೋಂದಾಯಿತ ಕಂಪನಿಗಳ ಸಂಖ್ಯೆ ಹೆಚ್ಚಾಗಿದೆ. ಕೃತಕ ದಂತಗಳ ತಯಾರಿಕೆಯಲ್ಲಿ ಮುಂಚೂಣಿಯಲ್ಲಿದ್ದು, ಶೇಕಡ 20 ಕ್ಕಿಂತ ಅಧಿಕ ಕೃತಕ ದಂತಪಂಕ್ತಿಗಳು ಇಲ್ಲಿ ತಯಾರಾಗುತ್ತವೆ.

ಈ ದೇಶ ಈವರೆಗೂ ಹತ್ತು ಒಲಿಂಪಿಕ್ ಪದಕಗಳನ್ನು ಪಡೆದಿದ್ದು, ಜನಸಂಖ್ಯೆಗೆ ಹೋಲಿಸಿದರೆ ಅತಿ ಹೆಚ್ಚು ತಲಾ ಒಲಿಂಪಿಕ್ ಪದಕ ಪಡೆದ ದೇಶವಾಗಿದೆ. ಈ ದೇಶದಲ್ಲಿ ವಿಮಾನ ನಿಲ್ದಾಣವಿಲ್ಲ. ಆದರೆ ಸ್ವಿಡ್ಜರ್ಲೆಂಡ್ ಹಾಗೂ ಆಸ್ಟ್ರಿಯಾ ದೇಶಗಳ ರೈಲುಗಳು ಈ ದೇಶದ ಮೂಲಕ ಹಾದುಹೋಗುತ್ತವೆ. ದೇಶದ ರಾಜಧಾನಿ ವಡೂಜ್‌ನಲ್ಲಿ ಪುಟಾಣಿ ರೈಲು ಇದ್ದು (ನಮ್ಮಲ್ಲಿ ಮಕ್ಕಳ ಪಾರ್ಕ್‌ಗಳಲ್ಲಿರುವಂತೆ) ಒಂದರ್ಧ ಗಂಟೆಯಲ್ಲಿ ಇಡೀ ರಾಜಧಾನಿ ವಡೂಜ್ ನಗರವನ್ನು ಸಾವಕಾಶವಾಗಿ ಸುತ್ತು ಹಾಕಿಕೊಂಡು ಬರುತ್ತದೆ. ನಾವೂ ಕೂಡಾ ಈ ರೈಲಿನಲ್ಲಿ ಇಡೀ ದೇಶ ಸುತ್ತುಹಾಕಿ ಆನಂತರ ಇಲ್ಲಿರುವ ಭಾರತೀಯ ಹೋಟೆಲ್ ಒಂದರಲ್ಲಿ ಊಟ ಮಾಡಿದೆವು.

ಇನ್ನೊಂದು ಅತ್ಯಂತ ವಿಲಕ್ಷಣ ಘಟನೆಯೊಂದು 'ಹೀಗೂ ಉಂಟೇ' ಎಂದು ಅಚ್ಚರಿ ಮೂಡಿಸುತ್ತದೆ. 2007 ರಲ್ಲಿ ಸ್ವಿಸ್ ಸೈನ್ಯವು ತರಬೇತಿ ಸಮಯದಲ್ಲಿ ಹವಾಮಾನ ವೈಪರೀತ್ಯದಿಂದಾಗಿ ಸುಮಾರು ಒಂದೂವರೆ ಕಿಲೋಮೀಟರ್‌ವರೆಗೂ ಈ ದೇಶದೊಳಗೆ ಬಂದುಬಿಟ್ಟಿತ್ತಂತೆ. ನಂತರ ಗೊತ್ತಿಲ್ಲದೇ ನಡೆದ ಈ ಅಚಾತುರ್ಯಕ್ಕಾಗಿ ಸ್ವಿಸ್ ದೇಶ ಈ ಲಿಕ್‌ಟನ್‌ಸ್ಟೈನ್ ದೇಶದ ಕ್ಷಮೆ ಕೋರಿತಂತೆ! ಅದುವರೆಗೂ ಈ ದೇಶದ ಯಾರಿಗೂ ಈ ಸಂಗತಿ ಗೊತ್ತೇ ಇರಲಿಲ್ಲವಂತೆ. ದೇಶ-ದೇಶಗಳ ನಡುವೆ ಗಡಿಗಾಗಿ, ಒಂದೇ ದೇಶದ ರಾಜ್ಯ, ರಾಜ್ಯಗಳ ಗಡಿಗಾಗಿ, ನದಿ ನೀರಿಗಾಗಿ ಯುದ್ಧಗಳೇ ನಡೆಯುತ್ತಿರುವ ಈ ಸಂದರ್ಭದಲ್ಲಿ ಈ ಸಂಗತಿ ಅತ್ಯಂತ ಅಚ್ಚರಿ ಅನಿಸಿತು.

ಮುಂದುವರಿದ ದೇಶ ಎನಿಸಿಕೊಂಡರೂ ಇಲ್ಲಿನ ಮಹಿಳೆಯರು ಮತದಾನದ ಹಕ್ಕನ್ನು ಪಡೆದದ್ದು ಯುರೋಪಿನಲ್ಲಿಯೇ ಕಟ್ಟ ಕಡೆಯದಾಗಿ, ಅಂದರೆ 1984 ರಲ್ಲಿ.

ಹಿಮಾಚ್ಛಾದಿತ ಪರ್ವತಗಳು, ಹಚ್ಚ ಹಸುರಿನ ಸೌಂದರ್ಯರಾಶಿಯಿಂದ ತುಂಬಿರುವ ಈ ಅಚ್ಚರಿಯ ಅಚ್ಚುಕಟ್ಟಾದ ಪುಟ್ಟ ಪ್ರಶಾಂತ ದೇಶವನ್ನೊಮ್ಮೆ ನೋಡಲೇಬೇಕು.

ಗುರಿ ಇರುವ ಗುರುವಿಗೆ...

10ನೇ ಪುಟದಿಂದ...

ಈ ಕಲಿಕಾಕ್ರಮಗಳ ಬಗ್ಗೆ ವಿಸ್ತೃತವಾಗಿ ಶಿಕ್ಷಣ ನೀತಿಯಲ್ಲಿ ಕಾಣಬಹುದು. ಶಿಕ್ಷಕರನ್ನು ಒಗ್ಗೂಡಿಸಿ ಪಾಠ ಮಾಡುವ ಕ್ರಮದಲ್ಲಿ ತರಬೇಕಾದ ಬದಲಾವಣೆಗಳ ಬಗ್ಗೆ ಚರ್ಚೆಗಳು, ಗೋಷ್ಠಿಗಳು, ಕಾರ್ಯಾಗಾರಗಳನ್ನು ಕಳೆದ ನಾಲ್ಕೈದು ದಶಕಗಳಿಂದಲೂ ಇವರು ನಡೆಸಿಕೊಂಡು ಬಂದಿದ್ದಾರೆ. ಶಿಕ್ಷಣದಲ್ಲಿ ತಂತ್ರಜ್ಞಾನ ಬಳಕೆ, ಮೌಲ್ಯಾಧಾರಿತ ಮತ್ತು ಗುಣಮಟ್ಟದ ಶಿಕ್ಷಣ, ಸಂಶೋಧನೆ ಮತ್ತು ಶಿಕ್ಷಕರ ಸಾಮರ್ಥ್ಯವನ್ನು ಬೆಳೆಸುವ ನಿಟ್ಟಿನಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಸಂಶೋಧನಾ ಮಾರ್ಗದರ್ಶಕರಾಗಿ ಗುಣಮಟ್ಟ ಮತ್ತು ಸಾಮಾಜಿಕ ದೃಷ್ಟಿಕೋನಕ್ಕೆ ಇವರ ವಿಶೇಷ ಆದ್ಯತೆ ಇರುತ್ತದೆ. ದೇಶ ಮತ್ತು ಸಮಾಜಕ್ಕೆ ಸಂಶೋಧನೆಯಿಂದಾಗುವ ಪ್ರಯೋಜನ ಮತ್ತು ಅದನ್ನು ಕಾರ್ಯರೂಪಕ್ಕೆ ತರುವ ದಿಕ್ಕಿನಲ್ಲಿ ಸಂಶೋಧನಾ ಪ್ರಬಂಧಗಳನ್ನು ರೂಪಿಸುವ ಯತ್ನ ಇವರದು. ಸಂಶೋಧನೆ ಹೊಸತನ್ನು ಹುಟ್ಟುಹಾಕಬೇಕು ಮತ್ತು ನಮ್ಮ ಸಮಾಜದಲ್ಲಿ ಇದರಿಂದ ಬದಲಾವಣೆ ತರುವಂತಾಗಬೇಕೆಂಬ ಆಗ್ರಹ ಅವರದು. ಕರ್ನಾಟಕ ಜ್ಞಾನ ಆಯೋಗದ ನಿರ್ದೇಶಕರಾಗಿದ್ದಾಗ ತಮ್ಮ ಸಾಮಾಜಿಕ ಫಲಿತಗಳ ಕಲ್ಪನೆಯನ್ನು 'ಜ್ಞಾನ ಫೆಲೋಷಿಪ್' ಕಾರ್ಯಕ್ರಮದ ಮೂಲಕ ಇವರು ಅನುಷ್ಠಾನಗೊಳಿಸಿದರು.

ಸಾಮಾಜಿಕ ಸಮಸ್ಯೆಗಳಿಗೆ ವಿಶಿಷ್ಟ ರೀತಿಯ ಪರಿಹಾರಗಳನ್ನು ಜನರ ಮೂಲಕವೇ ಹೊರತರುವ ಯತ್ನ ಅವರದು. ಸಮಾಜದ ಏರುಪೇರುಗಳು, ಸಮಸ್ಯೆಗಳು ಅವರನ್ನು ಸದಾ ಭಾವುಕರನ್ನಾಗಿಸುತ್ತವೆ. ಒಮ್ಮೆ ಅಂಗವಿಕಲರ ಸಮಾವೇಶಕ್ಕೆ ಹೋದಾಗ ಅವರಿಗೆ ಎದುರಾದ ಪರಿಸ್ಥಿತಿ ಅವರ ಮನಸ್ಸನ್ನು ಕಲಕಿತು. ಕಾರ್ಯಕ್ರಮ ಮುಗಿದು ಎಲ್ಲರೂ ತೆರಳಿದ ನಂತರ ಒಬ್ಬ ವಿದ್ಯಾರ್ಥಿ ಶ್ರೀಧರ್ ಅವರಿಗೆ ಕಾಯುತ್ತಾ ಕುಳಿತಿದ್ದ. ತನಗಿರುವ ಆಸೆ ಆಕಾಂಕ್ಷೆಗಳು, ತನ್ನ ಕುಟುಂಬದ ಬಡತನ, ಅವನ ಜೀವನದ ಕಷ್ಟಗಳನ್ನು ಹಂಚಿಕೊಂಡು 'ಈಗ ಹೇಳಿ ನಾನು ಹೇಗೆ ಬದುಕಲಿ?' ಎಂದಾಗ ಶ್ರೀಧರ್, ತಾವು ಏನನ್ನೂ ಮಾಡಲಾಗದ ಅಸಹಾಯಕ ಪರಿಸ್ಥಿತಿಯಲ್ಲಿರುವದನ್ನು ಅರಿತು ದಿನವಿಡೀ ಕಣ್ಣೀರಿಟ್ಟರು.

ವ್ಯಕ್ತಿ ನಿರ್ಮಾಣದ ಗುರಿ: ವಿದ್ಯಾರ್ಥಿಗಳು, ಯುವಕರು ಶ್ರೀಧರ್ ಅವರ ಸಂಪರ್ಕಕ್ಕೆ ಬಂದರೆಂದರೆ ಅವರ ಜೀವನದೃಷ್ಟಿಯೇ ಬದಲಾಗುತ್ತದೆ. ಸಾಮಾಜಿಕ ಕಾಳಜಿಯ ಬೀಜ ಹುಟ್ಟಿಕೊಳ್ಳುತ್ತದೆ. ಸ್ವಾಮಿ ವಿವೇಕಾನಂದರ ಜೀವನ ಮತ್ತು ಅವರ ಜೀವನ ದರ್ಶನದಿಂದ ಪ್ರೇರಿತರಾಗಿರುವ ಶ್ರೀಧರ್ ಅವರ ಮುಖ್ಯ ಗುರಿ ವ್ಯಕ್ತಿ ನಿರ್ಮಾಣ. ಯುವಪೀಳಿಗೆಯ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದು, ಅವರ ಚಿಂತನೆಯನ್ನು ಗೌರವಿಸುವುದು ಮತ್ತು ಅವರ ಭಾವನೆಗಳಿಗೆ ಸ್ಪಂದಿಸುತ್ತಾ ಅವರ ಬೆಳವಣಿಗೆಯಲ್ಲಿ ನೆರವಾಗುವುದು ಶ್ರೀಧರ್ ನಡೆದುಕೊಂಡು ಬಂದ ದಾರಿ. ತಾವೇನಾದರೂ ಇನ್ನೊಬ್ಬರಿಗೆ ನೋವುಂಟು ಮಾಡಿದ್ದೇನೆ ಎನಿಸಿದರೆ ಮುಕ್ತ ಮನಸ್ಸಿನಿಂದ ಮಾತನಾಡಿ ತಮ್ಮ ಮನಸ್ಸಿನಲ್ಲಿ ಯಾವುದೇ ಕಲ್ಮಶವಿಲ್ಲದೆ ಸಮಾಧಾನ ಹೇಳುವುದು, ಅವರಲ್ಲಿ ಸ್ಥೈರ್ಯ ತುಂಬುವುದು ಮತ್ತು ಗುರಿಯತ್ತ ಸಾಗಲು ಪ್ರೇರೇಪಿಸುವುದು ಇವರ ವಿಶೇಷ ಗುಣ. ಹಿಂದೆ ಗುರುವಿರಲಿ ಮುಂದೆ ಗುರಿಯಿರಲಿ ಎನ್ನುವ ಮಾತು ಇವರ ಶಿಷ್ಯರಿಗೆ ಹೇಳಿ ಮಾಡಿಸಿದಂತಿದೆ.

ಎಲ್ಲರೊಳಗೊಂದಾಗಿ...: ಶ್ರೀಧರ್ ಅವರದು ನೇರ, ಸರಳ ಮತ್ತು ಪ್ರೀತಿಯ ವ್ಯಕ್ತಿತ್ವ. ಸದಾ ಹಸನ್ಮುಖಿಯಾಗಿ, ಒಂದಿಷ್ಟು ಕೀಟಲೆ ಮಾಡಿ ನಗಿಸುವುದು ಶ್ರೀಧರ್ ಅವರನ್ನು ಭೇಟಿ ಮಾಡಿದವರಿಗೆಲ್ಲ ಅನುಭವಕ್ಕೆ ಬರುತ್ತದೆ. ಶ್ರೀಧರ್ ಅವರನ್ನು ಸದಾ ಒಂದು ದೊಡ್ಡ ಗುಂಪಿನ ಮಧ್ಯೆ ಕಾಣಬಹುದು. ಭಾನುವಾರಗಳ ಮುಂಜಾನೆ ಲಾಲ್‌ಬಾಗ್‌ನಲ್ಲಿ ವಾಯುವಿಹಾರಕ್ಕೆಂದು ಹೋದಾಗ ಅವರನ್ನು ಮಾತನಾಡಿಸಲು ಅನೇಕ ಮಂದಿ ಕಾಯುತ್ತಾ ನಿಲ್ಲುವುದು ಸಾಮಾನ್ಯ ದೃಶ್ಯ. ಅವರು ವಿಜಯ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು.

ಶ್ರೀಧರ್ ಅವರದು ಸದಾ ಪ್ರತಿಬಿಂಬಕ ಚಿಂತನೆ. ಅವರ ನಡೆ, ನಡವಳಿಕೆ, ಮಾತು ಎಲ್ಲವೂ ಅನುಕರಣೀಯ. ಅವರಲ್ಲಿರುವ ಸರಳತೆ ಎದ್ದು ಕಾಣುವ ಗುಣ. ಅವರನ್ನು ಪ್ರಶಸ್ತಿ ಕುರಿತು ಕೇಳಿದಾಗ 'ನಾನು ಮಾಡುತ್ತಿರುವ ಕೆಲಸವನ್ನು ಮುಂದುವರಿಸುತ್ತೇನೆ' ಎಂದರು.

ಚಾಣಕ್ಯ ವಿಶ್ವವಿದ್ಯಾಲಯದ ಸ್ಥಾಪಕ ಕುಲಪತಿಗಳಾಗಿರುವ ಇವರನ್ನು ಭೇಟಿ ಮಾಡುವುದು ಬಹಳ ಸುಲಭ. ವಿಶ್ವವಿದ್ಯಾಲಯದ ಕಾರಿಡಾರ್‌ಗಳಲ್ಲಿ ಕುಳಿತು ಎಲ್ಲರೊಡನೆ ಹಲವಾರು ಕ್ಷಣಗಳನ್ನು ಕಳೆದು ಎಲ್ಲರಲ್ಲೂ ಶಿಕ್ಷಣ, ಸಮಾಜ ಹಾಗೂ ದೇಶದ ಏಳಿಗೆಯ ಕನಸನ್ನು ಬಿತ್ತುತ್ತಿರುತ್ತಾರೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ದಶ್ಶಗ ಚಿಕ್ಕ ಕೇಶ್ರಷ್ಪ ಕಥೆಯ — ಬಲೂನ್ ಪುಂಗಿ!

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಹಾವಾಡಿಗನೊಬ್ಬ ಜಾತ್ರೆಗೆ ಬಂದಿದ್ದ. ಹಾವಿದ್ದ ಬುಟ್ಟಿಯ ಮುಚ್ಚಳ ತೆಗೆದು ಪುಂಗಿ ಊದಲಾರಂಭಿಸಿದ. ಜೋರಾಗಿ ಊದಿದರೂ ಹಾವು ಎದ್ದೇಳಲೇ ಇಲ್ಲ. ಹೀಗಾಗಿ ಇನ್ನಷ್ಟು ಜೋರಾಗಿ ಪುಂಗಿ ಊದಿದ. ಆ ರಭಸಕ್ಕೆ ಪುಂಗಿ ಉಬ್ಬಿ ಬೃಹತ್ ಬಲೂನ್‌ನಂತೆ ಆಯಿತು. ಹಾವು ಹೆದರಿ ಪಕ್ಕಕ್ಕೆ ಸರಿಯಿತು. ಹಾವಾಡಿಗನೂ ಗಾಬರಿಗೊಂಡು ಬೆಚ್ಚಿಬಿದ್ದ.

ಕ್ವಿಜ್–ಭಾರತ

1. ಕರ್ನಾಟಕ ಸಂಗೀತ ಪಿತಾಮಹ ಯಾರು?
2. ವಚನ ಸಂಪಾದನೆಯ ಪಿತಾಮಹ ಯಾರು?
3. ಭಾರತೀಯ ಚಲನಚಿತ್ರ ಪಿತಾಮಹ ಯಾರು?
4. ಪಕ್ಷಿಶಾಸ್ತ್ರದ ಪಿತಾಮಹ ಯಾರು?
5. ಆಯುರ್ವೇದ ಪಿತಾಮಹ ಯಾರು?

ಗಣಿತದಲ್ಲಿ ಗರ್ದಿಗಮ್ಮತ್ತು

ಕ್ಯಾಲೆಂಡರ್‌ನಲ್ಲೊಂದು ಕೌತುಕ ಸಂಕಲನ

ಕ್ಯಾಲೆಂಡರ್‌ನ ಚೌಕಾಕಾರದಲ್ಲಿ ಬರುವ ಒಂಬತ್ತು ಸಂಖ್ಯೆಗಳಲ್ಲಿ ವೃತ್ತ ಸುತ್ತಿದ ಐದು ಸಂಖ್ಯೆಗಳ ಮೊತ್ತವು, ಅದರ ಮಧ್ಯದ ಸಂಖ್ಯೆಗೆ 5ರಿಂದ ಗುಣಿಸಿದಾಗ ಬರುವ ಸಂಖ್ಯೆಗೆ ಸಮನಾಗಿರುತ್ತದೆ.

ಉದಾ: 4+18+12+6+20=
12X5=60

ತಾಳೆ: 4+18+12+6+20=60

ಉದಾ: 2
14+8+15+22+16=
15X5=75
ತಾಳೆ:14+8+15+22+16=75

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಎರಡಕ್ಷರದ ಪದಗಳಿಗೆ ಅಕ್ಷರಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ತುಂಬಿ ನಾಲ್ಕಕ್ಷರದ ಪದ ರಚಿಸಿ

ಅ	ಸ	ವ	ತ್ಕಾ
ಮಾ	ಗೋ	ಬಾ	ಖಾ
ಯ	ಚಾ	ಮಾ	ರ
ಕಾ	ಸ	ಜ	ಚ
ಕಾ	ಪ್ರ	ರಿ	ಸ

	ದಾ		ರಿ
	ಜ		ನ
	ವ		ನ
	ಬ		ರ
	ಹ		ರ
	ಯಾ		ಕ
	ದಾ		ರ
	ಕ		ಣ
	ಮ		ನ
	ಮ		ರ

ಮೋಜಿನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ ಎರಡಕ್ಷರ ಸ್ವರಗಳಿಗೆ ವ್ಯಂಜನ ಪಟ್ಟಿಯಿಂದ ಎರಡಕ್ಷರ ಆಯ್ದು ತುಂಬಿ ನಾಲ್ಕಕ್ಷರದ ಅರ್ಥಬದ್ಧ ಪದರಚಿಸಿ.

F	L	V	N
K	G	R	P
D	L	V	N
S	N	M	S
T	D	R	P

	I		E
	I		E
	I		E
	I		E
	I		E
	I		E
	I		E
	I		E
	I		E
	I		E

ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಕಾರ — ಸಾರ — ಸುಗು

ಸರ — ತಿಕ — ಜರ

ಅಕ್ಷರ ಪಟ್ಟಿ

ಮಿ	ಪ್ರ	ಬೆ	ಪ್ರ	ಭೌ	ಗು
ಥಿ	ಣ	ಣ	ಪಂ	ತಿ	ಳಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬೆಸುಗೆ: 1.ಟಿಸಿಲುಕು 2.ಇಸವಿತಾ 3.ಉದರಗ 4.ಬೈರಾಗಿಣಿ 5.ಸಿಂಬಳಲು 6.ಸಹರಾಜು

ಜಾಣಪದ ಆಟ: 1.ಅಲಂಕಾರ 2.ದಶರಥ 3.ಡಕಾಯಿತ 4.ಆಮಂತ್ರಣ 5.ವಿಕಸನ 6.ಜನವರಿ 7.ಪ್ರಕರಣ 8.ಕಸರತ್ತು 9.ಅವನತಿ 10.ನಿವಾರಣೆ

ಮೋಜಿನ ಇಂಗ್ಲಿಷ್: 1.BALE 2.CARE 3.DATE 4.GATE 5.LATE 6.MAKE 7.RATE 8.TALE 9.TAKE 10.MALE

ಕರ್ನಾಟಕ ಕ್ವಿಜ್: 1.ಕೆಮ್ಮಣ್ಣುಗುಂಡಿ 2.ಶಿವಮೊಗ್ಗ 3.ಕಾವೇರಿ 4.ಕುವೆಂಪು 5.ಹಾವೇರಿ ಜಿಲ್ಲೆಯ ಅಂಬಲೂರು



ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಕೋಮಲ ಹರಿಪ್ರಿಯಾ ಎಲ್. ಅರಸ್

ತೇಜಸ್ವಿ ಬಿ. ಎಂ. ಮಳವಳ್ಳಿ

ಯುಕ್ತ ಯೋಗೀಶ್ ಕೊಪ್ಪಳ

ರೋಹಿತ್ ಡಿ. ಬೆಂಗಳೂರು

ಭುವನ ಎಲ್ ಅರಸ್ ತಿಪಟೂರು

ಸಮರ್ಥ್ ಎನ್. ಎಸ್. ಹರ್ತಿಕೋಟೆ, ಹಿರಿಯೂರು

19 ವರ್ಷದೊಳಗಿನವರ ವಿಶ್ವಕಪ್ ಫೈನಲ್: ಉದಯ್, ಸಚಿನ್ ಮೇಲೆ ಕಣ್ಣು

ಭಾರತಕ್ಕೆ 6ನೇ ಕಿರೀಟದ ಕನಸು

ಬೆನೊನಿ, ದಕ್ಷಿಣ ಆಫ್ರಿಕಾ (ಪಿಟಿಐ): ಭಾರತ ಯುವ ಕ್ರಿಕೆಟ್ ಪಡೆಯಲ್ಲಿರುವ ಚಿಗುರುಮೀಸೆಯ ಹುಡುಗರ ಕಂಗಳಲ್ಲಿ ಈಗ ಭರಪೂರ ಕನಸುಗಳು. ಯಶಸ್ಸಿನ ಆಗಸದಲ್ಲಿ ರೆಕ್ಕೆ ಬಿಚ್ಚಿ ಹಾರುವ ಹುಮ್ಮಸ್ಸು.

ಭಾನುವಾರ ಇಲ್ಲಿ ನಡೆಯಲಿರುವ 19 ವರ್ಷದೊಳಗಿನವರ ವಿಶ್ವಕಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಗೆದ್ದು ದಾಖಲೆ ಬರೆಯುವ ಉತ್ಸಾಹ ಈ ತಂಡದಲ್ಲಿದೆ. ಐದು ಬಾರಿಯ ಚಾಂಪಿಯನ್ ಭಾರತ ಮತ್ತೊಂದು ಕಿರೀಟದ ಕನವರಿಕೆಯಲ್ಲಿದೆ.

ಹೋದ ವರ್ಷ ನವೆಂಬರ್ 19ರಂದು ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು(ಸೀನಿಯರ್) ವಿಶ್ವಕಪ್ ಫೈನಲ್‌ನಲ್ಲಿ ಪ್ಯಾಟ್ ಕಮಿನ್ಸ್ ನೇತೃತ್ವದ ಆಸ್ಟ್ರೇಲಿಯಾ ಎದುರು ಸೋತಿತ್ತು. ಇದೀಗ ಉಭಯ ದೇಶಗಳ 'ಭಾವಿ ತಾರೆ'ಗಳು ಮುಖಾಮುಖಿಯಾಗಲಿವೆ. ತಮ್ಮ ಸೀನಿಯರ್‌ಗಳಿಗೆ ಆದ ಮುಖಭಂಗದ ಸೇಡನ್ನು ಉದಯ್ ಸಹಾರನ್ ನಾಯಕತ್ವದ ತಂಡ ತೀರಿಸಿಕೊಳ್ಳುವುದೇ?

'ನಾವು ಮುಯ್ಯಿ ತೀರಿಸಿಕೊಳ್ಳುವ ಬಗ್ಗೆ ಯೋಚನೆ ಮಾಡುತ್ತಿಲ್ಲ. ವರ್ತಮಾನದ ಮೇಲೆ ಮಾತ್ರ ನಮ್ಮ ಗಮನವಿದೆ. ಹಳೆಯ ಘಟನೆ ಅಥವಾ ಭವಿಷ್ಯದ ಬಗ್ಗೆ ಚಿಂತಿತರಾಗಿಲ್ಲ' ಎಂದು ಉದಯ್ ಸ್ಪಷ್ಟಪಡಿಸಿದ್ದಾರೆ.

ಸಚಿನ್ ದಾಸ್, ಮುಷೀರ್ ಖಾನ್ ಮತ್ತು ಸೌಮಿಕುಮಾರ್ ಪಾಂಡೆ ಅವರಂತಹ ಪ್ರತಿಭಾವಂತರು ತಂಡದಲ್ಲಿದ್ದಾರೆ. ಆದರೆ ಆಸ್ಟ್ರೇಲಿಯಾ ತಂಡದಲ್ಲಿ ಪರಿಣಾಮಕಾರಿ ಬೌಲರ್‌ಗಳು ಇದ್ದಾರೆ. ಸೆಮಿಫೈನಲ್‌ನಲ್ಲಿ ಪಾಕಿಸ್ತಾನದ ವಿರುದ್ಧ ಅಮೋಘ ಬೌಲಿಂಗ್ ಮಾಡಿದ್ದ ಟಾಮ್ ಸ್ಟ್ರೇಕರ್ ಮತ್ತು ಕ್ಯಾಲಂ ವಿಡ್ಲೆರ್ ಅವರು ಭಾರತದ ಬ್ಯಾಟಿಂಗ್ ಪಡೆಗೆ ಸವಾಲೊಡ್ಡಬಲ್ಲರು.

ಒಂಬತ್ತನೇ ಕ್ರಮಾಂಕದವರೆಗೂ ಬ್ಯಾಟಿಂಗ್ ಮಾಡುವ ಸಮರ್ಥರು ಆಸ್ಟ್ರೇಲಿಯಾ ಬಳಗದಲ್ಲಿದ್ದಾರೆ. ಆದ್ದರಿಂದ ಭಾರತದ ಬೌಲರ್‌ಗಳಾದ ನಮನ್ ತಿವಾರಿ ಮತ್ತು ರಾಜ್ ಲಿಂಬಾಣಿ ಅವರ ಮೇಲೆ ಒತ್ತಡ ಹೆಚ್ಚಿದೆ.

ಟ್ರೋಫಿಯೊಂದಿಗೆ 19 ವರ್ಷದೊಳಗಿನವರ ಭಾರತ ತಂಡದ ನಾಯಕ ಉದಯ್ ಸಹಾರನ್ ಮತ್ತು ಆಸ್ಟ್ರೇಲಿಯಾ ತಂಡದ ನಾಯಕ ಹ್ಯೂಗ್ ವಿಬ್‌ಜೆನ್ —ಐಸಿಸಿ 'ಎಕ್ಸ್' ಚಿತ್ರ

ವಿಶ್ವಕಪ್ ಟೂರ್ನಿಯಲ್ಲಿ ಪ್ರಶಸ್ತಿ ಸಾಧನೆ

ಭಾರತ ಜಯ	ಆಸ್ಟ್ರೇಲಿಯಾ ಗೆಲುವು
5	3

ಭಾರತ ತಂಡವು 2012 ಮತ್ತು 2018ರ ಟೂರ್ನಿಗಳ ಫೈನಲ್‌ಗಳಲ್ಲಿ ಆಸ್ಟ್ರೇಲಿಯಾ ತಂಡವನ್ನು ಮಣಿಸಿತ್ತು. 2016ರಿಂದ ಇಲ್ಲಿಯವರೆಗೆ ನಡೆದ ಎಲ್ಲ ವಿಶ್ವಕಪ್ ಟೂರ್ನಿಗಳಲ್ಲಿಯೂ ಫೈನಲ್ ತಲುಪಿದ ಹೆಗ್ಗಳಿಕೆ ಭಾರತದ್ದು. 2016 ಹಾಗೂ 2020ರಲ್ಲಿ ಬಿಟ್ಟರೆ ಉಳಿದ ಆವೃತ್ತಿಗಳಲ್ಲಿ ಜಯಭೇರಿ ಬಾರಿಸಿತ್ತು.

2008ರಲ್ಲಿ ವಿರಾಟ್ ಕೊಹ್ಲಿ ನಾಯಕತ್ವದ ತಂಡವು ಪ್ರಶಸ್ತಿ ಜಯಿಸಿದ ನಂತರ 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಗೆ ಅಪಾರ ಜನಪ್ರಿಯತೆ ಬಂದಿತು.

ಭಾರತ ಸೀನಿಯರ್ ತಂಡಕ್ಕೆ ಬಹಳಷ್ಟು ಪ್ರತಿಭಾವಂತ ಆಟಗಾರರನ್ನು ಈ ವಯೋವರ್ಗದ ಟೂರ್ನಿಯು ನೀಡಿದೆ. ರಾಷ್ಟ್ರೀಯ ತಂಡವನ್ನಷ್ಟೇ ಅಲ್ಲ. ಐಪಿಎಲ್ ಫ್ರ್ಯಾಂಚೈಸಿಗಳ ಗಮನ ಸೆಳೆಯಲೂ ಈ ಟೂರ್ನಿಯ ಯಶಸ್ಸು ಕಾರಣವಾಗಿರುವ ಉದಾಹರಣೆಗಳು ಇವೆ. ಈ ಬಾರಿಯೂ ಅದೇ ನಿರೀಕ್ಷೆಯನ್ನು ಈ ಫೈನಲ್ ಮೂಡಿಸಿದೆ.

ಪಂದ್ಯ ಆರಂಭ: ಮಧ್ಯಾಹ್ನ 1.30, ನೇರಪ್ರಸಾರ:ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ತಂಡಗಳು

ಭಾರತ: ಉದಯ ಸಹಾರನ್ (ನಾಯಕ), ಸೌಮಿಕುಮಾರ್ ಪಾಂಡೆ (ಉಪನಾಯಕ), ಅರ್ಷಿಣ್ ಕುಲಕರ್ಣಿ, ಆದರ್ಶ್ ಸಿಂಗ್, ರುದ್ರ ಮಯೂರ್ ಪಟೇಲ್, ಸಚಿನ್ ದಾಸ್, ಪ್ರಿಯಾಂಶು ಮಾಲಿಯಾ, ಮುಷೀರ್ ಖಾನ್, ಅರವೆಲ್ಲಿ ಅವನೀಶ್ ರಾವ್ (ವಿಕೆಟ್‌ಕೀಪರ್), ಮುರುಗನ್ ಅಭಿಷೇಕ್, ಇನ್ನೇಶ್ ಮಹಾಜನ್ (ವಿಕೆಟ್‌ಕೀಪರ್), ಧನುಷ್ ಗೌಡ, ಆರಾಧ್ಯ ಶುಕ್ಲಾ, ರಾಜ್ ಲಿಂಬಾನಿ, ನಮನ್ ತಿವಾರಿ.

ಆಸ್ಟ್ರೇಲಿಯಾ: ಹ್ಯೂಗ್ ವಿಬ್‌ಜೆನ್ (ನಾಯಕ), ಲಚ್ಲನ್ ಎಟ್ಕೆನ್, ಚಾರ್ಲಿ ಆ್ಯಂಡರ್ಸನ್, ಹರಕಿರತ್ ಬಜ್ವಾ, ಮಾಳಿ ಬಿಯರ್ಡ್‌ಮ್ಯಾನ್, ಟಾಮ್ ಕ್ಯಾಂಪ್‌ಬೆಲ್, ಹ್ಯಾರಿ ಡಿಕ್ಸನ್, ರಿಯಾನ್ ಹಿಕ್ಸ್ (ವಿಕೆಟ್‌ಕೀಪರ್), ಸ್ಯಾಮ್ ಕೊನ್ಸ್ಟಾಸ್, ರಫೆಲ್ ಮ್ಯಾಕ್‌ಮಿಲನ್, ಏಡನ್ ಒಕಾನರ್, ಹರ್ಜಾಸ್ ಸಿಂಗ್, ಟಾಮ್ ಸ್ಟ್ರೇಕರ್, ಕ್ಯಾಲಂ ವಿಡ್ಲೆರ್, ಒಲೀ ಪೀಕೆ.

ಹಾರ್ದಿಕ್ ಆಲ್‌ರೌಂಡ್ ಆಟ; ಶಶಿ ಮೋಡಿ

ರಣಜಿ ಕ್ರಿಕೆಟ್: ಇನಿಂಗ್ಸ್ ಹಿನ್ನಡೆಯ ಭೀತಿಯಲ್ಲಿ ತಮಿಳುನಾಡು ತಂಡ

ಪ್ರಜಾವಾಣಿ ವಾರ್ತೆ

ಚೆನ್ನೈ: ಆತಿಥೇಯ ತಮಿಳುನಾಡು ತಂಡದಲ್ಲಿ ಬಲಿಷ್ಠ ಬ್ಯಾಟಿಂಗ್ ಪಡೆ ಇರುವುದು ದಿಟ. ಆದರೆ ಕರ್ನಾಟಕದ ಬೌಲರ್‌ಗಳ ಮುಂದೆ ಅವರ ಆಟ ನಡೆಯಲಿಲ್ಲ.

ಹೌದು; ಚೆಪಾಕ್‌ನಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸಿ ಗುಂಪಿನ ಪಂದ್ಯದಲ್ಲಿ ಕರ್ನಾಟಕದ ಬೌಲರ್‌ಗಳು ಪ್ರತಾಪ ಮೆರೆದರು.

ಅದರಲ್ಲೂ ನವಪ್ರತಿಭೆ ಕೆ.ಶಶಿಕುಮಾರ್ (41ಕ್ಕೆ3) ಸ್ಪಿನ್ ಮೋಡಿಯು ರಂಗೇರಿತು. 17 ವರ್ಷದ ಹಾರ್ದಿಕ್ ರಾಜ್ (51; 96ಎ, 4X8 ಮತ್ತು 47ಕ್ಕೆ2) ಆಲ್‌ರೌಂಡ್ ಆಟವೂ ಗಮನ ಸೆಳೆಯಿತು.

ಇಬ್ಬರಿಗೂ ಇದು ಚೊಚ್ಚಲ ರಣಜಿ ಟೂರ್ನಿಯಾಗಿದೆ.

ಕರ್ನಾಟಕವು ಪ್ರಥಮ ಇನಿಂಗ್ಸ್‌ನಲ್ಲಿ 119.4 ಓವರ್‌ಗಳಲ್ಲಿ ಗಳಿಸಿದ್ದ 366 ರನ್‌ಗಳಿಗೆ ಉತ್ತರವಾಗಿ ಆತಿಥೇಯ ತಂಡವು ಎರಡನೇ ದಿನದಾಟದ ಮುಕ್ತಾಯಕ್ಕೆ 56 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 129 ರನ್ ಗಳಿಸಿತು. ಇನಿಂಗ್ಸ್ ಹಿನ್ನಡೆ ತಪ್ಪಿಸಿಕೊಳ್ಳಬೇಕಾದರೆ ಇನ್ನೂ 237 ರನ್ ಗಳಿಸಬೇಕು.

ಬಾಬಾ ಇಂದ್ರಜೀತ್ (ಬ್ಯಾಟಿಂಗ್ 35) ಮತ್ತು ಎಂ. ಮೊಹಮ್ಮದ್ (ಬ್ಯಾಟಿಂಗ್ 3) ಕ್ರೀಸ್‌ನಲ್ಲಿದ್ದಾರೆ. ಭಾನುವಾರ ಬೆಳಗಿನ ಅವಧಿಯಲ್ಲಿ ಬೇಗನೆ ಮೂರು ವಿಕೆಟ್‌ಗಳನ್ನು ಉರುಳಿಸುವಲ್ಲಿ ಕರ್ನಾಟಕ ಬೌಲರ್‌ಗಳು ಸಫಲರಾದರೆ ಮಯಂಕ್ ಪಡೆಗೆ ಉತ್ತಮ ಮುನ್ನಡೆ ಲಭಿಸುವುದು ಖಚಿತ.

ತಮಿಳುನಾಡು ತಂಡದ ಆರಂಭಿಕ ಬ್ಯಾಟರ್ ಜಗದೀಶನ್ (40; 56ಎ), ಪ್ರದೋಷ್ ಪಾಲ್ ಮತ್ತು ಮಧ್ಯಮಕ್ರಮಾಂಕದ ಬ್ಯಾಟರ್ ಭೂಪತಿ ಕುಮಾರ್ ಅವರ ವಿಕೆಟ್‌ಗಳನ್ನು ಶಶಿಕುಮಾರ್ ತಮ್ಮದಾಗಿಸಿಕೊಂಡರು. ಶಶಿಗೆ ಇದು ಎರಡನೇ ಪಂದ್ಯವಾಗಿದೆ.

ವೇಗಿ ವಿದ್ವತ್ ಕಾವೇರಪ್ಪ ಮತ್ತು ವೈಶಾಖ ವಿಜಯಕುಮಾರ್ ಅವರೂ ತಲಾ ಒಂದು ವಿಕೆಟ್ ಗಳಿಸಿ ಆತಿಥೇಯರಿಗೆ ಪೆಟ್ಟುಕೊಟ್ಟರು.

ಕರ್ನಾಟಕದ ಫೀಲ್ಡಿಂಗ್‌ನಲ್ಲಿ ಕೆಲವು ಲೋಪಗಳು ಇದ್ದವು. ಆದರೆ ನಂತರ ಸಾವರಿಸಿಕೊಂಡ ತಂಡವು ಎದುರಾಳಿಗಳಿಗೆ ಕಠಿಣ ಸವಾಲೊಡ್ಡಿತು. ಇದರಿಂದಾಗಿ ತಮಿಳುನಾಡು ತಂಡದ ಮೊತ್ತವು 100ರ ಗಡಿ ಮುಟ್ಟುವ ಮುನ್ನವೇ ಐದು ವಿಕೆಟ್‌ಗಳು ಪತನಗೊಂಡವು.

ಹಾರ್ದಿಕ್ ಚೊಚ್ಚಲ ಅರ್ಧಶತಕ: ಬೆಂಗಳೂರಿನ ಹಾರ್ದಿಕ್ ರಾಜ್ ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಂಡರು. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ತಮ್ಮ ಮೊದಲ ಅರ್ಧಶತಕ ಗಳಿಸುವಲ್ಲಿ ಯಶಸ್ವಿಯಾದರು.

ಮೊದಲ ದಿನದಾಟದಲ್ಲಿ 35 ರನ್ ಗಳಿಸಿದ್ದ ಅವರು ದೇವದತ್ತ ಪಡಿಕ್ಕಲ್ ಅವರೊಂದಿಗೆ ಮುರಿಯದ ಆರನೇ ವಿಕೆಟ್ ಜೊತೆಯಾಟದಲ್ಲಿ 54 ರನ್ ಸೇರಿಸಿ ಕ್ರೀಸ್‌ನಲ್ಲಿದ್ದರು.

216 ಎಸೆತಗಳಲ್ಲಿ 151 ರನ್ ಗಳಿಸಿದ್ದ ದೇವದತ್ತ ಅವರು ಶನಿವಾರ ಬೆಳಿಗ್ಗೆ ತಮ್ಮ ಖಾತೆಗೆ ಒಂದೂ ರನ್ ಸೇರಿಸದೇ ಔಟಾದರು. ಆಗ ಇನಿಂಗ್ಸ್ ಕಟ್ಟುವ ಹೊಣೆಯನ್ನು ಹೊತ್ತುಕೊಂಡ ಹಾರ್ದಿಕ್ ಅವರಿಗೆ ಶರತ್ ಶ್ರೀನಿವಾಸ್ (45; 83ಎ) ಜೊತೆ ನೀಡಿದರು. ಏಳನೇ ವಿಕೆಟ್ ಜೊತೆಯಾಟದಲ್ಲಿ 41 ರನ್ ಸೇರಿಸಿದರು. ನಂತರ ಬೌಲಿಂಗ್‌ನಲ್ಲಿಯೂ ಮಿಂಚಿದರು.

ಶಶಿಕುಮಾರ್ ಅವರು ಬ್ಯಾಟಿಂಗ್‌ನಲ್ಲಿಯೂ ಗಮನಸೆಳೆದರು. ಕೇವಲ 9 ರನ್ ಗಳಿಸಿದರೂ 58 ಎಸೆತಗಳನ್ನು ಎದುರಿಸಿದರು. ಒಂದು ಬೌಂಡರಿ ಬಾರಿಸಿದರು.

9ನೇ ವಿಕೆಟ್ ಜೊತೆಯಾಟದಲ್ಲಿ ಅವರು ಶರತ್ ಜೊತೆಗೆ 32 ರನ್ ಸೇರಿಸಲು ನೆರವಾದರು. ಶರತ್ ಅರ್ಧಶತಕದ ಸನಿಹ ಎಡವಿದರು.

ಹಾರ್ದಿಕ್ ರಾಜ್ ಬ್ಯಾಟಿಂಗ್

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್ ಕರ್ನಾಟಕ 366 (119.4 ಓವರ್‌ಗಳಲ್ಲಿ)

ದೇವದತ್ತ ಸಿ ಮತ್ತು ಬಿ ಪ್ರದೋಷ್ ಪಾಲ್ 151 (218ಎ, 4X12, 6X6)
ಹಾರ್ದಿಕ್ ಸಿ ಜಗದೀಶನ್ ಬಿ ಮೊಹಮ್ಮದ್ 51 (96ಎ, 4X8)
ಶರತ್ ಬಿ ಅಜಿತ್ 45 (83ಎ, 4X3, 6X1)
ವೈಶಾಖ ಬಿ ಮೊಹಮ್ಮದ್ 0 (3ಎ)
ಶಶಿಕುಮಾರ್ ಸಿ ಜಗದೀಶನ್ ಬಿ ಅಜಿತ್ 9 (58ಎ, 4X1)
ವಿದ್ವತ್ ಔಟಾಗದೆ 0 (2ಎ)
ಇತರೆ: 16 (ಬೈ 4, ಲೆಗ್‌ಬೈ 10, ವೈಡ್ 2)
ವಿಕೆಟ್ ಪತನ: 6-288 (ದೇವದತ್ತ ಪಡಿಕ್ಕಲ್; 90.2), 7-329 (ಹಾರ್ದಿಕ್ ರಾಜ್; 101.1), 8-333 (ವೈಶಾಖ ವಿಜಯಕುಮಾರ್; 101.4), 9-365 (ಶಶಿಕುಮಾರ್; 117.6), 10-366 (ಶರತ್ ಶ್ರೀನಿವಾಸ್; 119.4).
ಬೌಲಿಂಗ್: ಸಂದೀಪ್ ವಾರಿಯರ್ 22-2-75-0, ಆರ್. ಸಾಯಿಕಿಶೋರ್ 34-7-102-3, ಎಂ. ಮೊಹಮ್ಮದ್ 15-3-46-2, ಪ್ರದೋಷ್ ಪಾಲ್ 11-1-31-1, ವಿಜಯ್ ಶಂಕರ್ 7-0-20-0, ಎಸ್. ಅಜಿತ್ ರಾಮ್ 29.4-4-75-4, ಭೂಪತಿ ಕುಮಾರ್ 1-0-3-0.

ತಮಿಳುನಾಡು 7ಕ್ಕೆ129 (56 ಓವರ್‌ಗಳಲ್ಲಿ)

ವಿಮಲ್ ಬಿ ಹಾರ್ದಿಕ್ 14 (60ಎ, 4X1)
ಜಗದೀಶನ್ ಎಲ್‌ಬಿಡಬ್ಲ್ಯು ಬಿ ಶಶಿಕುಮಾರ್ 40 (56ಎ, 4X2)
ಪ್ರದೋಷ್ ಸಿ ಪಾಂಡೆ ಬಿ ಶಶಿಕುಮಾರ್ 5 (15ಎ)
ಇಂದ್ರಜೀತ್ ಬ್ಯಾಟಿಂಗ್ 35 (100ಎ, 4X2)
ಸುರೇಶ್ ಸಿ ಪಡಿಕ್ಕಲ್ ಬಿ ವೈಶಾಖ 3 (24ಎ)
ವಿಜಯಶಂಕರ್ ಸಿ ಕಿಶನ್ ಬಿ ವಿದ್ವತ್ 6 (25ಎ)
ಭೂಪತಿ ಎಲ್‌ಬಿಡಬ್ಲ್ಯು ಬಿ ಶಶಿಕುಮಾರ್ 8 (40ಎ)
ಸಾಯಿಕಿಶೋರ್ ಸಿ ಕಿಶನ್ ಬಿ ಹಾರ್ದಿಕ್ 2 (9ಎ)
ಮೊಹಮ್ಮದ್ ಬ್ಯಾಟಿಂಗ್ 3 (10ಎ)
ಇತರೆ: 13 (ಬೈ 8, ಲೆಗ್‌ಬೈ 2, ನೋಬಾಲ್ 3)
ವಿಕೆಟ್ ಪತನ: 1-51 (ವಿಮಲ್ ಕುಮಾರ್; 16.5), 2-66 (ಎನ್. ಜಗದೀಶನ್; 21.2), 3-67 (ಪ್ರದೋಷ್ ಪಾಲ್; 21.4), 4-84 (ಸುರೇಶ್ ಲೋಕೇಶ್ವರ್; 28.6), 5-93 (ವಿಜಯಶಂಕರ್; 35.3), 6-111 (ಭೂಪತಿ ಕುಮಾರ್; 47.4), 7-119 (ಆರ್. ಸಾಯಿಕಿಶೋರ್; 50.4)
ಬೌಲಿಂಗ್: ಹಾರ್ದಿಕ್ ರಾಜ್ 19-4-47-2, ವಿದ್ವತ್ ಕಾವೇರಪ್ಪ 12-6-12-1, ವೈಶಾಖ ವಿಜಯಕುಮಾರ್ 10-0-19-1, ಕೆ. ಶಶಿಕುಮಾರ್ 15-1-41-3.

ನಿರ್ಮಲಾಗೆ ಎಂಟು ವರ್ಷ ನಿಷೇಧ

ನವದೆಹಲಿ (ಪಿಟಿಐ): ಅಥ್ಲೀಟ್ ನಿರ್ಮಲಾ ಶೆರಾನ್ ಅವರು ಉದ್ದೀಪನ ಮದ್ದು ಸೇವನೆ ಮಾಡಿದ್ದಕ್ಕಾಗಿ 8 ವರ್ಷಗಳ ನಿಷೇಧ ಶಿಕ್ಷೆ ವಿಧಿಸಲಾಗಿದೆ.

ನಿರ್ಮಲಾ

ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕ (ನಾಡಾ)ದ ಶಿಸ್ತು ಸಮಿತಿಯು ವಿಚಾರಣೆ ನಡೆಸಿ ಶಿಕ್ಷೆ ಪ್ರಕಟಿಸಿತು. 28 ವರ್ಷದ ನಿರ್ಮಲಾ ಅವರಿಂದ ಹೋದ ವರ್ಷ ಭುವನೇಶ್ವರದಲ್ಲಿ ನಡೆದ ರಾಷ್ಟ್ರೀಯ ಅಂತರರಾಜ್ಯ ಚಾಂಪಿಯನ್‌ಷಿಪ್ ವೇಳೆ ಪರೀಕ್ಷೆಗಾಗಿ ಮಾದರಿ ಸಂಗ್ರಹಿಸಲಾಗಿತ್ತು. ಬಳಿಕ ನಡೆದ ಪರೀಕ್ಷೆಯಲ್ಲಿ ಅವರು ನಿಷೇಧಿತ ಮದ್ದು ಅನಾಬೊಲಿಕ್ ಆ್ಯಂಡ್ರೊಜೆನಿಕ್ ಸ್ಟೆರಾಯ್ಡ್, ಟೆಸ್ಟೊಸ್ಟಿರಾನ್ ಸೇವಿಸಿರುವುದು ಪತ್ತೆಯಾಗಿದೆ ಎಂದು ನಾಡಾ ವೆಬ್‌ಸೈಟ್‌ನಲ್ಲಿ ಉಲ್ಲೇಖವಾಗಿದೆ.

ಮೂರು ಟೆಸ್ಟ್‌ಗಳಿಗೆ ಕೊಹ್ಲಿ ಅಲಭ್ಯ

ಆಕಾಶ್ ದೀಪ್‌ಗೆ ಬುಲಾವ್; ಮರಳಿದ ರಾಹುಲ್, ಜಡೇಜ

ನವದೆಹಲಿ(ಪಿಟಿಐ): 'ರನ್ ಯಂತ್ರ' ವಿರಾಟ್ ಕೊಹ್ಲಿ ಅವರು ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಯ ಇನ್ನುಳಿದ ಮೂರು ಪಂದ್ಯಗಳಿಗೂ ಅಲಭ್ಯರಾಗಿದ್ದಾರೆ.

ವೈಯಕ್ತಿಕ ಕಾರಣಗಳಿಂದಾಗಿ ಅವರು ಮೊದಲೆರಡೂ ಪಂದ್ಯಗಳಲ್ಲಿ ಆಡಿರಲಿಲ್ಲ. ಅವರು ಉಳಿದ ಪಂದ್ಯಗಳಲ್ಲಿ ಕಣಕ್ಕಿಳಿಯುವ ನಿರೀಕ್ಷೆ ಇತ್ತು.

ಪ್ರಸ್ತುತ ಕೊಹ್ಲಿ ವಿದೇಶಕ್ಕೆ ತೆರಳಿದ್ದಾರೆ. ಕೌಟುಂಬಿಕ ಕಾರಣಗಳಿಂದಾಗಿ ಅವರು ಟೆಸ್ಟ್ ಸರಣಿ ತಪ್ಪಿಸಿಕೊಂಡಿದ್ದಾರೆಂದು ಹೇಳಲಾಗುತ್ತಿದೆ.

'ವಿರಾಟ್ ಅವರು ಸರಣಿಯ ಉಳಿದ ಪಂದ್ಯಗಳಲ್ಲಿ ಆಡುವುದಿಲ್ಲ. ಅವರ ನಿರ್ಣಯವನ್ನು ಮಂಡಳಿಯು ಗೌರವಿಸುತ್ತದೆ' ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ತಿಳಿಸಿದೆ.

ಆಕಾಶ್ ದೀಪ್

ಗಾಯಗೊಂಡಿದ್ದ ಆಲ್‌ರೌಂಡರ್ ರವೀಂದ್ರ ಜಡೇಜ ಮತ್ತು ಬ್ಯಾಟರ್ ಕೆ.ಎಲ್. ರಾಹುಲ್ ಅವರು ಮತ್ತೆ ತಂಡಕ್ಕೆ ಮರಳಿದ್ದಾರೆ. ಆದರೆ ಬಿಸಿಸಿಐ ವೈದ್ಯಕೀಯ ತಂಡವು ಅವರಿಬ್ಬರೂ ಆಟಗಾರರ ಫಿಟ್‌ನೆಸ್ ಕುರಿತು ವರದಿ ನೀಡಬೇಕಿದೆ. ಅದನ್ನು ಆಧರಿಸಿ ಅವರಿಗೆ ಅಂತಿಮ ಹನ್ನೊಂದರಲ್ಲಿ ಆಡುವ ಅವಕಾಶ ನೀಡಲಾಗುವುದು.

ಜಡೇಜ ಬಂದಿದ್ದರಿಂದ ಎಡಗೈ ಸ್ಪಿನ್ನರ್ ಅವರು ಸೌರಭ್ ಕುಮಾರ್ ಅವರು ತಮ್ಮ ರಾಜ್ಯ ತಂಡಕ್ಕೆ ಮರಳಿದ್ದಾರೆ. ಮೊಹಮ್ಮದ್ ಸಿರಾಜ್ ಕೂಡ ಮರಳಿದ್ದು, ಆವೇಶ್ ಖಾನ್ ಕೂಡ ತವರಿಗೆ ಹೋಗಿದ್ದಾರೆ.

ಆಕಾಶ್ ದೀಪ್‌ಗೆ ಸ್ಥಾನ: ಬಂಗಾಳದ ಮಧ್ಯಮವೇಗಿ ಆಕಾಶ್ ದೀಪ್ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ. 27 ವರ್ಷದ ಬಲಗೈ ಬೌಲರ್‌ಗೆ ಭಾರತ ತಂಡಕ್ಕೆ ಆಡುವ ಅವಕಾಶ ಸಿಕ್ಕಿದೆ.

ತಂಡ ಇಂತಿದೆ: ರೋಹಿತ್ ಶರ್ಮಾ (ನಾಯಕ), ಜಸ್‌ಪ್ರೀತ್ ಬೂಮ್ರಾ (ಉಪನಾಯಕ), ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್, ಕೆ.ಎಲ್. ರಾಹುಲ್, ರಜತ್ ಪಾಟೀದಾರ್, ಸರ್ಫರಾಜ್ ಖಾನ್, ಧ್ರುವ್ ಜುರೇಲ್ (ವಿಕೆಟ್‌ಕೀಪರ್), ಕೆ.ಎಸ್. ಭರತ್ (ವಿಕೆಟ್‌ಕೀಪರ್), ಆರ್. ಅಶ್ವಿನ್, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಮೊಹಮ್ಮದ್ ಸಿರಾಜ್, ಮುಕೇಶ್ ಕುಮಾರ್, ಆಕಾಶ್ ದೀಪ್

ಬೆಂಗಳೂರಿನ ಫ್ರ್ಯಾಂಕ್ ಅಂಥೋನಿ ಪಬ್ಲಿಕ್ ಶಾಲೆ ತಂಡವು ಬಿಟಿಆರ್ ಶೀಲ್ಡ್ 14 ವರ್ಷದೊಳಗಿನವರ (ಗುಂಪು 1, ಡಿವಿಷನ್ 2) ಪ್ರಶಸ್ತಿ ಜಯಿಸಿತು. (ಎಡದಿಂದ ಬಲಕ್ಕೆ), ನಿಂತವರು: ವಿಹಾನ್ ಶಿವಕುಮಾರ್, ಮೊಹಮ್ಮದ್ ಉಮೇರ್, ಧ್ರುವ ನಂಬಿಯಾರ್, ಜ್ಯಾಕ್ ಗ್ಯಾಬ್ರಿಯೆಲ್, ಮಹಲ್‌ರಾಜ್ ಸಿಸೊಡಿಯಾ, ಪ್ರಕಾಶ್ (ಗ್ರೌಂಡ್ಸ್‌ಮೆನ್), ಆರವ್ ಮುಠಾ, ವಿವಾನ್ ಬಾಲಮಹೇಶ್, ಇಶಾನ್ ಬೊಹ್ರಾ, ಕಯಾನ್ ಕೌಲ್, ತಮನ್ ಸಾಜ್. ಕುಳಿತವರು: ಎನ್. ಶಶಿಧರ್ (ಕ್ರೀಡಾ ನಿರ್ದೇಶಕ), ರಿಷಿ ಹರಿವತ್ಸ, ಕೆ.ಡಿ. ಪೋಪ್ (ಪ್ರಾಚಾರ್ಯ), ಮನ್ವೇಶ್ ವಾಸು, ಅಭಿಷೇಕ್ ಬೋಪಣ್ಣ (ಕೋಚ್).

ಫ್ರ್ಯಾಂಕ್ ಅಂಥೋನಿ ಶಾಲೆಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫ್ರ್ಯಾಂಕ್ ಅಂಥೋನಿ ಪಬ್ಲಿಕ್ ಶಾಲೆ ತಂಡವು ಇಲ್ಲಿ ನಡೆದ ಬಿಟಿಆರ್ ಶೀಲ್ಡ್ 14 ವರ್ಷದೊಳಗಿನವರ ಒಂದನೇ ಗುಂಪಿನ ಎರಡನೇ ಡಿವಿಷನ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಿತು.

ಫೈನಲ್ ಪಂದ್ಯದಲ್ಲಿ ಫ್ರ್ಯಾಂಕ್ ಅಂಥೋನಿ ತಂಡವು 1 ವಿಕೆಟ್‌ನಿಂದ ಸೇಂಟ್ ಜೋಸೆಫ್ ಶಾಲೆ ಎದುರು ರೋಚಕ ಜಯ ಸಾಧಿಸಿತು.

ಸಂಕ್ಷಿಪ್ತ ಸ್ಕೋರು: ಸೇಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್: 42 ಓವರ್‌ಗಳಲ್ಲಿ 8ಕ್ಕೆ140 (ಧೀರಜ್ ಕುಮಾರ್ ಯಾದವ್ 47, ನಕ್ಕಾ ಮನ್ವೇಶ್ ವಾಸು 27ಕ್ಕೆ2, ಹರ್ಷಿತ್ ರಾಜ್ 27ಕ್ಕೆ2) ಫ್ರ್ಯಾಂಕ್ ಅಂಥೋನಿ ಪಬ್ಲಿಕ್ ಶಾಲೆ: 40.1 ಓವರ್‌ಗಳಲ್ಲಿ 9ಕ್ಕೆ141 (ನಕ್ಕಾ ಮನ್ವೇಶ್ ವಾಸು 35, ಡಿ ಟಿಮೊಥೆಲ್ ಮಾರಿಯೊ 16ಕ್ಕೆ2, ಆಯುಷ್ ಚೌರಾಸಿಯಾ 33ಕ್ಕೆ2)

ಫಲಿತಾಂಶ: ಫ್ರ್ಯಾಂಕ್ ಅಂಥೋನಿ ಪಬ್ಲಿಕ್ ಶಾಲೆಗೆ 1 ವಿಕೆಟ್ ಜಯ.

ಬಾಕ್ಸಿಂಗ್: ಫೈನಲ್‌ಗೆ ನಿಖತ್

ಸೋಫಿಯಾ (ಬಲ್ಗೇರಿಯಾ), (ಪಿಟಿಐ): ಎರಡು ಬಾರಿಯ ವಿಶ್ವ ಚಾಂಪಿಯನ್ ನಿಖತ್ ಝರೀನ್ ಮತ್ತು ಕಾಮನ್‌ವೆಲ್ತ್ ಚಿನ್ನದ ಪದಕ ವಿಜೇತ ಅಮಿತ್ ಪಂಘಲ್ ಅವರು ಉತ್ತಮ ಪ್ರದರ್ಶನ ಮುಂದುವರಿಸಿ 75ನೇ ಸ್ಟ್ರಾಂಡ್ಜಾ ಸ್ಮಾರಕ ಬಾಕ್ಸಿಂಗ್ ಟೂರ್ನಿಯ ಫೈನಲ್‌ಗೆ ದಾಪುಗಾಲಿಟ್ಟರು. ಶನಿವಾರ ಭಾರತದ ಒಟ್ಟು ಆರು ಮಂದಿ ವಿವಿಧ ತೂಕ ವಿಭಾಗಗಳಲ್ಲಿ ಫೈನಲ್‌ಗೇರಿದ್ದಾರೆ.

50 ಕೆ.ಜಿ. ವಿಭಾಗದಲ್ಲಿ ನಿಖತ್ ಝರೀನ್ ಸೆಮಿಫೈನಲ್‌ನಲ್ಲಿ ಸ್ಥಳೀಯ ಸ್ಪರ್ಧಿ ಝ್ಲಾಟಿಸ್ಲಾವಾ ಚುಕನೋವಾ ಎದುರು ಎಚ್ಚರಿಕೆಯಿಂದ ಸೆಣಸಾಟ ಆರಂಭಿಸಿದರು. ಆದರೆ ಯಾವ ಸುತ್ತಿನಲ್ಲೂ ಹಿಡಿತ ಬಿಟ್ಟುಕೊಡದೇ ಅಂತಿಮವಾಗಿ 5-0ಯಿಂದ ಜಯಗಳಿಸಿದರು.



ನಿಖತ್ ಝರೀನ್

ಭಾನುವಾರ ನಡೆಯುವ ಸ್ವರ್ಣ ಪದಕದ ಸೆಣಸಾಟದಲ್ಲಿ ಭಾರತದ ಬಾಕ್ಸರ್, ಉಜ್ಬೇಕಿಸ್ತಾನದ ಸಬಿನಾ ಬೊಬುಕುಲೊವಾ ಅವರನ್ನು ಎದುರಿಸಲಿದ್ದಾರೆ. ಅಮಿತ್ ಪಂಘಲ್ ಪುರುಷರ 51 ಕೆ.ಜಿ. ಸ್ಪರ್ಧೆಯಲ್ಲಿ ತಮ್ಮೆಲ್ಲಾ ಅನುಭವ ಬಳಸಿ ಟರ್ಕಿಯ ಗುಮುಸ್ ಸಮೆತ್ ಅವರನ್ನು 5-0 ಸರ್ವಾನುಮತದ ತೀರ್ಪಿನಲ್ಲಿ ಸೋಲಿಸಿದರು.

ಎಫ್‌ಐಎಚ್ ಹಾಕಿ: ಭಾರತಕ್ಕೆ ಜಯ

ಭುವನೇಶ್ವರ್ (ಪಿಟಿಐ): ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರ ಮಿಂಚಿನ ಆಟದಿಂದಾಗಿ ಭಾರತ ತಂಡವು ಶನಿವಾರ ಇಲ್ಲಿ ನಡೆದ ಎಫ್‌ಐಎಚ್ ಪ್ರೊ ಲೀಗ್ ಪುರುಷರ ಹಾಕಿ ಟೂರ್ನಿಯ ಪಂದ್ಯದಲ್ಲಿ ಸ್ಪೇನ್ ಎದುರು ಜಯಿಸಿತು.

ಕಳಿಂಗ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎಲ್ ವಿಭಾಗಗಳಲ್ಲಿಯೂ ಪಾರಮ್ಯ ಮೆರೆದ ಆತಿಥೇಯ ತಂಡವು 4-1ರಿಂದ ಗೆದ್ದು ಬೀಗಿತು.

ಏಳನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಕಾರ್ನರ್‌ನಲ್ಲಿ ಗೋಲು ಗಳಿಸುವಲ್ಲಿ ಹರ್ಮನ್ ಸಫಲರಾದರು. ಇದು ಹಾರ್ದಿಕ್ ಅವರು ತಮ್ಮ ವೃತ್ತಿಜೀವನದಲ್ಲಿ ಗಳಿಸಿದ 150ನೇ ಪೆನಾಲ್ಟಿ ಗೋಲು. 20ನೇ ನಿಮಿಷದಲ್ಲಿಯೂ ಮತ್ತೊಂದು ಗೋಲು ಗಳಿಸಿದರು.

ಜುಗರಾಜ್ ಸಿಂಗ್ 24ನೇ ನಿಮಿಷದಲ್ಲಿ ಪೆನಾಲ್ಟಿ ಕಾರ್ನರ್‌ನಲ್ಲಿ ಗೋಲು ದಾಖಲಿಸಿದರೆ, 50ನೇ ನಿಮಿಷದಲ್ಲಿ ಲಲಿತ್ ಕುಮಾರ್ ಫೀಲ್ಡ್ ಗೋಲು ಹೊಡೆದರು.

ಸ್ಪೇನ್‌ನ ಏಕೈಕ ಗೋಲು ಪೆನಾಲ್ಟಿ ಕಾರ್ನರ್ ಮೂಲಕ 34ನೇ ನಿಮಿಷದಲ್ಲಿ ಮಾರ್ಕ್ ಮಿರೆಲ್ಸ್ ಗೋಲಾಗಿ ಪರಿವರ್ತಿಸಿದರು.

ಚೆಸ್: ಕಾರ್ಲ್‌ಸನ್ ವಿರುದ್ಧ ಗೆದ್ದ ಗುಕೇಶ್

ವಾಂಗೆಲ್ಸ್ (ಜರ್ಮನಿ), (ಪಿಟಿಐ): ಭಾರತದ ದೊಮ್ಮರಾಜು ಗುಕೇಶ್ ಅವರು ವೈಸೆನ್‌ಹಾಸ್ ಚೆಸ್ ಚಾಲೆಂಜ್‌ನಲ್ಲಿ ಶನಿವಾರ ಹಿನ್ನಡೆಯೊಡನೆ ಅಭಿಯಾನದ ಆರಂಭಿಸಿದರು.

ಆದರೆ ನಂತರ ಮೂವರು ಘಟಾನುಘಟಿ ಆಟಗಾರರನ್ನು- ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್, ಅರ್ಮೇನಿಯಾದ ಲೆವೊನ್ ಅರೋನಿಯನ್ ಮತ್ತು ಹಾಲಿ ವಿಶ್ವ ಚಾಂಪಿಯನ್ ಡಿಂಗ್ ಲಿರೆನ್ ಅವರನ್ನು ಸೋಲಿಸಿ ಅತ್ಯಮೋಘ ಪ್ರದರ್ಶನ ನೀಡಿದರು.

ಗುಕೇಶ್ ಮೊದಲ ಸುತ್ತಿನಲ್ಲಿ ಫ್ರಾನ್ಸ್‌ನ ಅಲಿರೇಝಾ ಫಿರೋಜಾ ಅವರಿಗೆ ಮಣಿದಿದ್ದರು. ಆದರೆ ನಂತರ ಅಮೋಘ ಪುನರಾಗಮನದಲ್ಲಿ ಮೂವರು ಅಗ್ರ ಆಟಗಾರರ ವಿರುದ್ಧ ಜಯಗಳಿಸಿದ್ದರಿಂದ ಎಲ್ಲರೂ ಅವರ ಕಡೆ ಮೆಚ್ಚುಗೆಯಿಂದ ನೋಡುವಂತಾಯಿತು.

ದೊಮ್ಮರಾಜು ಗುಕೇಶ್

ಭಾರತದ ಆಟಗಾರ ಈಗ ರ‍್ಯಾಪಿಡ್ ವಿಭಾಗದ ನಾಲ್ಕು ಸುತ್ತುಗಳಿಂದ ಮೂರು ಪಾಯಿಂಟ್ಸ್ ಸಂಗ್ರಹಿಸಿ ಎರಡನೇ ಸ್ಥಾನದಲ್ಲಿದ್ದಾರೆ.

3.5 ಪಾಯಿಂಟ್ಸ್ ಸಂಗ್ರಹಿಸಿರುವ ಜರ್ಮನಿಯ ವಿನ್ಸೆಂಟ್ ಕೀಮರ್ ಅಗ್ರಸ್ಥಾನದಲ್ಲಿದ್ದಾರೆ. ಉಜ್ಬೇಕಿಸ್ತಾನದ ನಾದಿರ್ಬೆಕ್ ಅಬ್ದುಸತ್ತಾರೊವ್ ಅವರೂ ಅಜೇಯ ಸಾಧನೆಯೊಡನೆ (ಎರಡು ಗೆಲುವು, ಎರಡು ಡ್ರಾ) 3 ಪಾಯಿಂಟ್ಸ್ ಕಲೆಹಾಕಿದ್ದು ಗುಕೇಶ್ ಜೊತೆ ಜಂಟಿ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

ನಾರ್ವೆಯ ಕಾರ್ಲ್‌ಸನ್, ಫಿರೋಜಾ ಮತ್ತು ಅಮೆರಿಕದ ಫ್ಯಾಬಿಯಾನೊ ಕರುವಾನ ಅವರು (ತಲಾ 2 ಪಾಯಿಂಟ್ಸ್) ನಾಲ್ಕನೇ ಸ್ಥಾನದಲ್ಲಿದ್ದಾರೆ. ಅಮೆರಿಕದ ಲೆವೊನ್ ಅರೋನಿಯನ್ ಅರ್ಧ ಪಾಯಿಂಟ್ಸ್ ಗಳಿಸಿ ಏಳನೇ ಸ್ಥಾನದಲ್ಲಿದ್ದರೆ, ಅಚ್ಚರಿಯೆಂಬಂತೆ ಎಲ್ಲಾ ನಾಲ್ಕೂ ಪಂದ್ಯಗಳನ್ನು ಸೋತ ಚೀನಾದ ಡಿಂಗ್ ಲಿರೆನ್ ಕೊನೆಯ ಸ್ಥಾನದಲ್ಲಿದ್ದಾರೆ. ಲಿರೆನ್, ಅಬ್ದುಸತ್ತಾರೊವ್ ಮತ್ತು ಕೀಮರ್ ವಿರುದ್ಧ ಪಂದ್ಯಗಳಲ್ಲೂ ಸೋಲನ್ನು ಕಂಡರು.

ಎಂಟು ಮಂದಿ ಆಟಗಾರಿರುವ ಈ ಟೂರ್ನಿ ₹1.66 ಕೋಟಿ ಬಹುಮಾನ ಮೊತ್ತ ಹೊಂದಿದೆ. ಗುಕೇಶ್ ವಿರುದ್ಧ ಕಾರ್ಲ್‌ಸನ್ ಪಂದ್ಯ ದಿನದ ಆಕರ್ಷಣೆಯಾಗಿತ್ತು. ಕೊನೆಯ ಹಂತದಲ್ಲಿ (ಎಂಡ್ ಗೇಮ್) ಕಾರ್ಲ್‌ಸನ್ ಅವರ ಕೆಲವು ನಡೆಗಳು ಕರಾರುವಾಕ್ ಆಗಿರಲಿಲ್ಲ. ಅರೋನಿಯನ್, ಗುಕೇಶ್ ವಿರುದ್ಧ ಪಂದ್ಯದಲ್ಲಿ ಪ್ರಮುಖ ಪಡೆಯೊಂದನ್ನು ಕಳೆದುಕೊಂಡರು. ನಂತರ 39 ನಡೆಗಳಲ್ಲಿ ಪಂದ್ಯ ಸೋತರು. ವಿಶ್ವ ಚಾಂಪಿಯನ್ ಲಿರೆನ್ ವಿರುದ್ಧ ಗುಕೇಶ್ 37 ನಡೆಗಳಲ್ಲಿ ಜಯಗಳಿಸಿದರು. ಮೊದಲ ಪಂದ್ಯದಲ್ಲಿ ಗುಕೇಶ್ ವಿರುದ್ಧ ಜಯಗಳಿಸಿದ್ದ ಇರಾನ್ ಸಂಜಾತ ಫಿರೋಝಾ ನಂತರದ 3 ಪಂದ್ಯಗಳಲ್ಲಿ ಅಂಥದ್ದೇ ಉತ್ತಮ ಆಟ ಆಡಲಿಲ್ಲ.

ಪ್ರೊ. ಕಬಡ್ಡಿ ಲೀಗ್‌ನಲ್ಲಿ ಬೆಂಗಾಲ್ ವಾರಿಯರ್ಸ್ ಹಾಗೂ ತೆಲುಗು ಟೈಟನ್ಸ್ ತಂಡಗಳ ನಡುವೆ ಹಣಾಹಣಿ. ಪಿಟಿಐ ಚಿತ್ರ

ಕಬಡ್ಡಿ: ನಾಲ್ಕನೇ ಸ್ಥಾನಕ್ಕೆ ಪಟ್ನಾ

ಕೋಲ್ಕತ್ತ: ಸಂಘಟಿತ ಪ್ರದರ್ಶನ ನೀಡಿದ ಪಟ್ನಾ ಪೈರೇಟ್ಸ್ ತಂಡ, ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಶನಿವಾರ 44-23 ರಲ್ಲಿ 21 ಪಾಯಿಂಟ್‌ಗಳ ದೊಡ್ಡ ಅಂತರದಿಂದ ಯು ಮುಂಬಾ ತಂಡವನ್ನು ಸೋಲಿಸಿತು. ಹತ್ತನೇ ಆವೃತ್ತಿಯಲ್ಲಿ ಹತ್ತನೇ ಗೆಲುವಿನಿಂದ ಪಟ್ನಾ ಪಾಯಿಂಟ್ಸ್ ಪಟ್ಟಿಯಲ್ಲಿ ಆರನೇ ಸ್ಥಾನದಿಂದ ನಾಲ್ಕನೇ ಸ್ಥಾನಕ್ಕೆ ಜಿಗಿಯಿತು

ನೇತಾಜಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪಟ್ನಾ ತಂಡ ಹೆಚ್ಚಿನ ಅವಧಿಯಲ್ಲಿ ಮೇಲುಗೈ ಸಾಧಿಸಿತು. ವಿರಾಮದ ವೇಳೆ 19-10 ಪಾಯಿಂಟ್‌ಗಳಿಂದ ಮುನ್ನಡೆಯಲ್ಲಿದ್ದ ಪಟ್ನಾ ನಂತರ ಮುನ್ನಡೆಯನ್ನು ಹೆಚ್ಚಿಸುತ್ತಾ ಹೋಯಿತು. ವಿರಾಮಕ್ಕೆ ಮೊದಲು ಒಂದು ಬಾರಿ ಮತ್ತು ನಂತರ 2 ಬಾರಿ ಮುಂಬೈ ಆಲೌಟ್ ಆಯಿತು.

ಸಚಿನ್ 9 ಟಚ್ ಪಾಯಿಂಟ್, 1 ಟ್ಯಾಕಲ್ ಪಾಯಿಂಟ್ ಸೇರಿ 10 ಪಾಯಿಂಟ್ಸ್ ಗಳಿಸಿದರೆ, ಬೆಂಬಲ ನೀಡಿದ ಎಂ.ಸುಧಾಕರ್ 7 ಪಾಯಿಂಟ್ಸ್ ಕಲೆಹಾಕಿದರು. ಟ್ಯಾಕಲ್‌ನಲ್ಲಿ ಕೃಷನ್ ಎಂಟು ಪಾಯಿಂಟ್ಸ್ ಸಂಗ್ರಹಿಸಿ ಮಿಂಚಿದರು. ಇನ್ನೊಂದೆಡೆ, ಮುಂಬಾ ಪರ ಇರಾನ್‌ನ ಅಮಿರ್‌ಮೊಹಮ್ಮದ್ ಝಫರ್ ದಾನೇಶ್ (12 ಪಾಯಿಂಟ್ಸ್) ಉತ್ತಮ ಪ್ರದರ್ಶನ ನೀಡಿದರು.

ಇನ್ನೊಂದು ಪಂದ್ಯದಲ್ಲಿ ಬೆಂಗಾಲ್ ವಾರಿಯರ್ಸ್ ತಂಡ 55-35 ಪಾಯಿಂಟ್‌ಗಳಿಂದ ತೆಲುಗು ಟೈಟನ್ಸ್ ತಂಡವನ್ನು ಸೋಲಿಸಿತು. ರೈಡರ್ ನಿತಿನ್ ಕುಮಾರ್ 13 ಪಾಯಿಂಟ್ ಗಳಿಸಿದರೆ, ನಾಯಕ ಮಣಿಂದರ್ ಸಿಂಗ್ ಎಂಟು ಪಾಯಿಂಟ್ಸ್ ಕಲೆಹಾಕಿದರು. ವೈಭವ್ ಗರ್ಜೆ ಮತ್ತು ಹರ್ಷ ಲಾಡ್ ರಕ್ಷಣೆಯಲ್ಲಿ ಕ್ರಮವಾಗಿ 5 ಮತ್ತು 4 ಪಾಯಿಂಟ್ಸ್ ಗಳಿಸಿದರು. ಟೈಟನ್ಸ್ ಪರ ಟ್ಯಾಕಲ್‌ನಲ್ಲಿ ಮಿಲಾದ್ ಜಬ್ಬಾರಿ (9 ಪಾಯಿಂಟ್ಸ್) ಮಿಂಚಿದರೆ, ರೈಡಿಂಗ್‌ನಲ್ಲಿ ಪ್ರಫುಲ್ ಝವಾರೆ (8) ಮತ್ತು ನಾಯಕ ಪವನ್ ಸೆಹ್ರಾವತ್ (6) ಒಂದಿಷ್ಟು ಪ್ರತಿರೋಧ ತೋರಿದರು.

ರಾಮಕುಮಾರ್‌ಗೆ ವೈಲ್ಡ್ ಕಾರ್ಡ್

ಬೆಂಗಳೂರು : ಅನುಭವಿ ಆಟಗಾರ ರಾಮಕುಮಾರ್ ರಾಮನಾಥನ್ ಅವರಿಗೆ ಇದೇ 12ರಿಂದ ಆರಂಭವಾಗುವ ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ ಟೂರ್ನಿಯ ಸಿಂಗಲ್ಸ್ ಪ್ರಧಾನ ಸುತ್ತಿಗೆ ವೈಲ್ಡ್ ಕಾರ್ಡ್ ನೀಡಲಾಗಿದೆ.

ಚೆನ್ನೈನಲ್ಲಿ ನಡೆಯುತ್ತಿರುವ ಎಟಿಪಿ ಚಾಲೆಂಜರ್‌ನ ಮೊದಲ ಸುತ್ತಿನಲ್ಲಿ ರಾಮಕುಮಾರ್ ಸೋತಿದ್ದರು. ಅವರಿಗೆ ತವರಿನಲ್ಲಿ ಉತ್ತಮ ಪ್ರದರ್ಶನ ನೀಡಲು ಈಗ ಅವಕಾಶ ಲಭಿಸಿದೆ.

ಎಟಿಪಿ ಚಾಲೆಂಜರ್ ಟೂರ್ನಿಗಳಲ್ಲಿ ರಾಮಕುಮಾರ್ ಏಳು ಬಾರಿ ಸಿಂಗಲ್ಸ್ ಫೈನಲ್ ತಲುಪಿದ್ದು, 2021 ರ ನವೆಂಬರ್‌ನಲ್ಲಿ ಬಹರೇನ್‌ನ ಮನಾಮಾದಲ್ಲಿ ನಡೆದ ಟೂರ್ನಿಯಲ್ಲಿ ಒಂದು ಬಾರಿ ಪ್ರಶಸ್ತಿ ಗೆದ್ದಿದ್ದಾರೆ. ಕುತೂಹಲಕಾರಿ ಸಂಗತಿಯೆಂದರೆ, ರಾಮಕುಮಾರ್ ಎರಡು ವರ್ಷಗಳ ಹಿಂದೆ ಸಾಕೇತ್ ಮೈನೇನಿ ಅವರೊಂದಿಗೆ ಬೆಂಗಳೂರಿನಲ್ಲಿ ತಮ್ಮ ಏಳನೇ ಮತ್ತು ಕೊನೆಯ ಚಾಲೆಂಜರ್ ಡಬಲ್ಸ್ ಪ್ರಶಸ್ತಿಯನ್ನು ಗೆದ್ದಿದ್ದರು.

ರಾಮಕುಮಾರ್ ರಾಮನಾಥನ್

'ವೈಲ್ಡ್ ಕಾರ್ಡ್ ಪ್ರವೇಶ ನೀಡಿದ್ದರಿಂದ ಸಂತೋಷವಾಗಿದೆ. ಉತ್ತಮ ಪ್ರದರ್ಶನ ನೀಡುವ ವಿಶ್ವಾಸ ಇದೆ. ಬೆಂಗಳೂರು ಯಾವಾಗಲೂ ಸಂತೋಷ ನೀಡುವ ಸ್ಥಳವಾಗಿದೆ ಮತ್ತು ಅನೇಕ ಸವಿನೆನಪು ಹೊಂದಿದ್ದೇನೆ' ಎಂದು 459ನೇ ಕ್ರಮಾಂಕದ ರಾಮಕುಮಾರ್ ಹೇಳಿದರು.

ಬಾಸ್ಕೆಟ್ ಬಾಲ್: ಮಹಿಳಾ ವಿಭಾಗದ ಸೆಮಿಫೈನಲ್ ಲೀಗ್‌ನಲ್ಲಿ ಮೇಘನಾ ಮಿಂಚು

ಮೈಸೂರು, ನಿಟ್ಟೆ ತಂಡಗಳಿಗೆ ಗೆಲುವು

ಪ್ರಜಾವಾಣಿ ವಾರ್ತೆ

ಧಾರವಾಡ: ಮೈಸೂರಿನ ಡಿವೈಇಎಸ್ ತಂಡವು ಇಲ್ಲಿ ನಡೆಯುತ್ತಿರುವ ರಾಜ್ಯ ಮಟ್ಟದ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಮಹಿಳಾ ವಿಭಾಗದಲ್ಲಿ ಆತಿಥೇಯ ರೋವರ್ಸ್ ತಂಡದ ವಿರುದ್ಧ ಜಯಿಸಿತು.

ರೋವರ್ಸ್ ಕ್ಲಬ್ ಅಂಕಣದಲ್ಲಿ ನಡೆದ ಪಂದ್ಯದಲ್ಲಿ ಮೈಸೂರು ತಂಡವು 67-31 ಅಂಕಗಳಿಂದ ಜಯಿಸಿತು. ಮೈಸೂರಿನ ಮೇಘನಾ (32) ತಂಡದ ಗೆಲುವಿಗೆ ಕಾಣಿಕೆ ನೀಡಿದರು.

ಮತ್ತೊಂದು ಪಂದ್ಯದಲ್ಲಿ ನಿಟ್ಟೆಯ ಕೆ.ಎಸ್.ಹೆಗ್ಡೆ ತಂಡವು ವರ್ಷಿತಾ (16) ಅವರ ಆಟದ ನೆರವಿನಿಂದ ಬೆಂಗಳೂರಿನ ಬೀಗಲ್ಸ್ ತಂಡವನ್ನು 51-42 ಪಾಯಿಂಟ್ಸ್‌ನಿಂದ ಸೋಲಿಸಿತು.

ಪುರುಷರ ವಿಭಾಗ ಕ್ವಾರ್ಟರ್ ಫೈನಲ್ ಹಂತದ ಪಂದ್ಯಗಳಲ್ಲಿ; ಮಂಗಳೂರು ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು ಬೆಂಗಳೂರಿನ ಎಂಎನ್‌ಕೆಆರ್ ತಂಡವನ್ನು 88-56 ಅಂಕಗಳಿಂದ ಸೋಲಿಸಿತು. ಮಂಗಳೂರಿನ ಸೋಕಿನ್ ಶೆಟ್ಟಿ (23) ಮಿಂಚಿದರು.

ಇನ್ನೊಂದು ಪಂದ್ಯದಲ್ಲಿ ಬೆಂಗಳೂರಿನ ಡಿವೈಇಎಸ್ ತಂಡವು ಬೆಂಗಳೂರಿನ ಕೆಎಸ್‌ಪಿ ತಂಡದ ವಿರುದ್ಧ 74-71 ಅಂಕಗಳಿಂದ ಜಯಗಳಿಸಿತು. ಡಿವೈಇಎಸ್ ತಂಡ ಬಿ.ಎಂ.ಮನೋಜ್ (19) ಹಾಗೂ ಕೆಎಸ್‌ಪಿ ತಂಡ ಅಭಿಷೇಕ್ ಗೌಡ (21) ಚಾಕಚಕ್ಯತೆಯ ಆಟವಾಡಿದರು.

ಬೆಂಗಳೂರಿನ ಜಿಎಸ್‌ಟಿ ಮತ್ತು ಕಸ್ಟಮ್ಸ್ ತಂಡವು 80-69ರಿಂದ ಬೆಂಗಳೂರಿನ ವ್ಯಾನ್‌ಗಾರ್ಡ್ಸ್ ತಂಡದ ವಿರುದ್ಧ ಗೆದ್ದಿತು. ಜಿಎಸ್‌ಟಿ ಮತ್ತು ಕಸ್ಟಮ್ಸ್ ತಂಡದ ಧೀರಜ್ ಮತ್ತು ಹೃಷಿಕೇಶ್ ತಲಾ (18) ಮಿಂಚಿದರು.

ಬೆಂಗಳೂರಿನ ಜೆಬಿಸಿ ತಂಡವು ಬೆಂಗಳೂರಿನ ಬೀಗಲ್ಸ್ ತಂಡವನ್ನು 78-53ರಿಂದ ಸೋಲಿಸಿತು. ಬೀಗಲ್ಸ್ ತಂಡದ ಅಚಿಂತ್ಯಾ (19) ಹಾಗೂ ಜೆಬಿಸಿ ತಂಡದ ಸಂಕೇತ್ (18) ಚಾಕಚಕ್ಯತೆಯ ಆಟವಾಡಿದರು.

ಧಾರವಾಡದಲ್ಲಿ ಶನಿವಾರ ನಡೆದ ಬ್ಯಾಸ್ಕೆಟ್ ಟೂರ್ನಿಯ ಪಂದ್ಯದಲ್ಲಿ ಮೈಸೂರಿನ ಡಿವೈಇಎಸ್ ತಂಡದ ಆಟಗಾರ್ತಿ ಚೆಂಡ್ ಬಾಸ್ಕೆಟ್‌ನತ್ತ ಎಸೆಯುತ್ತಿರುವುದು —ಪ್ರಜಾವಾಣಿ ಚಿತ್ರ: ಬಿ.ಎಂ.ಕೇದಾರನಾಥ

ಐಪಿಎಲ್: ಲಖನೌ ತಂಡಕ್ಕೆ ಜೋಸೆಫ್

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ವಿರುದ್ಧ ಹೆಚ್ಚುಕಮ್ಮಿ ಏಕಾಂಗಿಯಾಗಿ ಟೆಸ್ಟ್ ಪಂದ್ಯ ಗೆಲ್ಲಿಸಿಕೊಟ್ಟಿದ್ದ ವೆಸ್ಟ್ ಇಂಡೀಸ್ ಕ್ರಿಕೆಟ್‌ನ ಭರವಸೆಯ ವೇಗಿ ಶಮರ್ ಜೋಸೆಫ್ ಅವರನ್ನು ಮುಂದಿನ ಟಾಟಾ ಐಪಿಎಲ್‌ಗೆ ಲಖನೌ ಸೂಪರ್ ಜೈಂಟ್ಸ್ ತಂಡ ಶನಿವಾರ ಸೆಳೆದುಕೊಂಡಿದೆ. ಅವರು ಇಂಗ್ಲೆಂಡ್ ವೇಗಿ ಮಾರ್ಕ್ ವುಡ್ ಸ್ಥಾನ ತುಂಬಲಿದ್ದಾರೆ.

24 ವರ್ಷದ ಜೋಸೆಫ್ ಕಳೆದ ತಿಂಗಳು ಬ್ರಿಸ್ಬೇನ್‌ನಲ್ಲಿ ನಡೆದ ಟೆಸ್ಟ್‌ನ ಎರಡನೇ ಇನಿಂಗ್ಸ್‌ನಲ್ಲಿ 68 ರನ್ನಿಗೆ 7 ವಿಕೆಟ್ ಪಡೆದು ಪ್ರಬಲ ಬ್ಯಾಟರ್‌ಗಳಿದ್ದ ಆಸ್ಟ್ರೇಲಿಯಾ ಸರದಿಯನ್ನು ಧ್ವಂಸ ಮಾಡಿದ್ದರು. ಹೀಗಾಗಿ ಅವರ ಮೇಲೆ ವಿಶ್ವದ ಕಣ್ಣು ನೆಟ್ಟಿದೆ. ₹3 ಕೋಟಿಗೆ ಎಲ್‌ಎಸ್‌ಜಿ ಸೇರಿಕೊಳ್ಳಲಿದ್ದಾರೆ. ಅವರ ಪಾಲಿಗೆ ಇದು ಮೊದಲ ಐಪಿಎಲ್.

ಜೋಸೆಫ್